ಕರ್ನಾಟಕ ಸರ್ಕಾರ

# ಕರ್ನಾಟಕದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದಡಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪ್ರಾರಂಭವಾದಾಗಿನಿಂದ ಅದರ ಮೂಲಕ ಫಲಾನುಭವಿಗಳಿಗೆ (ಕಾರ್ಮಿಕರು ಮತ್ತು ಸರಬರಾಜುದಾರರಿಗೆ) ಕೂಲಿ ಮತ್ತು ಸಾಮಗ್ರಿಗಳ ಪಾವತಿಗಳಿಂದಾದ ಪರಿಣಾಮದ ಮೌಲ್ಯಮಾಪನ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
ಕರ್ನಾಟಕ ಸರ್ಕಾರ

ಏಪ್ರಿಲ್–2020

# ಕರ್ನಾಟಕದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದಡಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪ್ರಾರಂಭವಾದಾಗಿನಿಂದ ಅದರ ಮೂಲಕ ಫಲಾನುಭವಿಗಳಿಗೆ (ಕಾರ್ಮಿಕರು ಮತ್ತು ಸರಬರಾಜುದಾರರಿಗೆ) ಕೂಲಿ ಮತ್ತು ಸಾಮಗ್ರಿಗಳ ಪಾವತಿಗಳಿಂದಾದ ಪರಿಣಾಮದ ಮೌಲ್ಯಮಾಪನ


**ಪ್ರಧಾನ ಶೋಧಕರು**

**ಡಾ. ಜಿ.ಕೆ. ಕಾರಂತ್**


**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ**


**ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಲರ್ನಿಂಗ್,**

**ಕಲಬುರಗಿ**



ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

**Karnataka Evaluation Authority**

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**

**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**

**ಕರ್ನಾಟಕ ಸರ್ಕಾರ**

**ಏಪ್ರಿಲ್-2020**

**©ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ 2020**

**ಪ್ರಕಟಣೆ**

**ಇವರಿಗಾಗಿ,**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
#542, 5ನೇ ಮಹಡಿ, 2ನೇ ಹಂತ,
ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು–560 001

**ಇವರಿಂದ :**

ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಲರ್ನಿಂಗ್,
ಸಂ. 10–2–152, ಪರವಣ ಕಾಲೋನಿ, ಸಂಗಮೇಶ್ವರ ನಗರ,
ಕಲಬುರಗಿ–585 103

**ಅಕ್ಷರ ಜೋಡಣೆ ಮತ್ತು ಮುದ್ರಣ**

**ಎಸ್. ಪಿ. ಸಿ. ಎಂಟರ್‌ಪ್ರೈಸಸ್,**
**#36, ಎನ್ ಎಸ್ ಐಯಂಗಾರ್ ರಸ್ತೆ,**
**ಶೇಷಾದ್ರಿಪುರಂ,**
**ಬೆಂಗಳೂರು–560 020**

srislm666@gmail.com

सत्यमेव जयते
Government of India

# ಭಾರತದ ಸಂವಿಧಾನ

## **ಪೀಠಿಕೆ**

**ಭಾರತದ ಪ್ರಜೆಗಳಾದ ನಾವು,**

**ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ**

**ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ**

ರೂಪಿಸುವುದಕ್ಕಾಗಿ;

ಭಾರತದ ಎಲ್ಲಾ ಪ್ರಜೆಗಳಿಗೆ

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯವನ್ನು**;

ವಿಚಾರ, ಅಭಿವ್ಯಕ್ತ, ನಂಬಿಕೆ, ಧರ್ಮ ಮತ್ತು

ಉಪಾಸನೆಯ **ಸ್ವಾತಂತ್ರ್ಯವನ್ನು**;

ಸ್ಥಾನಮಾನ ಮತ್ತು ಅವಕಾಶಗಳ **ಸಮತೆಯನ್ನು**

ದೊರೆಯುವಂತೆ ಮಾಡುವುದಕ್ಕಾಗಿ;

ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ

**ಭ್ರಾತೃತ್ವ ಭಾವನೆಯನ್ನು** ಮೂಡಿಸುವುದಕ್ಕೆ

ದೃಢ ಸಂಕಲ್ಪ ಮಾಡಿ,

ನಮ್ಮ ಸಂವಿಧಾನ ಸಭೆಯಲ್ಲಿ

1949ನೇಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು

**ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,**

**ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ**

# ಮುನ್ನುಡಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮವು ವಿಶ್ವದ ಅತಿದೊಡ್ಡ ಕೆಲಸದ ಖಾತರಿ ಕಾರ್ಯಕ್ರಮವಾಗಿದ್ದು, ಇದನ್ನು ಜೀವನೋಪಾಯದ ಸುರಕ್ಷತೆಯನ್ನು ಒದಗಿಸಲು ಮತ್ತು ಕೆಲಸದ ಹಕ್ಕನ್ನು ಖಚಿತಪಡಿಸಿಕೊಳ್ಳಲು ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ 100 ದಿನಗಳ ಕೂಲಿ ಉದ್ಯೋಗವನ್ನು ಖಾತರಿಪಡಿಸುವ ಪ್ರಾಥಮಿಕ ಉದ್ದೇಶದೊಂದಿಗೆ 2005 ರಲ್ಲಿ ಜಾರಿಗೆ ತರಲಾಗಿರುತ್ತದೆ. ಇದನ್ನು ಸಾಧಿಸಲು ಕಾರ್ಮಿಕರಿಗೆ ನಿಯಮಿತವಾಗಿ ಮತ್ತು ಸಮಯೋಚಿತವಾಗಿ ಕೂಲಿ ಪಾವತಿಸುವುದು ಮತ್ತು ಪಾವತಿಗಳಲ್ಲಿ ಪಾರದರ್ಶಕತೆ ಅಗತ್ಯವೆಂದು ಪರಿಗಣಿಸಲಾಗಿರುತ್ತದೆ. ಮಾಹಿತಿ ನಿರ್ವಹಣಾ ಪದ್ಧತಿ ಆಧಾರಿತ ವಿದ್ಯುನ್ಮಾನ ನಿಧಿ ನಿರ್ವಹಣಾ ಪದ್ಧತಿಯು, 2012-13ರಲ್ಲಿ ಪರಿಚಯಿಸಲ್ಪಟ್ಟಿದ್ದು ಈ ದಿಸೆಯಲ್ಲಿ ಇದು ಒಂದು ದೊಡ್ಡ ತ್ವರಿತ ಚಾಲನೆಯಾಗಿರುತ್ತದೆ. ಕೂಲಿ ಪಾವತಿಯ ಹೊಸ ವ್ಯವಸ್ಥೆಯ ಮೌಲ್ಯಮಾಪನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಪ್ರಾರಂಭಿಸಿದ್ದು, ವ್ಯವಸ್ಥೆಯ ಕಾರ್ಯವೈಖರಿ ಮತ್ತು ಪಾವತಿಗಳ ದಕ್ಷತೆಯನ್ನು ಸುಧಾರಿಸುವಲ್ಲಿ ಮತ್ತು ಅಂತಿಮವಾಗಿ ಸಮಯೋಚಿತವಾಗಿ ತಮ್ಮ ಕೂಲಿಯನ್ನು ಭದ್ರಪಡಿಸಿಕೊಳ್ಳಲು ಕಾರ್ಮಿಕರಿಗೆ ಸಹಾಯ ಮಾಡುವ ಬಗ್ಗೆ ಕ್ಷೇತ್ರ ಮಟ್ಟದ ಸಾಕ್ಷ್ಯಗಳನ್ನು ಈ ಅಧ್ಯಯನವು ಪಡೆದಿರುತ್ತದೆ. ಇದನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪಟ್ಟಿ ಮಾಡಲಾದ ಸಮಾಲೋಚಕ ಸಂಸ್ಥೆಯಾದ- ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಂಗ್ ಕಲಬುರಗಿ ಸಂಸ್ಥೆಯು ಕೈಗೆತ್ತಿಕೊಂಡಿರುತ್ತದೆ.

ಅಧ್ಯಯನದ ಶೋಧನೆಗಳು ನಮ್ಮ ರಾಜ್ಯದ ನಾಲ್ಕು ಕಂದಾಯ ವಿಭಾಗಗಳ ಎಂಟು ಜಿಲ್ಲೆಗಳ 4301 ಕಾರ್ಮಿಕರ ಯಾದೃಚ್ಛಿಕ ಶ್ರೇಣೀಕೃತ ಮಾದರಿಯಿಂದ ಸಂಗ್ರಹಿಸಲಾದ ಪ್ರಾಥಮಿಕ ದತ್ತಾಂಶವನ್ನು ಆಧರಿಸಿವೆ. ಈ ವ್ಯವಸ್ಥೆಯ ಕಾರ್ಯವೈಖರಿಯ ಬಗ್ಗೆ ಒಳನೋಟಗಳನ್ನು ಪಡೆಯಲು ಇತರ ಪಾಲುದಾರರನ್ನು ಅಂದರೆ, ಸಾಮಗ್ರಿ ಪೂರೈಕೆದಾರರು, ಚುನಾಯಿತ ಪ್ರತಿನಿಧಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸಹ ಸಂದರ್ಶಿಸಲಾಗಿರುತ್ತದೆ. ಈ ಕಾರ್ಯಕ್ರಮದ ಉದ್ದೇಶಗಳನ್ನು ಹೆಚ್ಚಾಗಿ ಸಾಧಿಸಿರುವುದಾಗಿ ಹಾಗೂ ಶೇಕಡಾ 75ರಷ್ಟು ಕಾರ್ಮಿಕರು ತಮಗೆ ಕೂಲಿ ಪಾವತಿಸುವಲ್ಲಿ ಯಾವುದೇ ವಿಳಂಬವನ್ನು ವರದಿ ಮಾಡಿರುವುದಿಲ್ಲ ಮತ್ತು ಹಣವನ್ನು ನಿಲುಗಡೆ ಮಾಡುವುದನ್ನು ಕಡಿಮೆ ಮಾಡಲಾಗಿದೆ ಎಂದು ಅಧ್ಯಯನದ ಪ್ರಮುಖ ಶೋಧನೆಗಳು ಸೂಚಿಸಿರುತ್ತವೆ ಮುಖ್ಯವಾಗಿ ಪೂರ್ವ-ನಿಧಿ ವರ್ಗಾವಣೆ ಆದೇಶ ವಹಿವಾಟಿನಲ್ಲಿ ವಿಳಂಬವನ್ನು ಗಮನಿಸಬಹುದಾಗಿರುತ್ತದೆ ಬ್ಯಾಂಕುಗಳಿಗೆ ಭೇಟಿ ನೀಡುವವರ ಸಂಖ್ಯೆ ಕಡಿಮೆಯಾಗುವುದರಿಂದ ಸಮಯ ಮತ್ತು ಶಕ್ತಿ ಎರಡನ್ನೂ ಉಳಿಸಲಾಗಿರುತ್ತದೆ. ಸಮಯೋಚಿತ ಕೂಲಿ ಪಾವತಿಯಿಂದಾಗಿ ಕೆಲಸದ ಸ್ವೀಕಾರದ ದರವು ಉತ್ತೇಜಿಸಲ್ಪಟ್ಟಿದೆ. ಸೇವೆಗಳ ಲಭ್ಯತೆಯಲ್ಲಿ ಲಿಂಗ ವ್ಯತ್ಯಾಸಗಳು ಗಮನಾರ್ಹವಾಗಿಲ್ಲ. ಆದಾಗ್ಯೂ ದಲ್ಲಾಳಿಗಳ ಉಪಸ್ಥಿತಿಯನ್ನು ಸಂಪೂರ್ಣವಾಗಿ ತೆಗೆದುಹಾಕಲಾಗುವುದಿಲ್ಲ, ಮತ್ತೊಂದೆಡೆ, ಸಾಮಗ್ರಿ ಪೂರೈಕೆದಾರರಿಗೆ ಹೊಸ ವ್ಯವಸ್ಥೆಯು ಹಿತವಾಗಿರುವುದಿಲ್ಲ. ನಿಧಿ ವರ್ಗಾವಣೆ ಆದೇಶ ಪೂರ್ವ ವಹಿವಾಟುಗಳನ್ನು ಸುಗಮಗೊಳಿಸುವುದು, ತಿರಸ್ಕರಿಸಲ್ಪಟ್ಟ ಅಥವಾ ವಿಳಂಬವಾದ ಪಾವತಿಗಳ ಹಾಗೂ ಸಲ್ಲಿಸಿದ ಹಕ್ಕುಗಳು ಮತ್ತು ಸ್ಥಿತಿಯನ್ನು ತಿರಸ್ಕರಿಸುವ ಕಾರಣಗಳು ಇತ್ಯಾದಿಗಳ ಬಗ್ಗೆ ಬ್ಯಾಂಕಿನಿಂದ ಸ್ವಯಂಚಾಲಿತ ಎಚ್ಚರಿಕೆಗಳನ್ನು ನೀಡುವುದು, ಪಂಚಾಯತ್ ಅಧಿಕಾರಿಗಳ ಸಾಮರ್ಥ್ಯ ವೃದ್ಧಿಸುವುದು, ಕಾರ್ಮಿಕರ ಆರ್ಥಿಕ ಸಾಕ್ಷರತೆಯನ್ನು ಉತ್ತೇಜಿಸುವುದು ಮತ್ತು ಸಕಾಲ ಸೇವೆಗಳ ಅಡಿಯಲ್ಲಿ ಕುಂದುಕೊರತೆಗಳ ಔಪಚಾರಿಕ ನೋಂದಣಿಯ ಒಂದು ವ್ಯವಸ್ಥೆ ತರುವುದು. ಈ ಅಧ್ಯಯನದ ಪ್ರಮುಖ ಶಿಫಾರಸ್ಸುಗಳಾಗಿರುತ್ತವೆ.

ಈ ಮೌಲ್ಯಮಾಪನ ಅಧ್ಯಯನದ ಶೋಧನೆಗಳು ಹಾಗೂ ಶಿಫಾರಸ್ಸುಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರಾಜ್ಯದಲ್ಲಿ ಈ ಕಾರ್ಯಕ್ರಮದ ಉದ್ದೇಶಗಳನ್ನು ಸಾಧಿಸಲು ಮತ್ತು ಯೋಜನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಉಪಯುಕ್ತವಾಗುತ್ತವೆ ಎಂದು ನಾನು ನಿರೀಕ್ಷಿಸುತ್ತೇನೆ.

ಈ ಮೌಲ್ಯಮಾಪನ ಅಧ್ಯಯನವು ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಇವರ ಬೆಂಬಲ ಮತ್ತು ಮಾರ್ಗದರ್ಶನವನ್ನು ಪಡೆದಿರುತ್ತದೆ. ಈ ವರದಿಯನ್ನು 45ನೇ ತಾಂತ್ರಿಕ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ತಾಂತ್ರಿಕ ಸಮಿತಿ ಸದಸ್ಯರು ಈ ಅಧ್ಯಯನದ ಕರಡು ವರದಿಯ ಪರಿಶೀಲನೆಯನ್ನು ನಡೆಸಿದ್ದು, ಓರ್ವ ಸ್ವತಂತ್ರ ಮೌಲ್ಯಮಾಪಕರು ಈ ವರದಿಯ ಗುಣಮಟ್ಟವನ್ನು ಹೆಚ್ಚಿಸಲು ಉಪಯುಕ್ತ ಒಳನೋಟಗಳು ಮತ್ತು ಸಲಹೆಗಳನ್ನು ನೀಡಿರುತ್ತಾರೆ. ಈ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಎಲ್ಲರೂ ನೀಡಿದ ಸಹಾಯಕ್ಕಾಗಿ ನನ್ನ ಕೃತಜ್ಞತೆಗಳು.

Sudarshan G A 04/05

ಮುಖ್ಯ ಮೌಲ್ಯಮಾಪನಾಧಿಕಾರಿಗಳು
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

# ಕೃತಜ್ಞತೆಗಳು

"ಕರ್ನಾಟಕದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದಡಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪ್ರಾರಂಭವಾದಾಗಿನಿಂದ ಅದರ ಮೂಲಕ ಫಲಾನುಭವಿಗಳಿಗೆ (ಕಾರ್ಮಿಕರು ಮತ್ತು ಸರಬರಾಜುದಾರರಿಗೆ) ಕೂಲಿ ಮತ್ತು ಸಾಮಗ್ರಿಗಳ ಪಾವತಿಗಳಿಂದಾದ ಪರಿಣಾಮದ ಮೌಲ್ಯಮಾಪನವನ್ನು ಕರ್ನಾಟಕದ 8 ಜಿಲ್ಲೆಗಳಿಂದ ಆಯ್ಕೆಯಾದ ಯೋಜನೆಯ ಫಲಾನುಭವಿಗಳು ನೀಡಿದ ಅಮೂಲ್ಯ ಮಾಹಿತಿಯಿಂದ ಪಡೆದ ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶಗಳ ಸಮರ್ಥ ವಿಶ್ಲೇಷಣೆಯೊಂದಿಗೆ ಕೈಗೊಳ್ಳಲಾಗಿರುತ್ತದೆ. ಈ ಮೌಲ್ಯಮಾಪನ ಅಧ್ಯಯನವನ್ನು ಪೂರ್ಣಗೊಳಿಸುವಲ್ಲಿ ನೀಡಿರುವ ಅಮೂಲ್ಯ ಕೊಡುಗೆಗಳಿಗಾಗಿ, ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಂಗ್ ಸಂಸ್ಥೆಯು ಈ ಕೆಳಗಿನ ವ್ಯಕ್ತಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಡಾ. ಶಾಲಿನಿ ರಜನೀಶ್, ಭಾಆಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಶ್ರೀ. ಸುದರ್ಶನ್ ಜಿ.ಎ. ಭಾಅಸೇ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಆಯುಕ್ತರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಶ್ರೀ. ವಿ.ಎಂ.ಮಹೇಶ್ ತಾಂತ್ರಿಕ ನಿರ್ದೇಶಕರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರೆಲ್ಲರಿಗೂ ನಾವು ಪ್ರಾಮಾಣಿಕವಾಗಿ ಧನ್ಯವಾದಗಳನ್ನು ಸಲ್ಲಿಸಬಯಸುತ್ತೇವೆ.

ಡಾ. ಛಾಯಾ ಕೆ. ದೇವಗಾಂವ್ಕರ್, ಅಪರ ಮುಖ್ಯ ಮೌಲ್ಯಮಾಪನ ಅಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಇವರು ನೀಡಿದ ಒಳಹರಿವು ಮತ್ತು ಸಲಹೆಗಳು ಅತ್ಯಂತ ಮೌಲ್ಯಯುತವಾಗಿದ್ದು, ನಾವು ಇವರಿಗೆ ಸಂಪೂರ್ಣ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸಬಯಸುತ್ತೇವೆ.

ಶ್ರೀಮತಿ ಜ್ಯೋತಿ ಜೆನ್ನಿ, ಸಹ ನಿರ್ದೇಶಕರು, ಶ್ರೀಮತಿ ಸವಿತಾ ದಯಾನಂದ್, ಆಡಳಿತಾಧಿಕಾರಿ ಮತ್ತು ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಧಿಕಾರದ ಸಿಬ್ಬಂದಿಗಳ ನಿರಂತರ ಬೆಂಬಲಕ್ಕಾಗಿ ನಮ್ಮ ವಂದನೆಗಳು.

ಡಾ. ಜಿ. ಕೆ. ಕಾರಂತ್, ಇವರು ಪ್ರಧಾನ ಶೋಧಕರಾಗಿ ಈ ಅಧ್ಯಯನವನ್ನು ನಿರ್ವಹಿಸಿ ಈ ವರದಿಯನ್ನು ಸಿದ್ಧಪಡಿಸಿರುತ್ತಾರೆ. ಮೌಲ್ಯಮಾಪನ ಅಧ್ಯಯನಕ್ಕಾಗಿ ಇವರ ಒಟ್ಟು ಸಮರ್ಪಣೆ ಮತ್ತು ಈ ವರದಿಯನ್ನು ಸಿದ್ಧಪಡಿಸುವಲ್ಲಿನ ಪಾಲ್ಗೊಳ್ಳುವಿಕೆಯು ಹೆಚ್ಚು ಪ್ರಶಂಸಿಸಲ್ಪಟ್ಟಿರುತ್ತದೆ.

ಶ್ರೀಮತಿ ಅಪರ್ಣಾ ಎಂ ಕೊಳ್ಳಾ, ನಿರ್ದೇಶಕಿ, ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಂಗ್ ಸಂಸ್ಥೆ, ಇವರು ಈ ಮೌಲ್ಯಮಾಪನ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ತಾಂತ್ರಿಕ ಬೆಂಬಲವನ್ನು ನೀಡುವಲ್ಲಿ ಪ್ರಮುಖ ವ್ಯಕ್ತಿಯಾಗಿರುತ್ತಾರೆ. ಈ ಯೋಜನೆಯ ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಸಹಕರಿಸಿದ ಇವರ ಮತ್ತು ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಂಗ್ ಸಂಸ್ಥೆಯ ತಂಡಕ್ಕೆ ನಮ್ಮ ಪ್ರಾಮಾಣಿಕ ಧನ್ಯವಾದಗಳು,

ಅಧ್ಯಕ್ಷರು
ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್
ಅಡ್ವಾನ್ಸ್ಡ್ ಲರ್ನಿಂಗ್ ಸಂಸ್ಥೆ
ಕಲಬುರಗಿ

## ಪರಿವಿಡಿ

ಕಾರ್ಯಕಾರಿ ಸಾರಾಂಶ ........ 01

ಅಧ್ಯಯನದ ಶೋಧನೆಗಳು ........ 02

ಶಿಫಾರಸ್ಸುಗಳು ........ 06

**1. ಪರಿಚಯ** ........ 09

1.1 ಹಿನ್ನೆಲೆ ಮಾಹಿತಿ ........ 09

**2 ಚಟುವಟಿಕೆಗಳ ಚೌಕಟ್ಟು/ಬದಲಾವಣೆಯ ಸಿದ್ಧಾಂತ/ಕಾರ್ಯಕ್ರಮದ ಸಿದ್ಧಾಂತ** ........ 15

2.1 ಯೋಜನೆಯ ಉದ್ದೇಶಗಳು ........ 15

2.2 ಅನುಷ್ಠಾನಕ್ಕಾಗಿ ಸಾಂಸ್ಥಿಕ ರಚನೆ ........ 16

2.3 ಮೌಲ್ಯಮಾಪನದ ತಾರ್ಕಿಕ ಚೌಕಟ್ಟು ........ 17

**3. ಚೌಕಟ್ಟು ಕೆಲಸದ ಮೌಲ್ಯಮಾಪನ ........ 19**

3.1 ಮೌಲ್ಯಮಾಪನದ ವ್ಯಾಪ್ತಿ ........ 19

3.2 ಮೌಲ್ಯಮಾಪನದ ಉದ್ದೇಶಗಳು ........ 19

**4. ಮೌಲ್ಯಮಾಪನದ ಪ್ರಶ್ನೆಗಳು ಮತ್ತು ಉಪ ಪ್ರಶ್ನೆಗಳು ........ 21**

4.1 ಸೂಚಕಗಳು ........ 22

**5. ಮೌಲ್ಯಮಾಪನ ವಿಧಾನಗಳು ಮತ್ತು ತಂತ್ರಗಳು ........ 23**

5.1 ದತ್ತಾಂಶ ಮತ್ತು ಮಾಹಿತಿಯ ಮೂಲಗಳು ........ 23

**6 ಮೌಲ್ಯಮಾಪನ ಮಾತೃಕೆ ........ 25**

6.1 ಪ್ರಮುಖ ಮೌಲ್ಯಮಾಪನ ಉದ್ದೇಶಗಳಿಗಾಗಿ ಮಾತೃಕೆ ........ 25

6.2 ಮೌಲ್ಯಮಾಪನ ಪ್ರಶ್ನೆಗಳಿಗೆ ಸೂಚಕಗಳು ಮತ್ತು ವಿಧಾನಗಳ ಮಾತೃಕೆ ........ 26

**7. ಮಾದರಿ ಮತ್ತು ಮಾದರಿ ವಿನ್ಯಾಸ ಮಾದರಿ ವಿಧಾನ ........ 30**

7.1 ದತ್ತಾಂಶ ವಿಶ್ಲೇಷಣೆಯ ವಿಧಾನ ........ 32

7.2 ಮಹಾತ್ಮಾ ಗಾಂಧಿ ರಾಷ್ಟ್ರೀಯಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದಲ್ಲಿ ಕೂಲಿ ಪಾವತಿ ವಿಳಂಬದ ಬಗ್ಗೆ ಸಾಹಿತ್ಯವು ಏನು ಹೇಳುತ್ತದೆ? ........ 32

**8. ಮೌಲ್ಯಮಾಪನ ಅಧ್ಯಯನದ ಶೋಧನೆಗಳು ........ 39**

8.1 ಮಾದರಿಯ ಸಂಕ್ಷಿಪ್ತ ವಿವರಣೆ ........ 39

8.2 ಮಹಾತ್ಮಾ ಗಾಂಧಿ ರಾಷ್ಟ್ರೀಯಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದ ಮೂಲಕ ಕೆಲಸದ ಮೇಲೆ ಜನರು ಹೇಗೆ ಅವಲಂಬಿತರಾಗಿರುತ್ತಾರೆ? ........ 42

8.3 ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಕೂಲಿ ಮತ್ತು ಸಾಮಗ್ರಿ ಪಾವತಿಗಳನ್ನು ಸ್ವೀಕರಿಸುವ ಸಮಯವನ್ನು ಕಡಿಮೆಗೊಳಿಸಿದೆಯೇ? ........ 52

8.4 ವಿಳಂಬ ಕೂಲಿ ಪಾವತಿಗಳು ........ 70

8.5 ಕೂಲಿ ಪಾವತಿಯಲ್ಲಿ ಸಮಯದ ಅಂತರ–ಜಿಲ್ಲಾ ವ್ಯತ್ಯಾಸಗಳು ........ 71

8.6ಸರಬರಾಜು ಮಾಡಿದ ವಸ್ತುಗಳಿಗೆ ಪಾವತಿ ವಿಳಂಬದಲ್ಲಿ ಕಡಿತವಾಗಿರುವುದು .......... 80

8.7 ಹಕ್ಕುಗಳ ಪಾವತಿಯ ನಿರಾಕರಣೆ .......... 86

8.8 ಈ ವ್ಯವಸ್ಥೆಯು ಮಧ್ಯವರ್ತಿಗಳ ಹಸ್ತಕ್ಷೇಪ ಮತ್ತು ಭ್ರಷ್ಟಾಚಾರದ ನಿದರ್ಶನಗಳನ್ನು ಕಡಿಮೆಗೊಳಿಸಿದೆಯೇ? .......... 89

8.9 ಈ ವ್ಯವಸ್ಥೆಯು ಹಣವನ್ನು ನಿಲುಗಡೆ ಮಾಡುವುದನ್ನು ತಪ್ಪಿಸಿದೆಯೇ ಮತ್ತು ಅದರ ಉತ್ತಮ ನಿರ್ವಹಣೆಗೆ ಕೊಡುಗೆಯನ್ನು ನೀಡಿದೆಯೇ? .......... 93

8.10 ಅಗತ್ಯವಿದ್ದಾಗ ಫಲಾನುಭವಿಗಳು ಬ್ಯಾಂಕುಗಳಿಂದ ಹಣವನ್ನು ಹಿಂಪಡೆಯಲು ಸಮರ್ಥರಾಗಿದ್ದಾರೆಯೇ ಅಥವಾ ವಾಪಸಾತಿ ಮತ್ತು ಇನ್ನಾವುದೇ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳೊಂದಿಗೆ ವ್ಯವಹರಿಸುವಾಗ ಅವರು ತೊಂದರೆಗಳನ್ನು ಎದುರಿಸಿರುವರೇ? .......... 99

8.11 ಶಿಕ್ಷಣ ಮತ್ತು ಬ್ಯಾಂಕ್ ಖಾತೆ ವಿವರಗಳು .......... 99

**9. ಪ್ರತಿಫಲನ ಮತ್ತು ತೀರ್ಮಾನಗಳು .......... 131**

9.1 ಅಧ್ಯಯನದಲ್ಲಿ ನಿರ್ಣಯಿಸಿದ ಉದ್ದೇಶಗಳು .......... 131

9.2 ಮೌಲ್ಯಮಾಪನ ಪ್ರಶ್ನೆಗಳು ಮತ್ತು ಉಪ ಪ್ರಶ್ನೆಗಳು .......... 131

9.3 ಅಧ್ಯಯನದ ಶೋಧನೆಗಳು .......... 132

**10. ಶಿಫಾರಸ್ಸುಗಳು .......... 137**

## ಅನುಬಂಧಗಳ ಪಟ್ಟಿ

I. ನಿಧಿ ವರ್ಗಾವಣೆ ಆದೇಶಗಳಲ್ಲಿನ ಎರಡನೇ ಸಹಿಯಲ್ಲಿ ವಿಳಂಬಕ್ಕೆ ಕೋಷ್ಟಕಗಳು ಮತ್ತು ಅಂಕಿ ಅಂಶಗಳು .......... 139

II. ಭೂಮಾಲೀಕತ್ವ ಮತ್ತು ಕೂಲಿ ಕಾರ್ಮಿಕರಾಗಿ ಕೆಲಸ ಮಾಡಬೇಕೋ ಬೇಡವೋ .......... 145

III. ಉದ್ಯೋಗಕ್ಕಾಗಿ ಬೇಡಿಕೆ, ಕೊಡುಗೆ ಮತ್ತು ವಾಸ್ತವವಾಗಿ ಕೆಲಸ ಮಾಡಿರುವುದು– ಮಾದರಿ ಜಿಲ್ಲೆಗಳು ಮತ್ತು ಕರ್ನಾಟಕ .......... 147

IV. ಅರ್ಹ ಪರಿಹಾರ ನೀಡಿಕೆಯಲ್ಲಿನ ವಿಳಂಬ, ಪಾವತಿಸಿರುವುದು ಮತ್ತು ನಿರಾಕರಣೆಯ ಕಾರಣಗಳು (ಮಾದರಿ ಜಿಲ್ಲೆಗಳು) .......... 149

V. ಉಲ್ಲೇಖಗಳ ಪಟ್ಟಿ .......... 153

# ಕೋಷ್ಟಕಗಳ ಪಟ್ಟಿ


| ಕ್ರ. ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 1. | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದ ಭೌತಿಕ ಪ್ರಗತಿ [2014–15 ರಿಂದ 2018–19] | 13 |
| 2. | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದ ಆರ್ಥಿಕ ಪ್ರಗತಿ [2014–15 ರಿಂದ 2018–19] | 14 |
| 3. | ಮಾದರಿ ಜಿಲ್ಲೆಗಳಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದ ಪ್ರಮುಖ ಲಕ್ಷಣಗಳು | 30 |
| 4. | ಮಾದರಿಯ ಸಂಕ್ಷಿಪ್ತ ವಿವರಣೆ | 39 |
| 5. | ಭೂಮಾಲೀಕತ್ವ ಮತ್ತು ಕೂಲಿಗಾಗಿ ಕೆಲಸ ಅಥವಾ ಸ್ವಂತಕ್ಕಾಗಿ ಕೆಲಸ | 41 |
| 6. | ಮಾದರಿ ಜಿಲ್ಲೆಗಳಲ್ಲಿ ಪ್ರತಿಕ್ರಿಯೆದಾರರು ಉದ್ಯೋಗ ಕಾರ್ಡ್ ಮಾಡಿಸಿರುವ ವರ್ಷ | 51 |
| 7. | ಕರ್ನಾಟಕದಲ್ಲಿ ಹಾಜರಾತಿ ಪಟ್ಟಿಯಲ್ಲಿ ಎರಡನೇ ಸಹಿಗಾಗಿ ಟಿ+8 ವಿಳಂಬ (ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ) | 60 |
| 8. | ಮಾದರಿ ಜಿಲ್ಲೆಗಳಾದ್ಯಂತ ಸಮಯೋಚಿತ ಕೂಲಿ ಪಾವತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳು | 63 |
| 9. | ಹಿಂದಿನ 3 ವರ್ಷಗಳಲ್ಲಿ [2015–18] ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಎದುರಿಸಿದ ಸಮಸ್ಯೆಗಳ ಗ್ರಹಿಕೆಗಳು | 65 |
| 10. | ಪಾವತಿ ವಿಳಂಬಕ್ಕೆ ಕಾರಣವಾಗುವ ಕೆಲವು ಸಮಸ್ಯೆಗಳ ಆವರ್ತನಕ್ಕೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಪ್ರತಿಕ್ರಿಯೆ | 67 |
| 11. | ಜಿಲ್ಲೆಗಳಾದ್ಯಂತ ವಿಳಂಬಿತ ಪಾವತಿಗಳಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಗ್ರಹಿಕೆ | 68 |
| 12. | ಜಿಲ್ಲೆಗಳಾದ್ಯಂತ ವಿಳಂಬಿತ ಪಾವತಿಗಳಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಗ್ರಹಿಕೆ (ಮುಂದುವರೆದಿದೆ) | 69 |
| 13. | ಸಮಯೋಚಿತ ಕೂಲಿ ಪಾವತಿ ದರಗಳ ಮೇಲೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಣಾಮ | 76 |
| 14. | ರಾಜ್ಯಗಳಿಗೆ ಹೋಲಿಸಿದರೆ ನಿಧಿ ವರ್ಗಾವಣೆ ಆದೇಶ ನಿರಾಕರಣೆ ದರಗಳು–ಕರ್ನಾಟಕ | 87 |
| 15. | ಕೆಲಸದ ಚೀಟಿ ತಯಾರಿಕೆಯ ವರ್ಷ ಮತ್ತು ಕೆಲಸ ಮಾಡಿದ ಸಮಯದ ಸಂಖ್ಯೆ | 91 |
| 16. | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮ: ಅಖಿಲ ಭಾರತ – ಆರ್ಥಿಕ ಪ್ರಗತಿ (ಕೋಟಿ ರೂ.) | 95 |
| 17. | ಮಾದರಿ ಕುಟುಂಬಗಳಲ್ಲಿ ಉನ್ನತ ಶಿಕ್ಷಣ | 101 |
| 18. | ಸಕ್ರಿಯ ಬ್ಯಾಂಕ್ ಖಾತೆಗಳ ವಾರ್ಷಿಕ ಬೆಳವಣಿಗೆಯ ದರಗಳು (2013–14 ರಿಂದ 2018–19) | 102 |
| 19. | ಬ್ಯಾಂಕಿಗೆ ಇರುವ ದೂರ ಮತ್ತು ಕೂಲಿಗಳ ಜಮೆಯನ್ನು ಪರಿಶೀಲಿಸುವ ಆವರ್ತನ | 111 |

| | | |
|---|---|---|
| 20. | ಪದೇ ಪದೇ ಇರುವ ದೂರುಗಳು | 113 |
| 21. | ಮಾದರಿ ಜಿಲ್ಲೆಗಳ ಕಚೇರಿಯಲ್ಲಿನ ಪ್ರಮುಖ ಹುದ್ದೆಗಳು (2018–19) | 116 |
| 22. | ಡಿಜಿಟಲ್ ಪಾವತಿ ತರಬೇತಿ ಸ್ಥಿತಿ: ಮಾದರಿ ಜಿಲ್ಲೆಗಳು ಮತ್ತು ಕರ್ನಾಟಕ | 117 |
| 23. | ಕರ್ನಾಟಕ ಮತ್ತು ಮಾದರಿ ಜಿಲ್ಲೆಗಳಲ್ಲಿ ದೂರುಗಳು ಮತ್ತು ಅವುಗಳ ಸ್ಥಿತಿ | 122 |
| 24. | ನಿರ್ಧರಿಸಲಾದ ಪಾವತಿಸಲಾದ ಅಥವಾ ತಿರಸ್ಕರಿಸಲಾದ ಪರಿಹಾರ ವಿಳಂಬ ಅರ್ಹತೆ | 124 |
| 25. | ಲಿಂಗ ವ್ಯತ್ಯಾಸಗಳು ಮತ್ತು ಕೂಲಿಗಳಿಗಾಗಿ ಅಥವಾ ಸ್ವಂತಕ್ಕಾಗಿ ಕೆಲಸ ಮಾಡುತ್ತಿರುವುದು | 125 |
| 26. | ಲಿಂಗ ಮತ್ತು ಕೆಲಸದ ಚೀಟಿ ತಯಾರಿಸಲು ಬೆಂಬಲ | 126 |
| 27. | ಲಿಂಗ ಮತ್ತು ಕೆಲಸ ಮಾಡಿದ ಸಮಯದ ಸಂಖ್ಯೆ | 127 |
| 28. | ಲಿಂಗ ಮತ್ತು ವರದಿಯಾದ ಕೂಲಿ ಪಾವತಿಯಲ್ಲಿನ ವಿಳಂಬ | 128 |
| 29. | ಲಿಂಗ ಮತ್ತು ಡೆಬಿಟ್ ಕಾರ್ಡ್ ಬಳಸುವ ಜ್ಞಾನ | 130 |

# ಚಿತ್ರಗಳ ಪಟ್ಟಿ


| ಕ್ರ. ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 1 | ಪಾವತಿಗಳಿಗಾಗಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಕ್ರಿಯೆಯ ಫ್ಲೋ ಚಾರ್ಟ್ | 10 |
| 2 | ಭೂಮಾಲೀಕತ್ವ ಮತ್ತು ಕೂಲಿಗಳಿಗಾಗಿ ಅಥವಾ ಸ್ವಂತಕ್ಕಾಗಿ ಕೆಲಸ ಮಾಡುತ್ತಿರುವುದು | 18/42 |
| 3 | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದ ನೋಂದಾಯಿತ ಕುಟುಂಬಗಳು ಮತ್ತು ಉದ್ಯೋಗವನ್ನು ಕೋರುವ ವ್ಯಕ್ತಿಗಳು: ಕರ್ನಾಟಕ | 45 |
| 4 | ಬೇಡಿಕೆಗೆ ಎದುರಾಗಿ ನೀಡಲಾದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಉದ್ಯೋಗ  ಮತ್ತು ವಾಸ್ತವವಾಗಿ ಕೆಲಸ ಮಾಡಿರುವ ಕುಟುಂಬಗಳು | 46 |
| 5 | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಡಿ ಬೇಡಿಕೆಗೆ ಎದುರಾಗಿ ನೀಡಲಾದ ಉದ್ಯೋಗ ಮತ್ತು ವಾಸ್ತವವಾಗಿ ಕೆಲಸ ಮಾಡಿದ ವ್ಯಕ್ತಿಗಳು | 47 |
| 6 | ಉದ್ಯೋಗ ಕಾರ್ಡ್ ಮಾಡಿಸಿರುವ ವರ್ಷ ಮತ್ತು ಎಷ್ಟು ಸಲ ಕೆಲಸ ಮಾಡಲಾಗಿದೆ | 51 |
| 7 | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಸಮಯೋಚಿತ ಕೂಲಿ ಪಾವತಿಯ ಬಗ್ಗೆ ಅಖಿಲ ಭಾರತ ಮತ್ತು ಕರ್ನಾಟಕ ಸರಾಸರಿಗಳ ಹೋಲಿಕೆ | 71 |
| 8 | ಸಮಯೋಚಿತ ಕೂಲಿಗಳ ಪಾವತಿಯಲ್ಲಿ ಅಂತರ– ಜಿಲ್ಲಾ ವ್ಯತ್ಯಾಸ ಹೋಲಿಕೆ | 72 |
| 9 | ಮಾದರಿ ಜಿಲ್ಲೆಗಳಲ್ಲಿ ಕೂಲಿಗಳ ಸಮಯೋಚಿತ ಪಾವತಿ (2013–14 ರಿಂದ 2018–19) | 73 |
| 10 | ಮಾದರಿ ಜಿಲ್ಲೆಗಳಲ್ಲಿ ವೇತನ ವಿಳಂಬ ಪಾವತಿ ಅಥವಾ ಸಮಯೋಚಿತ ಪಾವತಿ: 2013–14 | 78 |
| 11 | ಮಾದರಿ ಜಿಲ್ಲೆಗಳಲ್ಲಿ ವೇತನ ವಿಳಂಬ ಪಾವತಿ ಅಥವಾ ಸಮಯೋಚಿತ ಪಾವತಿ: 2018–19 | 779 |
| 12 | ಬ್ಯಾಂಕಿಗೆ ಕಳುಹಿಸದ ನಿಧಿ ವರ್ಗಾವಣೆ ಆದೇಶಗಳು: ಕೂಲಿ ಮತ್ತು ಸಾಮಗ್ರಿ ಹೋಲಿಕೆ (ಅಖಿಲ ಭಾರತ) | 82 |
| 13 | ಬ್ಯಾಂಕಿಗೆ ಕಳುಹಿಸದ ನಿಧಿ ವರ್ಗಾವಣೆ ಆದೇಶಗಳು: ಕೂಲಿ ಮತ್ತು ಸಾಮಗ್ರಿ ಹೋಲಿಕೆ (ಕರ್ನಾಟಕ) | 82 |
| 14 | ಬ್ಯಾಂಕುಗಳಿಂದ ಸಂಸ್ಕರಿಸಿದ ವಹಿವಾಟುಗಳು [%]: ಸಂಸ್ಕರಿಸಿದ ಕೂಲಿಗಳು ಮತ್ತು ಸಾಮಗ್ರಿಗಳ ವಹಿವಾಟುಗಳು (ಅಖಿಲ ಭಾರತ) | 83 |
| 15 | ಬ್ಯಾಂಕುಗಳಿಂದ ಸಂಸ್ಕರಿಸಿದ ವಹಿವಾಟುಗಳು [%]: ಸಂಸ್ಕರಿಸಿದ ಕೂಲಿಗಳು ಮತ್ತು ಸಾಮಗ್ರಿಗಳ ವಹಿವಾಟುಗಳು (ಕರ್ನಾಟಕ) | 83 |
| 16 | ಸಾಮಗ್ರಿಗಳ ಪಾವತಿಯ ಬಗ್ಗೆ ಬ್ಯಾಂಕುಗಳ ಪ್ರತಿಕ್ರಿಯೆ (ಅಖಿಲ ಭಾರತ) | 84 |
| 17 | ಕೂಲಿ ಪಾವತಿಯ ಬಗ್ಗೆ ಬ್ಯಾಂಕುಗಳ ಪ್ರತಿಕ್ರಿಯೆ (ಅಖಿಲ ಭಾರತ) | 84 |
| 18 | ಕರ್ನಾಟಕ: ಸಾಮಗ್ರಿಗಳಿಗಾಗಿ ಪಾವತಿ – ಬ್ಯಾಂಕಿನ ಪ್ರತಿಕ್ರಿಯೆ | 84 |
| 19 | ಕೂಲಿ ಪಾವತಿಯ ಬಗ್ಗೆ ಬ್ಯಾಂಕುಗಳ ಪ್ರತಿಕ್ರಿಯೆ (ಕರ್ನಾಟಕ) | 85 |
| 20 | ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಒಟ್ಟು ಖರ್ಚು (ಶೇಕಡಾ) | 96 |

| | | |
|---|---|---|
| 21 | ಪ್ರಸಕ್ತ ವರ್ಷದ ವಿನಿಯೋಗದಿಂದ ಹಿಂದಿನ ವರ್ಷದ ಹೊಣೆಗಾರಿಕೆಗಳು: ಕರ್ನಾಟಕ | 97 |
| 22 | ಪ್ರಸಕ್ತ ವರ್ಷದ ವಿನಿಯೋಗದಿಂದ ಹಿಂದಿನ ವರ್ಷದ ಹೊಣೆಗಾರಿಕೆಗಳ %: ಸಂಯುಕ್ತ ವಾರ್ಷಿಕ ಬೆಳವಣಿಗೆ ದರ | 98 |
| 23 | ಕುಟುಂಬಗಳಲ್ಲಿನ ಕೆಲಸದ ಚೀಟಿಗಳ ಸಂಖ್ಯೆ ಮತ್ತು ಬ್ಯಾಂಕ್ ಖಾತೆಗಳ ಸಂಖ್ಯೆ | 103 |
| 24 | ಮಾದರಿ ಜಿಲ್ಲೆಗಳಲ್ಲಿ ಬ್ಯಾಂಕಿಗೆ ಇರುವ ದೂರ | 105 |
| 25 | ಜಿಲ್ಲೆಗಳು ಮತ್ತು ಎಟಿಎಂಗೆ ಇರುವ ದೂರ | 105 |
| 26 | ವಾಣಿಜ್ಯ ಬ್ಯಾಂಕಿಗೆ ಪ್ರಯಾಣಿಸುವ ವಿಧಾನಗಳು | 106 |
| 27 | ಬ್ಯಾಂಕಿಗೆ ಇರುವ ದೂರ ಮತ್ತು ಪ್ರಯಾಣದ ವೆಚ್ಚಗಳು | 106 |
| 28 | ಎಟಿಎಂಗೆ ಇರುವ ದೂರ ಮತ್ತು ಪ್ರಯಾಣದ ವಿಧಾನಗಳು | 107 |
| 29 | ಎಟಿಎಂಗೆ ಇರುವ ದೂರ ಮತ್ತು ಪ್ರಯಾಣದ ವೆಚ್ಚಗಳು | 107 |
| 30 | ಸೌಲಭ್ಯಕ್ಕೆ ಇರುವ ದೂರ ಮತ್ತು ಸರಾಸರಿ ಪ್ರಯಾಣದ ವೆಚ್ಚಗಳು (ರೂ./ಭೇಟಿ) | 109 |
| 31 | ಲಿಂಗ ಮತ್ತು ವಿಳಂಬ ಕೂಲಿ ಪಾವತಿಯು ವರದಿಯಾಗಿರುವುದು | 128 |
| 32 | ಲಿಂಗ ಮತ್ತು ಬ್ಯಾಂಕಿಗೆ ಹೋಗುವ ವೆಚ್ಚಗಳು | 129 |

# ಸಂಕ್ಷೇಪಣಗಳು

| | |
|---|---|
| ಎಟಿಎಂ | ಆಟೋಮೆಟಿಕ್ ಟೆಲ್ಲರ್ ಮಿಶನ್ |
| ಬಿಪಿಓ | ಬ್ಲಾಕ್ ಪಂಚಾಯತ್ ಕಚೇರಿ; ಟಿಪಿ–ತಾಲ್ಲೂಕು ಪಂಚಾಯತ್ |
| ಇ– ಎಫ್‌ಎಂಎಸ್ | ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ |
| ಇಒ | ಕಾರ್ಯನಿರ್ವಾಹಕ ಅಧಿಕಾರಿ |
| ಎಫ್‌ಜಿಡಿ | ಕೇಂದ್ರೀಕೃತ ಗುಂಪು ಚರ್ಚೆ |
| ಎಫ್‌ಟಿಓ | ನಿಧಿ ವರ್ಗಾವಣೆ ಆದೇಶ |
| ಜಿ.ಪಿ | ಗ್ರಾಮ ಪಂಚಾಯಿತಿ |
| ಜೆಸಿಬಿ | ಜೆ.ಸಿ.ಬಾಮ್‌ಫೋರ್ಡ್ ಅಗೆಯುವ ಯಂತ್ರಗಳು |
| ಎಂಜಿಎನ್‌ಆರ್‌ಇಜಿಎ | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ |
| ಎನ್‌ಎಂಆರ್ | ನಾಮಮಾತ್ರ ಹಾಜರಾತಿ ಪಟ್ಟಿ |
| ಪಿಡಿಒ | ಪಂಚಾಯತ್ ಅಭಿವೃದ್ಧಿ ಅಧಿಕಾರಿ |
| ಝಡ್‌ಪಿ | ಜಿಲ್ಲಾ ಪಂಚಾಯತ್ |

# ಕಾರ್ಯನಿರ್ವಾಹಕ ಸಾರಾಂಶ

ಕಳೆದ ಕೆಲವು ವರ್ಷಗಳಿಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದ ಪ್ರಮುಖ ಸವಾಲುಗಳಲ್ಲಿ ಕೂಲಿಯನ್ನು ಸಮಯೋಚಿತ ಪಾವತಿ ಮಾಡುವುದು ಮುಖ್ಯ ಸವಾಲುಗಳಲ್ಲಿ ಒಂದಾಗಿ ಹೊರಹೊಮ್ಮಿರುತ್ತದೆ. ಈ ಅಧಿನಿಯಮದ ಸೆಕ್ಷನ್ 3(2)ರ ಪ್ರಕಾರ, ಕಾರ್ಮಿಕರಿಗೆ ಕೂಲಿಯನ್ನು ವಾರಕ್ಕೊಮ್ಮೆ ಪಾವತಿಸಬೇಕಾಗುತ್ತದೆ ಮತ್ತು ಯಾವುದೇ ಸಂದರ್ಭದಲ್ಲಿ ಕೂಲಿ ಪಾವತಿಯು, ಕೆಲಸ ಮಾಡಿದ ದಿನಾಂಕದಿಂದ 15 ದಿನಗಳನ್ನು ಮೀರಬಾರದು. ಕೂಲಿಯನ್ನು ಪಾವತಿಸದ ಕಾರ್ಮಿಕರ ಸಂಖ್ಯೆಯು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅಥವಾ ಸಾಮಗ್ರಿಗಳನ್ನು ಪೂರೈಸುವ ಮಾರಾಟಗಾರರಿಗೆ ಪಾವತಿಸದ ಹಿನ್ನೆಲೆಯಲ್ಲಿ, ಸರ್ಕಾರವು ಮಾಹಿತಿ ನಿರ್ವಹಣಾ ವ್ಯವಸ್ಥೆ ಆಧಾರಿತ ನಿಧಿ ನಿರ್ವಹಣೆಯ ವ್ಯವಸ್ಥೆಯನ್ನು ಪರಿಚಯಿಸಿರುತ್ತದೆ. ಇದನ್ನು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಎಂದು ಕರೆಯಲಾಗುತ್ತದೆ. ಇದು 2012–13ರ ಅವಧಿಯಲ್ಲಿ ಜಾರಿಗೆ ಬಂದಿದ್ದು, ಈ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳು ಹೊಸ ನಿಧಿ ನಿರ್ವಹಣೆಯ ವ್ಯವಸ್ಥೆಯಲ್ಲಿರುತ್ತವೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಭಾವವನ್ನು ನಿರ್ಣಯಿಸುವ ಉದ್ದೇಶದಿಂದ, ಈ ಕೆಳಗಿನ ಪ್ರಮುಖ ಪ್ರಶ್ನೆಗಳಿಗೆ ಉತ್ತರಿಸಲು ಮೌಲ್ಯಮಾಪನ ಅಧ್ಯಯನವನ್ನು ಕೈಗೊಳ್ಳಲಾಗಿರುತ್ತದೆ:

1. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಕೂಲಿ ಮತ್ತು ಸಾಮಗ್ರಿ ಪಾವತಿಗಳನ್ನು ಸ್ವೀಕರಿಸುವ ಸಮಯವನ್ನು ಕಡಿಮೆಗೊಳಿಸಿರುವುದೇ?
2. ಈ ವ್ಯವಸ್ಥೆಯು ಮಧ್ಯವರ್ತಿಗಳ ಹಸ್ತಕ್ಷೇಪ ಮತ್ತು ಭ್ರಷ್ಟಾಚಾರದ ನಿದರ್ಶನಗಳನ್ನು ಕಡಿಮೆಗೊಳಿಸುತ್ತದೆಯೇ?
3. ಈ ವ್ಯವಸ್ಥೆಯು ಹಣವನ್ನು ನಿಲುಗಡೆ ಮಾಡುವುದನ್ನು ತಪ್ಪಿಸಿದೆಯೇ?
4. ಫಲಾನುಭವಿಗಳು ಬ್ಯಾಂಕುಗಳಿಂದ ಮತ್ತು ಅಗತ್ಯವಿದ್ದಾಗ ಹಣವನ್ನು ಹಿಂಪಡೆಯಲು ಸಮರ್ಥರಾಗಿದ್ದಾರೆಯೇ ಅಥವಾ ವಾಪಸಾತಿ ಮತ್ತು ಇನ್ನಾವುದೇ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳೊಂದಿಗೆ ವ್ಯವಹರಿಸುವಾಗ ಅವರು ತೊಂದರೆಗಳನ್ನು ಎದುರಿಸುತ್ತಾರೆಯೇ?

ಇದಲ್ಲದೆ, ಈ ಅಧ್ಯಯನದಲ್ಲಿ ಒಂದು ಡಜನ್‌ಗಿಂತಲೂ ಹೆಚ್ಚು ಮೌಲ್ಯಮಾಪನ ಪ್ರಶ್ನೆಗಳಿಗೆ ಉತ್ತರಿಸಲಾಗಿರುತ್ತದೆ. ಈ ಪ್ರಶ್ನೆಗಳು, ಕುಂದುಕೊರತೆ ನಿವಾರಣಾ ವ್ಯವಸ್ಥೆಯ ಕಾರ್ಯವೈಖರಿ, ಸಾಫ್ಟ್‌ವೇರ್ ನಿರ್ವಹಿಸುವ ಸಿಬ್ಬಂದಿಗಳ ಸಾಮರ್ಥ್ಯ, ತರಬೇತಿಗೆ ಸಂಬಂಧಿಸಿದ ಸಮಸ್ಯೆಗಳು, ನಿರುದ್ಯೋಗ ಮತ್ತು ವಿಳಂಬ ಕೂಲಿಗೆ ಪರಿಹಾರ ಪಾವತಿ, ಮಧ್ಯವರ್ತಿಗಳ ಪಾತ್ರವನ್ನು ನಿರ್ಮೂಲನೆ ಮಾಡುವುದು ಮತ್ತು ವ್ಯವಸ್ಥೆಯಲ್ಲಿ ಸುಧಾರಿತ ಪಾರದರ್ಶಕತೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿರುತ್ತವೆ. ರಾಜ್ಯದ 8 ಜಿಲ್ಲೆಗಳಿಂದ (ನಾಲ್ಕು ಆಡಳಿತ ವಲಯಗಳಿಂದ ತಲಾ ಇಬ್ಬರು), 62 ಸಾಮಗ್ರಿ ಪೂರೈಕೆದಾರರು, 920 ಚುನಾಯಿತ ಪ್ರತಿನಿಧಿಗಳು, 293 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಒಳಗೊಂಡ 4301 ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರನ್ನು ಒಳಗೊಂಡ ಮಾದರಿಯಿಂದ ಮೌಲ್ಯಮಾಪನವನ್ನು ಕೈಗೊಳ್ಳಲಾಗಿರುತ್ತದೆ. ಕಛೇರಿಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ವೆಬ್ ಪೋರ್ಟಲ್ [http://mnregaweb4.nic.in]ನಲ್ಲಿ ಲಭ್ಯವಿರುವ ದತ್ತಾಂಶದ ವ್ಯಾಪಕ ಪರಿಶೀಲನೆಯ ಜೊತೆಗೆ ಗುಣಾತ್ಮಕ (ಕೇಂದ್ರೀಕೃತ ಗುಂಪು ಚರ್ಚೆ) ಮತ್ತು ಪರಿಮಾಣಾತ್ಮಕ ವಿಧಾನಗಳ ಮಿಶ್ರಣವನ್ನು ಬಳಸಲಾಗಿರುತ್ತದೆ. ಈಮೌಲ್ಯಮಾಪನವನ್ನು 2013–14 ರಿಂದ 2015–16ರ ಅವಧಿಗೆ

ನಡೆಸಬೇಕಾಗಿದ್ದು, ಅತಿಯಾದ ಸಮಯದಿಂದಾಗಿ ಮತ್ತು ಜಾರಿಯಲ್ಲಿನ ವಿಳಂಬದಿಂದಾಗಿ, ಈ ಅಧ್ಯಯನವು 2013–14 ರಿಂದ 2018–19ರ ಅವಧಿಯನ್ನು ಒಳಗೊಂಡಿರುತ್ತದೆ.

## ಅಧ್ಯಯನದ ಶೋಧನೆಗಳು

ಯಾದೃಚ್ಛಿಕವಾಗಿ ಆಯ್ಕೆ ಮಾಡಿದ 6356 ಪ್ರತಿಕ್ರಿಯೆದಾರರಲ್ಲಿ ಬಹುಪಾಲು ಅಂದರೆ, 2055 ಜನರು (ಶೇಕಡಾ 32.33) ಯಾವುದೇ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾಮಗಾರಿಗಳಲ್ಲಿ ಒಮ್ಮೆ ಸಹ ಅವರು ಕೆಲಸ ಮಾಡಿಲ್ಲ ಎಂದು ವರದಿ ಮಾಡಿರುತ್ತಾರೆ. ನಿಷ್ಕ್ರಿಯ ಉದ್ಯೋಗ ಕಾರ್ಡ್‌ನ್ನು ಹೊಂದಿರುವವರ ಇಷ್ಟು ದೊಡ್ಡ ಪ್ರಮಾಣದ ಪ್ರತಿಕ್ರಿಯೆದಾರರು ಕೂಲಿ ಪಾವತಿಗಳನ್ನು ವೇಗಗೊಳಿಸಲು ತೆಗೆದುಕೊಂಡ ಕ್ರಮಗಳ ಪ್ರಭಾವದ ಕುರಿತು ಅಧ್ಯಯನದ ಶೋಧನೆಗಳನ್ನು ದುರ್ಬಲಗೊಳಿಸುವುದರಿಂದ ಇವರನ್ನು ವಿಶ್ಲೇಷಣೆಯಿಂದ ಹೊರಗಿಡಲಾಗಿರುತ್ತದೆ. ಬದಲಾಗಿ, ಉಳಿದ 4301 ಸಕ್ರಿಯ ಉದ್ಯೋಗ ಕಾರ್ಡ್‌ನ್ನು ಹೊಂದಿರುವವರ ದತ್ತಾಂಶವನ್ನು ವಿಶ್ಲೇಷಣೆಗಾಗಿ ಪರಿಗಣಿಸಲಾಗಿರುತ್ತದೆ.

ಅವರಲ್ಲಿ, 3417 ವ್ಯಕ್ತಿಗಳು (ಶೇಕಡಾ 79.45) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಒಮ್ಮೆಯಾದರೂ ಕೆಲಸ ಮಾಡಿರುತ್ತಾರೆ. ಆದಾಗ್ಯೂ, ಕನಿಷ್ಠ ಎರಡು ಬಾರಿ (ಶೇಕಡಾ 18.39) ಕೆಲಸ ಮಾಡಿದವರ ಪ್ರಮಾಣವು ಅನುಪಾತದಲ್ಲಿ ತುಂಬಾ ಚಿಕ್ಕದ್ದಾಗಿದ್ದರೂ, ಸಮಯೋಚಿತ ಅಥವಾ ವಿಳಂಬವಾಗಿ ಕೂಲಿಯನ್ನು ಪಾವತಿಸುವುದರಲ್ಲಿ ಮತ್ತು ಈ ಕಾರ್ಯಕ್ರಮದ ಯೋಜನೆಗಳ ಅಡಿಯಲ್ಲಿ ಕೆಲಸ ಮಾಡುವ ಆವರ್ತನದ ನಡುವೆ ಸ್ಪಷ್ಟ ಮತ್ತು ಬಲವಾದ ಸಂಬಂಧವಿರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕೆಲಸಗಾರನು ಸಕ್ರಿಯ ಉದ್ಯೋಗ ಕಾರ್ಡ್‌ನ್ನು ಹೊಂದಿದ್ದಾನೋ ಇಲ್ಲವೋ ಮತ್ತು ನಂತರದ ವರ್ಷಗಳಲ್ಲಿ ಕೂಲಿಗಾಗಿ ಕೆಲಸ ಮಾಡುತ್ತಾನೋ ಅಥವಾ ಕೂಲಿಯನ್ನು ಸಮಯಕ್ಕೆ ಪಾವತಿಸಲಾಗಿದೆಯೆ ಅಥವಾ ವಿಳಂಬವಾಗಿದೆಯೆ ಎಂದು ಬಲವಾಗಿ ಊಹಿಸಲಾಗಿರುತ್ತದೆ. ಕೂಲಿಯನ್ನು ಸಕಾಲಿಕವಾಗಿ ಪಾವತಿಸುವುದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗಳಲ್ಲಿ ಕೆಲಸ ಮಾಡಲು ಪ್ರೋತ್ಸಾಹಕವಾಗಿ ಕಾರ್ಯನಿರ್ವಹಿಸುತ್ತದೆ. ಈ ನಿಟ್ಟಿನಲ್ಲಿ ಸಾಂಖ್ಯಿಕ 'ಟಿ' ಮೌಲ್ಯವು 7.944 ಆಗಿದ್ದು, ಇದನ್ನು ಗಮನಾರ್ಹವೆಂದು ಪರಿಗಣಿಸಲಾಗಿರುತ್ತದೆ.

ಪ್ರತಿಕ್ರಿಯೆದಾರರ ಸಾಮಾಜಿಕ ವರ್ಗ–ಇವರನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗ ಅಥವಾ ಸಾಮಾನ್ಯ ಎಂದು ವರ್ಗೀಕರಿಸಲಾಗಿದೆಯೆ? ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಅವರು ಕೆಲಸ ಮಾಡುವ ಆವರ್ತನವೂ 0.0017 ರ ಮಹತ್ವದ ಮಟ್ಟದಲ್ಲಿ 3.172 ರ 'ಟಿ' ಮೌಲ್ಯದೊಂದಿಗೆ, ಸಾಕಷ್ಟು ಬಲವಾಗಿ ಸಂಬಂಧಿಸಿರುತ್ತದೆ, ಆದಾಗ್ಯೂ, ಉದ್ಯೋಗ ಕಾರ್ಡ್ ಹೊಂದಿರುವವರ ಭೂಮಾಲೀಕತ್ವದ ಸ್ಥಿತಿಯು ಅವರ ಜಾತಿ ಮೂಲಕ್ಕಿಂತ ಹೆಚ್ಚಿನ ಮೌಲ್ಯವನ್ನು ಊಹಿಸಬಹುದಾದ ಮೌಲ್ಯವನ್ನು ಹೊಂದಿರುತ್ತದೆ. ಅವರು ಹೆಚ್ಚು ಅಥವಾ ಕಡಿಮೆ ಆಗಾಗ್ಗೆ ಕೆಲಸ ಮಾಡುತ್ತಾರೆಯೇ ಎಂದು ನಿರ್ಧರಿಸುವಲ್ಲಿ, ಈ ವಿಷಯದಲ್ಲಿ 'ಟಿ' ಮೌಲ್ಯವು 4.942 ಆಗಿದೆ

ಅಧ್ಯಯನದ ಒಂದು ಪ್ರಮುಖ ಶೋಧನೆಯೆಂದರೆ, ಬೇರೆಡೆ ಬಾಡಿಗೆ ಕೆಲಸಗಾರರಿಂದ ಯಂತ್ರೋಪಕರಣಗಳ ಬಳಕೆಯಿಂದ (ಜೆಸಿಬಿ–ಭೂಮಿಯ ಮೇಲೆ ಚಲಿಸುವ ಭಾರೀ ವಾಹನ, ಟಿಪ್ಪರ್‌ಗಳು, ಇತ್ಯಾದಿ) ಅಥವಾ ನೋಂದಾಯಿತ

ಕಾರ್ಮಿಕರಿಂದ ಕೆಲಸಗಳನ್ನು ವ್ಯಾಪಕವಾಗಿ ನಡೆಸಲಾಗುವ ಪದ್ಧತಿಯಿರುವುದನ್ನು ತೋರಿಸಿರುತ್ತದೆ. ದೊಡ್ಡ ಪ್ರಮಾಣದ ನಿಷ್ಕ್ರಿಯ ಉದ್ಯೋಗ ಕಾರ್ಡ್ ಹೊಂದಿರುವವರ ಉಪಸ್ಥಿತಿಯು, ಅವರು 'ಎಂದಿಗೂ ಕೆಲಸ ಮಾಡಿಲ್ಲ' ಎಂದು ವರದಿ ಮಾಡಿದ್ದು, ಮಧ್ಯವರ್ತಿಗಳು ಮತ್ತು ಅಥವಾ ಗುತ್ತಿಗೆದಾರರ (ಮೇಸ್ತ್ರಿಗಳು) ಕಾರ್ಮಿಕರ ಪರವಾಗಿ ಉದ್ಯೋಗ ಕೋರಿ ನೋಂದಾಯಿಸಲು ಮತ್ತು ಅಂತಿಮವಾಗಿ, ಕೂಲಿಯನ್ನು ಹಿಂಪಡೆಯಲು ಬ್ಯಾಂಕಿನ ಡೆಬಿಟ್ ಕಾರ್ಡ್‌ಗಳನ್ನು ಸಾಲವಾಗಿ ನೀಡಿರುತ್ತಾರೆ. ಇದು ಠೇವಣಿ–ಉದ್ಯೋಗ ಖಾತರಿ ಯೋಜನೆಗಳ ಮೇಲೆ ಕಾರ್ಮಿಕರು ಎಷ್ಟು ಅವಲಂಬಿತರಾಗಿದ್ದಾರೆ ಎಂಬ ಪ್ರಶ್ನೆಯನ್ನು ಎಲ್ಲರೂ ತೆರೆದಿಡುತ್ತಾರೆ.

ಹೆಚ್ಚಿನ ಪ್ರತಿಕ್ರಿಯೆದಾರರು ಸಂದರ್ಶನದ ಸಮಯದಲ್ಲಿ ತಮ್ಮ ಉದ್ಯೋಗ ಕಾರ್ಡ್‌ಗಳನ್ನು ಹೊಂದಿಲ್ಲ ಎಂದು ವರದಿ ಮಾಡಿರುತ್ತಾರೆ. ಅದು ಆಧಾರ್ ಸಂಖ್ಯೆಗಳೊಂದಿಗೆ ಸಂಪರ್ಕ ಹೊಂದಲು ಅಥವಾ ಕಾರ್ಮಿಕರ ಹೆಸರುಗಳನ್ನು ಸೇರಿಸಲು ಅಥವಾ ಅಳಿಸಲು ನವೀಕರಿಸಲು ಕಾರ್ಡ್‌ಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಿದೆ ಎಂದು ಹೇಳಿಕೊಂಡಿರುತ್ತವೆ. ಆದ್ದರಿಂದ ಮಾಹಿತಿಯನ್ನು ಪಡೆಯಲು ಸಾಧ್ಯವಾಗಲಿಲ್ಲ ಅವರು ಕೆಲಸ ಮಾಡಿದ ನಿರ್ದಿಷ್ಟ ಯೋಜನೆಗಳಿಗೆ ಸಂಬಂಧಿಸಿರುತ್ತದೆ. ಈ ವಿವರಗಳು ಅಧಿಕೃತವಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ನಮಗೆ ಸಾಧ್ಯವಾಗಲಿಲ್ಲ. ಅಧ್ಯಯನವು ಬಹುತೇಕ ಎಲ್ಲ ಪ್ರಕರಣಗಳಲ್ಲಿ ಪ್ರತಿಕ್ರಿಯಿಸಿದವರ ಅಭಿಪ್ರಾಯಗಳನ್ನು ಅವಲಂಬಿಸಬೇಕಾಗಿರುತ್ತದೆ.

4301 ವ್ಯಕ್ತಿಗಳ ಮಾದರಿಯಲ್ಲಿ, ಶೇಕಡಾ 75 ರಷ್ಟು ಜನರು ಇತ್ತೀಚಿನ ವರ್ಷಗಳಲ್ಲಿ ಕೂಲಿಯ ಪಾವತಿಯಲ್ಲಿ ಯಾವುದೇ ವಿಳಂಬವಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ ಮತ್ತು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದಾಗಿನಿಂದ ವಿಳಂಬವು ಕ್ರಮೇಣ ಕಡಿಮೆಯಾಗುತ್ತಿದೆ. ವಿಳಂಬವನ್ನು ವರದಿ ಮಾಡಿದ ಜಿಲ್ಲೆಗಳಲ್ಲಿ, ಯಾದಗಿರಿ (39.6%), ಧಾರವಾಡ (37.0%), ದಕ್ಷಿಣ ಕನ್ನಡ (34.5%) ಮತ್ತು ಉತ್ತರ ಕನ್ನಡ (33.0%) ದೊಡ್ಡ ಭಾಗವಾಗಿರುತ್ತವೆ. ತಾಂತ್ರಿಕ ಅಂಶಗಳಿಗಿಂತ ಹೆಚ್ಚಾಗಿ, ಅಗತ್ಯವಿದ್ದಾಗ ಕಚೇರಿಯಲ್ಲಿ ಸಹಿ ಹಾಕದವರು, ಖಾತೆ ವಿವರಗಳು ಮತ್ತು ಕೂಲಿ ಬಿಲುಗಳಲ್ಲಿ ಏನು ಹೇಳಲಾಗಿದೆ ಎಂಬುದರ ನಡುವೆ ಹೊಂದಾಣಿಕೆ ಇಲ್ಲದಿರುವುದು ಮತ್ತು ತಂಡದ ನಾಯಕರು (ಮೇಸ್ತ್ರಿಗಳು) ಕೂಲಿ ಬಿಲ್ಲುಗಳನ್ನು ತಯಾರಿಸುವಲ್ಲಿನ ವಿಳಂಬದಿಂದಾಗಿ ಈ ವಿಳಂಬವಾಗಿರುತ್ತದೆ. ಇತರ ಜಿಲ್ಲೆಗಳಲ್ಲೂ ಈ ಸಮಸ್ಯೆಗಳು ವರದಿಯಾಗಿದ್ದರೂ, ಕೆಲವು ಜಿಲ್ಲೆಗಳು ಇತರರಿಗಿಂತ ಹೆಚ್ಚಾಗಿ ಈ ಸಮಸ್ಯೆಗಳನ್ನು ಅನುಭವಿಸಿರುತ್ತವೆ.

62 ಸಾಮಗ್ರಿ ಸರಬರಾಜುದಾರಲ್ಲೂ ಈ ಪರಿಸ್ಥಿತಿಯು ಗಮನಾರ್ಹವಾಗಿ ಭಿನ್ನವಾಗಿರುವುದಿಲ್ಲ. ಅವರಲ್ಲಿ ಒಬ್ಬರು ತಮ್ಮ ಬಾಕಿ ಹಣವನ್ನು ಸಕಾಲಿಕವಾಗಿ ಪಾವತಿಸಿಲ್ಲ ಎಂದು ವರದಿ ಮಾಡಿರುತ್ತಾರೆ. ಅಗತ್ಯವಿರುವ ಸರಾಸರಿ ಸಮಯವು 90 ದಿನಗಳಿಂದ 150 ದಿನಗಳವರೆಗೆ ಇರುತ್ತದೆ. ಸಾಮಗ್ರಿ ಪೂರೈಕೆದಾರರಿಗಿಂತ ಕಾರ್ಮಿಕರಿಗೆ ಕೂಲಿಯನ್ನು ನೀಡುವ ಪ್ರಕ್ರಿಯೆಗೆ ಹೆಚ್ಚಿನ ಆಡಳಿತಾತ್ಮಕ ಒತ್ತು ಇದೆ ಎಂಬುದು ಅವರ ಕುಂದುಕೊರತೆಯಾಗಿರುತ್ತದೆ.

ಕ್ಷೇತ್ರ ಮಟ್ಟದಲ್ಲಿ, ಕೂಲಿ ಕಾರ್ಮಿಕರ ಪ್ರತಿಕ್ರಿಯೆಗಳೆಂದರೆ, ಅವರು ನೇರವಾಗಿ ಬ್ಯಾಂಕುಗಳಿಗೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪಾವತಿ ವಿಧಾನಕ್ಕೆ ಆದ್ಯತೆ ನೀಡಿರುತ್ತಾರೆ, ಆದರೆ ಸಾಮಗ್ರಿ ಪೂರೈಕೆದಾರರು ಹೆಚ್ಚು ಆದ್ಯತೆ ನೀಡಿರುವುದಿಲ್ಲ. ಈ ಪ್ರಕ್ರಿಯೆಗಳ ಪಾರದರ್ಶಕತೆಯೊಂದಿಗೆ ಅವರು ಹಿತಕರವಾಗಿರುವಂತೆ ತೋರುತ್ತಿಲ್ಲ. ಏಕೆಂದರೆ, ಸಾಮಗ್ರಿ ಸರಬರಾಜುದಾರರು ಸಹ ಮೇಸ್ತ್ರಿಗಳು ಆಗಿರುತ್ತಾರೆ ಮತ್ತು ನಿಷ್ಕ್ರಿಯ ಕಾರ್ಮಿಕರೊಂದಿಗೆ ಉದ್ಯೋಗದ ಬೇಡಿಕೆಯನ್ನು

ನೋಂದಾಯಿಸುವಲ್ಲಿ, ಕೂಲಿಯ ಹಕ್ಕುಗಳನ್ನು ಸಲ್ಲಿಸುವಲ್ಲಿ ಮತ್ತು ಅಂತಿಮವಾಗಿ ಪಾವತಿಸಿದ ಹಣವನ್ನು ಹಿಂಪಡೆಯಲು ಕಾರ್ಮಿಕರ ಹಿಂದೆ ಸಾಗುವಲ್ಲಿ ಅವರು ಕಷ್ಟಪಡುತ್ತಿದ್ದಾರೆ.

ಆದಾಗ್ಯೂ, ಕಛೇರಿಯಲ್ಲಿನ ದತ್ತಾಂಶ ವಿಮರ್ಶೆಯು ವಿಭಿನ್ನ ಚಿತ್ರವನ್ನು ತೋರಿಸಿರುತ್ತದೆ. ಕೂಲಿ ಪಾವತಿಯಲ್ಲಿನ ವಿಳಂಬವನ್ನು ಕಡಿಮೆಗೊಳಿಸಿದ ಪುರಾವೆಗಳು ಮಾತ್ರವಲ್ಲ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವರ್ಷಗಳಲ್ಲಿ ನೀಡಿದಾಗ ಕೆಲಸವನ್ನು ಸ್ವೀಕರಿಸುವ ಪ್ರಮಾಣವು ಹೆಚ್ಚಾಗುತ್ತದೆ ಎಂಬುದಕ್ಕೆ ಬಲವಾದ ಪುರಾವೆಗಳಿರುತ್ತವೆ. ಸಮಯೋಚಿತ ಕೂಲಿ ಪಾವತಿ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಕೆಲಸ ಮಾಡುವ ಘಟನೆಗಳ ನಡುವಿನ ಬಲವಾದ ಸಂಬಂಧವನ್ನು ಗಮನಿಸಿದರೆ, ವರ್ಧನೆಯ ದರವು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಸಮಯೋಚಿತ ಕೂಲಿ ಪಾವತಿಯ ಸಕಾರಾತ್ಮಕ ಪರಿಣಾಮವನ್ನು ತೋರಿಸಿರುತ್ತದೆ. ಮಾದರಿಯಲ್ಲಿ ಮತ್ತು ಒಟ್ಟಾರೆಯಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಇದು ನಿಜವಾಗಿರುತ್ತದೆ. ಕ್ಯಾಲೆಂಡರ್ ವರ್ಷದಲ್ಲಿ ಪೂರ್ಣ 100 ದಿನಗಳ ಕಾಲ ಕೆಲಸ ಮಾಡಿದವರಿಗೆ ಈ ಪ್ರವೃತ್ತಿಯು ಅನ್ವಯಿಸುತ್ತದೆ.

ಸುಧಾರಿತ ಸಮಯೋಚಿತ ಕೂಲಿ ಪಾವತಿಯ ಎರಡನೆಯ ಪ್ರಮುಖ ಪರಿಣಾಮವೆಂದರೆ ಕೂಲಿಯನ್ನು ನೀಡಲಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಲು ಕಾರ್ಮಿಕರು ಎಟಿಎಂ ಕಿಯೋಸ್ಕ್ ಅಥವಾ ಬ್ಯಾಂಕ್‌ಗೆ ಭೇಟಿ ನೀಡಬೇಕಾದ ಸಂಖ್ಯೆಯಲ್ಲಿ ಕಡಿತವಾಗಿರುವುದು. ಪ್ರತಿಕ್ರಿಯೆದಾರರು ನೀಡಿದ ಹೇಳಿಕೆಗಳ ಪ್ರಕಾರ, ಆವರ್ತನವು ಬ್ಯಾಂಕ್‌ಗೆ ನೀಡಿರುವ ಆರು ಬಾರಿ ಭೇಟಿಗಳಿಂದ 3 ರಿಂದ 4 ಪಟ್ಟು ಕಡಿಮೆಯಾಗಿರುತ್ತದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೂಲಿಯನ್ನು ನೀಡುತ್ತಾರೋ ಇಲ್ಲವೋ ಎಂಬ ಆತಂಕವು ನಿಧಿ ವರ್ಗಾವಣೆ ಆದೇಶಗಳಿಗೆ ಸಹಿ ಮಾಡಿ ಅಪ್‌ಲೋಡ್ ಮಾಡಿದ ಮರುದಿನದಿಂದಲೇ ಬ್ಯಾಂಕ್‌ಗೆ ಹೋಗಲು ಪ್ರಾರಂಭಿಸುತ್ತದೆ ಎಂದು ಗಮನ ಸೆಳೆದಿರುತ್ತಾರೆ. ಆದರೂ, ಸಮಯಕ್ಕೆ ಒಂದು ಅಥವಾ ಇನ್ನೊಂದು ಸಹಿ ಲಭ್ಯವಾಗದಿರುವುದು, ಸಂಬಂಧಪಟ್ಟ ಅಧಿಕಾರಿ (ಬ್ಲಾಕ್ ಮಟ್ಟದ ಎಂಜಿನಿಯರ್‌ಗಳು) ಪ್ರಮಾಣೀಕರಿಸಿದ ಅಳತೆಗಳ ಪುಸ್ತಕವನ್ನು ಹೊಂದದಿರುವುದು, ಕಂಪ್ಯೂಟರ್‌ಗಳ ಸ್ಥಗಿತದಂತಹ ಹಾರ್ಡ್‌ವೇರ್ ಸಮಸ್ಯೆಗಳು, ಅಗತ್ಯವಿದ್ದಾಗ ಇಂಟರ್‌ನೆಟ್‌ನ ಲಭ್ಯತೆಯಿಲ್ಲದಿರುವುದು ಈ ಕಾರಣಗಳಿಂದ ನಿಗದಿತ ಸಮಯ ಮಿತಿಯು 3 ದಿನಗಳನ್ನು (ಟಿ) ಮೀರಿ ವಿಳಂಬಗಳು ಮುಂದುವರಿಯುತ್ತವೆ. ಲಭ್ಯ ನಿಧಿಯ ಕೊರತೆ ಮತ್ತು ಸಮಯಕ್ಕೆ ಸರಿಯಾಗಿ ಪಾವತಿಗಳ ಹೊಂದಾಣಿಕೆ ಮಾಡದಿರುವುದು ಸಹಾ ಈ ವಿಳಂಬಕ್ಕೂ ಕಾರಣವಾಗಿದೆ. ದುರದೃಷ್ಟವಶಾತ್ ಮೌಲ್ಯಮಾಪನಕ್ಕಾಗಿ, ನಿಧಿ ವರ್ಗಾವಣೆ ಆದೇಶಗಳನ್ನು ಅಪ್‌ಲೋಡ್ ಮಾಡಿದ ನಂತರ ಪಾವತಿಸಬೇಕಾದ ಹಣವನ್ನು ಪ್ರಕ್ರಿಯೆಗೊಳಿಸಲು ಮತ್ತು ಕ್ರೆಡಿಟ್ ಮಾಡಲು ತೆಗೆದುಕೊಂಡ ಸಮಯವನ್ನು ನಿರ್ಣಯಿಸಲು ಬ್ಯಾಂಕ್ ಮಟ್ಟದಲ್ಲಿ ದತ್ತಾಂಶವನ್ನು ಪಡೆಯಲು ಸಾಧ್ಯವಿಲ್ಲ. ಏಕೆಂದರೆ, ನಿಧಿ ವರ್ಗಾವಣೆ ಆದೇಶಗಳ ಮತ್ತು ಖಾತೆಗಳ ಹಣದ ನಿಜವಾದ ಸಾಲದ ನಡುವಿನ ಅಂತರದಿಂದಾಗಿ ಈ ಸಮಸ್ಯೆಯು ಮುಂದುವರಿಯುತ್ತದೆ. ಕೇವಲ ಕಾರ್ಮಿಕರಲ್ಲ, ಗ್ರಾಮ ಪಂಚಾಯತ್ ಮಟ್ಟದಲ್ಲಿರುವ ಅಧಿಕಾರಿಗಳು ಸಹ ಕಾರ್ಮಿಕರು ಮತ್ತು/ಅಥವಾ ಮೇಸ್ತ್ರಿಗಳಿಗೆ ನಿಧಿ ವರ್ಗಾವಣೆ ಆದೇಶಗಳಿಗೆ ಡಿಜಿಟಲ್ ಸಹಿ ಮಾಡುವುದರಿಂದ ಹಣವು ಶೀಘ್ರದಲ್ಲೇ ತಲುಪುವ ಸಂದೇಶವನ್ನು ರವಾನಿಸುತ್ತಾರೆ,

ಆದಾಯವನ್ನು ಪ್ರತಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಪ್ರತ್ಯೇಕವಾಗಿ ಜಮಾ ಮಾಡಲಾಗುತ್ತಿದ್ದು, ಪ್ರತಿ ಕೆಲಸಗಾರರಿಗೆ ವೈಯಕ್ತಿಕ ಬ್ಯಾಂಕ್ ಖಾತೆಗಳ ನಿರಂತರ ಕೊರತೆಯಿರುತ್ತದೆ. ಇವರೆಲ್ಲರೂ ತಮ್ಮ ಉದ್ಯೋಗ ಕಾರ್ಡ್‌ಗಳೊಂದಿಗೆ ಬ್ಯಾಂಕ್ ಖಾತೆಯನ್ನು ಹೊಂದಿರುವುದಿಲ್ಲ; ಕಡಿಮೆ ವಿದ್ಯಾವಂತ ಅಥವಾ ಕಡಿಮೆ ತಿಳುವಳಿಕೆಯುಳ್ಳ ಕೆಲಸಗಾರರು ಬ್ಯಾಂಕಿನಲ್ಲಿ

ಅಥವಾ ಎಟಿಎಂ ಕಿಯೋಸ್ಕಲ್ಲಿ ವಹಿವಾಟು ನಡೆಸಲು ಸಹಾಯ ಮಾಡಲು ನಾವು ಅವರನ್ನು 'ಬ್ಯಾಂಕಿಂಗ್ ಮಧ್ಯವರ್ತಿಗಳು' ಎಂದು ಕರೆಯುವ ವಿಶ್ವಾಸಾರ್ಹರನ್ನು ಅವಲಂಬಿಸಬೇಕಾಗುತ್ತದೆ. ಇವೆಲ್ಲವೂ ಬ್ಯಾಂಕಿನೊಂದಿಗಿನ ವಹಿವಾಟಿನ ವೆಚ್ಚವನ್ನು ಹೆಚ್ಚಿಸುತ್ತದೆ. ಇದರಿಂದ ಕಾರ್ಮಿಕರು ಕಿಯೋಸ್ಕ್ ವಾಹನವು 'ಯಂತ್ರವು ಕ್ರಮಬದ್ಧವಾಗಿಲ್ಲ,' 'ಹಣವಿಲ್ಲ,' 'ವಿದ್ಯುತ್ ಅಥವಾ ವಿದ್ಯುತ್ ಸರಬರಾಜು ಇಲ್ಲ' ಅಥವಾ ಆ ಕೂಲಿಯನ್ನು ಜಮಾ ಮಾಡಲಾಗಿಲ್ಲ ಎಂದು ಕಂಡುಹಿಡಿಯಲು ಮಾತ್ರ ಆಗಾಗ್ಗೆ ಕಾಲ್ನಡಿಗೆಯಲ್ಲಿ ಹೋಗುವ ತೊಂದರೆ ತೆಗೆದುಕೊಂಡು ಕಷ್ಟಪಡುತ್ತಿದ್ದಾರೆ. ಬ್ಯಾಂಕ್ ಖಾತೆಗಳು ಮತ್ತು ಆಧಾರ್ ಸಂಖ್ಯೆಗಳನ್ನು ಉದ್ಯೋಗ ಕಾರ್ಡ್‌ಗಳಿಗೆ ಲಿಂಕ್ ಮಾಡಲಾಗಿರುವುದನ್ನು, ಯಾವುದೇ ಡೆಬಿಟ್ ಅಥವಾ ಕ್ರೆಡಿಟ್ ಅನ್ನು ಖಾತೆಗೆ ತಿಳಿಸಲು ಎಸ್‌ಎಂಎಸ್ ಎಚ್ಚರಿಕೆಗಳ ಕಡ್ಡಾಯ ಆಯ್ಕೆ ಇರಬೇಕು. ಕೂಲಿ ಪಾವತಿಯನ್ನು ಅನುಮೋದಿಸಿದಾಗ ಮತ್ತು ಸಂಬಂಧಪಟ್ಟ ಖಾತೆಗೆ ಹಣವನ್ನು ಜಮಾ ಮಾಡಿದಾಗ, ನೋಂದಾಯಿತ ಮೊಬೈಲ್ ಫೋನ್ ಮೂಲಕ ಸ್ಥಳೀಯ ಭಾಷೆಯ ಎಸ್‌ಎಂಎಸ್‌ಲ್ಲಿ ವಿಶೇಷ ಹಣವನ್ನು ಜಮಾ ಮಾಡಲಾಗಿದೆ ಎಂದು ತಿಳಿಸುವುದರಿಂದ ಇನ್ನೂ ಉತ್ತಮವಾಗುತ್ತದೆ. ಈ ಸೌಲಭ್ಯವು ಬ್ಯಾಂಕ್ ಅಥವಾ ಎಟಿಎಂಗೆ ನೀಡುವ ಕನಿಷ್ಠ ಒಂದು ಅಥವಾ ಎರಡು ಭೇಟಿಗಳನ್ನು ಉಳಿಸುತ್ತದೆ.

ಒಟ್ಟಾರೆಯಾಗಿ ಮಾದರಿಯನ್ನು ತೆಗೆದುಕೊಂಡರೆ, ಶೇಕಡಾ 41.25ರಷ್ಟು ಜನರು ಒಂದು ಕಿಲೋಮೀಟರ್‌ಗಿಂತ ಕಡಿಮೆ ದೂರದಲ್ಲಿ ವಾಣಿಜ್ಯ ಬ್ಯಾಂಕ್‌ಗೆ ಇರುವ ಲಭ್ಯತೆಯನ್ನು ವರದಿ ಮಾಡಿದ್ದಾರೆ ಎಂದು ನಾವು ಕಂಡುಕೊಂಡಿರುತ್ತೇವೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮಹತ್ವಾಕಾಂಕ್ಷೆಯ ಪರಿಚಯದ ಹಿನ್ನೆಲೆಯಿಂದ ನಿಜಕ್ಕೂ ಗ್ರಾಮೀಣ ಬ್ಯಾಂಕಿಂಗ್ ಸೇವೆಯಲ್ಲಿ ಉತ್ತಮ ಲಕ್ಷಣವಾಗಿರುತ್ತದೆ. ಸುಮಾರು 40 ಪ್ರತಿಶತದಷ್ಟು ಕಾರ್ಮಿಕರು ತಮ್ಮ ಖಾತೆಗಳನ್ನು ಪರಿಶೀಲಿಸಲು ಮತ್ತು/ಅಥವಾ ಅವರ ಖಾತೆಗಳನ್ನು ನಿರ್ವಹಿಸಲು ಬ್ಯಾಂಕಿಗೆ ಕಾಲ್ನಡಿಗೆಯಲ್ಲಿ ಹೋಗುವ ಆಯ್ಕೆಯನ್ನು ಹೊಂದಿರುತ್ತಾರೆ. ನಾವು ಈ ಗುಂಪಿನೊಂದಿಗೆ 1.00 ರಿಂದ 2.50 ಕಿಲೋ ಮೀಟರ್ ದೂರದಲ್ಲಿರುವ ಮತ್ತೊಂದು ಬ್ಯಾಂಕ್‌ನ್ನು ಸೇರಿಸಿದರೆ, ನಮ್ಮಲ್ಲಿ ಶೇಕಡಾ 55 ಕ್ಕಿಂತ ಹೆಚ್ಚು ಫಲಾನುಭವಿಗಳು 2.50 ಕಿ.ಮೀ ಗಿಂತ ಕಡಿಮೆ ಬ್ಯಾಂಕ್ ಸೌಲಭ್ಯವನ್ನು ಹೊಂದಿದ್ದಾರೆ. 2.51 ರಿಂದ 5.00 ಕಿ.ಮೀ ದೂರದಲ್ಲಿ ಬ್ಯಾಂಕ್ ಹೊಂದಿರುವವರು ಶೇಕಡಾ 25.53ರಷ್ಟಿದ್ದಾರೆ ಮತ್ತು ಒಟ್ಟಾರೆಯಾಗಿ 75 ಪ್ರತಿಶತದಷ್ಟು ಜನರು 5.00 ಕಿ.ಮೀಗಿಂತ ಕಡಿಮೆ ದೂರದಲ್ಲಿ ಬ್ಯಾಂಕನ್ನು ಹೊಂದಿದ್ದಾರೆ. ಹೇಗಾದರೂ, ನಮ್ಮ ಮಾದರಿ ಜಿಲ್ಲೆಗಳಾದ ಯಾದಗಿರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮೇಲೆ ಕೇಂದ್ರೀಕರಿಸಿದ ನಾವು ಹೆಚ್ಚಿನ ಪಾಲನ್ನು 10 ಕಿ.ಮೀ.ಗಿಂತ ಹೆಚ್ಚಿನ ದೂರದಲ್ಲಿರುವ ಬ್ಯಾಂಕಿನ ಫಲಾನುಭವಿಗಳನ್ನು ಕಂಡಿರುತ್ತೇವೆ. ಉತ್ತರ ಕನ್ನಡವು ಈ ದೂರದ ಅಂತರವನ್ನು ಶೇಕಡಾ 25.07ರಷ್ಟು ಹಂಚಿಕೊಂಡರೆ, ಯಾದಗಿರಿಯಲ್ಲಿ ಈ ಪಾಲು ಇನ್ನೂ ದೊಡ್ಡದಾಗಿರುತ್ತದೆ (37.29 ಪ್ರತಿಕ್ರಿಯೆದಾರರು). ವಾಸ್ತವವಾಗಿ, ಕೂಲಿಯನ್ನು ಜಮಾ ಮಾಡುವ ಸಾಧ್ಯತೆಯ ಮೇಲಿನ ಭಯದಿಂದಾಗಿ ನಮ್ಮ ಪ್ರತಿಕ್ರಿಯೆದಾರರು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವಿರುದ್ಧ ಹೆಚ್ಚಿನ ಟೀಕೆಗಳನ್ನು ಮಾಡಿದ್ದು, ಇದನ್ನು ಸಾಲದ ಮೊತ್ತದ ವಿರುದ್ಧ ಅಥವಾ ಬಡ್ಡಿಗಳ ಕಡೆಗೆ ಸರಿ ಹೊಂದಿಸಬಹುದಾಗಿರುತ್ತದೆ. ಕೆಲವು ಬ್ಯಾಂಕಿನವರು ಗಮನಿಸಿದಂತೆ, ವಿಳಂಬಿತ ಪಾವತಿಗಳ ವಿರುದ್ಧದ ದೂರುಗಳಿಗೆ ಒಂದು ಕಾರಣವೆಂದರೆ, ಅನೇಕ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಕಾರ್ಮಿಕರು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವಹಿವಾಟಿಗೆ ಯಾವ ಖಾತೆಯನ್ನು ಲಿಂಕ್ ಮಾಡಿರಬಹುದು ಎಂಬುದು ಸ್ಪಷ್ಟವಾಗಿಲ್ಲದಿರಬಹುದು.

ಮೌಲ್ಯಮಾಪನದ ದೃಷ್ಟಿಯಿಂದ, ತಿಳಿದುಕೊಳ್ಳಬೇಕಾದ ಅಂಶವೆಂದರೆ, ಬ್ಯಾಂಕಿನಲ್ಲಿ ಪರಿಶೀಲಿಸಲು ಮಾಡಿದ ಭೇಟಿಗಳ ಸಂಖ್ಯೆಯನ್ನು ವರದಿ ಮಾಡುತ್ತಿದ್ದ ಹೆಚ್ಚಿನ ವ್ಯಕ್ತಿಗಳು ಸಹ ಈ ಘಟನೆಗಳು ಈಗ ಗಣನೀಯವಾಗಿ ಕಡಿಮೆಯಾಗಿದೆ ಎಂದು ಒತ್ತಿಹೇಳಿದ್ದಾರೆ. ಏಕೆಂದರೆ ಅವರು ಮೊದಲಿಗಿಂತ ಬೇಗನೆ ಕೂಲಿಯನ್ನು ಪಡೆಯುತ್ತಿದ್ದಾರೆ.

ಆದಾಗ್ಯೂ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಸಮಯೋಚಿತ ಕೂಲಿ ಪಾವತಿಯನ್ನು ಸುಧಾರಿಸಿರುತ್ತದೆ ಮತ್ತು ಹಣದ ನಿಲುಗಡೆಯನ್ನು ಕಡಿಮೆಗೊಳಿಸಿರುತ್ತದೆ ಎಂದು ಪುರಾವೆಗಳು ಸೂಚಿಸುತ್ತವೆಯಾದರೂ, ಕ್ಷೇತ್ರ ದತ್ತಾಂಶವು ಎ) ಡಿಜಿಟಲ್ ದತ್ತಾಂಶವನ್ನು ಅಪ್‌ಲೋಡ್ ಮಾಡಲು ಅಥವಾ ನಿಧಿ ವರ್ಗಾವಣೆ ಆದೇಶಗಳಿಗೆ ಸಹಿ ಹಾಕುವ ಮೊದಲು ಹೆಚ್ಚಿನ ವಿಳಂಬವಾಗಿರುತ್ತದೆ ಎಂದು ಸೂಚಿಸಿರುತ್ತದೆ; ಬಿ) ನಿಧಿ ವರ್ಗಾವಣೆ ಆದೇಶಗಳು ಡಿಜಿಟಲ್ ಸಹಿ ಹಾಕಿದ ನಂತರ ಗ್ರಾಮ ಪಂಚಾಯತ್ ಅಥವಾ ತಾಲ್ಲೂಕು ಪಂಚಾಯತ್‌ನ ಕಾರ್ಯಕರ್ತರು ವಿಳಂಬಿತ ಪಾವತಿಗಳನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ; ಮತ್ತು ಸಿ) ನೋಡಲ್ ಬ್ಯಾಂಕ್ ಮಟ್ಟದಲ್ಲಿ ವಿಳಂಬದ ಬಗ್ಗೆ ಮಾಹಿತಿಯ ಹರಿವಿನ ಸುಧಾರಿತ ವ್ಯವಸ್ಥೆಯ ಅವಶ್ಯಕತೆಯಿರುತ್ತದೆ. ಅಂತಿಮವಾಗಿ, ವಿಳಂಬವಾದ ಕೂಲಿ ಪಾವತಿಗೆ ಪರಿಹಾರ–ವಿಳಂಬವು ಗ್ರಾಮ ಪಂಚಾಯತ್/ತಾಲ್ಲೂಕು ಪಂಚಾಯತ್ ಅಥವಾ ಜಿಲ್ಲಾ ಪಂಚಾಯತ್ ಅಥವಾ ನೋಡಲ್ ಬ್ಯಾಂಕ್ ಮಟ್ಟದಲ್ಲಿರಲಿ– ವಿಳಂಬ ಪರಿಹಾರಕ್ಕಾಗಿ ಸ್ವಯಂಚಾಲಿತ ಎಚ್ಚರಿಕೆಗಳಿಗಾಗಿ ಪ್ರಯತ್ನಗಳನ್ನು ಮಾಡಬೇಕಾಗಿರುತ್ತದೆ. ಇದರಿಂದಾಗಿ, ಕಾರ್ಮಿಕರು ಅಥವಾ ಮಾರಾಟಗಾರರಿಂದ ಪರಿಹಾರವನ್ನು ಸ್ವಯಂಪ್ರೇರಿತವಾಗಿ ಪಡೆಯುವುದು ಅಭ್ಯಾಸವಾಗಿ ಅಸ್ತಿತ್ವದಲ್ಲಿಲ್ಲ.

ಅಧ್ಯಯನದ ಶೋಧನೆಗಳಲ್ಲಿನ ಲಿಂಗ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಎರಡು ವಿಶಾಲವಾದ ಸಾಮಾನ್ಯೀಕರಣಗಳನ್ನು ಮಾಡಬಹುದಾಗಿರುತ್ತದೆ: ಮೊದಲು ಲಿಂಗ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯತ್ಯಾಸವು ಕಿರಿದಾಗಿದ್ದು, ಖಂಡಿತವಾಗಿಯೂ ಪುರುಷರು ಮತ್ತು ಮಹಿಳೆಯರ ನಡುವೆ ಶೇಕಡಾ ಎಂಟಕ್ಕಿಂತ ಹೆಚ್ಚು ಅಂಕಗಳನ್ನು ಹೊಂದಿರುವುದಿಲ್ಲ. ಎರಡನೆಯದಾಗಿ, ಕಂಡುಬರುವ ಯಾವುದೇ ವ್ಯತ್ಯಾಸವು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಆಗಿರುವುದಕ್ಕಿಂತ ನಿಧಿ ವರ್ಗಾವಣೆ ಆದೇಶಗಳು ಪೂರ್ವ ಅಥವಾ ಠೇವಣಿ ನಂತರದ ವಿದ್ಯಮಾನಕ್ಕಿಂತ ಹೆಚ್ಚಿನದಾಗಿರುತ್ತದೆ.

## ಶಿಫಾರಸ್ಸುಗಳು

ಮೌಲ್ಯಮಾಪನದ ಭಾಗವಾಗಿ ಕೆಲವು ಶಿಫಾರಸ್ಸುಗಳನ್ನು ಸಲ್ಲಿಸಲಾಗುತ್ತದೆ. ಸ್ವೀಕಾರಾರ್ಹವೆಂದು ಕಂಡುಬಂದಲ್ಲಿ, ಇವುಗಳಲ್ಲಿ ಕೆಲವನ್ನು ಕೇಂದ್ರ ಸರ್ಕಾರದೊಂದಿಗೆ ಅನುಸರಿಸಬೇಕು; ಏಕೆಂದರೆ ಈ ಕಾರ್ಯಕ್ರಮವು ವಿಶೇಷವಾಗಿ ಸಾಫ್ಟ್‌ವೇರ್‌ಗಳು ಕೇಂದ್ರೀಯವಾಗಿ ವಿನ್ಯಾಸಗೊಳಿಸಲ್ಪಟ್ಟಿರುತ್ತವೆ ಮತ್ತು ಬಳಕೆಯಾಗಿರುತ್ತವೆ. ಅವುಗಳನ್ನು ಮಾರ್ಪಡಿಸುವ ಸ್ವಾತಂತ್ರ್ಯ ರಾಜ್ಯ ಸರ್ಕಾರಗಳಿಗೆ ಇಲ್ಲದಿರಬಹುದು.

1. ನಿಧಿ ವರ್ಗಾವಣೆ ಆದೇಶಗಳನ್ನು ತಿರಸ್ಕರಿಸುವ ಆಧಾರವನ್ನು ತಿಳಿಸಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿಸಲು ವಿಳಂಬ ಪರಿಹಾರ ಮತ್ತು ನಿರುದ್ಯೋಗ ಭತ್ಯೆಯ ಹಕ್ಕುಗಳನ್ನು ತಿರಸ್ಕರಿಸುವುದು. [ಕೋಷ್ಟಕ 14]

2. ನಿಧಿ ವರ್ಗಾವಣೆ ಆದೇಶಗಳ ಡಿಜಿಟಲ್ ಸಹಿಯನ್ನು ತ್ವರಿತಗೊಳಿಸಲು ನಿಧಿ ವರ್ಗಾವಣೆ ಆದೇಶ ಪೂರ್ವ ವಹಿವಾಟುಗಳನ್ನು ಕಡಿಮೆ ಮಾಡುವುದು ಅಥವಾ ಸುವ್ಯವಸ್ಥಿತಗೊಳಿಸುವುದು. [ಕೋಷ್ಟಕ 7 ರಿಂದ 10]

3. ಬ್ಯಾಂಕ್ ತಿರಸ್ಕರಿಸಿದ ಅಥವಾ ವಿಳಂಬವಾದ ಪಾವತಿಗಳ ಸ್ವಯಂಚಾಲಿತ ಎಚ್ಚರಿಕೆಗಳನ್ನು ರಚಿಸಲು ವಿಳಂಬ ಪಾವತಿ ಮತ್ತು/ಅಥವಾ ಕಾರ್ಮಿಕರಿಗೆ ನಿರುದ್ಯೋಗ ಭತ್ಯೆಗಾಗಿ ಪಾವತಿಸಬೇಕಾದ ಪರಿಹಾರಕ್ಕಾಗಿ ಸಾಫ್ಟ್‌ವೇರ್‌ನ್ನು ಸಕ್ರಿಯಗೊಳಿಸುವುದು;. ಅಂತಹ ಎಚ್ಚರಿಕೆಗಳು ಗ್ರಾಮ ಪಂಚಾಯಿತಿಗಳು ಮತ್ತು ಬಾಧಿತ ಕಾರ್ಮಿಕರನ್ನು ತಲುಪಬೇಕು. [ಕೋಷ್ಟಕ 19 ಮತ್ತು ಚಿತ್ರ 26 ರಿಂದ 29].

4. ಕೂಲಿ, ಪರಿಹಾರ ಮತ್ತು/ಅಥವಾ ನಿರುದ್ಯೋಗ ಭತ್ಯೆಗಳ ಹಕ್ಕುಗಳಿಗಾಗಿ ಸಲ್ಲಿಸಿದ ಹಕ್ಕುಗಳ ಸ್ಥಿತಿಯನ್ನು ಸೂಚಿಸಲು ಬ್ಯಾಂಕುಗಳು ಎಸ್‌ಎಂಎಸ್ ಮೂಲಕ ಎಚ್ಚರಿಕೆಗಳನ್ನು, ವೆಚ್ಚವಿಲ್ಲದೆ ಕಳುಹಿಸುವುದು ಕಡ್ಡಾಯಗೊಳಿಸುವುದು–[ಕೋಷ್ಟಕ 19 ಮತ್ತು ಚಿತ್ರ 26 ರಿಂದ 29].

5. ಎಟಿಎಂಗಳನ್ನು ನಿರ್ವಹಣೆಯೂ ಸೇರಿದಂತೆ ಬ್ಯಾಂಕಿಂಗ್ ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರಿಗೆ ತರಬೇತಿ ನೀಡಬೇಕು. [ಚಿತ್ರ 29].

6. ಡಾಟಾ ಎಂಟ್ರಿ ಆಪರೇಟರ್‌ಗಳು ಮತ್ತು ಬಿಲ್ ಕಲೆಕ್ಟರ್‌ಗಳ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಕೌಶಲ್ಯಗಳನ್ನು ಮೇಲ್ದರ್ಜೆಗೇರಿಸುವ ತುರ್ತು ಅಗತ್ಯವಿರುತ್ತದೆ. [ಕೋಷ್ಟಕಗಳು 9 ಮತ್ತು 10]

7. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ವಿಶೇಷವಾಗಿ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳ ಕೌಶಲ್ಯಗಳನ್ನು ಪಡೆದುಕೊಳ್ಳುವಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಪ್ರೋತ್ಸಾಹಕವನ್ನು ನೀಡುವುದು. [ಕೋಷ್ಟಕಗಳು 9 ಮತ್ತು 10]

8. ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಪಾವತಿಯ ವಿಳಂಬದ ಬಗ್ಗೆ ಅಥವಾ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ, ಕುಂದುಕೊರತೆಗಳ ಔಪಚಾರಿಕ ನೋಂದಣಿಯನ್ನು ಸ್ಥಾಪಿಸುವುದು – [ಕೋಷ್ಟಕ 22 ಮತ್ತು 24]. ಕುಂದುಕೊರತೆಗಳನ್ನು ಒಮ್ಮೆ ನೋಂದಾಯಿಸಿದ ನಂತರ ಕರ್ನಾಟಕ ಸರ್ಕಾರದ ಸಕಾಲ ಕಾರ್ಯಕ್ರಮದ ಕಕ್ಷೆಗೆ ಇದನ್ನು ಒಳಪಡಿಸಬೇಕು.

9. ಗ್ರಾಮ ಪಂಚಾಯತಿ, ಕ್ಷೇತ್ರ ಹಾಗೂ ಜಿಲ್ಲಾ ಮಟ್ಟದಲ್ಲಿ ಹೆಚ್ಚುತ್ತಿರುವ ಕೆಲಸದ ಪ್ರಮಾಣ ಮತ್ತು ಕುಂದುಕೊರತೆಗಳ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು, ವಿಶೇಷವಾಗಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ತಂತ್ರಜ್ಞಾನದೊಂದಿಗೆ ವ್ಯವಹರಿಸುವ ಪ್ರಮುಖ ಕಾರ್ಯನಿರ್ವಹಿಸುವ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಗಳನ್ನು ತೆಗೆದುಕೊಳ್ಳುವುದು, [ಕೋಷ್ಟಕಗಳು 21 ಮತ್ತು 22]

# 1. ಪರಿಚಯ

## 1.1 ಹಿನ್ನೆಲೆ ಮಾಹಿತಿ:

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯನ್ನು ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯಾಗಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಆಶ್ರಯದಲ್ಲಿ ಜಾರಿಗೆ ತರಲಾಗಿರುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ ಆದೇಶದಂತೆ, ಒಂದು ಆರ್ಥಿಕ ವರ್ಷದಲ್ಲಿ ಗ್ರಾಮೀಣ ಕುಟುಂಬಗಳಿಗೆ ಕನಿಷ್ಠ 100 ದಿನಗಳ ಕೌಶಲ್ಯರಹಿತ ಕೂಲಿ ಉದ್ಯೋಗವನ್ನು ದೇಶಾದ್ಯಂತ ಖಾತರಿಪಡಿಸಲಾಗಿರುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಸೆಕ್ಷನ್ 6 (1)ರ ಪ್ರಕಾರ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಕ್ಕಾಗಿ ಕೂಲಿ ದರವನ್ನು ಮತ್ತು ಕಾರ್ಮಿಕರಿಂದ 15 ದಿನಗಳಲ್ಲಿ ಕೂಲಿಯನ್ನು ಪಡೆಯುವ ಹಕ್ಕನ್ನು ನಿರ್ದಿಷ್ಟಪಡಿಸಬಹುದಾಗಿರುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು 2 ಫೆಬ್ರವರಿ 2006ರಿಂದ ಜಾರಿಗೆ ಬಂದಿರುತ್ತದೆ. ಆರಂಭದಲ್ಲಿ, ಈ ಅಧಿನಿಯಮವು ಭಾರತದ 200 ಬಡ ಜಿಲ್ಲೆಗಳಿಗೆ (ಹಂತ–1) ಅನ್ವಯವಾಗುತ್ತಿತ್ತು. ನಂತರ, ಇದನ್ನು 2007–2008ರಲ್ಲಿ (ಹಂತ–2) 130 ಜಿಲ್ಲೆಗಳಿಗೆ ವಿಸ್ತರಿಸಲಾಗಿರುತ್ತದೆ. 2008–2009ರ ವರ್ಷದಿಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ (ಹಂತ–3)ರ ನಿಬಂಧನೆಗಳ ಪ್ರಕಾರ ಇದರ ವ್ಯಾಪ್ತಿಯನ್ನು ಭಾರತದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಗಿರುತ್ತದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಎಲ್ಲಾ ಕಾರ್ಮಿಕರಿಗೆ 'ಕೌಶಲ್ಯರಹಿತ' ಕೆಲಸಕ್ಕಾಗಿ ಕೂಲಿಯನ್ನು ನೀಡಲಾಗುತ್ತದೆ ಮತ್ತು ಈ ಕೂಲಿಯನ್ನು ಬ್ಯಾಂಕ್ ಖಾತೆಗಳ ಮೂಲಕ ನೀಡಲಾಗುತ್ತಿದೆ. ಪ್ರಸ್ತುತ, ಹಣವನ್ನು ಯಾವುದೇ ನಗದು ವಿತರಣೆಯಿಲ್ಲದೆ ನೇರವಾಗಿ ವಿದ್ಯುನ್ಮಾನ ವರ್ಗಾವಣೆ ವ್ಯವಸ್ಥೆಯ ಮೂಲಕ ಕಾರ್ಮಿಕರ ಖಾತೆಗೆ ವರ್ಗಾಯಿಸಲಾಗುತ್ತಿದೆ. ಈ ವರ್ಗಾವಣೆಯ ವ್ಯವಸ್ಥೆಯನ್ನು 2013–14ನೇ ಸಾಲಿನಲ್ಲಿ ಪರಿಚಯಿಸಲಾಗಿದ್ದು, ಇದನ್ನು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಎಂದು ಕರೆಯಲಾಗುತ್ತಿದೆ. ಕಾರ್ಮಿಕರಿಗೆ ಕೂಲಿಯನ್ನು ವಾರಕ್ಕೊಮ್ಮೆ ಮತ್ತು ಯಾವುದೇ ಸಂದರ್ಭದಲ್ಲಿ ಕೆಲಸ ಮಾಡಿದ ದಿನಾಂಕದಿಂದ 15 ದಿನಗಳು ಮೀರದಂತೆ ಪಾವತಿಸುವ ನಿರೀಕ್ಷೆಯಿರುತ್ತದೆ. ಇದಲ್ಲದೆ, ಸ್ವತ್ತುಗಳ ನಿರ್ಮಾಣಕ್ಕೆ ಬಳಸುವ ವಿವಿಧ ಸಾಮಗ್ರಿಗಳ ಮಾರಾಟಗಾರರಿಗೆ ಪಾವತಿ, ಜೊತೆಗೆ ಆಡಳಿತಾತ್ಮಕ ವೆಚ್ಚಗಳನ್ನು ಸಹ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಮೂಲಕ ಮಾಡಲಾಗುತ್ತಿದೆ.

1.41 ಕೋಟಿ ಕಾರ್ಮಿಕರೊಂದಿಗೆ ರಾಜ್ಯದಲ್ಲಿ 60.13 ಲಕ್ಷ ಉದ್ಯೋಗ ಕಾರ್ಡ್ ಹೊಂದಿರುವವರು ಇದ್ದಾರೆ. ಈ ಪೈಕಿ 33.03 ಲಕ್ಷ ಕಾರ್ಡುದಾರರು ಮತ್ತು 64.73 ಕಾರ್ಮಿಕರು ಸಕ್ರಿಯರಾಗಿದ್ದಾರೆ. ಇಷ್ಟು ದೊಡ್ಡ ಸಂಖ್ಯೆಯ ಕಾರ್ಮಿಕರಿಗೆ ಕೂಲಿಯನ್ನು ಸಮಯಕ್ಕೆ ಸರಿಯಾಗಿ ನೀಡಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ವ್ಯವಸ್ಥಿತ ಪರಿಹಾರಗಳು ಯಾವಾಗಲೂ ಒಂದು ಪ್ರಮುಖ ಅವಶ್ಯಕತೆಯಾಗಿರುತ್ತದೆ. ಯೋಜನೆಯು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಆಶ್ರಯದಲ್ಲಿ ಲೆಕ್ಕಪರಿಶೋಧನೆಯೊಂದಿಗೆ ಸಂಯೋಜಿಸಲ್ಪಟ್ಟಿದೆ ಮತ್ತು ಕೋರ್ ಬ್ಯಾಂಕಿಂಗ್ ವ್ಯವಸ್ಥೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ವಾಣಿಜ್ಯ ಬ್ಯಾಂಕುಗಳ ಕೋರ್ ಬ್ಯಾಂಕಿಂಗ್ ಮೂಲಸೌಕರ್ಯವನ್ನು (ಎನ್‌ಇಎಫ್‌ಟಿ / ಆರ್‌ಟಿಜಿಎಸ್) ನಿಯಂತ್ರಿಸುತ್ತಿದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪ್ರಸ್ತುತ ಮೇಲ್ವಿಚಾರಣಾ ವ್ಯವಸ್ಥೆಯಲ್ಲಿ ಅನುಭವಿಸುತ್ತಿರುವ ಅನೇಕ

ಸಮಸ್ಯೆಗಳನ್ನು ಸುವ್ಯವಸ್ಥಿತಗೊಳಿಸಲು ಇದು ಸ್ವತಃ ಸಹಾಯ ಮಾಡುತ್ತಿದೆ. ವಾಣಿಜ್ಯ ಬ್ಯಾಂಕುಗಳ ಕೋರ್ ಬ್ಯಾಂಕಿಂಗ್ ಮೂಲಸೌಕರ್ಯವನ್ನು ನಿಯಂತ್ರಿಸುವ ವಿದ್ಯುನ್ಮಾನ ನಿಧಿ ವರ್ಗಾವಣೆಯ ಅನುಷ್ಠಾನವನ್ನು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಒಳಗೊಂಡಿರುತ್ತದೆ. ಒಂದು ಅಥವಾ ಹೆಚ್ಚಿನ ನೋಡಲ್ ಬ್ಯಾಂಕುಗಳನ್ನು ಗುರುತಿಸುವ ಅಗತ್ಯವು ರಾಜ್ಯಗಳಿಗೆ ಇರುತ್ತದೆ, ಅದು ಹಣವನ್ನು ಕೇಂದ್ರ ಖಾತೆಯಲ್ಲಿ ಇಟ್ಟುಕೊಳ್ಳುತ್ತದೆ. ರಾಜ್ಯವನ್ನು ಅವಲಂಬಿಸಿ ಒಂದು ಅಥವಾ ಹೆಚ್ಚಿನ ಕೇಂದ್ರ ಖಾತೆಗಳು ಇರಬಹುದು, ಅಂದರೆ ರಾಜ್ಯವು ಒಂದು ಕೇಂದ್ರ ಖಾತೆಯನ್ನು ರಾಜ್ಯ ಮಟ್ಟದಲ್ಲಿ ಇರಿಸಿಕೊಳ್ಳಲು ಅಥವಾ ಪ್ರತಿ ಜಿಲ್ಲೆಗೆ ವಿಭಿನ್ನ ಕೇಂದ್ರ ಖಾತೆಗಳನ್ನು ಆಯ್ಕೆ ಮಾಡಬಹುದಾಗಿರುತ್ತದೆ. ಡಿಜಿಟಲ್ ಸಹಿ ಮಾಡಿದ ಕೂಲಿ ಪಟ್ಟಿಯನ್ನು ಸ್ವೀಕರಿಸಿದ ನಂತರ ಈ ಬ್ಯಾಂಕುಗಳು ಕೇಂದ್ರ ಖಾತೆಗೆ ಡೆಬಿಟ್ ಮಾಡುತ್ತದೆ ಮತ್ತು ಕಾರ್ಮಿಕರ ಖಾತೆಗೆ ಜಮಾ ಮಾಡುತ್ತವೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಸಾಫ್ಟ್‌ವೇರ್‌ನಲ್ಲಿ ಡಿಜಿಟಲ್ ಸಹಿಯನ್ನು ಬಳಸಿಕೊಂಡು ಅಧಿಕೃತ ಸಹಿ ಮಾಡಿದವರು ಅನುಮೋದಿಸಿರುವ ಎಲ್ಲ ಪಾವತಿ ಆದೇಶಗಳಿಗೆ ದೈನಂದಿನ ಆಧಾರದ ಮೇಲೆ ಕೂಲಿ ಪಟ್ಟಿಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಸಾಫ್ಟ್‌ವೇರ್ ಮೂಲಕ ತಯಾರಿಸಲಾಗುತ್ತದೆ. ಸಾಮಗ್ರಿ ಮತ್ತು ಆಡಳಿತಾತ್ಮಕ ವೆಚ್ಚಗಳ ಪಾವತಿಗೆ ಇದನ್ನೇ ವಿಸ್ತರಿಸಬಹುದಾಗಿರುತ್ತದೆ.

**ಚಿತ್ರ 1: ಪಾವತಿಗಳಿಗಾಗಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಪ್ರಕ್ರಿಯೆಯ ಫ್ಲೋ ಚಾರ್ಟ್**




(ಮೂಲ: ಭಾರತ ಸರ್ಕಾರ 2013: ಪು. 72)

ಕೌಶಲ್ಯರಹಿತ ಕೂಲಿ ಮತ್ತು ಸಾಮಗ್ರಿ ಪಾವತಿ ಎರಡಕ್ಕೂ 2015–16 ರಿಂದ ಕರ್ನಾಟಕದ ಎಲ್ಲಾ 30 ಜಿಲ್ಲೆಗಳಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕವು ಶೇಕಡಾ 100ರಷ್ಟು ಕೂಲಿಯನ್ನು ವಿದ್ಯುನ್ಮಾನವಾಗಿ ನೇರವಾಗಿ ಕಾರ್ಮಿಕರ ಖಾತೆಗಳಿಗೆ ವಿತರಿಸುತ್ತಿದೆ. ಆದ್ದರಿಂದ, ಪಾರದರ್ಶಕತೆಯ ಅತ್ಯುನ್ನತ ಮಾನದಂಡಗಳು ಮತ್ತು ಕೂಲಿ ಪಾವತಿಯ ಕಠಿಣ ವಿಧಾನವನ್ನು ಪರಿಚಯಿಸಲಾಗಿರುತ್ತದೆ.

## 2013–14ರಿಂದ 2018–19ರವರೆಗೆ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯು ಹೀಗಿರುತ್ತದೆ:

ಈ ಕೆಳಗಿನವುಗಳನ್ನು ನಿರ್ಣಯಿಸುವುದು ಅಧ್ಯಯನದ ಉದ್ದೇಶಗಳಾಗಿರುತ್ತವೆ:

1. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಕೂಲಿ ಮತ್ತು ಸಾಮಗ್ರಿ ಪಾವತಿಗಳನ್ನು ಸ್ವೀಕರಿಸುವ ಸಮಯವನ್ನು ಕಡಿಮೆಗೊಳಿಸಿದೆಯೇ?

2. ಈ ವ್ಯವಸ್ಥೆಯು ಮಧ್ಯವರ್ತಿಗಳ ಹಸ್ತಕ್ಷೇಪ ಮತ್ತು ಭ್ರಷ್ಟಾಚಾರದ ನಿದರ್ಶನಗಳನ್ನು ಕಡಿಮೆಗೊಳಿಸುತ್ತದೆಯೇ?

3. ವ್ಯವಸ್ಥೆಯು ಹಣವನ್ನು ನಿಲುಗಡೆ ಮಾಡುವುದನ್ನು ತಪ್ಪಿಸ್ತದೆಯೇ?

4. ಫಲಾನುಭವಿಗಳು ಬ್ಯಾಂಕುಗಳಿಂದ ಮತ್ತು ಅಗತ್ಯವಿದ್ದಾಗ ಹಣವನ್ನು ಹಿಂಪಡೆಯಲು ಸಮರ್ಥರಾಗಿದ್ದಾರೆಯೇ ಅಥವಾ ವಾಪಸಾತಿ ಮತ್ತು ಇನ್ನಾವುದೇ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳೊಂದಿಗೆ ವ್ಯವಹರಿಸುವಾಗ ಅವರು ತೊಂದರೆಗಳನ್ನು ಎದುರಿಸುತ್ತಿದ್ದಾರೆಯೇ?

**ಇದಲ್ಲದೆ, ಕೆಲವು ನಿರ್ದಿಷ್ಟ ಮೌಲ್ಯಮಾಪನ ಪ್ರಶ್ನೆಗಳನ್ನು ಸಹ ಕೇಳಲಾಗಿದ್ದು, ಅವುಗಳೆಂದರೆ:**

1. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ವಹಿವಾಟು ಆಧಾರಿತ ಮಾಹಿತಿ ನಿರ್ವಹಣಾ ವ್ಯವಸ್ಥೆಯಾಗಿರುತ್ತದೆ. ಅಧ್ಯಾಯ 8.7 ರ ಪ್ರಕಾರ, ಕೂಲಿ ಪಾವತಿಯಡಿಯಲ್ಲಿ ಎಲ್ಲಾ 3 ವರ್ಗದ ವಹಿವಾಟುಗಳನ್ನು ಗ್ರಾಮ ಪಂಚಾಯಿತಿಗಳು/ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಸರಿಯಾಗಿ ಅನುಸರಿಸುತ್ತಿವೆಯೇ? ಇಲ್ಲದಿದ್ದರೆ, ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಕಂಡುಬರುವ ವಿಚಲನಗಳು ಯಾವುವು? ದಯವಿಟ್ಟು ವಿಸ್ತಾರವಾಗಿ ತಿಳಿಸಿರಿ.
2. ವಿಳಂಬವನ್ನು ತಪ್ಪಿಸಲು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಸಾಫ್ಟ್‌ವೇರ್ ನಿರ್ವಹಿಸಲು ಎಲ್ಲ ಸಿಬ್ಬಂದಿಗಳು ಇದ್ದಾರೆಯೇ? ಇಲ್ಲದಿದ್ದರೆ, ಏಕೆ? ಹೌದು, ಎಂದಾದರೆ ಇವರೆಲ್ಲರೂ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಎಲ್ಲಾ ಅಂಶಗಳ ಬಗ್ಗೆ ತರಬೇತಿ ಪಡೆದಿದ್ದಾರೆಯೇ?
3. ಗ್ರಾಮ ಪಂಚಾಯಿತಿಗಳು/ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಿ ಇರುವ ಕುಂದುಕೊರತೆ ನಿವಾರಣಾ ಕಾರ್ಯವಿಧಾನವು ಯಾವುದು? ಬೇಡಿಕೆ ನೋಂದಣಿ, ಅಳತೆ, ಕೂಲಿ ಲೆಕ್ಕಾಚಾರ, ನಿಧಿ ವರ್ಗಾವಣೆ ಆದೇಶ ತಯಾರಿಸುವುದು ಮತ್ತು ಫಲಾನುಭವಿಗಳ ಖಾತೆಗಳಿಗೆ ಜಮಾ ಮಾಡುವ ಕುರಿತು ಎಷ್ಟು ದೂರುಗಳು ಬಂದಿರುತ್ತವೆ? ರಚಿಸಲಾದ ಸಂಬಂಧಪಟ್ಟ ಅಧಿಕಾರಿಗಳು / ಸಮಿತಿಗಳು ಈ ಕುಂದುಕೊರತೆಗಳ ಪರಿಹಾರಕ್ಕಾಗಿ ಏನು ಕ್ರಮ ಕೈಗೊಂಡಿರುತ್ತವೆ?
4. ದೂರುಗಳು ವಿಳಂಬವಾದ ಪಾವತಿಗಳಾಗಿದ್ದರೆ, ವಿಳಂಬವಾದ ಪಾವತಿಗಳಿಗೆ ಎಷ್ಟು ಕಾರ್ಮಿಕರು ಪರಿಹಾರವನ್ನು ಪಡೆದಿದ್ದಾರೆ? ಪಾವತಿ ವಿಳಂಬವಾಗಲು ಕಾರಣಗಳು ಯಾವುವು? ಸಂಸ್ಥೆ/ಅಧಿಕಾರಿಯಿಂದ ವಿಳಂಬ ಸಂಭವಿಸಿದಲ್ಲಿ, ಸಂಸ್ಥೆ/ಅಧಿಕಾರಿಯಿಂದ ವಸೂಲಿ ಮಾಡಿದ ಮೊತ್ತವು ವಿಳಂಬಕ್ಕೆ ಕಾರಣವಾಗಿದೆಯೇ? ಹೌದು, ಎಂದಾದರೆ ಪರಿಹಾರದ ವ್ಯಾಪ್ತಿ ಎಷ್ಟು?

5. ಉದ್ಯೋಗರಹಿತ ಭತ್ಯೆಗಾಗಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ಮತ್ತು ಎಷ್ಟು ಪಾವತಿಸಲಾಗಿದೆ? ಉದ್ಯೋಗವನ್ನು ಒದಗಿಸದಿರಲು ಕಾರಣಗಳೇನು? ವಿವರಗಳನ್ನು ನೀಡಿರಿ.
6. ಮೇಲಿನ ಮಾದರಿ ಜಿಲ್ಲೆಗಳಲ್ಲಿ 2015–16ನೇ ಸಾಲಿಗಾಗಿ ಪಾವತಿಸಬೇಕಾದ ಪ್ರಕರಣಗಳಿಗೆ ಕಾರಣಗಳು ಯಾವುವು? ದಯವಿಟ್ಟು ವಿವರಗಳನ್ನು ನೀಡಿರಿ.
7. ಇದು ನಿಧಿ ನಿರ್ವಹಣೆಯನ್ನು ಎಷ್ಟರ ಮಟ್ಟಿಗೆ ಸುಧಾರಿಸಿರುತ್ತದೆ?
8. ಇದು ಹಿಂದಿನ ವ್ಯವಸ್ಥೆಯ ಮೇಲೆ ಎಷ್ಟು ಮಟ್ಟಿಗೆ ಪಾರದರ್ಶಕತೆಯನ್ನು ತಂದಿರುತ್ತದೆ?
9. ಕ್ಷೇತ್ರ ಮಟ್ಟದ ಕಾರ್ಯಕರ್ತರು ವ್ಯವಸ್ಥೆಯಲ್ಲಿ ಎದುರಿಸುತ್ತಿರುವ ಅಡೆತಡೆಗಳು ಯಾವುವು?
10. ವಿಳಂಬವನ್ನು ಕಡಿಮೆ ಮಾಡಲು ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಲು ಏನು ಶಿಫಾರಸ್ಸು ಮಾಡಬೇಕು?
11. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಹಣದ ದುರುಪಯೋಗ ಮತ್ತು ಒಳಗೊಳ್ಳುವ ಮಧ್ಯವರ್ತಿಗಳನ್ನು ಎಷ್ಟರ ಮಟ್ಟಿಗೆ ತಡೆಯಲಾಗುತ್ತದೆ?
12. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವೈಶಿಷ್ಟಗಳ ವಿನ್ಯಾಸ, ವಿತರಣೆ ಮತ್ತು ಮಾರ್ಪಾಡುಗಳನ್ನು ಸುಧಾರಿಸಲು ಫಲಾನುಭವಿಗಳು ಮತ್ತು ಪಾಲುದಾರರಿಂದ ಇರುವ ಯಾವುದೇ ಸಲಹೆಗಳನ್ನು ತಿಳಿಸಿರಿ?

**ಕೋಷ್ಟಕ 1: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ [2014–15 ರಿಂದ 2018–19] ದೈಹಿಕ ಪ್ರಗತಿ (ರೂ. ಲಕ್ಷಗಳು)**

| ವರ್ಷ | ದೇಶ ರಾಜ್ಯ % | ನೋಂದಾಯಿತ ಸಂಖ್ಯೆ | | ಉದ್ಯೋಗ ಕಾರ್ಡ್‌ಗಳು ವಿತರಣೆಯಾದ ಸಂಚಿತ ಕುಟುಂಬಗಳ ಸಂಖ್ಯೆ | ಉದ್ಯೋಗ ಬೇಡಿಕೆ | | ಪ್ರಸ್ತಾಪಿಸಿದ ಉದ್ಯೋಗ | | ಒದಗಿಸಿದ ಉದ್ಯೋಗ | | | 100 ದಿನಗಳನ್ನು ಪೂರ್ಣಗೊಳಿಸಿದ ಕುಟುಂಬಗಳ ಸಂಖ್ಯೆ |
|---|---|---|---|---|---|---|---|---|---|---|---|---|
| | | ಕುಟುಂಬ | ವ್ಯಕ್ತಿಗಳು | ಒಟ್ಟು | ಕುಟುಂಬ | ವ್ಯಕ್ತಿಗಳು | ಕುಟುಂಬ | ವ್ಯಕ್ತಿಗಳು | ಕುಟುಂಬ | ವ್ಯಕ್ತಿಗಳು | ಮಾನವ ದಿನಗಳು | |
| 2014-15 | ಅಖಿಲ ಭಾರತ | 129460767 | 277829090 | 127793327 | 46477349 | 73090996 | 46389383 | 72880888 | 41371279 | 62160240 | 1661835485 | 2491943 |
| | ಕರ್ನಾಟಕ | 5546730 | 15926039 | 5519714 | 1513650 | 4197500 | 1482457 | 4098686 | 1093906 | 3008352 | 43328089 | 41315 |
| | % | | | | 27.29 | 26.36 | **97.94** | **97.65** | 72.27 | 71.67 | | 3.78 |
| 2015-16 | ಅಖಿಲ ಭಾರತ | 131753503 | 279102560 | 129285628 | 53479564 | 84474264 | 53337028 | 84150731 | 48132074 | 72259092 | 2351412793 | 4847893 |
| | ಕರ್ನಾಟಕ | 5604053 | 15597297 | 5576206 | 1662438 | 4189166 | 1617408 | 4059593 | 1235613 | 3026777 | 59838284 | 132977 |
| | % | | | | 29.66 | 26.86 | **97.29** | **96.91** | 74.33 | 72.25 | | 10.76 |
| 2016-17 | ಅಖಿಲ ಭಾರತ | 130163285 | 263852067 | 126916298 | 56930348 | 89799875 | 56765784 | 89408762 | 51222192 | 76690926 | 2356403416 | 3991163 |
| | ಕರ್ನಾಟಕ | 5289205 | 13939006 | 5258577 | 2151614 | 5452652 | 2095613 | 5279880 | 1818202 | 4417198 | 91406352 | 196442 |
| | % | | | | 40.68 | 39.12 | **97.40** | **96.83** | 84.50 | 81.01 | | 10.8 |
| 2017-18 | ಅಖಿಲ ಭಾರತ | 132383801 | 260968622 | 128320823 | 57315688 | 89617908 | 57178963 | 89275882 | 51158907 | 75915341 | 2337431332 | 2955151 |
| | ಕರ್ನಾಟಕ | 5561963 | 13836511 | 5527003 | 2152259 | 4624032 | 2092005 | 4423358 | 1902386 | 3890970 | 85699469 | 29985 |
| | % | | | | 38.7 | 33.42 | **97.20** | **95.66** | 88.39 | 84.15 | | 1.58 |
| 2018-19 | ಅಖಿಲ ಭಾರತ | 136517651 | 263520613 | 131182632 | 58767937 | 91195228 | 58323266 | 90245982 | 52692626 | 77768650 | 2679508275 | 5205398 |
| | ಕರ್ನಾಟಕ | 5974136 | 14176971 | 5897436 | 2358790 | 4603443 | 2299168 | 4386791 | 2110275 | 3940907 | 104667379 | 211987 |
| | % | | | | 43.05 | 34.61 | **97.47** | **95.29** | 89.46 | 85.61 | | 9.88 |

http://mnregaweb4.nic.in/netnrega/citizen_html/demregister.aspx?lflag=eng&fin_year=2016-2017&source=national&labels=labels&Digest=DaNMcKCT4HZjxosanIifuQ

ಶೇಕಡಾ ಅಂಕಿ ಅಂಶಗಳು ಕರ್ನಾಟಕ ರಾಜ್ಯವನ್ನು ಉಲ್ಲೇಖಿಸುತ್ತವೆ. ಬೇಡಿಕೆಯ ಶೇಕಡಾವಾರು ಉದ್ಯೋಗ ಸಂಖ್ಯೆ ನೋಂದಾಯಿತ ಸಂಖ್ಯೆಯ ಹೊರತಾಗಿರುತ್ತದೆ , ಪ್ರಸ್ತಾವಿತ ಶೇಕಡಾವಾರು ಉದ್ಯೋಗ ಸಂಖ್ಯೆಯು ನೋಂದಾಯಿತ ಬೇಡಿಕೆಯ ಸಂಖ್ಯೆಯ ಹೊರತಾಗಿರುತ್ತದೆ .ಉದ್ಯೋಗ ಬೇಡಿಕೆ ಇದೆ; ಮತ್ತು ಒದಗಿಸಿದ ಶೇಕಡಾ ಉದ್ಯೋಗವು ಉದ್ಯೋಗ ಬೇಡಿಕೆಯ ಹೊರತಾಗಿರುತ್ತದೆ.

**ಕೋಷ್ಟಕ 2: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಆರ್ಥಿಕ ಪ್ರಗತಿ [2014–15 ರಿಂದ 2018–19] (ರೂ. ಲಕ್ಷಗಳು)**

| ವರ್ಷ | ರಾಜ್ಯ/ಭಾರತ | ಒಟ್ಟು ಲಭ್ಯತೆ * | ವಾಸ್ತವಿಕ ಖರ್ಚು | | | ಒಟ್ಟು ವಾಸ್ತವಿಕ ವೆಚ್ಚ | ಬಾಕಿ ಪಾವತಿಯೂ ಸೇರಿದಂತೆ ಒಟ್ಟು ವೆಚ್ಚ | ನಿವ್ವಳ ಬಾಕಿ |
|---|---|---|---|---|---|---|---|---|
| | | | ಕೌಶಲ್ಯರಹಿತ ಕೂಲಿ | ಸಾಮಗ್ರಿ * | ನಿರ್ವಹಣೆ | | | |
| 2014-15 | ಅಖಿಲ ಭಾರತ | 3909491.97 | 2464188.37 | 962274.92 | 249843.61 | 3677087.61 | 3748236.99 | 161254.98 |
| | ಕರ್ನಾಟಕ | 195512.8 | 98666.87 | 60717.2 | 6943.7 | 166329.38 | 169088.47 | 26424.33 |
| | % | | **50.47** | **31.06** | **3.55** | **85.07** | **86.48** | **13.52** |
| 2015-16 | ಅಖಿಲ ಭಾರತ | 4320031.94 | 3089242.43 | 1061776.7 | 239221.35 | 4390617.83 | 4443931.32 | -123899.38 |
| | ಕರ್ನಾಟಕ | 131348.19 | 112045.97 | 60930.98 | 9216.37 | 182193.44 | 184484.2 | -53136.01 |
| | % | | **85.30** | **46.39** | **7.02** | **138.71** | **140.45** | **-40.45** |
| 2016-17 | ಅಖಿಲ ಭಾರತ | 5897628.57 | 4072246.81 | 1446168.4 | 288413.48 | 5809068.15 | 5908631.36 | -11002.79 |
| | ಕರ್ನಾಟಕ | 344362.51 | 215464.88 | 105829.17 | 9497.34 | 330837.37 | 335953.45 | 8409.06 |
| | % | | **62.57** | **30.73** | **2.76** | **96.07** | **97.56** | **2.44** |
| 2017-18 | ಅಖಿಲ ಭಾರತ | 6440803.78 | 4312767.03 | 1810022.2 | 277433.02 | 6402703.72 | 6536154.69 | -95350.91 |
| | ಕರ್ನಾಟಕ | 309242.06 | 201681.4 | 91592.4 | 6666.12 | 300028.65 | 309057.36 | 184.7 |
| | % | | **65.22** | **29.62** | **2.16** | **97.02** | **99.94** | **0.06** |
| 2018-19 | ಅಖಿಲ ಭಾರತ | 7095472.42 | 4715162.53 | 1946549.7 | 297874.78 | 6959968.82 | 8081536.62 | -986064.2 |
| | ಕರ್ನಾಟಕ | 389938.26 | 232563.76 | 117834.57 | 10087.23 | 360499.91 | 433035.82 | -43097.56 |
| | % | | **59.64** | **30.22** | **2.59** | **92.45** | **111.05** | **-11.05** |

Source: http://mnregaweb4.nic.in/netnrega/Citizen_html/financialstatement.aspx?lflag=eng&fin_year=2018-2019&source=national&labels=labels&Digest=2sK2jsi9G7FHeqD/Cv4G1Q
ಶೇಕಡಾ ಅಂಕಿ ಅಂಶಗಳು ಕರ್ನಾಟಕ ರಾಜ್ಯವನ್ನು ಉಲ್ಲೇಖಿಸುತ್ತವೆ

## 2. ಚಟುವಟಿಕೆಗಳ ಚೌಕಟ್ಟು/ಬದಲಾವಣೆಯ ಸಿದ್ಧಾಂತ/ಕಾರ್ಯಕ್ರಮದ ಸಿದ್ಧಾಂತ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳ ಪೈಕಿ, ಉದ್ದೇಶವನ್ನು ಸೋಲಿಸುವ ಒಂದು ಸಮಸ್ಯೆಯೆಂದರೆ ಅದು ಕಾರ್ಮಿಕರಿಗೆ ಕೂಲಿ ಪಾವತಿಸುವಲ್ಲಿನ ವಿಳಂಬವಾಗಿರುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಹೆಚ್ಚುವರಿ ನಿಧಿಗಳು ಲಭ್ಯವಿಲ್ಲದಿರುವುದು ಕೂಲಿ ಪಾವತಿ ವಿಳಂಬಕ್ಕೆ ಒಂದು ಪ್ರಮುಖ ಕಾರಣವಾಗಿರುತ್ತದೆ. ಕೆಲವು ಸಂಸ್ಥೆಗಳಲ್ಲಿ ಹಣವನ್ನು ಬಳಸದೆ ಇದ್ದರೂ ಸಹ ಇವುಗಳನ್ನು ರಾಜ್ಯದ ಜಿಲ್ಲೆ/ ಕ್ಷೇತ್ರ/ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗುವುದಿಲ್ಲ. ಆದ್ದರಿಂದ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅನುಷ್ಠಾನದಲ್ಲಿ ನಿಧಿ ಹಂಚಿಕೆಯು ಒಂದು ಕಷ್ಟದ ಕೆಲಸವಾಗಿರುತ್ತದೆ. ಈ ಸವಾಲನ್ನು ಎದುರಿಸಲು, ರಾಜ್ಯವು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಎಂಬ ಸಮಗ್ರ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಇದನ್ನು 2012ರ ಜನವರಿಯಲ್ಲಿ ರಾಜ್ಯದಲ್ಲಿ ಪರಿಚಯಿಸಲಾಗಿರುತ್ತದೆ. ಇದು ಎಲ್ಲಾ 30 ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ –ಸಾಫ್ಟ್‌ವೇರ್, ಪ್ಯಾಂಥರ್ ಬ್ಯಾಂಕಿನ ಸಾಫ್ಟ್‌ವೇರ್‌ನೊಂದಿಗೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಸಾಫ್ಟ್‌ವೇರ್ ಇಂಟರ್‌ಪ್ರಿಟರ್ ಆಗಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಬಹುತೇಕ ನೈಜ ಸಮಯದ ಆಧಾರದ ಮೇಲೆ ಫಲಾನುಭವಿ ಬ್ಯಾಂಕ್ ಖಾತೆಗಳಿಗೆ ತಡೆರಹಿತ ಆನ್‌ಲೈನ್ ವರ್ಗಾವಣೆಯನ್ನು ಸಾಧಿಸುತ್ತಿದೆ. ಕಾರ್ಮಿಕರಿಗೆ ಮತ್ತು ಇತರರಿಗೆ ಪಾವತಿಗಳನ್ನು ವಿದ್ಯುನ್ಮಾನವಾಗಿ ಅವರ ವೈಯಕ್ತಿಕ ಬ್ಯಾಂಕ್ ಖಾತೆಗಳಿಗೆ ರವಾನಿಸಲಾಗುತ್ತಿದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಆಡಳಿತ ಶುಲ್ಕವನ್ನು ಪಾವತಿಸುವುದು 2015–16 ರಿಂದ ಮಾತ್ರ ಪ್ರಾರಂಭವಾಗಿರುತ್ತದೆ.

### 2.1 ಯೋಜನೆಯ ಉದ್ದೇಶಗಳು:

1. ಕೂಲಿಗಳ ಸಮಯೋಚಿತ ಪಾವತಿಯು ಕಳೆದ ಕೆಲವು ವರ್ಷಗಳಿಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪ್ರಮುಖ ಸವಾಲುಗಳಲ್ಲಿ ಒಂದಾಗಿರುತ್ತದೆ. ಅಧಿನಿಯಮದ ಸೆಕ್ಷನ್ 3(2)ರ ಪ್ರಕಾರ, ಕಾರ್ಮಿಕರಿಗೆ ಕೂಲಿಯನ್ನು ವಾರಕ್ಕೊಮ್ಮೆ ಪಾವತಿಸಬೇಕಾಗುತ್ತದೆ ಮತ್ತು ಯಾವುದೇ ಸಂದರ್ಭದಲ್ಲಿ ಕೆಲಸ ಮಾಡಿದ ದಿನಾಂಕದಿಂದ 15 ದಿನಗಳನ್ನು ಮೀರಬಾರದಾಗಿರುತ್ತದೆ.
2. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಹಾರವು ಫಲಾನುಭವಿಗಳ ಖಾತೆಗಳಿಗೆ ಜಮಾ ಮಾಡುವ ಎಲ್ಲಾ ಪ್ರಕ್ರಿಯೆಗಳನ್ನು ಸ್ವಯಂಚಾಲಿತಗೊಳಿಸುತ್ತಿದೆ.
3. ಕೂಲಿ ಸಂಸ್ಕರಣೆ ಮತ್ತು ಪಾವತಿಗಳಿಗೆ ಅಗತ್ಯವಿರುವ ಒಟ್ಟಾರೆ ಸಮಯದಲ್ಲಿ ಕಡಿತವಾಗಿರುತ್ತದೆ.
4. ಪ್ರಕ್ರಿಯೆಗಳ ಸ್ವಯಂಚಲನೆಯು ಅಂತಿಮವಾಗಿ ಕಾರ್ಯತಂತ್ರದ ನಿರ್ಧಾರ ತೆಗೆದುಕೊಳ್ಳಲು ಎಲ್ಲಾ ಹಂತದ ಆಡಳಿತದಲ್ಲಿ ದತ್ತಾಂಶದ ನೈಜ–ಸಮಯದ ಲಭ್ಯತೆಗೆ ಕಾರಣವಾಗಿರುತ್ತದೆ.
5. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ತಡೆರಹಿತ ಪಾವತಿ ಕಾರ್ಯವಿಧಾನವಾಗಿ ಕಾರ್ಯನಿರ್ವಹಿಸುತ್ತಿದ್ದು, ಫಲಾನುಭವಿಗಳ ಬ್ಯಾಂಕುಗಳ ಖಾತೆಗಳ ನಿಧಿ ವರ್ಗಾವಣೆ ಮತ್ತು ಸಾಲವನ್ನು ಕೋರ್ ಬ್ಯಾಂಕಿಂಗ್ ಮೂಲಸೌಕರ್ಯದ (ಎನ್‌ಇಎಫ್‌ಟಿ/ಆರ್‌ಟಿಜಿಎಸ್/ಎಬಿಪಿ) ನಿಯಂತರ್ಣವನ್ನು ಸ್ವಯಂಚಾಲಿತವಾಗಿ ಖಚಿತಪಡಿಸುತ್ತದೆ.

6. ಸಮಯಕ್ಕೆ ಸರಿಯಾದ ಖಾತೆಗಳಲ್ಲಿ ಸರಿಯಾದ ಪ್ರಮಾಣದ ಹಣವನ್ನು ಈ ವ್ಯವಸ್ಥೆಯು ಖಾತರಿಗೊಳಿಸುತ್ತದೆ.
7. ನಿಧಿಗಳು ಸ್ಥಗಿತವಾಗುವುದನ್ನು ತಪ್ಪಿಸುತ್ತದೆ.
8. ದೊಡ್ಡ ಪ್ರಮಾಣದ ಖರ್ಚು ಮಾಡದ ಆರಂಭಿಕ ಬಾಕಿಗಳ ಸಮಸ್ಯೆಯನ್ನು ಸಹ ಇದು ನೋಡಿಕೊಳ್ಳುತ್ತದೆ.
9. ಇದು ನಿಧಿ ಹರಿವಿನ ಪ್ರಕ್ರಿಯೆಯನ್ನು ಸುಗಮಗೊಳಿಸಲು ಸಹಾಯ ಮಾಡುತ್ತದೆ.
10. ಕ್ಷೇತ್ರ ಕಾರ್ಯಕ್ರಮ ಕಛೇರಿ/ಗ್ರಾಮ ಪಂಚಾಯತ್‌ನಲ್ಲಿ ಕೆಲಸದ ಹೊರೆಯನ್ನು ಕಡಿಮೆ ಮಾಡುತ್ತದೆ.

### 2.2 ಅನುಷ್ಠಾನಕ್ಕಾಗಿ ಸಾಂಸ್ಥಿಕ ರಚನೆ:

ಯೋಜನಾ ವ್ಯವಸ್ಥಾಪಕರೊಂದಿಗೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ನಿರ್ವಹಿಸಲು ಜಿಲ್ಲಾ ಮಟ್ಟದ ಜಿಲ್ಲಾ ಮಾಹಿತಿ ನಿರ್ವಹಣಾ ಪದ್ಧತಿಯ ಸಂಯೋಜಕರನ್ನು ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಮಾಹಿತಿ ನಿರ್ವಹಣಾ ಪದ್ಧತಿಯ ನಿರ್ವಾಹಕರನ್ನು ನೇಮಿಸಲಾಗಿರುತ್ತದೆ. ಕೃಷಿ, ತೋಟಗಾರಿಕೆ, ಅರಣ್ಯ, ಸಣ್ಣ ನೀರಾವರಿ, ಜಲಾನಯನ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರೇಶ್ಮೆಗಾರಿಕೆ, ಗ್ರಾಮೀಣ ನೀರು ಸರಬರಾಜು ಮತ್ತು ಮೀನುಗಾರಿಕೆ ಇಲಾಖೆಗಳ ಅನುಷ್ಠಾನ ಅಧಿಕಾರಿಗಳಿಗೆ ಸಹಾಯ ಮಾಡಲು ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಇಂಜಿನಿಯರಿಂಗ್ ಕುರಿತು ಪದವಿ ಅರ್ಹತೆ ಹೊಂದಿರುವ ತಾಂತ್ರಿಕ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ನಡೆಯುವ ಕಾಮಗಾರಿಗಳ ಮಾಸಿಕ ಬಿಲ್‌ಗಳಿಗೆ ಸಹಿ ಹಾಕುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಕಾರ್ಯಗಳನ್ನು ಕೈಗೊಳ್ಳುವ ಸಂಬಂಧಪಟ್ಟ ಇಲಾಖೆಗಳೊಂದಿಗೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ನಿರ್ವಹಿಸುವಲ್ಲಿ ತೊಡಗಿಸಿ ಕೊಂಡಿರುತ್ತಾರೆ.

ಹಾಜರಾತಿ ಪಟ್ಟಿಯು ಕಾರ್ಮಿಕರ ಪಟ್ಟಿಯೊಂದಿಗೆ ಕಂಪ್ಯೂಟರ್ ಸಿಸ್ಟಮ್‌ನಿಂದ ವಿದ್ಯುನ್ಮಾನವಾಗಿ ಉತ್ಪತ್ತಿಯಾಗುವ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಹೊಂದಿರುತ್ತದೆ. ಪ್ರತಿ ಹಾಜರಾತಿ ಪಟ್ಟಿಯಲ್ಲಿ ಗ್ರಾಮ ಪಂಚಾಯಿತಿಯ ಅಧಿಕೃತ ವ್ಯಕ್ತಿಯು ಸಹಿ ಮಾಡುತ್ತಾರೆ. ಕೆಲಸ ಮಾಡಿದ ಪ್ರತಿಯೊಬ್ಬ ಕಾರ್ಮಿಕರು ಸಹಿ ಮಾಡಿದ ತಿಂಗಳ ಕೊನೆಯ ದಿನದಂದು ಮೇಲುಸಹಿ ಮಾಡಿ ಹಾಜರಾತಿ ಪಟ್ಟಿಯನ್ನು ಮುಚ್ಚಲಾಗುತ್ತದೆ ಮತ್ತು ಅದನ್ನು ಅಳತೆಗಾಗಿ ಇಂಜಿನಿಯರ್‌ಗಳಿಗೆ ಹಸ್ತಾಂತರಿಸಲಾಗುತ್ತದೆ. ಇಂಜಿನಿಯರುಗಳು ಕೆಲಸದ ಸ್ಥಳದಲ್ಲಿ ತೆಗೆದುಕೊಂಡ ಅಳತೆಗಳ ಆಧಾರದ ಮೇಲೆ ಪಾವತಿ ಮಾಡಲಾಗುತ್ತದೆ.

ಕಾಮಗಾರಿಗಳಿಗೆ ಬಿಲ್‌ಗಳನ್ನು ತಯಾರಿಸಲಾಗುತ್ತದೆ ಮತ್ತು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಈ ಬಿಲ್ಲುಗಳಿಗೆ ಜಂಟಿ ಸಹಿ ಹಾಕುತ್ತಾರೆ. ಡಿಜಿಟಲ್ ಸಿಗ್ನೇಚರ್ ಪ್ರಮಾಣಪತ್ರವನ್ನು ಸಮರ್ಥ ಪ್ರಾಧಿಕಾರದಿಂದ ನೀಡಲಾಗುತ್ತದೆ. ಗ್ರಾಮ ಪಂಚಾಯಿತಿಯ ಪ್ರಕರಣದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು

ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಡಿಜಿಟಲ್ ಸಿಗ್ನೇಚರ್ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಲು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮೇಲುಸಹಿ ಅಧಿಕಾರಿಗಳಾಗಿರುತ್ತಾರೆ.

### 2.2.1 ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಹೇಗೆ ಕಾರ್ಯನಿರ್ವಹಿಸುತ್ತದೆ?

ಕೇಂದ್ರ ಮತ್ತು ರಾಜ್ಯದಿಂದ ಬಂದ ಹಣವನ್ನು ಒಂದು ಬ್ಯಾಂಕ್‌ನಲ್ಲಿ (ನೋಡಲ್ ಬ್ಯಾಂಕ್) ಸಂಗ್ರಹಿಸಲಾಗುತ್ತದೆ. ಕಾರ್ಮಿಕರ ಕೂಲಿ ಮತ್ತು ಮಾರಾಟಗಾರರಿಗೆ ಸಾಮಗ್ರಿ ವೆಚ್ಚಕ್ಕಾಗಿ ಹಣದ ವಿದ್ಯುನ್ಮಾನ ವರ್ಗಾವಣೆಯನ್ನು ಮಾಡಲಾಗುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಎಂಐಎಸ್‌ನಲ್ಲಿ ಉತ್ಪತ್ತಿಯಾಗುವ ಎನ್‌ಎಂಆರ್‌ಗಳ ವಿರುದ್ಧ ಕೂಲಿಯನ್ನು ಪಾವತಿಸಬೇಕಾಗುತ್ತದೆ. ಸಿಬಿಎಸ್‌ನೊಂದಿಗೆ ತೆರೆಯಲಾದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರ ಖಾತೆಗಳಿಗೆ ಹಣ ವರ್ಗಾವಣೆಯನ್ನು ಮಾಡಲಾಗುತ್ತದೆ (ಕೋರ್ ಬ್ಯಾಂಕಿಂಗ್ ವ್ಯವಸ್ಥೆ, ಖಾತೆ ಹೊಂದಿರುವವರ ಹೆಸರು, ಖಾತೆಯ ಸಂಖ್ಯೆ, ಶಾಖೆಯ ಹೆಸರು ಮತ್ತು ಐಎಫ್‌ಎಸ್‌ಸಿ ಪರಿಗಣಿಸಲಾಗುತ್ತದೆ). ಆದ್ದರಿಂದ ಇದನ್ನು ಶೀರ್ಷಿಕೆ ಆಧಾರಿತ ನಿಧಿ ನಿರ್ವಹಣಾ ವ್ಯವಸ್ಥೆ ಎಂದು ಕರೆಯಲಾಗುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಮಾಹಿತಿ ನಿರ್ವಹಣಾ ಪದ್ಧತಿಯಲ್ಲಿ ತಯಾರಿಸಲಾದ ಕೂಲಿಯ ಪಟ್ಟಿಗೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅನ್ವಯಿಕೆಯ ಸಂಪರ್ಕತೆಯನ್ನು ನೀಡಲಾಗುತ್ತದೆ. ಕೂಲಿಯ ಪಟ್ಟಿಗಳನ್ನು ಗ್ರಾಮೀಣಾಭಿವೃದ್ಧಿ ಸಚಿವಾಲಯ ಸರ್ವರ್‌ನಿಂದ ನಿಧಿ ವರ್ಗಾವಣೆ ಆದೇಶದ ರೂಪದಲ್ಲಿ ರಾಜ್ಯದ ಕೇಂದ್ರ ಸ್ಥಾನದಲ್ಲಿ ನೋಡಲ್ ಬ್ಯಾಂಕಿಗೆ ವರ್ಗಾಯಿಸಲಾಗುತ್ತದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮೂಲಕ ನೋಡಲ್ ಬ್ಯಾಂಕ್‌ನಿಂದ ಫಲಾನುಭವಿಗಳ ಖಾತೆಗೆ ಹಣವನ್ನು ವರ್ಗಾಯಿಸಲಾಗುತ್ತದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಈ ನಿಧಿ ವರ್ಗಾವಣೆ ಸ್ವೀಕೃತಿಗಳನ್ನು ಬ್ಯಾಂಕ್ ಸಂಗ್ರಹಿಸುವ ಮೂಲಕ ಮಾಹಿತಿ ನಿರ್ವಹಣಾ ಪದ್ಧತಿಗೆ ಕಳುಹಿಸಲಾಗುತ್ತದೆ.

## 2.3. ಮೌಲ್ಯಮಾಪನದ ತಾರ್ಕಿಕ ಚೌಕಟ್ಟು

ಚೆನ್ನಾಗಿ ತಿಳಿದಿರುವಂತೆ, ತಾರ್ಕಿಕ ಚೌಕಟ್ಟು ಯೋಜನೆ, ವಿನ್ಯಾಸ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಬಳಸಲಾಗುವ ಮೂಲ ತಾರ್ಕಿಕ ಯೋಜನೆಯ ಚೌಕಟ್ಟಿನ ವಿವರಣೆಯನ್ನು ನೀಡುವ ಪ್ರಯತ್ನವನ್ನು ಮಾಡುತ್ತದೆ. ಪ್ರಸ್ತುತ ನಿದರ್ಶನದಲ್ಲಿ, ಇದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಬಳಸಿದಂತೆ ಯೋಜನೆಯ ಮೌಲ್ಯಮಾಪನಕ್ಕೆ ಮಾತ್ರ ಸೂಚಿಸುತ್ತದೆ, ಅವುಗಳೆಂದರೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಲ್ಲಿರುವ ಹೊಸ ಮಾರ್ಪಾಡಾಗುವಂತಹ ಅಥವಾ ಕಾರ್ಯವಿಧಾನಗಳ ಅನುಷ್ಠಾನದ ಪರಿಣಾಮವಾಗಿ ಯಾವುದಾದರೂ ಬದಲಾವಣೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ, ಈ ಸಂದರ್ಭದಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೌಲ್ಯಮಾಪನದ ಫಲಿತಾಂಶಗಳಿಗಾಗಿ ಸ್ವತಃ ಅನ್ವಯಿಸಲು ಯಾವುದೇ ಸಿದ್ಧಾಂತವು ಸುಲಭವಾಗಿ ಲಭ್ಯವಿಲ್ಲ. ಆದಾಗ್ಯೂ, ಕೆಲವು ಊಹೆಗಳನ್ನು ಮಾಡಬಹುದು: ಮೊದಲನೆಯದಾಗಿ ಎ ನಿಂದ ಸಿ ಎಂದು ಪಟ್ಟಿ ಮಾಡಲಾದ ಫಲಿತಾಂಶವೆಂದು ನಿರೀಕ್ಷಿಸಲಾಗಿದೆ, ಸಿದ್ಧಾಂತ/ತತ್ವದಲ್ಲಿ ಇದರ ಪರಿಣಾಮವಾಗಿ ವೈಯಕ್ತಿಕ ಅಗತ್ಯಗಳನ್ನು ಪೂರೈಸುವ ಬದಲು ಸಮುದಾಯಕ್ಕಾಗಿ ನಡೆಸಲಾದ ಕಾರ್ಯಗಳು ಉಂಟಾಗುವ ಸಾಧ್ಯತೆ ಹೆಚ್ಚು ಆಗಿರುತ್ತದೆ. ಎರಡನೆಯದಾಗಿ, ಕೈಗೊಂಡ ಕಾರ್ಯವು ಸಂಬಂಧಿಸಿದ ಇಲಾಖೆಯಿಂದಲ್ಲದೇ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುತ್ತದೆ. ಅಂತಹ ಎರಡು ಊಹೆಗಳ ಹಿಂದಿನ ಕಲ್ಪನೆಗಳೆಂದರೆ, ಒಂದು ಸಮುದಾಯದ ಕೆಲಸದ

ಸಂದರ್ಭದಲ್ಲಿ ಇಲಾಖೆ ಅಥವಾ ಇಲಾಖೆಯ ಪರವಾಗಿ ಯಾರಾದರೂ ಕೂಲಿಯನ್ನು ಇತ್ಯರ್ಥಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ ಆದ್ದರಿಂದ ಕೇವಲ ವ್ಯಕ್ತಿಗಳ ವಿರುದ್ಧವಾಗಿ ಬಿಲ್ಲುಗಳನ್ನು ಇತ್ಯರ್ಥಗೊಳಿಸಲು ಸಾಮೂಹಿಕ ಸಾಂಸ್ಥಿಕ ಒತ್ತಡವನ್ನು ತರುತ್ತಾರೆ; ಮತ್ತು ಎರಡನೆಯದಕ್ಕೆ ಸಂಬಂಧಿಸಿದಂತೆ, ಕೂಲಿ ಹಕ್ಕುಗಳನ್ನು ಇತ್ಯರ್ಥಪಡಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಎದುರಾಗಿ ಸಂಬಂಧಿಸಿದ ಇಲಾಖೆಗಳು ಸಾಂಸ್ಥಿಕವಾಗಿ ವಿಳಂಬದಲ್ಲಿರುತ್ತವೆ.

ನಿರೀಕ್ಷಿತ ಕಾರ್ಯಕ್ರಮದ ಹಸ್ತಕ್ಷೇಪದ ಹರಿವಿನ ಚಾರ್ಟ್ ಮತ್ತು ಆ ಫಲಿತಾಂಶವನ್ನು ಸಾಧಿಸಲು ಅಗತ್ಯವಾದ ಸಮಯದೊಂದಿಗೆ ಅವುಗಳ ನಿರೀಕ್ಷಿತ ಫಲಿತಾಂಶಗಳನ್ನು ಈ ಕೆಳಗೆ ಪ್ರಸ್ತುತಪಡಿಸಲಾಗಿರುತ್ತದೆ:

**ಚಿತ್ರ 2: ಚಟುವಟಿಕೆಗಳ ಚೌಕಟ್ಟು**



# 3. ಮೌಲ್ಯಮಾಪನ ಚೌಕಟ್ಟು ಕೆಲಸ

## 3.1 ಮೌಲ್ಯಮಾಪನದ ವ್ಯಾಪ್ತಿ:

ಅಧ್ಯಯನದ ವ್ಯಾಪ್ತಿಯು ರಾಜ್ಯದ ಎಲ್ಲಾ 30 ಜಿಲ್ಲೆಗಳು. ಆದಾಗ್ಯೂ, ಮಾದರಿ ವಿಧಾನದಲ್ಲಿ ವ್ಯಾಖ್ಯಾನಿಸಿದಂತೆ ಈ ಜಿಲ್ಲೆಗಳ ಪೈಕಿ 8 ಜಿಲ್ಲೆಗಳು ಮತ್ತು 300 ಗ್ರಾಮ ಪಂಚಾಯಿತಿಗಳನ್ನು ಮಾದರಿಯಾಗಿ ಆಯ್ಕೆ ಮಾಡಲಾಗಿರುತ್ತದೆ. ಮೊದಲೇ ಸೂಚಿಸಿದಂತೆ ಈ ಅಧ್ಯಯನದ ಅವಧಿಯು 2013–14ರಿಂದ 2015–16ರವರೆಗೆ ಇದ್ದರೂ, 2017–18 ಮತ್ತು 2018–19ರ ಅವಧಿಯಲ್ಲಿ ಅಧ್ಯಯನವು ಪ್ರಗತಿಯಲ್ಲಿರುವುದರಿಂದ, ಅಧ್ಯಯನದ ಫಲಿತಾಂಶವನ್ನು ಮಾಡಲು ಇದು 2018–19ರವರೆಗೆ ಆವರಿಸಿದ್ದು ಇತ್ತೀಚಿನ ಅವಧಿಗೆ ಹೆಚ್ಚು ಪ್ರಸ್ತುತವಾಗಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಪ್ರಸ್ತುತ ಪಾವತಿ ವ್ಯವಸ್ಥೆಯನ್ನು ಹೋಲಿಕೆ ಮಾಡಲು 2012–13ರ ಅಂದರೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಅಲ್ಲದ ವರ್ಷದಲ್ಲಿ ಕೂಲಿ ಮತ್ತು ಸಾಮಗ್ರಿಗಳನ್ನು ಪಾವತಿಸಲು ಅಳವಡಿಸಿಕೊಂಡ ವಿಧಾನವನ್ನು ಫಲಾನುಭವಿಗಳು ಮತ್ತು ಮಾರಾಟಗಾರರನ್ನು ಸಂದರ್ಶಿಸುವ ಮೂಲಕ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ದತ್ತಾಂಶದ ಕಛೇರಿಯಲ್ಲಿನ ವಿಮರ್ಶೆ ಮಾಡಿ ಅಧ್ಯಯನ ಮಾಡಬೇಕಾಗಿರುತ್ತದೆ. ಇದನ್ನು ಕಛೇರಿಯಲ್ಲಿ ದತ್ತಾಂಶವನ್ನು ಬದಲಿಸಿದಂತೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ವೆಬ್ ಪೋರ್ಟಲ್‌ನಿಂದ ಹೊರತೆಗೆಯಲು, ಪುನರಾವರ್ತಿತ ಪ್ರಯತ್ನಗಳ ಹೊರತಾಗಿಯೂ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ, ಮೂಲ ವರ್ಷವನ್ನು 2013–14 ಎಂದು ಉಳಿಸಿಕೊಳ್ಳಲಾಗಿರುತ್ತದೆ, ಇದಕ್ಕಾಗಿ ಹೆಚ್ಚು ಅಥವಾ ಕಡಿಮೆ ಏಕರೂಪವಾಗಿ ಕಛೇರಿಯ ದತ್ತಾಂಶವು ಲಭ್ಯವಿರುತ್ತದೆ.

## 3.2. ಮೌಲ್ಯಮಾಪನದ ಉದ್ದೇಶಗಳು:

**ಅಧ್ಯಯನದ ಉದ್ದೇಶಗಳು ಈ ಕೆಳಗಿನ ಅಂಶಗಳನ್ನು ನಿರ್ಣಯಿಸುವುದು ಆಗಿರುತ್ತದೆ:**

1. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಕೂಲಿ ಮತ್ತು ಸಾಮಗ್ರಿಯ ಪಾವತಿಗಳನ್ನು ಸ್ವೀಕರಿಸುವ ಸಮಯವನ್ನು ಕಡಿಮೆಗೊಳಿಸಿದೆಯೇ?
2. ಈ ವ್ಯವಸ್ಥೆಯು ಮಧ್ಯವರ್ತಿಗಳ ಹಸ್ತಕ್ಷೇಪ ಮತ್ತು ಭ್ರಷ್ಟಾಚಾರದ ನಿದರ್ಶನಗಳನ್ನು ಕಡಿಮೆಗೊಳಿಸಿದೆಯೇ?
3. ಈ ವ್ಯವಸ್ಥೆಯು ಹಣವನ್ನು ನಿಲುಗಡೆ ಮಾಡುವುದನ್ನು ತಪ್ಪಿಸಿದೆಯೇ?
4. ಫಲಾನುಭವಿಗಳು ಬ್ಯಾಂಕುಗಳಿಂದ ಮತ್ತು ಅಗತ್ಯವಿದ್ದಾಗ ಹಣವನ್ನು ಹಿಂಪಡೆಯಲು ಸಮರ್ಥರಾಗಿದ್ದಾರೆಯೇ ಅಥವಾ ವಾಪಸಾತಿ ಮತ್ತು ಇನ್ನಾವುದೇ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳೊಂದಿಗೆ ವ್ಯವಹರಿಸುವಾಗ ಅವರು ತೊಂದರೆಗಳನ್ನು ಎದುರಿಸಿರುತ್ತಾರೆಯೇ?

# 4. ಮೌಲ್ಯಮಾಪನ ಪ್ರಶ್ನೆಗಳು ಮತ್ತು ಉಪ ಪ್ರಶ್ನೆಗಳು

1. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ವಹಿವಾಟು ಆಧಾರಿತ ಮಾಹಿತಿ ನಿರ್ವಹಣಾ ವ್ಯವಸ್ಥೆ ಆಗಿರುತ್ತದೆ. ಅಧ್ಯಾಯ 8.7ರ ಪ್ರಕಾರ ಕೂಲಿ ಪಾವತಿಯಡಿಯಲ್ಲಿ, ಎಲ್ಲಾ 3 ವರ್ಗದ ವಹಿವಾಟುಗಳನ್ನು ಗ್ರಾಮ ಪಂಚಾಯಿತಿಗಳು/ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಸರಿಯಾಗಿ ಅನುಸರಿಸುತ್ತಿವೆಯೇ? ಇಲ್ಲದಿದ್ದರೆ, ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಕಂಡುಬರುವ ವಿಚಲನಗಳು ಯಾವುವು? ದಯವಿಟ್ಟು ವಿಸ್ತಾರವಾಗಿ ತಿಳಿಸಿರಿ.
2. ವಿಳಂಬವನ್ನು ತಪ್ಪಿಸಲು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಸಾಫ್ಟ್‌ವೇರ್ ನಿರ್ವಹಿಸಲು ಎಲ್ಲ ಸಿಬ್ಬಂದಿ ಇದ್ದಾರೆಯೇ? ಇಲ್ಲದಿದ್ದರೆ, ಏಕೆ? ಹೌದು ಎಂದಾದರೆ ಇವರೆಲ್ಲರೂ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಎಲ್ಲಾ ಅಂಶಗಳ ಬಗ್ಗೆ ತರಬೇತಿ ಪಡೆದಿದ್ದಾರೆಯೇ?
3. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಎದುರು ಪೂರ್ವ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅವಧಿಯಲ್ಲಿ ಕೂಲಿಯನ್ನು ಬಿಡುಗಡೆ ಮಾಡಲು ತಗುಲಿದ ವೆಚ್ಚ ಮತ್ತು ಸಮಯ ಎಷ್ಟು?
4. ಗ್ರಾಮ ಪಂಚಾಯಿತಿಗಳು/ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಿ ಕುಂದುಕೊರತೆ ನಿವಾರಣಾ ಕಾರ್ಯವಿಧಾನ ಯಾವುದು? ಬೇಡಿಕೆ ನೋಂದಣಿ, ಅಳತೆ, ಕೂಲಿ ಲೆಕ್ಕಾಚಾರ, ನಿಧಿ ವರ್ಗಾವಣೆ ಆದೇಶ ಹೊರಡಿಸುವುದು ಮತ್ತು ಫಲಾನುಭವಿಗಳ ಖಾತೆಗಳಿಗೆ ಜಮಾ ಮಾಡುವ ಕುರಿತು ಎಷ್ಟು ದೂರುಗಳು ಬಂದಿವೆ? ಸಂಬಂಧಪಟ್ಟ ಅಧಿಕಾರಿಗಳು/ರಚಿಸಲಾದ ಸಮಿತಿಗಳು ಈ ಕುಂದುಕೊರತೆಗಳ ಪರಿಹಾರಕ್ಕಾಗಿ ಏನು ಕ್ರಮ ಕೈಗೊಂಡಿರುತ್ತವೆ?
5. ವಿಳಂಬವಾದ ಪಾವತಿಗಳಿಗಾಗಿ ದೂರುಗಳಿದ್ದರೆ, ವಿಳಂಬವಾದ ಪಾವತಿಗಳಿಗೆ ಎಷ್ಟು ಕಾರ್ಮಿಕರು ಪರಿಹಾರವನ್ನು ಪಡೆದಿದ್ದಾರೆ? ಪಾವತಿ ವಿಳಂಬವಾಗಲು ಕಾರಣಗಳು ಯಾವುವು? ಸಂಸ್ಥೆ/ಅಧಿಕಾರಿಯಿಂದ ವಿಳಂಬ ಸಂಭವಿಸಿದಲ್ಲಿ, ವಿಳಂಬಕ್ಕೆ ಕಾರಣವಾದ ಸಂಸ್ಥೆ/ ಅಧಿಕಾರಿಯಿಂದ ಮೊತ್ತವನ್ನು ವಸೂಲಿ ಮಾಡಿದೆಯೇ? ಹೌದು, ಎಂದಾದರೆ ಪರಿಹಾರದ ಪ್ರಮಾಣ ಎಷ್ಟು?
6. ನಿರುದ್ಯೋಗ ಭತ್ಯೆಗಾಗಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ಮತ್ತು ಎಷ್ಟು ಪಾವತಿಸಲಾಗಿದೆ? ಉದ್ಯೋಗವನ್ನು ಒದಗಿಸದಿರಲು ಕಾರಣಗಳೇನು? ವಿವರಗಳನ್ನು ನೀಡಿರಿ.
7. ಮೇಲಿನ ಮಾದರಿ ಜಿಲ್ಲೆಗಳಲ್ಲಿ 2015–16ನೇ ಸಾಲಿಗೆ ಪಾವತಿಸಬೇಕಾದ ಪಾವತಿಗಳಿಗೆ ಕಾರಣಗಳು ಯಾವುವು? ದಯವಿಟ್ಟು ವಿವರಗಳನ್ನು ನೀಡಿರಿ.
8. ಇದು ನಿಧಿ ನಿರ್ವಹಣೆಯನ್ನು ಎಷ್ಟರ ಮಟ್ಟಿಗೆ ಸುಧಾರಿಸಿದೆ?
9. ಇದು ಹಿಂದಿನ ವ್ಯವಸ್ಥೆಯ ಮೇಲಿರುವುದಕ್ಕಿಂತ ಎಷ್ಟರ ಮಟ್ಟಿಗೆ ಪಾರದರ್ಶಕತೆಯನ್ನು ತಂದಿದೆ?
10. ಕ್ಷೇತ್ರ ಮಟ್ಟದ ಕಾರ್ಯಕರ್ತರು ಈ ವ್ಯವಸ್ಥೆಯಲ್ಲಿ ಎದುರಿಸುತ್ತಿರುವ ಅಡೆತಡೆಗಳು ಯಾವುವು?
11. ವಿಳಂಬವನ್ನು ಕಡಿಮೆ ಮಾಡಲು ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಲು ಏನು ಶಿಫಾರಸ್ಸು ಮಾಡಬೇಕು?
12. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಹಣದ ದುರುಪಯೋಗವಾಗುವುದನ್ನು ಮತ್ತು ಒಳಗೊಳ್ಳುವ ಮಧ್ಯವರ್ತಿಯನ್ನು ಎಷ್ಟರ ಮಟ್ಟಿಗೆ ತಡೆಯಲಾಗುತ್ತದೆ?

13. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವೈಶಿಷ್ಟ್ಯಗಳ ವಿನ್ಯಾಸ, ವಿತರಣೆ ಮತ್ತು ಮಾರ್ಪಾಡುಗಳನ್ನು ಸುಧಾರಿಸಲು ಫಲಾನುಭವಿಗಳು ಮತ್ತು ಪಾಲುದಾರರಿಂದ ಬಂದಿರುವ ಯಾವುದೇ ಸಲಹೆಗಳೇನು?

## 4.1 ಸೂಚಕಗಳು

ಮೌಲ್ಯಮಾಪನ ಅಧ್ಯಯನಕ್ಕಾಗಿ ಅನುಗುಣವಾಗಿ ಗುರುತಿಸಲಾದ ಸೂಚಕಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:

- ಪಾವತಿಗಳನ್ನು ಸ್ವೀಕರಿಸುವಲ್ಲಿ ಸಮಯದ ಮೇಲೆ ಉಂಟಾಗುವ ಪರಿಣಾಮ
- ಮಧ್ಯವರ್ತಿಗಳು ಮತ್ತು ಭ್ರಷ್ಟಾಚಾರದ ಮೇಲೆ ಉಂಟಾಗುವ ಪರಿಣಾಮ
- ನಿಧಿಗಳ ನಿಲುಗಡೆಯನ್ನು ತಪ್ಪಿಸುವುದು
- ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವ ಸಾಮರ್ಥ್ಯ
- ಸಾಂಸ್ಥಿಕ ಮತ್ತು ಮಾನವ ಸಂಪನ್ಮೂಲ ಸಾಮರ್ಥ್ಯದ ಸಮಸ್ಯೆಗಳು
- ಹಣಕಾಸು ಸಾಕ್ಷರತೆ ಅಡಚಣೆಗಳು–ಪ್ರಾದೇಶಿಕ ಮತ್ತು ಸಾಮಾಜಿಕ ಗುಂಪುಗಳು

# 5. ಮೌಲ್ಯಮಾಪನ ವಿಧಾನಗಳು ಮತ್ತು ತಂತ್ರಗಳು

ಉಲ್ಲೇಖದ ನಿಯಮಗಳಲ್ಲಿ ವಿವರಿಸಿದಂತೆ ಕೆಲಸದ ವ್ಯಾಪ್ತಿಯ ವಿವರವಾದ ವಿಮರ್ಶೆಯು ಅಧ್ಯಯನದ ಉದ್ದೇಶಗಳಿಗಾಗಿ ಮಿಶ್ರ–ವಿನ್ಯಾಸ ವಿಧಾನವನ್ನು ಬಯಸುತ್ತದೆ ಮತ್ತು ಇದರ ಮೌಲ್ಯಮಾಪನ ವಿನ್ಯಾಸದೊಂದಿಗೆ ಸೇರಿಸಲು, ಅಧ್ಯಯನಕ್ಕೆ ಅಳವಡಿಸಿಕೊಂಡ ವಿಧಾನವು ಪರಿಮಾಣಾತ್ಮಕ ಮತ್ತು ಗುಣಾತ್ಮಕತೆಯ ಅತ್ಯುತ್ತಮ–ಸ್ಥಿರತೆಯ ಮಿಶ್ರಣ ವಿಧಾನಗಳಾಗಿರುತ್ತವೆ.

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಎಲ್ಲಾ ಅಂಶಗಳ ಬಗ್ಗೆ ಎಲ್ಲಾ ಪಾಲುದಾರರೊಂದಿಗೆ ಗುಣಾತ್ಮಕ ಸಾಧನವಾಗಿ ಕೇಂದ್ರೀಕೃತ ಗುಂಪು ಚರ್ಚೆಯನ್ನು ನಡೆಸಲಾಗಿದ್ದು, ವಿನ್ಯಾಸ ಮತ್ತು ಪಾವತಿಯ ವಿತರಣೆಯಲ್ಲಿನ ಸುಧಾರಣೆ, ಯೋಜನೆ ಅನುಷ್ಠಾನದಲ್ಲಿ ಸುಧಾರಣೆಗಾಗಿ ಅವರ ದೃಷ್ಟಿಕೋನವನ್ನು ವಿವರಿಸಲಾಗಿರುತ್ತದೆ.

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿರದ ವರ್ಷದಲ್ಲಿ ಕೂಲಿ ಮತ್ತು ಸಾಮಗ್ರಿಗಳನ್ನು ಒದಗಿಸಲು ಅಳವಡಿಸಿಕೊಂಡ ಕಾರ್ಯವಿಧಾನವನ್ನು ಪ್ರಸ್ತುತ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಮಾಡುತ್ತಿರುವ ಪಾವತಿ ವ್ಯವಸ್ಥೆಯನ್ನು ಹೋಲಿಸುವ ಪರಿಮಾಣಾತ್ಮಕ ಮಾಹಿತಿಯನ್ನು ದೃಡೀಕರಿಸಲು, ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಫಲಾನುಭವಿಗಳು ಮತ್ತು ಮಾರಾಟಗಾರರೊಂದಿಗೆ ಪರಿಮಾಣಾತ್ಮಕ ರಚನಾತ್ಮಕ ಸಂದರ್ಶನಗಳನ್ನು ನಡೆಸಲಾಗಿರುತ್ತದೆ.

ಚಟುವಟಿಕೆಗಳ ಚೌಕಟ್ಟಿನ ಕೆಲವು ಸೂಚಕಗಳು ಸರ್ಕಾರದ ಆದ್ಯತೆಗಳು ಮತ್ತು ಯೋಜನೆಗಳನ್ನು ಅರ್ಥಮಾಡಿಕೊಳ್ಳಲು ಸಂಬಂಧಿಸಿವೆ ಎಂದು ಊಹಿಸಲಾಗಿರುತ್ತದೆ. ಇದಕ್ಕಾಗಿ ನಾವು ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ತೆರೆದ ಮೂಲ ದತ್ತಾಂಶ ಮತ್ತು ಸರ್ಕಾರದ ದಾಖಲೆಗಳನ್ನು ಕಛೇರಿಯಲ್ಲಿ ನಡೆಸಿದ ಪರಿಶೀಲನೆಯನ್ನು ಅವಲಂಬಿಸಿರುತ್ತೇವೆ.

## 5.1 ಡೇಟಾ ಮತ್ತು ಮಾಹಿತಿ ಮೂಲಗಳು

**ಎ. ಪ್ರಾಥಮಿಕ ಡೇಟಾದ ಮೂಲಗಳು:**

- ಸಂದರ್ಶನದ ನಮೂನೆಗಳನ್ನು ಆಧರಿಸಿ ರಚನಾತ್ಮಕ ಸಂದರ್ಶನಗಳನ್ನು, ಫಲಾನುಭವಿ ಕುಟುಂಬಗಳು, ಮೇಸ್ತ್ರಿಗಳು, ಡಾಟಾ ಎಂಟ್ರಿ ಆಪರೇಟರ್‌ಗಳು, ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ತಜ್ಞರು, ಬ್ಯಾಂಕ್ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಪ್ರತಿನಿಧಿಗಳೊಂದಿಗೆ ನಡೆಸಲಾಗಿರುತ್ತದೆ.
- ಫಲಾನುಭವಿಗಳು, ಪಂಚಾಯತ್ ರಾಜ್ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಇಲಾಖೆಯ ಅಧಿಕಾರಿಗಳೊಂದಿಗೆ ಕೇಂದ್ರೀಕೃತ ಗುಂಪು ಚರ್ಚೆಗಳನ್ನು ನಡೆಸಲಾಗಿರುತ್ತದೆ.
- ಹಣಕಾಸು ಸಮಯ ಪ್ರಜ್ಞೆ ಅಥವಾ ಅಂತರದ ಜಾಡನ್ನು ಅನುಸರಿಸಲಾಗಿರುತ್ತದೆ.

**ಬಿ. ದ್ವಿತೀಯ ದತ್ತಾಂಶದ ಮೂಲಗಳು:**

- ಕ್ಷೇತ್ರದಲ್ಲಿ ಹಿಂದಿನ ಅಧ್ಯಯನಗಳು
- ಇಲಾಖೆ ಮತ್ತು ಇತರ ಸಮನ್ವಯ ಇಲಾಖೆಗಳು ಒದಗಿಸಿದ ದ್ವಿತೀಯ ದತ್ತಾಂಶ

# 6. ಮೌಲ್ಯಮಾಪನದ ಮಾತೃಕೆ

ಕೇಂದ್ರ ಸ್ಥಾನದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಧಿಕಾರಿಗಳೊಂದಿಗೆ ಇದುವರೆಗೆ ನಡೆದ ಚರ್ಚೆಗಳು ಮತ್ತು ಬೆಂಗಳೂರಿನ ಸುತ್ತಮುತ್ತಲಿನ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಪ್ರಾಯೋಗಿಕ ಅಧ್ಯಯನಗಳ ಆಧಾರದ ಮೇಲೆ ಮೌಲ್ಯಮಾಪನಕ್ಕಾಗಿ ಸೂಚಕಗಳ ಮಾತೃಕೆಯನ್ನು ಸಿದ್ಧಪಡಿಸಲಾಗಿರುತ್ತದೆ. ಸಾಹಿತ್ಯದ ಒಂದು ವ್ಯವಸ್ಥಿತ ವಿಮರ್ಶೆಯು ವಿಭಿನ್ನ ಸಮಸ್ಯೆಗಳು ಮತ್ತು ಸೂಚಕಗಳನ್ನು ಗುರುತಿಸಲು ಸಹಕಾರಿಯಾಗಿರುತ್ತದೆ.

## 6.1 ಪ್ರಮುಖ ಮೌಲ್ಯಮಾಪನ ಉದ್ದೇಶಗಳಿಗಾಗಿ ಮಾತೃಕೆ

| ಉದ್ದೇಶಗಳು | ಮಾಹಿತಿಯ ಮೂಲ | ಪರಿಕರಗಳು/ತಂತ್ರಗಳು | ಪ್ರಮುಖ ಶೋಧನೆಗಳು |
|---|---|---|---|
| ನಿಧಿ ನಿಲುಗಡೆಯನ್ನು ತಡೆಯುವುದು | ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ಇಲಾಖಾ ಅಧಿಕಾರಿಗಳು, ಅನುಗುಣವಾದ ದಾಖಲೆಗಳು, ರಾಜ್ಯದ ಕೊಡುಗೆಗಳು, ನೋಡಲ್ ಬ್ಯಾಂಕುಗಳೊಂದಿಗಿನ ಸಂದರ್ಶನಗಳು, ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿಗಳು, ಪಾವತಿ ವಿವರಗಳ ಮರು ಪರಿಶೀಲನೆ | ಸಂದರ್ಶನ ನಮೂನೆಗಳು, ಕಛೇರಿಯಲ್ಲಿ ಪರಿಶೀಲನೆ | ▪ ಹೊಣೆಗಾರಿಕೆಗಳು ಗಣನೀಯವಾಗಿ ಕಡಿಮೆಯಾಗಿರುತ್ತದೆ, ಆದರೆ ಸಂಪೂರ್ಣವಾಗಿ ತೆಗೆದು ಹಾಕಲಾಗುವುದಿಲ್ಲ.<br>• ಹಿಂದಿನ ವರ್ಷಗಳಿಂದ ಬಂದಿರುವ ಹೊಣೆಗಾರಿಕೆಗಳು ಸಹಾ ಗಣನೀಯವಾಗಿ ಕಡಿಮೆಯಾಗಿದೆ |
| ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವ ಸಾಮರ್ಥ್ಯ | ಫಲಾನುಭವಿಗಳು, ಬ್ಯಾಂಕ್ ಅಧಿಕಾರಿಗಳು | ಸಂದರ್ಶನ ನಮೂನೆ, ಕೇಂದ್ರೀಕೃತ ಗುಂಪು ಚರ್ಚೆ | • ವಿಶೇಷವಾಗಿ ಮಹಿಳೆಯರು ಮತ್ತು ಕಡಿಮೆ ವಿದ್ಯಾವಂತರುಗಳಲ್ಲಿ ಕ್ರಮೇಣ ಸುಧಾರಣೆಯಾಗಿದೆ, ಆದರೆ ಗಮನಾರ್ಹವಾಗಿ ಅಲ್ಲ; |
| ಸಾಂಸ್ಥಿಕ ಮತ್ತು ಮಾನವ ಸಂಪನ್ಮೂಲ ಸಾಮರ್ಥ್ಯದ ಸಮಸ್ಯೆಗಳು | ಕಂಪ್ಯೂಟರ್ ಆಪರೇಟರ್‌ಗಳು/ ಡಾಟಾ ಎಂಟ್ರಿ ಆಪರೇಟರ್‌ಗಳು/ ಸಾಫ್ಟ್‌ವೇರ್ ಸೇವಾ ತಜ್ಞರು | ಸಂದರ್ಶನ ನಮೂನೆ | • ಸಾಫ್ಟ್‌ವೇರ್ ಕೌಶಲ್ಯ ಮತ್ತು ಹೊಸ ನಿಯಮಗಳು ಮತ್ತು ನಿಬಂಧನೆಗಳ ಪರಿಚಯವನ್ನು ನವೀಕರಿಸುವ ತುರ್ತು ಅಗತ್ಯ<br>• ಹಲವಾರು ಪ್ರಮುಖ ಸ್ಥಾನಗಳು, ವಿಶೇಷವಾಗಿ ಮಾಹಿತಿ ನಿರ್ವಹಣಾ ಪದ್ಧತಿಗೆ ಸಂಬಂಧಿಸಿದವುಗಳು ಖಾಲಿ ಇರುತ್ತವೆ ಅಥವಾ ಪೂರ್ಣಾವಧಿ ಆಧಾರದ ಮೇಲೆ ಇಲ್ಲ |
| ಆರ್ಥಿಕ ಸಾಕ್ಷರತೆಯ ಅಡಚಣೆಗಳು– ಪ್ರಾದೇಶಿಕ ಮತ್ತು ಸಾಮಾಜಿಕ ಗುಂಪುಗಳು | ಜಿಲ್ಲೆಗಳು, ಫಲಾನುಭವಿಗಳು | ಸಂದರ್ಶನ ನಮೂನೆ, ಕೇಂದ್ರೀಕೃತ ಗುಂಪು ಚರ್ಚೆ ಕಛೇರಿಯಲ್ಲಿ ಪರಿಶೀಲನೆ | • ಯಾವುದೇ ನಿರ್ದಿಷ್ಟ ಗುಂಪು, ಲಿಂಗ ಅಥವಾ ಪ್ರದೇಶಗಳಿಗೆ ಸೀಮಿತವಾಗಿರದ ಅಡಚಣೆಗಳು<br>• ಹಣಕಾಸಿನ ಸಾಕ್ಷರತೆ ಮತ್ತು ಇದನ್ನು ಮೊಬೈಲ್ ಫೋನ್‌ಗಳ ಬಳಕೆಯೊಂದಿಗೆ ಒದಗಿಸುವ ಅಗತ್ಯವಿದೆ. |

## 6.2 ಸೂಚಕಗಳ ಮಾತೃಕೆ ಮತ್ತು ಮೌಲ್ಯಮಾಪನ ಪ್ರಶ್ನೆಗಳಿಗೆ ವಿಧಾನಗಳು

| ಕ್ರ. ಸಂ. | ಮೌಲ್ಯಮಾಪನ ಪ್ರಶ್ನೆಗಳು | ಅಧ್ಯಯನದ ಶೋಧನೆಗಳು |
|---|---|---|
| 1 | ಅಧ್ಯಾಯ 8.7ರ ಪ್ರಕಾರ ಕೂಲಿ ಪಾವತಿಯಡಿಯಲ್ಲಿ, ಎಲ್ಲಾ 3 ವರ್ಗದ ವಹಿವಾಟುಗಳನ್ನು ಗ್ರಾಮ ಪಂಚಾಯಿತಿಗಳು/ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಸರಿಯಾಗಿ ಅನುಸರಿಸುತ್ತಿವೆಯೇ? ಇಲ್ಲದಿದ್ದರೆ, ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಕಂಡುಬರುವ ವಿಚಲನಗಳು ಯಾವುವು? ದಯವಿಟ್ಟು ವಿಸ್ತಾರವಾಗಿ ತಿಳಿಸಿರಿ. | ಕಡ್ಡಾಯ ವಹಿವಾಟನ್ನು ಬದಲಾವಣೆ ಮಾಡಲಾಗಿಲ್ಲ. ಆದಾಗ್ಯೂ, ಯೋಜನೆಯ ಭೌತಿಕ ಕೆಲಸಗಳು ಪೂರ್ಣಗೊಂಡ ನಂತರ ನಿಧಿ ವರ್ಗಾವಣೆ ಆದೇಶದ ಹಂತಗಳನ್ನು ತ್ವರಿತಗೊಳಿಸಬೇಕಾಗಿದೆ. |
| 2 | ವಿಳಂಬವನ್ನು ತಪ್ಪಿಸಲು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಸಾಫ್ಟ್‌ವೇರ್ ನಿರ್ವಹಿಸಲು ಎಲ್ಲ ಸಿಬ್ಬಂದಿ ಇದ್ದಾರೆಯೇ? ಇಲ್ಲದಿದ್ದರೆ, ಏಕೆ? ಹೌದು ಎಂದಾದರೆ ಇವರೆಲ್ಲರೂ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಎಲ್ಲಾ ಅಂಶಗಳ ಬಗ್ಗೆ ತರಬೇತಿ ಪಡೆದಿದ್ದಾರೆಯೇ? | • ಅವು ಸ್ಥಳದಲ್ಲಿದ್ದು ತಾಂತ್ರಿಕವಾಗಿ ಸಮರ್ಥವಾಗಿವೆ, ಆದರೆ ಕೇಂದ್ರೀಕೃತವಾಗಿದ್ದು ಹೆಚ್ಚು ಬಳಕೆಯಾಗುತ್ತಿಲ್ಲ ಅಂದರೆ, ಅಗತ್ಯವಿರುವ ಕ್ಷೇತ್ರ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಗಳಿಗಿಂತ ಜಿಲ್ಲಾ ಪಂಚಾಯಿತಿ ಮತ್ತು ಕ್ಷೇತ್ರ ಪಂಚಾಯಿತಿ ಮಟ್ಟಗಳಲ್ಲಿ ಕೇಂದ್ರೀಕೃತವಾಗಿರುತ್ತದೆ.<br>• ಸಿಬ್ಬಂದಿ ಸ್ಥಳ ನಿಯುಕ್ತಿಗಳು ಜಿಲ್ಲೆಯ ಸಾಮಾನ್ಯ ವಹಿವಾಟಿನ ಪ್ರಮಾಣಕ್ಕೆ ಅನುಗುಣವಾಗಿರಬೇಕು, ಆದ್ದರಿಂದ ಜಿಲ್ಲೆ ಅಥವಾ ರಾಜ್ಯ ಕೇಂದ್ರ ಕಚೇರಿಗಳಲ್ಲಿ ಅಥವಾ ಉತ್ತಮ ನಗರಗಳಲ್ಲಿ 'ಸಂತೋಷದ ಸ್ಥಳ ನಿಯುಕ್ತಿಗಳನ್ನು' ಕಡಿಮೆ ಮಾಡಬೇಕಾಗಿರುತ್ತದೆ. |
| 3 | ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಎದುರು ಪೂರ್ವ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅವಧಿಯಲ್ಲಿ ಕೂಲಿಯನ್ನು ಬಿಡುಗಡೆ ಮಾಡಲು ತಗುಲಿದ ವೆಚ್ಚ ಮತ್ತು ಸಮಯ ಎಷ್ಟು? | • ಬ್ಯಾಂಕ್ ಅಥವಾ ಎಟಿಎಂ ಕಿಯೋಸ್ಕ್‌ಳಿಗೆ ಭೇಟಿ ನೀಡುವ ಆವರ್ತನವು ಗಣನೀಯವಾಗಿ 6 ಅಥವಾ ಹೆಚ್ಚಿನ ಬಾರಿಯಿಂದ 3 ಅಥವಾ 4 ಬಾರಿ ಕಡಿಮೆಯಾಗಿರುತ್ತದೆ.<br>• ಪ್ರತಿ ಭೇಟಿಗೆ ಸರಾಸರಿ ರೂ.65ಗಳಿಂದ ಈಗ ಸರಾಸರಿ ರೂ.40ರಿಂದ ರೂ.42ಕ್ಕೆ ಇಳಿದಿರುತ್ತದೆ. |
| 4 | ಗ್ರಾಮ ಪಂಚಾಯಿತಿಗಳು/ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಿ ಕುಂದುಕೊರತೆ ನಿವಾರಣಾ ಕಾರ್ಯವಿಧಾನ ಯಾವುದು? ಬೇಡಿಕೆ ನೋಂದಣಿ, ಅಳತೆ, ಕೂಲಿ ಲೆಕ್ಕಾಚಾರ, ನಿಧಿ ವರ್ಗಾವಣೆ ಆದೇಶ ಹೊರಡಿಸುವುದು ಮತ್ತು ಫಲಾನುಭವಿಗಳ ಖಾತೆಗಳಿಗೆ | • ಈ ಸಮಸ್ಯೆಗಳ ಗುಂಪಿನ ದತ್ತಾಂಶ ತರುವುದು ಸುಲಭವಲ್ಲ.<br>• ವೆಬ್ ಮಾಸ್ಟರ್ ಕುಂದುಕೊರತೆಗಳಿಗೆ ಸಂಬಂಧಿಸಿದ ಪುಟಗಳನ್ನು ಸರಿಪಡಿಸುವ ಅಗತ್ಯವಿದೆ.<br>• ದತ್ತಾಂಶವನ್ನು ಸಂಕಲಿಸಲಾಗಿದ್ದು ಸಂಚಿತ ರೀತಿಯಲ್ಲಿ ಇರಿಸಲಾಗುತ್ತದೆ, ವರ್ಷವಾರು ಅಲ್ಲ,<br>• ವೈಯಕ್ತಿಕ ಅಧಿಕಾರಿಗಳಿಗೆ ಸಂಬಂಧಿಸಿದ ಕುಂದುಕೊರತೆಗಳು, |

| | | |
|---|---|---|
| | ಜಮಾ ಮಾಡುವ ಕುರಿತು ಎಷ್ಟು ದೂರುಗಳು ಬಂದಿವೆ? ಸಂಬಂಧಪಟ್ಟ ಅಧಿಕಾರಿಗಳು/ರಚಿಸಲಾದ ಸಮಿತಿಗಳು ಈ ಕುಂದುಕೊರತೆಗಳ ಪರಿಹಾರಕ್ಕಾಗಿ ಏನು ಕ್ರಮ ಕೈಗೊಂಡಿರುತ್ತವೆ? | ಅನಾಮಧೇಯವಾದವು ಅಥವಾ ಸಮರ್ಪಕ ಸಾಕ್ಷ್ಯಗಳಿಂದ ಬೆಂಬಲಿಸದ ಆರೋಪಗಳನ್ನು ಮಾಡಿರುವುದು.<br>• ಮುಕ್ತವಾಗಿ ಏನು ನೋಡಬಹುದೆಂಬುದನ್ನು ಆಧರಿಸಿ, ಕೂಲಿ ವಿಳಂಬ, ಪರಿಹಾರವನ್ನು ಪಾವತಿಸದಿರುವುದು ಅಥವಾ ಕೂಲಿ ಲೆಕ್ಕಾಚಾರಗಳ ಬಗ್ಗೆ ಅಷ್ಟೇನೂ ಇರುವುದಿಲ್ಲ.<br>• ಸಮಿತಿಗಳನ್ನು ರಚಿಸಲಾಗಿದೆ, ಆದರೆ ಅವುಗಳ ಸಭೆಯ ಆವರ್ತನ ಸ್ಪಷ್ಟವಾಗಿಲ್ಲ. |
| 5 | ವಿಳಂಬವಾದ ಪಾವತಿಗಳಿಗಾಗಿ ದೂರುಗಳಿದ್ದರೆ, ವಿಳಂಬವಾದ ಪಾವತಿಗಳಿಗೆ ಎಷ್ಟು ಕಾರ್ಮಿಕರು ಪರಿಹಾರವನ್ನು ಪಡೆದಿದ್ದಾರೆ? ಪಾವತಿ ವಿಳಂಬವಾಗಲು ಕಾರಣಗಳು ಯಾವುವು? ಸಂಸ್ಥೆ/ಅಧಿಕಾರಿಯಿಂದ ವಿಳಂಬ ಸಂಭವಿಸಿದಲ್ಲಿ, ವಿಳಂಬಕ್ಕೆ ಕಾರಣವಾದ ಸಂಸ್ಥೆ/ ಅಧಿಕಾರಿಯಿಂದ ಮೊತ್ತವನ್ನು ವಸೂಲಿ ಮಾಡಿದೆಯೇ? ಹೌದು, ಎಂದಾದರೆ ಪರಿಹಾರದ ಪ್ರಮಾಣ ಎಷ್ಟು? | ▪ ಕ್ಷೇತ್ರ ಮಟ್ಟದಲ್ಲಿ ಕಾರ್ಮಿಕರು ಅಥವಾ ಸಾಮಗ್ರಿ ಪೂರೈಕೆದಾರರು ಯಾವುದೇ ದೂರುಗಳನ್ನು ಸಲ್ಲಿಸಿದ್ದಾರೋ ಇಲ್ಲವೋ ಎಂಬ ಬಗ್ಗೆ ಮುಂದೆ ಬಂದಿರುವುದಿಲ್ಲ. ಮತ್ತು ಯಾವುದೇ ಕುಂದುಕೊರತೆಗಳನ್ನು ಔಪಚಾರಿಕವಾಗಿ ನೋಂದಾಯಿಸಲಾಗಿಲ್ಲ.<br>▪ ಲಭ್ಯವಿರುವ ದತ್ತಾಂಶದಿಂದ, ಕೆಲಸ ಬಯಸುವ ಮತ್ತು ಕೆಲಸ ನೀಡದ ಕಾರ್ಮಿಕರಿಗೆ ಪಾವತಿಸುವ ನಿರುದ್ಯೋಗ ಭತ್ಯೆಯ ಸುಮಾರು 50ಕ್ಕಿಂತ ಕಡಿಮೆ ಪ್ರಕರಣಗಳು ಮಾತ್ರ ಇರುತ್ತವೆ. ಕೊಟ್ಟಿರುವ ಹಣದ ದತ್ತಾಂಶ ಪೋರ್ಟಲ್‌ನಲ್ಲಿ ಲಭ್ಯವಿಲ್ಲ.<br>• ಕುಂದುಕೊರತೆಗಳನ್ನು ನಿಭಾಯಿಸಲು ಕೂಲಿ ಹಕ್ಕುಗಳನ್ನು ತಿರಸ್ಕರಿಸಿದ ಅಥವಾ ವಿಳಂಬಗೊಳಿಸಿದ ಆಧಾರದ ಮೇಲೆ ಹೆಚ್ಚು ಪಾರದರ್ಶಕತೆ ಮತ್ತು ಹೊಣೆಗಾರಿಕೆ ಅಗತ್ಯವಿದೆ. |
| 6 | ನಿರುದ್ಯೋಗ ಭತ್ಯೆಗಾಗಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ಮತ್ತು ಎಷ್ಟು ಪಾವತಿಸಲಾಗಿದೆ? ಉದ್ಯೋಗವನ್ನು ಒದಗಿಸದಿರಲು ಕಾರಣಗಳೇನು? ವಿವರಗಳನ್ನು ನೀಡಿರಿ. | ಆರು ವರ್ಷಗಳ ಅವಧಿಯಲ್ಲಿ ಸುಮಾರು 30 ಅಥವಾ ಅದಕ್ಕಿಂತ ಹೆಚ್ಚು ಅರ್ಜಿಗಳು ಬಂದಿರುತ್ತವೆ, ಇವೆಲ್ಲವೂ ಅನುಕೂಲಕರವಾಗಿ ಇತ್ಯರ್ಥಗೊಂಡಿರುತ್ತವೆ. ಇವು ಮಾದರಿ ಜಿಲ್ಲೆಗಳಲ್ಲದ ಬೀದರ್, ಹಾವೇರಿ ಮತ್ತು ಹಾಸನ ಜಿಲ್ಲೆಗಳಿಂದ ಬಂದಿದ್ದು, ಒಂದು ಪ್ರಕರಣ ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಬಂದಿರುತ್ತದೆ. |

| | | |
|---|---|---|
| | ಮೇಲಿನ ಮಾದರಿ ಜಿಲ್ಲೆಗಳಲ್ಲಿ 2015–16ನೇ ಸಾಲಿಗೆ ಪಾವತಿಸಬೇಕಾದ ಪಾವತಿಗಳಿಗೆ ಕಾರಣಗಳು ಯಾವುವು? ದಯವಿಟ್ಟು ವಿವರಗಳನ್ನು ನೀಡಿರಿ. | ಈ ವರದಿಯಲ್ಲಿ ವಿವರಿಸಲಾಗಿರುತ್ತದೆ. ಸಂಕ್ಷಿಪ್ತವಾಗಿ ಇಲ್ಲಿ, ಸಾಕಷ್ಟು ಹಣ (5% ಕ್ಕಿಂತ ಕಡಿಮೆ), ನೈಸರ್ಗಿಕ ವಿಪತ್ತುಗಳು (<5%), ಮಾನ್ಯವಾಗಿಲ್ಲವೆಂದು ಹೇಳಲಾದ ಕೂಲಿಗಳು (60 ರಿಂದ 70% ನಡುವೆ), ಮತ್ತು ಇತರೆ ಕಾರಣ (20%) ಇವುಗಳಿಂದಾಗಿ ಉಂಟಾದ ಬಾಕಿ ಪಾವತಿಯನ್ನು ಪೋರ್ಟಲ್‌ನಲ್ಲಿ ಪಟ್ಟಿ ಮಾಡಲಾಗಿದೆ.<br>ಕೆಲವು ನಿಧಿ ವರ್ಗಾವಣೆ ಆದೇಶಗಳನ್ನು ಏಕೆ ಪ್ರಕ್ರಿಯೆಗೊಳಿಸಲಾಗಿಲ್ಲ ಅಥವಾ ಬಾಕಿ ಉಳಿಸಲಾಗಿದೆ ಎಂಬುದರ ಕುರಿತು ನೋಡಲ್ ಬ್ಯಾಂಕುಗಳು ಹೆಚ್ಚು ಮುಂಬರಬೇಕಾಗಿದೆ. |
| 8 | ಇದು ನಿಧಿ ನಿರ್ವಹಣೆಯನ್ನು ಎಷ್ಟರ ಮಟ್ಟಿಗೆ ಸುಧಾರಿಸಿದೆ? | ನಿಲುಗಡೆಯ ನಿಧಿಯನ್ನು ಗಮನಾರ್ಹವಾಗಿ ನಿರಾಕರಿಸಲಾಗಿದೆ. ಎಷ್ಟರಮಟ್ಟಿಗೆ ಅಂದರೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ನಂತರದ ವರ್ಷಗಳಲ್ಲಿ ಕೇಂದ್ರದಿಂದ ಪಡೆಯಬೇಕಾದ ದೊಡ್ಡ ಮೊತ್ತವಿರುತ್ತದೆ.<br>ಗಮನಾರ್ಹವಾಗಿ ಹೆಚ್ಚಿದ ನಿದರ್ಶನಗಳು ಮತ್ತು ಹಣದ ಮೊತ್ತವು ಋಣಾತ್ಮಕ ಆರಂಭಿಕ ಬಾಕಿಯೆಂದು ತೋರಿಸಲ್ಪಟ್ಟಿದ್ದು, ರಾಜ್ಯವು ಅದರದೇ ಹಣವು ಬಾಕಿ ಇರುವಾಗ ಕೇಂದ್ರದಿಂದ ಹಣ ಬರಲಿರುವುದನ್ನು ಸೂಚಿಸಿರುತ್ತದೆ. |
| 9 | ಇದು ಹಿಂದಿನ ವ್ಯವಸ್ಥೆಯ ಮೇಲಿರುವುದಕ್ಕಿಂತ ಎಷ್ಟರ ಮಟ್ಟಿಗೆ ಪಾರದರ್ಶಕತೆಯನ್ನು ತಂದಿದೆ? | ಪ್ರಭಾವಶಾಲಿಯಾಗಿ. 'ನಾಗರಿಕ' ಮತ್ತು ನಾಗರಿಕ ಸಮಾಜ ಕಾರ್ಯಕರ್ತರಿಂದ ಬಂದ ಹೆಚ್ಚಾದ ಪ್ರಶ್ನೆಗಳು ಅಥವಾ ಸ್ಪಷ್ಟೀಕರಣಗಳು ಇದನ್ನು ಸೂಚಿಸುತ್ತವೆ. ಆದಾಗ್ಯೂ, ವಿಳಂಬ ಪರಿಹಾರವನ್ನು ಇತ್ಯರ್ಥಪಡಿಸುವ ಆಧಾರದ ಮೇಲೆ ಹೆಚ್ಚಿನ ಪಾರದರ್ಶಕತೆಯ ಅಗತ್ಯವಿರುತ್ತದೆ ಅಥವಾ ನಿರುದ್ಯೋಗ ಭತ್ಯೆಯನ್ನು ನೀಡಬೇಕಾಗುತ್ತದೆ. |
| 10 | ಕ್ಷೇತ್ರ ಮಟ್ಟದ ಕಾರ್ಯಕರ್ತರು ಈ ವ್ಯವಸ್ಥೆಯಲ್ಲಿ ಎದುರಿಸುತ್ತಿರುವ ಅಡೆತಡೆಗಳು ಯಾವುವು? | ತಾಂತ್ರಿಕ ತೊಂದರೆಗಳು, ಸಾಫ್ಟ್‌ವೇರ್ ಸಮಸ್ಯೆಗಳು, ಕಂಪ್ಯೂಟರ್‌ಗಳ ಸ್ಥಗಿತ ಇತ್ಯಾದಿಗಳನ್ನು ಪರಿಹರಿಸಲು ಅಸಮರ್ಥತೆ.<br>ಪ್ರಕ್ರಿಯೆಯು ಬ್ಯಾಂಕ್ ಮಟ್ಟದಲ್ಲಿ ನಿಧಾನವಾಗುವುದರಿಂದ ವಿಳಂಬಕ್ಕೆ ಕಾರಣವಾಗಬಹುದು.<br>ಕ್ಷೇತ್ರ ಸಿಬ್ಬಂದಿಗೆ ನಿಯೋಜಿಸಲಾದ ಇತರ ಜವಾಬ್ದಾರಿಗಳು, ಒಂದು |

| | | |
|---|---|---|
| | | ಪಂಚಾಯತ್‌ನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಹೆಚ್ಚುವರಿ ಪ್ರಭಾರಗಳನ್ನು ಅಥವಾ ಎರಡು ಹೆಚ್ಚುವರಿ ಪ್ರಭಾರಗಳನ್ನು ನಿಯೋಜಿಸಿರುವುದರಿಂದ ನೀಡಲಾದ ಕೆಲಸವನ್ನು ನಿಭಾಯಿಸಲು ಅಸಮರ್ಥತೆ ಉಂಟಾಗಿರುವುದು. |
| 11 | ವಿಳಂಬವನ್ನು ಕಡಿಮೆ ಮಾಡಲು ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಲು ಏನು ಶಿಫಾರಸ್ಸು ಮಾಡಬೇಕು? | ವಿಳಂಬವನ್ನು ಕಡಿಮೆ ಮಾಡುವುದರಿಂದ, ಮಾಡಿದ ಪ್ರಗತಿಯನ್ನು ಸ್ಥಿರಗೊಳಿಸುವ ಸಮಸ್ಯೆಯನ್ನು ಬಗೆಹರಿಸುವುದು ಬಹಳ ಮುಖ್ಯವಾಗಿರುತ್ತದೆ.<br>ಕೂಲಿ ವಿತರಣೆಗಾಗಿ ತಂತ್ರಜ್ಞಾನ ಅನ್ವಯದಲ್ಲಿನ ಪ್ರಗತಿಯನ್ನು ಹೊಂದಿಸಲು ಮಾನವ ಸಾಮರ್ಥ್ಯಗಳನ್ನು ನವೀಕರಿಸಬೇಕಾಗಿರುತ್ತದೆ. |
| 12 | ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಹಣದ ದುರುಪಯೋಗವಾಗುವುದನ್ನು ಮತ್ತು ಒಳಗೊಳ್ಳುವ ಮಧ್ಯವರ್ತಿಯನ್ನು ಎಷ್ಟರ ಮಟ್ಟಿಗೆ ತಡೆಯಲಾಗುತ್ತದೆ? | ಎಟಿಎಂ ಅಥವಾ ಡೆಬಿಟ್ ಕಾರ್ಡ್‌ಗಳಿಗೆ ಸಾಲ ನೀಡುವುದು, ನೋಂದಾಯಿತ ಕಾರ್ಮಿಕರ ಪರವಾಗಿ ಉದ್ಯೋಗದ ಬೇಡಿಕೆಯನ್ನು ಸಲ್ಲಿಸಲು ಇತರರಿಗೆ ಅವಕಾಶ ನೀಡುವುದು.<br>ಪೂರ್ಣಗೊಂಡ ಕಾಮಗಾರಿಗಳ ಪರಿಶೀಲನೆ, ಅಳತೆಯ ಪುಸ್ತಕವನ್ನು ಭರ್ತಿ ಮಾಡುವುದು, ಕೂಲಿ ಬಿಲ್ಲುಗಳ ಪ್ರಮಾಣೀಕರಣ ಮತ್ತು ನಿಧಿ ವರ್ಗಾವಣಾ ಆದೇಶಗಳನ್ನು ಅಪ್‌ಲೋಡ್ ಮಾಡಲು ಕ್ಷೇತ್ರ ಸಿಬ್ಬಂದಿಗೆ ಪಾವತಿಸಬೇಕಾದ ಕಮಿಶನ್ ನೀಡುವುದು.<br>ಹಿಂದಿನ ಗುತ್ತಿಗೆದಾರರ ಬದಲಿಗೆ ಹೊಸ 'ಮಧ್ಯವರ್ತಿಗಳ' ಹೊರಹೊಮ್ಮುವಿಕೆ ತಡೆಗಟ್ಟುವುದು. |

# 7. ಮಾದರಿ ಮತ್ತು ಮಾದರಿ ವಿನ್ಯಾಸ ಮಾದರಿ ವೈಧಾನಿಕತೆ

ಮಾದರಿ ವಿನ್ಯಾಸ ಮತ್ತು ಪ್ರಸ್ತಾಪಿಸಲಾದ ವೈಧಾನಿಕತೆಯು ಅಧ್ಯಯನದ ಮೌಲ್ಯಮಾಪನ ವಿನ್ಯಾಸಕ್ಕೆ ಅನುಗುಣವಾಗಿರುತ್ತದೆ. 30 ಜಿಲ್ಲೆಗಳಲ್ಲಿ 8 ಜಿಲ್ಲೆಗಳನ್ನು ಪ್ರತಿ ಕಂದಾಯ ವಿಭಾಗಕ್ಕೆ 2 ಜಿಲ್ಲೆಗಳ ಪ್ರಕಾರವಾಗಿ ಆಯ್ಕೆ ಮಾಡಲಾಗಿರುತ್ತದೆ. ಮಾದರಿ ಉದ್ದೇಶಕ್ಕಾಗಿ ಜಿಲ್ಲೆಗಳನ್ನು ಪ್ರತಿ ವಿಭಾಗದಲ್ಲಿ ವರ್ಣಮಾಲೆಯಂತೆ ಜೋಡಿಸಲಾಗಿತ್ತು ಮತ್ತು ನಂತರ ಪ್ರತಿ 3 ಮತ್ತು 6ನೇ ಸಂಖ್ಯೆಯ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಪ್ರತಿ ವಿಭಾಗಕ್ಕೂ ಪ್ರತ್ಯೇಕ ಯಾದೃಚ್ಛಿಕ ಸಂಖ್ಯೆಯನ್ನು ನೀಡಲಾಗಿರುತ್ತದೆ, ಅದು 3ನೇ ಮತ್ತು 6ನೇ ನಮೂದನೆಯನ್ನು ಆಯ್ಕೆ ಮಾಡಿದ ಪ್ರಾರಂಭಿಕ ಸಂಖ್ಯೆಯಾಗಿರುತ್ತದೆ.

**ಕೋಷ್ಟಕ 3: ಮಾದರಿ ಜಿಲ್ಲೆಗಳಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪ್ರಮುಖ ಲಕ್ಷಣಗಳು**

| ಜಿಲ್ಲೆ | ತಾಲ್ಲೂಕು ಪಂಚಾಯಿತಿಗಳ ಸಂಖ್ಯೆ | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | ಆಯ್ಕೆಯಾದ ಗ್ರಾಮ ಪಂಚಾಯಿತಿಗಳ ಸಂಖ್ಯೆ | 2018–19ರಲ್ಲಿ ವಿತರಿಸಿದ ಒಟ್ಟು ಉದ್ಯೋಗ ಕಾರ್ಡ್‌ಗಳು | 2018–19ರಲ್ಲಿ ಕುಟುಂಬಗಳ ಬೇಡಿಕೆಯ ವಿರುದ್ಧ ಒದಗಿಸಿದ ಉದ್ಯೋಗ % | 2015–16ರಿಂದ ಕೆಲಸದ ಪೂರ್ಣತೆಯ ದರ | 2018–19ನೇ ವರ್ಷದಲ್ಲಿ ಬಾಕಿಯನ್ನು ಪಾವತಿಸಬೇಕಾಗಿರುವುದು [ರೂ. ಲಕ್ಷಗಳಲ್ಲಿ] |
|---|---|---|---|---|---|---|---|
| ಚಿಕ್ಕಬಳ್ಳಾಪುರ | 6 | 157 | 38 | 177546 | 85.96 | 75.44 | 1341.82 |
| ಕೋಲಾರ | 5 | 156 | 34 | 119098 | 96.32 | 84.09 | 895.23 |
| ದಕ್ಷಿಣ ಕನ್ನಡ | 5 | 230 | 48 | 133858 | 89.43 | 81.93 | 1259.32 |
| ಮಂಡ್ಯ | 7 | 234 | 47 | 246148 | 83.92 | 78.77 | 1917.96 |
| ಉತ್ತರ ಕನ್ನಡ | 11 | 231 | 45 | 199568 | 90.05 | 74.56 | 5049.57 |
| ಧಾರವಾಡ | 5 | 144 | 29 | 270725 | 91.57 | 86.24 | 2640.99 |
| ಕಲಬುರಗಿ | 7 | 264 | 51 | 159965 | 89.76 | 80.19 | 808.21 |
| ಯಾದಗಿರಿ | 3 | 123 | 24 | 162936 | 91.18 | 81.92 | 1900.57 |
| **ಒಟ್ಟು** | 49 | 1539 | 316 | 1469844 | 89.43 | 79.16 | 15813.67 |

ಮೂಲ: http://mnregaweb4.nic.in/netnrega/Citizen_html/financialstatement.aspx

ಹೀಗಾಗಿ, ಮೌಲ್ಯಮಾಪನಕ್ಕಾಗಿ ಜಿಲ್ಲೆಗಳನ್ನು ಆಯ್ಕೆ ಮಾಡಲು ವ್ಯವಸ್ಥಿತ ಆವರ್ತಕ ಯಾದೃಚ್ಛಿಕ ಮಾದರಿ ವಿಧಾನವನ್ನು ಬಳಸಲಾಗಿರುತ್ತದೆ. ಮಾದರಿ ಗ್ರಾಮ ಪಂಚಾಯಿತಿಗಳ ಆಯ್ಕೆಗೂ ಇದೇ ವಿಧಾನವನ್ನು ಬಳಸಲಾಗುತ್ತಿತ್ತು, ಆದರೆ ಗ್ರಾಮ ಪಂಚಾಯಿತಿಗಳ ಮಾದರಿಯನ್ನು ಪಡೆಯಲು ಪ್ರತಿಯೊಂದು ಬ್ಲಾಕ್‌ಗಳನ್ನು (ತಾಲ್ಲೂಕುಗಳು) ಸೇರಿಸಲಾಗಿರುತ್ತದೆ. ರಾಜ್ಯದಲ್ಲಿ 6019 ಗ್ರಾಮ ಪಂಚಾಯಿತಿಗಳಿವೆ. ಈ ಪೈಕಿ 5% (300) ಮೌಲ್ಯಮಾಪನ ಮಾಡಬೇಕಿತ್ತು. ಕೋಷ್ಟಕದಲ್ಲಿ ತೋರಿಸಿರುವಂತೆ 8 ಜಿಲ್ಲೆಗಳ ಜನಸಂಖ್ಯೆಗೆ ಅನುಗುಣವಾಗಿ 1539 ಜಿಪಿಗಳಲ್ಲಿ 316 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ

ಮಾಡಲಾಗಿರುತ್ತದೆ, ಇದು ಮಾದರಿ ತಾಲ್ಲೂಕು ಪಂಚಾಯಿತಿಗಳ 20% ಆಗಿರುತ್ತದೆ. ಇವುಗಳನ್ನು ವರ್ಣಮಾಲೆಯಂತೆ ಜೋಡಿಸುವ ಮೂಲಕ ಯಾದೃಚ್ಛಿಕವಾಗಿ ಆಯ್ಕೆಮಾಡಲಾಗಿರುತ್ತದೆ. ಹೀಗೆ ಆಯ್ಕೆ ಮಾಡಿದ ಎಲ್ಲಾ ಕಾಮಗಾರಿಗಳಿಗೆ ಮಾಡಿದ ಪಾವತಿಯನ್ನು ಮೌಲ್ಯಮಾಪನ ಮಾಡಬೇಕಾಗಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಎಲ್ಲಾ ಅಂಶಗಳ ಬಗ್ಗೆ ಎಲ್ಲಾ ಪಾಲುದಾರರೊಂದಿಗೆ ಕೇಂದ್ರೀಕೃತ ಗುಂಪು ಚರ್ಚೆಗಳನ್ನು ನಡೆಸಲಾಗಿರುತ್ತದೆ ಮತ್ತು ಪಾವತಿ ವಿನ್ಯಾಸ ಮತ್ತು ವಿತರಣೆಯಲ್ಲಿ ಸುಧಾರಣೆ, ಯೋಜನೆ ಅನುಷ್ಠಾನದಲ್ಲಿ ಸುಧಾರಣೆಗಾಗಿ ಅವರ ದೃಷ್ಟಿಕೋನವನ್ನು ತಿಳಿಸಲಾಗಿರುತ್ತದೆ.

### 7.1 ದತ್ತಾಂಶ ವಿಶ್ಲೇಷಣೆಯ ವಿಧಾನ

"ಸಾಮಾಜಿಕ ವಿಜ್ಞಾನಕ್ಕಾಗಿ ಸಂಖ್ಯಾಶಾಸ್ತ್ರೀಯ ಪ್ಯಾಕೇಜ್" ಆವೃತ್ತಿ 16ನ್ನು ಬಳಸಿ ದತ್ತಾಂಶ ನಮೂದು ಮತ್ತು ವಿಶ್ಲೇಷಣೆಯನ್ನು ಮಾಡಲಾಗಿರುತ್ತದೆ. ಡೌನ್‌ಲೋಡ್ ಮಾಡಲಾದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ವೆಬ್ ಪೋರ್ಟಲ್‌ನಿಂದ ಪ್ರವೇಶಿಸಲಾದ ಅಧಿಕೃತ ಅಂಕಿಅಂಶಗಳನ್ನು ಎಂಎಸ್ ಎಕ್ಸೆಲ್ ಸ್ವರೂಪಕ್ಕೆ ಪರಿವರ್ತಿಸಲಾಗಿರುತ್ತದೆ ಮತ್ತು ಅಧ್ಯಯನಕ್ಕಾಗಿ ವಿವಿಧ ಸೂಚಕಗಳ ಪ್ರವೃತ್ತಿಗಳು ಮತ್ತು ಘಟನೆಗಳಿಗಾಗಿ ವಿಶ್ಲೇಷಿಸಲಾಗಿರುತ್ತದೆ. ದತ್ತಾಂಶವನ್ನು ಅನುಪಾತಗಳು ಮತ್ತು ಶೇಕಡಾವಾರುಗಳಾಗಿ ಮತ್ತು ಸಂಬಂಧಿತ ಅಸ್ಥಿರಗಳ ಪರಸ್ಪರ ಸಂಬಂಧಗಳಾಗಿ ಪ್ರಸ್ತುತಪಡಿಸಲಾಗಿರುತ್ತದೆ. ಪ್ರವೃತ್ತಿ ವಿಶ್ಲೇಷಣೆಗೆ ಕೋಷ್ಟಕ ಮತ್ತು ಚಿತ್ರಾತ್ಮಕ ಪ್ರಾತಿನಿಧ್ಯವನ್ನು ಬಳಸಲಾಗಿರುತ್ತದೆ.

ಇದಲ್ಲದೆ, ಪ್ರತಿಲಿಪಿಗಳನ್ನು ಇಂಗ್ಲೀಷ್‌ಗೆ ಅನುವಾದಿಸಿದ ನಂತರ ಮತ್ತು ಸಾಮಾನ್ಯ ವಿಷಯಾಧಾರಿತ ವಿಚಾರಗಳನ್ನು ಸಂಕೇತಗೊಳಿಸಿದ ನಂತರ, ಪ್ರತಿಕ್ರಿಯೆದಾರರುಗಳಾದ್ಯಂತ ಕೇಂದ್ರೀಕೃತ ಗುಂಪು ಚರ್ಚೆಗಳ ವಿಷಯ ವಿಶ್ಲೇಷಣೆ ನಡೆಸಲಾಗಿರುತ್ತದೆ.

## 7.2 ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಕೂಲಿ ಪಾವತಿ ವಿಳಂಬದ ಬಗ್ಗೆ ಸಾಹಿತ್ಯವು ಏನು ಹೇಳುತ್ತದೆ?

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ಭಾರತದಲ್ಲಿ ಹೊಸ ಹಾದಿಯೆಡೆಗೆ ಸಾಗುವ ಶಾಸನದ ಫಲಿತಾಂಶವಾಗಿರುತ್ತದೆ. ಮೂಲತಃ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಎಂದು ಇದನ್ನು ಜಾರಿಗೆ ತರಲಾಗಿರುತ್ತದೆ. ಇದನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಎಂದು ಮರುನಾಮಕರಣ ಮಾಡಲಾಗಿರುತ್ತದೆ. ಕೌಶಲ್ಯರಹಿತ ಅಥವಾ ಅರೆ–ನುರಿತ ಗ್ರಾಮೀಣ ಕುಟುಂಬಗಳಿಗೆ ಜೀವನೋಪಾಯದ ಭದ್ರತಾ ಅವಕಾಶಗಳನ್ನು ಬಲಪಡಿಸುವ ಉದ್ದೇಶದಿಂದ, ಈ ಅಧಿನಿಯಮವು ವಯಸ್ಕ ಸದಸ್ಯರಿಗೆ ಕ್ಯಾಲೆಂಡರ್ ವರ್ಷದಲ್ಲಿ ಗರಿಷ್ಠ 100 ದಿನಗಳವರೆಗೆ ಉದ್ಯೋಗವನ್ನು ಖಾತರಿಪಡಿಸುತ್ತದೆ. ಈ ಅಧಿನಿಯಮವು ಫೆಬ್ರವರಿ 2, 2006 ರಲ್ಲಿ ಜಾರಿಗೆ ಬಂದಿರುತ್ತದೆ. ಈ ಯೋಜನೆಯನ್ನು ಹಂತಹಂತವಾಗಿ ಪರಿಚಯಿಸಲಾಗಿದ್ದು, ಈ ರೀತಿಯಾಗಿ ಮೊದಲ ಹಂತದಲ್ಲಿ ದೇಶದ 200 ಅತ್ಯಂತ ಹಿಂದುಳಿದ ಜಿಲ್ಲೆಗಳನ್ನು ಗುರಿಯಾಗಿರಿಸಿಕೊಳ್ಳಲಾಯಿತು. ಎರಡನೇ ಹಂತದಲ್ಲಿ, ಅಂದರೆ 2007–18ರಲ್ಲಿ ಹೆಚ್ಚುವರಿ 130 ಜಿಲ್ಲೆಗಳನ್ನು ಸೇರಿಸಲಾಯಿತು. ಏಪ್ರಿಲ್ 2008 ರ ಹೊತ್ತಿಗೆ ದೇಶದ ಉಳಿದ ಭಾಗಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ

ಅಧಿನಿಯಮದ ಅಡಿಯಲ್ಲಿ ತರಲಾಯಿತು. ದೇಶದ ಸಂಪೂರ್ಣ ವ್ಯಾಪ್ತಿಗೆ ಈ ಯೋಜನೆಯು ಅನ್ವಯಿಸಿ ಹನ್ನೊಂದು ವರ್ಷಗಳು ಕಳೆದಿವೆ[1]

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ಕೇವಲ ದೇಶದೊಳಗೆ ಮಾತ್ರವಲ್ಲದೆ ವಿಶ್ವಾದ್ಯಂತ ಅತಿದೊಡ್ಡ ವಿದ್ವತ್ಪೂರ್ಣ ಮತ್ತು ನೀತಿ ಅಧ್ಯಯನಗಳ ಆಸಕ್ತಿಯನ್ನು ಸೆಳೆದ ವಿಷಯಗಳಲ್ಲಿ ಒಂದಾಗಿರುತ್ತದೆ. ಈ ಯೋಜನೆಯನ್ನು ವಿಶ್ವದ ಅತ್ಯಂತ ಪ್ರಸಿದ್ಧ ಸಾಮಾಜಿಕ ಭದ್ರತಾ ಯೋಜನೆಗಳ ಒಕ್ಕೂಟದಲ್ಲಿ ಸೇರಿಸಲಾಗಿದ್ದು ಇದು ಅತಿದೊಡ್ಡ ಸಾಮಾಜಿಕವಾಗಿ ಅಂತರ್ಗತ ನೀತಿಯ ವಿಶಿಷ್ಟತೆಯನ್ನು ಹೊಂದಿರುತ್ತದೆ, ಪ್ರಪಂಚದ ಉಳಿದ ಭಾಗಗಳಲ್ಲಿ ಒಂದು ಅಥವಾ ಇನ್ನೊಂದು ಅಂಶವನ್ನು ಹೊರಗಿಡಲಾಗುತ್ತದೆ. ಉದಾಹರಣೆಗೆ, ಬಾಂಗ್ಲಾದೇಶದಲ್ಲಿ ಸಮಾನವಾಗಿ ಹೆಸರಾಂತ ಯೋಜನೆಯು ಮಹಿಳೆಯರನ್ನು ಮಾತ್ರ ಗುರಿಯಾಗಿರಿಸಿಕೊಂಡರೆ, ಬೇರೆಡೆ ಇದನ್ನು ಜನಾಂಗೀಯ ಗುಂಪು, ವಲಸಿಗರು ಅಥವಾ ಪೌರತ್ವಕ್ಕೆ ಸೀಮಿತಗೊಳಿಸಬಹುದು. ಭಾರತದ ಜನಸಂಖ್ಯೆಯ ಗಾತ್ರವನ್ನು ಗಮನಿಸಿದರೆ, ಈ ಯೋಜನೆಯನ್ನು ವಿಶ್ವದ ಅತಿದೊಡ್ಡ ಉದ್ಯೋಗಿಗಳ ಹಕ್ಕು ಆಧಾರಿತ ಕಾರ್ಯಕ್ರಮ (ಭಾರತ ಸರ್ಕಾರ, 2016) ಎಂದು ಪ್ರಶಂಸಿಸಲಾಗಿರುತ್ತದೆ. ಯೋಜನೆಯ ಸಾಹಿತ್ಯವು ಎರಡೂ ಕಡೆಗಳಲ್ಲಿ ಸಮಾನ ಕ್ರಮಗಳಲ್ಲಿದೆ. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಮತ್ತು ಮಹಿಳೆಯರ ಸಬಲೀಕರಣದ ಬೃಹತ್ ಮೂಲದ ಆಧಾರವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದವರನ್ನು ಇದು ಒಳಗೊಂಡಿರುತ್ತದೆ ಎಂದು ಅದರ ಸಾಧನೆಯನ್ನು ಶ್ಲಾಘಿಸುತ್ತಿದ್ದರೆ ಇನ್ನೊಂದು ದಿಕ್ಕಿನಲ್ಲಿ ಇದು ಅತ್ಯಂತ ವಿಮರ್ಶಾತ್ಮಕವಾಗಿದೆ. ಅಧಿಕಾರದಲ್ಲಿರದ ರಾಜಕೀಯ ಪಕ್ಷಗಳು ಸಹ ಗ್ರಾಮೀಣ ಸಮಾಜದಲ್ಲಿ ಯಾವುದೇ ಶಾಶ್ವತ ಆಸ್ತಿಗಳಿಗೆ ಕೊಡುಗೆ ನೀಡದೆ ಈ ಕಾರ್ಯಕ್ರಮವು ಸಂಪನ್ಮೂಲಗಳ ಮೇಲೆ ದೊಡ್ಡ ಹರಿವನ್ನುಂಟುಮಾಡಿದೆ ಎಂದು ಆರೋಪಿಸಿರುತ್ತಾರೆ. ಆದರೆ ಅವರು ಅಧಿಕಾರದಲ್ಲಿದ್ದ ಕೂಡಲೇ ಅವರೂ ಸಹ ಅವರ ಹಿಂದಿನವರಂತೆ ಈ ಕಾರ್ಯಕ್ರಮದ ಪ್ರಬಲ ಚಾಂಪಿಯನ್‌ಗಳಾಗುತ್ತಾರೆ.

ಭ್ರಷ್ಟಾಚಾರಗಳಿಂದಾಗಿ ಮತ್ತು ರಾಜಕೀಯ ಮುಖಂಡರು ಹಾಗೂ ಭ್ರಷ್ಟ ಅಧಿಕಾರಿಗಳ ನಡುವಿನ ಅನ್ಯಾಯದ ಸಂಬಂಧದಿಂದಾಗಿ ಪಾರದರ್ಶಕತೆ, ಹೊಣೆಗಾರಿಕೆ ಇಲ್ಲದಿರುವುದು ಮತ್ತು ಹಣಕಾಸಿನ ದುರುಪಯೋಗದ ಸ್ಥಿತಿಯಲ್ಲಿ ಈ ಕಾರ್ಯಕ್ರಮದ ಬಗ್ಗೆ ಅತ್ಯಂತ ಪ್ರಬಲ ಟೀಕೆಗಳಿವೆ (ನೋಡಿರಿ, ಜೆಂಕಿನ್ಸ್ ಮತ್ತು ಮ್ಯಾನರ್ 2017).

ಕಾರ್ಯಕ್ರಮದ ತಾಂತ್ರಿಕ ಮೌಲ್ಯಮಾಪನ ಎಂದು ಅರ್ಥವಲ್ಲ, ಜೆಂಕಿನ್ಸ್ ಮತ್ತು ಮ್ಯಾನರ್ ಅವರ ಕೆಲಸವು ಕಾರ್ಯಕ್ರಮದ ಹಿಂದಿನ ರಾಜಕೀಯ ಉದ್ದೇಶಗಳನ್ನು ನೋಡುತ್ತದೆ. ಈ ಕಾರ್ಯಕ್ರಮವು ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ರಾಜಕೀಯ ಕುಶಲತೆಯ ಅತ್ಯುತ್ತಮ ಉದಾಹರಣೆಯಾಗಿದೆ ಎಂದು ಅವರ ಬರವಣಿಗೆಗಳು ಆರೋಪಿಸುತ್ತವೆ. ಈ ಕಾರ್ಯಕ್ರಮವು

---

[1] *ಮೊದಲ ಹಂತದಲ್ಲಿ (ಬೀದರ್, ಚಿತ್ರದುರ್ಗ, ದಾವಣಗೆರೆ, ಕಲಬುರಗಿ ಮತ್ತು ರಾಯಚೂರು) ಕರ್ನಾಟಕ ರಾಜ್ಯವು ಈ ಯೋಜನೆಯಡಿ ಐದು ಜಿಲ್ಲೆಗಳನ್ನು ಹೊಂದಿತ್ತು. ಈ ಅಧ್ಯಯನದಲ್ಲಿ ಒಳಗೊಂಡಿರುವ ಜಿಲ್ಲೆಗಳಲ್ಲಿ ಕಲಬುರಗಿ ಕೂಡ ಒಂದು. ಎರಡನೇ ಹಂತವು ಬಳ್ಳಾರಿ, ಬೆಳಗಾವಿ, ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಒಳಗೊಂಡಿದೆ. ಅಂತಿಮ ಹಂತವು ಉಳಿದ 19 ಜಿಲ್ಲೆಗಳ ವ್ಯಾಪ್ತಿಯನ್ನು ಪೂರ್ಣಗೊಳಿಸಿದೆ, ಅವುಗಳಲ್ಲಿ 7 ಈ ಅಧ್ಯಯನದ ಮಾದರಿಯಲ್ಲಿವೆ (ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಧಾರವಾಡ, ಕೋಲಾರ, ಮಂಡ್ಯ, ಉತ್ತರ ಕನ್ನಡ ಮತ್ತು ಯಾದಗಿರಿ).*

ದೇಶದ ಬಡ ಜನರ ಮೇಲೆ ರಾಜಕೀಯ ಸಾಮರ್ಥ್ಯಗಳ ಸಂಕೀರ್ಣ ಪರಿಣಾಮಗಳನ್ನು ಬೀರಿದೆ ಎಂದು ಅವರು ಹೇಳುತ್ತಾರೆ. ಜೆಂಕಿನ್ಸ್ ಮತ್ತು ಮ್ಯಾನರ್ ಅವರ ವಿಶ್ಲೇಷಣೆಯು ಬಡವರ ಹಕ್ಕುಗಳ ಬದಲಾಗುತ್ತಿರುವ ಪರಿಕಲ್ಪನೆಗಳ ಕುರಿತು ಮತ್ತು ಹೆಚ್ಚು ಹಿಂದುಳಿದ ನಾಗರಿಕರಿಗೆ ಮತ್ತು ಉತ್ತಮ ಮಾಹಿತಿಯುಕ್ತ ವ್ಯಕ್ತಿಗಳಿಗೆ ಜವಾಬ್ದಾರರನ್ನಾಗಿಸಲು ರಾಜ್ಯಗಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಒಳನೋಟವನ್ನು ನೀಡುತ್ತದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ಎಲ್ಲವನ್ನು ಒಳಗೊಂಡ ವಿಮರ್ಶೆಯನ್ನು ಕೇಂದ್ರೀಕರಿಸುವ ಬದಲು, ಮೌಲ್ಯಮಾಪನದ ಕೆಲವು ಪ್ರಮುಖ ಕಾಳಜಿಗಳ ಮೇಲೆ ಅಂದರೆ ಈ ಸಂದರ್ಭದಲ್ಲಿ ಪಾರದರ್ಶಕತೆ, ಹೊಣೆಗಾರಿಕೆ, ಉತ್ತಮ ಆಡಳಿತ, ವಿತರಣೆಯ ವಿಳಂಬವನ್ನು ತಪ್ಪಿಸುವುದು ಯೋಜನೆಯ ಪ್ರಯೋಜನಗಳು– ಕೂಲಿ, ಉದ್ಯೋಗವನ್ನು ಒದಗಿಸುವುದು ಮತ್ತು ಅವುಗಳನ್ನು ಸಾಧಿಸುವಲ್ಲಿ ವಿಫಲವಾದ ಕಾರಣ ಪರಿಹಾರ ನೀಡುವುದರ ಮೇಲೆ ಈ ಸಾಹಿತ್ಯವು ಯಾವ ಬೆಳಕನ್ನು ಚೆಲ್ಲುತ್ತದೆ ಎಂಬುದನ್ನು ಸಂಗ್ರಹಿಸಲು ಪ್ರಯತ್ನಿಸಲಾಗಿರುತ್ತದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಒಂದು ಗಮನಾರ್ಹ ಲಕ್ಷಣವೆಂದರೆ, ಅದರ ಪ್ರಾರಂಭದಿಂದಲೂ ಹಲವಾರು ಅಡೆತಡೆಗಳನ್ನು ನಿವಾರಿಸಲು ಅದರಲ್ಲಿ ಸಾಕಷ್ಟು ಸುಧಾರಣೆಗಳು ಮತ್ತು ಮಾರ್ಪಾಡುಗಳು ನಡೆದಿರುತ್ತವೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಜನಪ್ರಿಯವಾಗಿರುವ ಮಾಹಿತಿ ನಿರ್ವಹಣಾ ಪದ್ಧತಿಯಲ್ಲಿ ಕಾರ್ಮಿಕರಿಗೆ ಶಕ್ತಗೊಂಡ ಕೂಲಿಯನ್ನು ಪಾವತಿಸುವುದು ಇಂತಹ ಬದಲಾವಣೆಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ಕಾರ್ಯಕ್ರಮದ ಬಗ್ಗೆ ಕಾರ್ಮಿಕರಿಗೆ ಕೂಲಿಯನ್ನು ಸಮಯಕ್ಕೆ ಇತ್ಯರ್ಥಗೊಳಿಸಲು ಅಸಮರ್ಥವಾಗಿದೆ ಎಂದು ಸಾಕಷ್ಟು ಟೀಕೆಗಳು ಬಂದಿರುತ್ತವೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದ ನಂತರವೂ ಈ ಯೋಜನೆಯು ಈ ದೇಶದ ಅತ್ಯುನ್ನತ ನ್ಯಾಯಾಲಯವಾದ ಸುಪ್ರೀಂ ಕೋರ್ಟ್ (ಆನಂದ್ 2017) ನಿಂದ ತೀವ್ರ ಟೀಕೆಗೆ ಗುರಿಯಾಗಿರುತ್ತದೆ. ಕಾರ್ಮಿಕರಿಂದ ದೀರ್ಘಕಾಲದವರೆಗೆ ಇದ್ದ ಕೂಲಿಯನ್ನು ಇತ್ಯರ್ಥಗೊಳಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳದ ಕಾರಣ ಈ ನ್ಯಾಯಾಲಯವು ರಾಜ್ಯಗಳನ್ನು ಮತ್ತು ಕೇಂದ್ರ ಸರ್ಕಾರವನ್ನು ಹೇಗೆ ಕೆರಳಿಸಿತು ಎಂದು ಆನಂದ್ ವರದಿ ಮಾಡಿದ್ದಾರೆ: 'ನ್ಯಾಯಮೂರ್ತಿಗಳಾದ ಮದನ್ ಬಿ ಲೋಕೂರ್ ಮತ್ತು ಎನ್.ವಿ.ರಮಣ ಅವರ ನ್ಯಾಯಪೀಠವು ಕಾರ್ಮಿಕರಿಗೆ ಪರಿಹಾರವನ್ನು ನೀಡದ ಕಾರಣ ಕೇಂದ್ರವನ್ನು ಟೀಕಿಸಿದ್ದು, ಬರಗಾಲದಂತಹ ಪರಿಸ್ಥಿತಿಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಕೆಲಸಕ್ಕೆ ವಿಳಂಬ ಪಾವತಿಗಾಗಿ, ಮತ್ತು ಅದು "ಕಲ್ಯಾಣ ರಾಜ್ಯವಲ್ಲ" ಮತ್ತು "ಸಾಮಾಜಿಕ ನ್ಯಾಯವನ್ನು ಕಿಟಕಿಯಿಂದ ಹೊರಗೆ ಎಸೆಯಲಾಗಿದೆ" ಎಂದು ಹೇಳಿರುತ್ತಾರೆ.

ಕಾರ್ಮಿಕರ ಮತ್ತು ಅವರ ಉದ್ಯೋಗದ ಹಕ್ಕನ್ನು ದೋಚಿದ ಗುತ್ತಿಗೆದಾರರ ಉಪಸ್ಥಿತಿಯು ಟೀಕೆಗಳ ಮತ್ತೊಂದು ಪ್ರಮುಖ ಕೇಂದ್ರವಾಗಿರುತ್ತದೆ (ನೋಡಿರಿ, ಡ್ರೀಜ್ 2007; ಮತ್ತು ಡ್ರೆಜ್ ಮತ್ತು ಖೇರಾ 2009). ಆದರೂ, ಈ ಲೇಖಕರು ತಮ್ಮ ಅಧ್ಯಯನಗಳು ನಡೆಸಿದಾಗ ಅಂದರೆ 2007 ಮತ್ತು 2008ರ ಹಿಂದೆಯೇ ಬಡವರ ಅನುಕೂಲಕ್ಕಾಗಿ ಹೆಚ್ಚಿನ ಬದಲಾವಣೆ ಮತ್ತು ಸಾಮರ್ಥ್ಯವನ್ನು ನಿರೀಕ್ಷಿಸಿದ್ದರು.

ಕೆಲವು ವರ್ಷಗಳಲ್ಲಿ ಹೊಸ ಮತ್ತು ನಿರೀಕ್ಷಿತ ದಕ್ಷ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಲ್ಲಿ ಒಂದು ಅಧ್ಯಯನವು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರಿಗೆ ಕೂಲಿ ಸಿಗದ ಹತ್ತು ವಿಭಿನ್ನ ಮಾರ್ಗಗಳನ್ನು ಕಂಡುಹಿಡಿದಿದ್ದು, (ಅಗರ್‌ವಾಲ್ 2017). ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿರುತ್ತದೆ.

- ಹಾಜರಾತಿ ಪಟ್ಟಿಯಲ್ಲಿ ಒಬ್ಬರ ಹೆಸರಿಲ್ಲದೆ ಕೆಲಸ ಮಾಡಿಸುವುದು
- ಕೆಲಸ ಮಾಡಿದ ದಿನಗಳ ಸಂಖ್ಯೆಯನ್ನು ದಾಖಲಿಸುವಲ್ಲಿ ಉಂಟಾಗುವ ಲೋಪ
- ಹಾಜರಾತಿ ಪಟ್ಟಿಯನ್ನು ಕಳೆದುಕೊಳ್ಳುವುದು
- ಕೂಲಿ–ಪಟ್ಟಿಗಳು/ನಿಧಿ ವರ್ಗಾವಣೆ ಆದೇಶಗಳನ್ನು ಹೊರಡಿಸದಿರುವುದು/ಅಧಿಕೃತಗೊಳಿಸದಿರುವುದು
- ಕೂಲಿ ಪಾವತಿಗಳನ್ನು ಪೂರ್ಣಗೊಳಿಸದೆ ಮಾಹಿತಿ ನಿರ್ವಹಣಾ ಪದ್ದತಿಯಲ್ಲಿ ಯೋಜನೆಯನ್ನು ಮುಚ್ಚುವುದು
- ಬ್ಯಾಂಕ್ ಅಥವಾ ಪೋಸ್ಟ್ ಆಫೀಸ್ ಖಾತೆ ಇಲ್ಲದೆ ಕೆಲಸ ಮಾಡಿಸುವುದು
- ಮಾಹಿತಿ ನಿರ್ವಹಣಾ ಪದ್ದತಿಯಲ್ಲಿ ಖಾತೆ ಸಂಖ್ಯೆ ತಪ್ಪಾಗಿರುವುದು
- ಮಾಹಿತಿ ನಿರ್ವಹಣಾ ಪದ್ದತಿಯಲ್ಲಿ ಆಧಾರ್ ಸಂಖ್ಯೆ ತಪ್ಪಾಗಿರುವುದು
- ತಪ್ಪಾದ ಖಾತೆಗೆ ಆಧಾರ್ ಸಂಖ್ಯೆ ಲಿಂಕ್ ಮಾಡುವುದು
- ಕೆಲಸಗಾರರ ಹೆಸರನ್ನು ಅವರ ಉದ್ಯೋಗ ಕಾರ್ಡ್‌ನಿಂದ ಅಳಿಸುವುದು

ಆಕೆಯ ತೀರ್ಮಾನಗಳು ನಾರಾಯಣನ್, ಧೋರಾಜಿವಾಲಾ ಮತ್ತು ಗೋಲಾನಿ (2018) ಅವರ ಮತ್ತೊಂದು ಅಧ್ಯಯನದಲ್ಲಿ ಹಂಚಿಕೊಂಡಿರುವಂತೆ ಒಂದು ಮಹತ್ವವನ್ನು ನೀಡುತ್ತವೆ: ಅಂದರೆ, ತಂತ್ರಜ್ಞಾನ ಮಾತ್ರ ಸಮರ್ಪಕವಾಗಿರುವುದಿಲ್ಲ. ನಾರಾಯಣ್ ಮತ್ತು ಇತರರು, ಸಾಕಷ್ಟು ಗಂಭೀರವಾದ ಬದಲಾವಣೆಯನ್ನು ಗಮನಿಸಿರುತ್ತಾರೆ. ಕೂಲಿ ಪಾವತಿಯ ವಿಳಂಬಕ್ಕೆ ಪರಿಹಾರದ ಹಕ್ಕುಗಳನ್ನು ತಿರಸ್ಕರಿಸಿದ ಅನಿಯಂತ್ರಿತ ವಿಧಾನವನ್ನು ಉಲ್ಲೇಖಿಸಿ, ಅವರು ಗಮನಿಸಲು ಈ ಕೆಳಗಿನವುಗಳನ್ನು ತಿಳಿಸಿರುತ್ತಾರೆ.

ಮಾಹಿತಿ ನಿರ್ವಹಣಾ ಪದ್ಧತಿಯ ಮೂಲಕ ವಹಿವಾಟಿನ ಮಟ್ಟದ ದತ್ತಾಂಶವನ್ನು ಸಾರ್ವಜನಿಕ ವಲಯದಲ್ಲಿ ಲಭ್ಯವಾಗುವಂತೆ ಮಾಡಲು ತೆಗೆದುಕೊಂಡ ಪ್ರಯತ್ನವು ಬಹಳ ಮೆಚ್ಚುಗೆ ಪಡೆದಿದ್ದರೂ, ಪರಿಹಾರವನ್ನು ತಿರಸ್ಕರಿಸುವ ಅನಿಯಂತ್ರಿತ ಅಧಿಕಾರಗಳಂತಹ ಹಲವಾರು ಸಂದರ್ಭಗಳಲ್ಲಿ, ಮಾಹಿತಿ ನಿರ್ವಹಣಾ ಪದ್ಧತಿಯು ಕಾನೂನನ್ನು ಮಟ್ಟಹಾಕುವ ಸಾಧನವಾಗುತ್ತಿದೆ ಎಂಬ ನ್ಯಾಯಸಮ್ಮತ ಕಾಳಜಿ ಇದೆ.

ಅಗರ್‌ವಾಲ್ ಅವರು ಕೆಲವು ಪ್ರಮುಖ ತೀರ್ಮಾನಗಳನ್ನು ಹೊಂದಿದ್ದು, ಇವುಗಳು ಬಹುಶಃ ಈ ಅಧ್ಯಯನಕ್ಕೂ ಸಂಬಂಧಿಸಿರುತ್ತವೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅನುಷ್ಠಾನವು ತಂತ್ರಜ್ಞಾನದ ಮೇಲೆ ಹೆಚ್ಚು ಅವಲಂಬಿತವಾಗಿದೆ. ನಗದು ಪಾವತಿಗಳಿಂದ ಬ್ಯಾಂಕ್ (ಅಥವಾ ಪೋಸ್ಟ್ ಆಫೀಸ್) ಖಾತೆಗಳಿಗೆ, ನಂತರ ವಿದ್ಯುನ್ಮಾನ ಪಾವತಿಗಳಿಗೆ ಮತ್ತು ಈಗ ಆಧಾರ್ ಆಧಾರಿತ ಪಾವತಿಗಳಿಗೆ ವರ್ಗಾವಣೆಯು ಪಾರದರ್ಶಕತೆಯನ್ನು

ಹೆಚ್ಚಿಸುತ್ತದೆ ಮತ್ತು ಸೋರಿಕೆಯನ್ನು ಕಡಿಮೆ ಮಾಡುತ್ತದೆ. ಈ ಉದ್ದೇಶಗಳು ಸ್ವಲ್ಪ ಮಟ್ಟಿಗೆ ಈಡೇರಿದ್ದರೂ, ಈ ಸಂಕೀರ್ಣ ತಂತ್ರಜ್ಞಾನಗಳ ಅವಶ್ಯಕತೆಗಳನ್ನು ನಿಭಾಯಿಸಲು ಸ್ಥಳೀಯ ಕಾರ್ಯಕಾರಿಗಳು ಮತ್ತು ಮೂಲಸೌಕರ್ಯಗಳ ಅಸಮರ್ಥತೆ (ಪರಿಣಾಮಕಾರಿ ಕುಂದುಕೊರತೆ ಪರಿಹಾರ ವ್ಯವಸ್ಥೆಯ ಅನುಪಸ್ಥಿತಿಯೊಂದಿಗೆ) ಪ್ರತಿವರ್ಷ ಲಕ್ಷಾಂತರ ಕಾರ್ಮಿಕರಿಗೆ ಕೂಲಿಯನ್ನು ನೀಡುತ್ತಿಲ್ಲ.

ಮೊದಲು ಸ್ಥಳೀಯ ಮಟ್ಟದಲ್ಲಿ ಹಾಜರಾತಿ ವಿವರಗಳು ಮತ್ತು ತಪ್ಪಾದ ಖಾತೆ ಸಂಖ್ಯೆಗಳಂತಹ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿತ್ತು, ಆದರೆ ಈಗ ಹೆಚ್ಚಿನ ಕಾರ್ಮಿಕರು ತಿದ್ದುಪಡಿಗಳಿಗೆ ಪ್ರವೇಶಿಸಲು ಕಷ್ಟಕರವಾದ ಕ್ಷೇತ್ರ–ಮಟ್ಟದ ಕಾರ್ಯಕರ್ತರ (ಕೆಲವೊಮ್ಮೆ ಜಿಲ್ಲಾ ಅಥವಾ ರಾಜ್ಯ ಮಟ್ಟದ ಕಾರ್ಯಕಾರಿಗಳ) ಹಸ್ತಕ್ಷೇಪದ ಅಗತ್ಯವಿರುತ್ತದೆ.

ಆಂಧ್ರಪ್ರದೇಶದಲ್ಲಿ ನಡೆಸಿದ ಮತ್ತೊಂದು ಅಧ್ಯಯನವು (ಬಿನೋ ಮತ್ತು ಪಾಷಾ 2014) ತಿಳಿಸಿದಂತೆ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಉಪಯೋಗದಲ್ಲಿದ್ದರೂ, ಹಲವಾರು ಸಮಸ್ಯೆಗಳು ಮುಂದುವರೆದಿರುವುದನ್ನು ಕಂಡುಹಿಡಿದಿರುತ್ತದೆ. ಈ ಕೆಳಗಿನವುಗಳಲ್ಲಿ ಕೆಲವು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಪ್ರಮುಖ ಸೀಮಿತ ವೈಶಿಷ್ಟಗಳಾಗಿರುತ್ತವೆ.

- ಅಪ್ರಾಪ್ತ ವಯಸ್ಕರು, ಕಾಲ್ಪನಿಕ ಹೆಸರುಗಳು, ಸತ್ತ ವ್ಯಕ್ತಿಗಳು, ದೈಹಿಕವಾಗಿ ಕೆಲಸ ಮಾಡಲು ಅಸಮರ್ಥರು ಸೇರಿದಂತೆ ಜಾಬ್ ಕಾರ್ಡ್‌ಗಳ ನಕಲಿ ನೋಂದಣಿ,
- ಅಂದಾಜುಗಳನ್ನು ಸಿದ್ಧಪಡಿಸುವಲ್ಲಿ ಮತ್ತು ತಾಂತ್ರಿಕ ಪ್ರಸ್ತಾವನೆಗಳಿಗೆ ಸಂಪೂರ್ಣ ಪರಿಶೀಲನೆ ಅಗತ್ಯವಿರುವುದರಿಂದ ಅನುಮೋದಿಸುವಲ್ಲಿ ಹಾಗೂ ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಮಟ್ಟದ ಅಧಿಕಾರಿಗಳು ಸೀಮಿತ ಆರ್ಥಿಕ ಅಧಿಕಾರವನ್ನು ಮಂಜೂರು ಮಾಡಲು ಉಂಟಾಗುತ್ತಿರುವ ವಿಳಂಬ
- ಹಾಜರಾತಿಯನ್ನು ಎಂದಿಗೂ ನಿರ್ವಹಿಸಲಿಲ್ಲ, ಅಥವಾ ಹಾಜರಾತಿ ಇದ್ದರೂ ಅದರಲ್ಲಿ, ಇಲ್ಲದ ಕೆಲಸಗಾರರ ಹಾಗೂ ನಕಲಿ ಹಾಜರಾತಿ ಒಳಗೊಂಡಿರುತ್ತದೆ.
- ಕೆಲಸದ ತಪ್ಪು ಅಳತೆ ನೀಡುವುದು ಹಾಗೂ ಕಲ್ಪಿತ ಕೆಲಸದ ವಿವರಗಳ ಆಧಾರದ ಮೇಲೆ ಹಣಕ್ಕಾಗಿ ವಿನಂತಿ ಮಾಡುವುದು,
- ಕಡಿಮೆ ಕೂಲಿ ಪಾವತಿ, ಮೋಸದ ಕೂಲಿ ಪಾವತಿ ಮತ್ತು ಕೂಲಿ ಪಾವತಿಯಲ್ಲಿ ವಿಳಂಬ ಮಾಡುವುದು,

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯನ್ನು ನಿರ್ಣಯಿಸುವಲ್ಲಿ ಹೆಚ್ಚು ಸಮಗ್ರ ರೀತಿಯೆಂದು ಶ್ಲಾಘಿಸಲ್ಪಟ್ಟ ವಿದ್ವಾಂಸರ ತಂಡವು ನೀಡಿದ ಎಚ್ಚರಿಕೆಯ ಪದದೊಂದಿಗೆ ಇದು ಮುಕ್ತಾಯವಾಗುತ್ತದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ಖಂಡಿತವಾಗಿಯೂ ಅನೇಕ ರೀತಿಯಲ್ಲಿ ಕೊಡುಗೆಗಳನ್ನು ನೀಡಿರುತ್ತದೆ, 'ಹಣಕಾಸಿನ ಸೇರ್ಪಡೆ ಸುಧಾರಣೆಗಳು ಮತ್ತು ಭಾಗವಹಿಸುವ ಮತ್ತು ಭಾಗವಹಿಸದ ಕುಟುಂಬಗಳು ಲೇವಾದೇವಿಗಾರರ ಬಳಕೆಯ ಮೇಲೆ ಈ ಯೋಜನೆಯ ಪರಿಣಾಮ. ಮಹಿಳೆಯರ ಹೆಚ್ಚಿದ ಕೂಲಿ ಉದ್ಯೋಗವು ಮಹಿಳೆಯರ ಸಬಲೀಕರಣ ಮತ್ತು ಸಾರ್ವಜನಿಕ ಗೋಚರತೆಯಲ್ಲಿ ದೀರ್ಘಾವಧಿಯ ಬದಲಾವಣೆಗಳನ್ನು ತರಬಹುದು, ಈ ಯೋಜನೆಯು ಒಟ್ಟಾರೆಯಾಗಿ ಸಮಾಜದ ಮೇಲೆ ಪರಿಣಾಮ ಬೀರಬಹುದು.

ಬಹು ಮುಖ್ಯವಾಗಿ, ಕೆಲವು ಯೋಜಿತ ಕಾರ್ಯಕ್ರಮದ ಬದಲಾವಣೆಗಳು, ವಿಶೇಷವಾಗಿ ಉತ್ತಮ-ಗುಣಮಟ್ಟದ ಮೂಲಸೌಕರ್ಯದಲ್ಲಿನ ಹೂಡಿಕೆಗಳು ಕೃಷಿ ಉತ್ಪಾದಕತೆಯ ಮೇಲೆ ಪರಿಣಾಮ ಬೀರಬಹುದು ಮತ್ತು ಆದಾಯವನ್ನು ಮತ್ತಷ್ಟು ಸುಧಾರಿಸಬಹುದು. ಈ ಕಾರ್ಯಕ್ರಮದ ಆವಿಷ್ಕಾರಗಳ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಅದೇ ಹಳ್ಳಿಗಳು ಮತ್ತು ಮನೆಗಳಿಗೆ ದೀರ್ಘಾವಧಿಯ ಮೇಲ್ವಿಚಾರಣೆ ನಡೆಸಿ ಈ ಯೋಜನೆಯ ಮೊದಲು ಮತ್ತು ನಂತರದ ದತ್ತಾಂಶದ ಅಗತ್ಯವಿರುತ್ತದೆ. (ದೇಸಾಯಿ, ವಶಿಷ್ಠ ಮತ್ತು ಜೋಶಿ 2015: 21)

ಗ್ರಾಮೀಣ ಬಡವರಿಗೆ, ವಿಶೇಷವಾಗಿ ಜೀವನಾಧಾರ ಕೃಷಿಯನ್ನು ಅವಲಂಬಿಸಿರುವವರಿಗೆ (ಉದಾಹರಣೆಗೆ ಭಟ್ಟಾಚಾರ್ಯ 2013) ಪರಿಹಾರ ನೀಡುವಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ವಹಿಸಿರುವ ಪಾತ್ರವನ್ನು ವಿದ್ವಾಂಸರು ಶ್ಲಾಘಿಸಿದ್ದಾರೆ ಆದರೆ ಅದರಲ್ಲಿನ ದೊಡ್ಡ ಲೋಪದೋಷವನ್ನು ವಿಳಂಬ ಅಂಶವೆಂದು ಕಂಡುಕೊಳ್ಳುತ್ತಾರೆ. ಓರ್ವ ವಿದ್ವಾಂಸರು ಇದು ಉದ್ಯೋಗವನ್ನು ಖಾತರಿಪಡಿಸಬಹುದು ಆದರೆ ಇನ್ನೂ ಸಮಯೋಚಿತ ಕೂಲಿ ಪಾವತಿಯನ್ನು ಖಾತರಿಪಡಿಸುತ್ತಿದ್ದಾರೆ ಎಂದು ವಾದಿಸುತ್ತಾರೆ (ದತ್ತಾ, ಮುರ್ಗೈ ಮತ್ತು ರಾವಿಲಿಯನ್ ಮತ್ತು ಡಿ ವಾಲೆ 2012). ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯೊಂದಿಗೆ ದೀರ್ಘಕಾಲ ಸಂಬಂಧ ಹೊಂದಿದ್ದ ಇತರ ವಿದ್ಯಮಾನವೆಂದರೆ ಗುತ್ತಿಗೆದಾರ ಮತ್ತು ಮಧ್ಯವರ್ತಿಗಳ ಪಾತ್ರ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿನ ಗುತ್ತಿಗೆದಾರ-ಪಾತ್ರವು ಶೀಘ್ರದಲ್ಲೇ ಹಿಂದಕ್ಕೆ ಸರಿಯುವ ವಿಷಯವಾಗಲಿದೆ ಎಂದು ಡ್ರೆಜ್ (2007) ಸುಮಾರು ಒಂದು ದಶಕದ ಹಿಂದೆಯೇ ಮುನ್ಸೂಚನೆಯನ್ನು ನೀಡಿದ್ದು, ಈ ಮುನ್ಸೂಚನೆಯಲ್ಲಿ ಸಂಪೂರ್ಣವಾಗಿ ತಪ್ಪಾಗಿರದೆ ಇರಬಹುದು, ಆದರೂ ಗುತ್ತಿಗೆದಾರರು ಈಗಲೂ ಆಗಾಗ ತಮ್ಮ ಕೆಟ್ಟ ಪಾತ್ರ ವಹಿಸುತ್ತಲೇ ಇದ್ದಾರೆ (ಎಸ್ಟೀವ್ಸ್ 2014).

ಈ ಯೋಜನೆಯು ಬಹಳ ಹಿಂದಿನಿಂದಲೂ ಸಾರ್ವಜನಿಕ ಪರಿಶೀಲನೆಯಲ್ಲಿ ಮತ್ತು ಮೌಲ್ಯಮಾಪನದ ಮತ್ತು ಅನುಮಾನದ ನಿರ್ಣಾಯಕ ದೃಷ್ಟಿಯನ್ನು ಹೊಂದಿದ್ದರೂ ಸಹ, ಕಾಲಕಾಲಕ್ಕೆ ಅದನ್ನು ಸಹಾನುಭೂತಿಯಿಂದ ನೋಡಬೇಕೆಂಬ ಮನವಿಯಿದೆ. ವಿಶೇಷವಾಗಿ ಬೇರೆ ಯಾವುದೂ ಇಲ್ಲದಿರುವಾಗ ಅಥವಾ ನೀತಿಗಳು ಯಾವಾಗ ಮಾರುಕಟ್ಟೆ ಸ್ನೇಹಿ ನವ-ಉದಾರವಾದಿ ಆರ್ಥಿಕ ನೀತಿಗಳೊಂದಿಗೆ ಪೂರ್ಣ ಪ್ರಮಾಣದಲ್ಲಿದ್ದಾಗ, ವಿಶೇಷವಾಗಿ ರಾಜಕೀಯ ಪಕ್ಷಗಳು ಸಹ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯನ್ನು ನಾಟಕೀಯವಾಗಿ ಟೀಕಿಸುವಲ್ಲಿ ಕೈಜೋಡಿಸಿದಾಗ, ಬಹಳ ಪ್ರಭಾವಶಾಲಿ ಪತ್ರಿಕೆಯೊಂದು "ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಮೇಲೆ ಏಕೆ ಈ ದಾಳಿ?" (ಸಂಪಾದಕ, ಇಪಿಡಬ್ಲ್ಯೂ 214) ಎಂಬ ಸಂಪಾದಕೀಯವನ್ನು ಹೊರಡಿಸಿರುತ್ತದೆ.

ಇದೇ ರೀತಿಯ ಹಲವಾರು ವಿದ್ವತ್ಪೂರ್ಣ ಕೃತಿಗಳು ಮತ್ತು ಮೌಲ್ಯಮಾಪನಗಳಿಂದ ಪ್ರೇರಿತಗೊಂಡ ಈ ಅಧ್ಯಯನವು ಮುಕ್ತ ಮನಸ್ಸಿನಿಂದ ಮುಂದುವರೆದಿದ್ದು, ಗ್ರಾಮೀಣ ಬಡವರ ಅನುಕೂಲಕ್ಕಾಗಿ ಆಡಳಿತ ವ್ಯವಸ್ಥೆಗಳನ್ನು ಹೇಗೆ ಅತ್ಯುತ್ತಮವಾಗಿ ಬಳಸಿಕೊಳ್ಳಬಹುದು ಎಂಬುದನ್ನು ತೋರಿಸಿರುತ್ತದೆ.

# 8. ಮೌಲ್ಯಮಾಪನ ಅಧ್ಯಯನದ ಶೋಧನೆಗಳು

## 8.1 ಮಾದರಿಯ ಸಂಕ್ಷಿಪ್ತ ವಿವರಣೆ

ಕಡ್ಡಾಯಗೊಳಿಸಿದಂತೆ, ಈ ಮೌಲ್ಯಮಾಪನವು ಜಿಲ್ಲೆಗಳು, ಕ್ಷೇತ್ರಗಳು ಮತ್ತು ಗ್ರಾಮ ಪಂಚಾಯಿತಿಗಳ ಮಾದರಿಯನ್ನು ಆಯ್ಕೆ ಮಾಡಿರುತ್ತದೆ. ಕಡ್ಡಾಯಗೊಳಿಸಿದಂತೆ, ಜನರಿಂದ ಮಾಹಿತಿಯನ್ನು ಸಂಗ್ರಹಿಸಲು ಆಯಾ ಗ್ರಾಮ ಪಂಚಾಯಿತಿಗಳ ಮೂಲಕ, ಕೇಂದ್ರೀಕೃತ ಗುಂಪು ಚರ್ಚೆಗಾಗಿ ಅವರನ್ನು ಆಹ್ವಾನಿಸಲಾಗಿರುತ್ತದೆ ಮತ್ತು ಲಭ್ಯವಿರುವ ವ್ಯಕ್ತಿಗಳಿಂದ ವಿವರವಾದ ಪ್ರಶ್ನಾವಳಿ ನಮೂನೆಯನ್ನು ಕನಿಷ್ಠ 20 ಭಾಗವಹಿಸುವವರಿಗೆ ಬಳಸಲಾಗಿರುತ್ತದೆ. ಇದು ಬದಲಾದಂತೆ, ಪ್ರತಿಯೊಂದು ಹಳ್ಳಿಯಲ್ಲೂ ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ 20ಕ್ಕೂ ಹೆಚ್ಚು ಜನರು ಭಾಗವಹಿಸಿದವರಿದ್ದರು ಮತ್ತು ಇದರ ಪರಿಣಾಮವಾಗಿ ನಮ್ಮ ಪ್ರಶ್ನಾವಳಿಗಳಿಗೆ ಸ್ಪಂದಿಸುವ ಸ್ವಯಂಸೇವಕರು 20ಕ್ಕಿಂತಲೂ ಹೆಚ್ಚಿನವರಿದ್ದಾರೆ. ಸಮಯವನ್ನು ಉಳಿಸುವ ಉದ್ದೇಶದಿಂದ ಮತ್ತು ಒಟ್ಟುಗೂಡಿದ ಗುಂಪು ಹಾಜರಾಗುವ ಮೊದಲು, ಒಬ್ಬರು ಅಥವಾ ನಮ್ಮ ಇಬ್ಬರು ಸಂಶೋಧನಾ ತನಿಖಾಧಿಕಾರಿಗಳು ಕೇಂದ್ರೀಕೃತ ಗುಂಪು ಚರ್ಚೆಯು ಚಾಲನೆಯಲ್ಲಿದ್ದಾಗಲೂ ಪ್ರಶ್ನಾವಳಿ ನಮೂನೆಯನ್ನು ಬಳಸಲಾಗಿರುತ್ತದೆ. ಇದನ್ನು ನಮ್ಮ ಹಿರಿಯ ತನಿಖಾಧಿಕಾರಿಗಳೊಬ್ಬರು ಮುನ್ನಡೆಸಿರುತ್ತಾರೆ. ಇದರ ಪರಿಣಾಮವಾಗಿ ನಾವು ಹೆಚ್ಚಿನ ಗ್ರಾಮ ಪಂಚಾಯಿತಿಗಳಲ್ಲಿ ಪ್ರಶ್ನಾವಳಿ ನಮೂನೆಗಳನ್ನು 20ಕ್ಕಿಂತ ಹೆಚ್ಚು ಬಳಸಿರುತ್ತೇವೆ. ಗ್ರಾಮ ಪಂಚಾಯಿತಿಯೊಳಗಿನ ವಿವಿಧ ಗ್ರಾಮಗಳಿಂದ ಭಾಗವಹಿಸುವವರ ಪ್ರಾತಿನಿಧ್ಯ ಮತ್ತು ವೈವಿಧ್ಯತೆಯನ್ನು ಹೊಂದಿರುವುದು ನಮ್ಮ ಉದ್ದೇಶವಾಗಿತ್ತು. ಪ್ರತಿ ಪಂಚಾಯತ್‌ನಲ್ಲಿ, ಅಧಿಸೂಚಿತ ಸ್ಥಳದಲ್ಲಿ ಸಭೆಯನ್ನು ಸಂದರ್ಶಿಸುವುದರ ಜೊತೆಗೆ, ಪ್ರಶ್ನಾವಳಿ ನಮೂನೆಯನ್ನು ಬಳಸಲು ಕನಿಷ್ಠ ಒಂದು ಹಳ್ಳಿಯನ್ನಾದರೂ ನಮ್ಮ ಸಂಶೋಧಕರ ತಂಡವು ಭೇಟಿ ನೀಡಿರುತ್ತದೆ.

**ಕೋಷ್ಟಕ 4: ಮಾದರಿಯ ಸಂಕ್ಷಿಪ್ತ ವಿವರಣೆ**

| ಕ್ರ.ಸಂ. | ಜಿಲ್ಲೆ | ಕ್ಷೇತ್ರಗಳು | ಗ್ರಾಮ ಪಂಚಾಯಿತಿಗಳು | ಉದ್ಯೋಗ ಕಾರ್ಡ್ ಹೊಂದಿರುವವರು | ಎಂದಿಗೂ ಕೆಲಸ ಮಾಡದವರು | ಗ್ರಾಮ ಪಂಚಾಯಿತಿ ಸದಸ್ಯರು | ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು | ಬಿಲ್ ಕಲೆಕ್ಟರ್‌ಗಳು | ಕಾರ್ಯನಿರ್ವಾಹಕ ಅಧಿಕಾರಿ | ಸಾಮಗ್ರಿ ಪೂರೈಕೆದಾರರು |
|---|---|---|---|---|---|---|---|---|---|---|
| 1 | ಚಿಕ್ಕಬಳ್ಳಾಪುರ | 6 | 38 | 635 | 85 | 94 | 28 | 31 | 6 | 10 |
| 2 | ದಕ್ಷಿಣ ಕನ್ನಡ | 5 | 48 | 921 | 120 | 149 | 40 | 48 | 5 | 10 |
| 3 | ಧಾರವಾಡ | 5 | 29 | 490 | 68 | 82 | 28 | 28 | 5 | 6 |
| 4 | ಕಲಬುರಗಿ | 7 | 51 | 1401 | 506 | 150 | 47 | 51 | 7 | 9 |
| 5 | ಕೋಲಾರ | 5 | 34 | 871 | 520 | 95 | 34 | 34 | 5 | 5 |
| 6 | ಮಂಡ್ಯ | 7 | 47 | 627 | 378 | 135 | 47 | 47 | 7 | 7 |
| 7 | ಉತ್ತರ ಕನ್ನಡ | 11 | 45 | 931 | 201 | 140 | 45 | 45 | 11 | 12 |
| 8 | ಯಾದಗಿರಿ | 3 | 24 | 480 | 177 | 75 | 24 | 24 | 2 | 3 |
| | **ಒಟ್ಟು** | **49** | **316** | **6356** | **2055** | **920** | **293** | **308** | **48** | **62** |

ಅಂತಿಮವಾಗಿ ಸಂಸ್ಕರಿಸಿದ ದತ್ತಾಂಶವು 49 ಕ್ಷೇತ್ರಗಳು ಮತ್ತು 316 ಗ್ರಾಮ ಪಂಚಾಯಿತಿಗಳಿಂದ 6356 ಪ್ರತಿಕ್ರಿಯೆದಾರರನ್ನು ಹೊಂದಿರುವುದಾಗಿ ತಿಳಿಸಿರುತ್ತದೆ. ಈ ಪ್ರತಿಕ್ರಿಯೆದಾರರು ವಿವಿಧ ಗ್ರಾಮ ಪಂಚಾಯಿತಿಗಳ ಹಳ್ಳಿಗಳ ಜನರು, ಮತ್ತು ಅವರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಡಿ ಕೂಲಿ ಕೆಲಸ ಹುಡುಕುವವರಾಗಿ ನೋಂದಾಯಿಸಿಕೊಂಡಿದ್ದಾರೆ. ಸಮೀಕ್ಷೆಯ ಮಾದರಿಯ 2055 ಜನರು ಕಟ್ಟುನಿಟ್ಟಾದ ಅರ್ಥದಲ್ಲಿ ಅನರ್ಹರು ಆಗಿರುತ್ತಾರೆ ಏಕೆಂದರೆ, ಅವರು ಎಂದಿಗೂ ಯಾವುದೇ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾಮಗಾರಿಗಳ ಅಡಿಯಲ್ಲಿ ಕೆಲಸ ಮಾಡಿಲ್ಲ ಎಂದು ವರದಿ ಮಾಡಿದ್ದಾರೆ, ಆದರೆ ಅವರಲ್ಲಿ ಹೆಚ್ಚಿನವರು ಸಾಮಗ್ರಿ ಪೂರೈಕೆದಾರರು ಅಥವಾ ಗುತ್ತಿಗೆದಾರರು/ ಮೇಸ್ತ್ರಿಗಳು ಆಗಿರಬಹುದು. ಮೌಲ್ಯಮಾಪನ ವಿಶ್ಲೇಷಣೆಯ ಉದ್ದೇಶಕ್ಕಾಗಿ ಈ 2055 ಜನರನ್ನು (32.33%) ಕೈಬಿಡಲಾಗಿರುತ್ತದೆ, ಉಳಿದ 4301 ವ್ಯಕ್ತಿಗಳಿಗೆ ಮಾತ್ರ ವಿಶ್ಲೇಷಣೆಯನ್ನು ಸೀಮಿತಗೊಳಿಸಲಾಗಿರುತ್ತದೆ.

ಈ ಪ್ರತಿಕ್ರಿಯೆದಾರರಿಗೆ ಹೆಚ್ಚುವರಿಯಾಗಿ, 293 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿಯ 920 ಚುನಾಯಿತ ಸದಸ್ಯರು – ಈ ರೀತಿಯಾಗಿ ಪ್ರತಿ ಗ್ರಾಮ ಪಂಚಾಯಿತಿಯಿಂದ ಕನಿಷ್ಠ ಒಬ್ಬರು ಅಧ್ಯಕ್ಷರು ಅಥವಾ ಉಪಾಧ್ಯಕ್ಷರು 308 ಬಿಲ್ ಕಲೆಕ್ಟರ್‌ಗಳು, 48 ಕಾರ್ಯ ನಿರ್ವಾಹಕ ಅಧಿಕಾರಿಗಳು ಮತ್ತು 62 ಸಾಮಗ್ರಿ ಪೂರೈಕೆದಾರರನ್ನು ಸಹ ಸಂದರ್ಶಿಸಲಾಗಿರುತ್ತದೆ. ಕ್ಷೇತ್ರ ಅಧ್ಯಯನಕ್ಕಾಗಿ ಸಂದರ್ಶನ ನಡೆಸಲು ಈ ಎಲ್ಲರ ಸಮ್ಮತಿಯನ್ನು ಪಡೆಯುವುದು ನಿಜಕ್ಕೂ ಸವಾಲಿನ ಸಂಗತಿಯಾಗಿರುತ್ತದೆ ಎಂದು ಒಪ್ಪಿಕೊಳ್ಳಬೇಕು. ಶೇಕಡಾ 30ಕ್ಕೂ ಹೆಚ್ಚು ಪಂಚಾಯಿತಿಗಳಲ್ಲಿ, ಈ ವ್ಯಕ್ತಿಗಳಿಗೆ ಪುನರಾವರ್ತಿತ ಭೇಟಿಗಳನ್ನು ನಡೆಸಬೇಕಾಗಿತ್ತು. ವಿಧಾನಸಭಾ ಚುನಾವಣೆಗಳಿಗೆ ಚಾಲನೆಯಲ್ಲಿರುವ ತಿಂಗಳುಗಳನ್ನು (2018 ರ ಜನವರಿಯಿಂದ ಜೂನ್‌ವರೆಗೆ ಚುನಾವಣಾ ಪೂರ್ವ ಮತ್ತು ಚುನಾವಣಾ ತಿಂಗಳುಗಳೆಂದು ಕರೆಯಬಹುದು) ಮತ್ತು ತರುವಾಯ ಪಟ್ಟಣ, ನಗರಸಭಾ ಚುನಾವಣೆಗಳು ಈ ವ್ಯಕ್ತಿಗಳಲ್ಲಿ ಅನೇಕರನ್ನು ಕಾರ್ಯನಿರತವಾಗಿಸಿರುತ್ತವೆ. ಸುಮಾರು 30 ಗ್ರಾಮ ಪಂಚಾಯಿತಿಗಳಲ್ಲಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹೆಚ್ಚುವರಿ ಉಸ್ತುವಾರಿಯನ್ನು ಹೊಂದಿದ್ದು, ಪಕ್ಕದ ಪಂಚಾಯತ್‌ನಿಂದ ನಿಯಮಿತವಾಗಿ ನಿಯೋಜನೆ ಮಾಡುವುದರಿಂದ ದತ್ತಾಂಶ ಸಂಗ್ರಹಣೆ ಕಾರ್ಯವನ್ನು ಇನ್ನಷ್ಟು ಕಷ್ಟಕರವಾಗಿಸಿರುತ್ತದೆ. ನಮ್ಮ ಮಾದರಿಯ ಹಲವು ಗ್ರಾಮ ಪಂಚಾಯಿತಿಗಳಲ್ಲಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇತರ ಗ್ರಾಮ ಪಂಚಾಯಿತಿಗಳ ಹೆಚ್ಚುವರಿ ಜವಾಬ್ದಾರಿಗಳನ್ನು ಹೊಂದಿದ್ದು, ಅವುಗಳಲ್ಲಿ ಹೆಚ್ಚಿನವು ನಮ್ಮ ಮಾದರಿಯಲ್ಲಿ ಇರಲಿಲ್ಲ; ಅವುಗಳು ಹಾಗಿದ್ದಲ್ಲಿ, ದತ್ತಾಂಶ ಸಂಗ್ರಹಣೆಯು ಸ್ವಲ್ಪ ಸರಳವಾಗುತ್ತಿತ್ತು.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಭಾವದ ಮೌಲ್ಯಮಾಪನವನ್ನು ನಾವು ವರದಿ ಮಾಡುತ್ತಿದ್ದೇವೆ, ಅಂತಹ ಕುಟುಂಬಗಳ ಸದಸ್ಯರು ಸಾಮಾನ್ಯವಾಗಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೋ ಇಲ್ಲವೋ ಎಂಬುದನ್ನು ಭೂಮಾಲೀಕತ್ವ ಹೇಗೆ ನಿರ್ಧರಿಸುತ್ತದೆ ಎಂಬುದನ್ನು ಪರಿಗಣಿಸಲು ಇದು ಸಹಾಯಕವಾಗಿರುತ್ತದೆ ನಮ್ಮ ಪ್ರತಿಕ್ರಿಯೆದಾರರಲ್ಲಿ ಹೆಚ್ಚಿನ ಜನರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಕೆಲಸ ಮಾಡದ ಕಾರಣ ನಾವು ಕೈಬಿಟ್ಟಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿರುತ್ತದೆ, ಅವರು ಕೂಲಿ ಕಾರ್ಮಿಕರಾಗಿ ಕೆಲಸ ಮಾಡದಿದ್ದಾಗ, ಅವರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಕೂಲಿ ಕಾರ್ಯವನ್ನು ಕೈಗೊಳ್ಳುವ ಸಾಧ್ಯತೆಯಿಲ್ಲ, ಅದರಲ್ಲೂ ವಿಶೇಷವಾಗಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ

ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ನೀಡಲಾಗುವ ಕೂಲಿಯು ಸ್ಥಳೀಯವಾಗಿ ಅಥವಾ ವಲಸೆ ಕಾರ್ಮಿಕರಿಗೆ ಮಾರುಕಟ್ಟೆಯು ನೀಡುವ ಕೊಡುಗೆಗಿಂತ ಗಣನೀಯವಾಗಿ ಕಡಿಮೆಯಾಗಿರುತ್ತದೆ ಎಂದು ಹೇಳಲಾಗುತ್ತದೆ. ಯಾವುದೇ ಸಂದರ್ಭದಲ್ಲಿ, ಭೂಮಾಲೀಕತ್ವದ ಮಾದರಿಯು ಕೂಲಿಗಾಗಿ ಮತ್ತು ಒಬ್ಬರ ಮನೆಗಳ ಹೊರಗೆ ಕೆಲಸ ಮಾಡುವುದರೊಂದಿಗೆ ಏನಾದರೂ ಸಂಬಂಧವಿದೆಯೇ ಎಂದು ಪರೀಕ್ಷಿಸಲು ಕೆಳಗಿನ ಕೋಷ್ಟಕದೊಂದಿಗೆ ಪ್ರಯತ್ನಿಸಲಾಗಿರುತ್ತದೆ.

ದೊಡ್ಡ ಭೂಸ್ವಾಧೀನ ಹೊಂದಿರುವ ವ್ಯಕ್ತಿಗಳು ಕೂಲಿಗಾಗಿ ಕೆಲಸ ಮಾಡುವುದಿಲ್ಲ ಎಂದು ಸಮಂಜಸವಾಗಿ ತಿಳಿದಿರುತ್ತದೆ, ಆದರೆ ದೊಡ್ಡ ಭೂಮಾಲೀಕರು ಕುಟುಂಬ ಕಾರ್ಮಿಕರನ್ನು ದೊಡ್ಡ ಪ್ರಮಾಣದಲ್ಲಿ ಬಳಸುವುದಕ್ಕಿಂತ ಬಾಡಿಗೆ ಕಾರ್ಮಿಕರ ಮೇಲೆ ಅವಲಂಬಿತರಾಗುತ್ತಾರೆ. ಅವರು ಕೆಲಸ ಮಾಡುತ್ತಿದ್ದರೂ ಸಹ, ಹೆಚ್ಚಾಗಿ ದೈಹಿಕ ಶ್ರಮವನ್ನು ಒಳಗೊಂಡ ಕೈಯಾರೆ ಕೆಲಸ ಮಾಡುವವರಕ್ಕಿಂತ ಹೆಚ್ಚಾಗಿ ಮೇಲ್ವಿಚಾರಣಾ ಪಾತ್ರಗಳಲ್ಲಿರುತ್ತಾರೆ. ಈ ಊಹೆಗಳನ್ನು ಧಿಕ್ಕರಿಸಿದರೂ, ನಮ್ಮ ಮಾದರಿಯಲ್ಲಿ ಪ್ರತಿಕ್ರಿಯೆದಾರರು ಸುರಕ್ಷಿತ ಭೂಸ್ವಾಮ್ಯದ ಹೊರತಾಗಿಯೂ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ ಅಥವಾ ಭೂಹೀನರಾಗಿದ್ದರೂ ಅಥವಾ ಕಡಿಮೆ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದರೂ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿಲ್ಲ ಎಂದು ವರದಿ ಮಾಡಿರುತ್ತಾರೆ.

ಸಂಶೋಧನಾ ಸಮಗ್ರತೆಯ ತತ್ವಗಳಿಗೆ ಅನುಗುಣವಾಗಿ, ನಮ್ಮ ಪ್ರತಿಕ್ರಿಯೆದಾರರು ತಮ್ಮ ಭೂಹಿಡುವಳಿ ಸ್ಥಿತಿಯ ಬಗ್ಗೆ ಸತ್ಯವನ್ನು ಹೇಳುತ್ತಾರೋ ಇಲ್ಲವೋ ಅಥವಾ ಅವರು ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೋ ಇಲ್ಲವೋ ಎಂದು ನಾವು ಮೊದಲು ಪ್ರಶ್ನಿಸಬೇಕಾಗಿರುತ್ತದೆ.

**ಕೋಷ್ಟಕ 5: ಭೂಮಾಲೀಕತ್ವ ಮತ್ತು ಕೂಲಿಗಾಗಿ ಅಥವಾ ಸ್ವಂತಕ್ಕಾಗಿ ಕೆಲಸ**

| **ಭೂಮಾಲೀಕತ್ವ** | **ಕೂಲಿಗಾಗಿ ಅಥವಾ ಸ್ವಂತಕ್ಕಾಗಿ ಕೆಲಸ (%)** | | |
|---|---|---|---|
| | **ಸ್ವಂತಕ್ಕಾಗಿ** | **ಕೂಲಿಗಾಗಿ** | **ಒಟ್ಟು ಸಂಖ್ಯೆ** |
| ಭೂಹೀನರು | 27.38 | 72.62 | 1187 |
| 0.50 ಎಕರೆಯವರೆಗೆ | 46.48 | 53.52 | 355 |
| 0.51 ರಿಂದ 1.00 ಎಕರೆಯವರೆಗೆ | 47.99 | 52.01 | 646 |
| 1.01 ರಿಂದ 2.50 ಎಕರೆಯವರೆಗೆ | 42.87 | 57.13 | 1136 |
| 2.51 ರಿಂದ 5.00 ಎಕರೆಯವರೆಗೆ | 36.75 | 63.25 | 713 |
| 5.01 ರಿಂದ 10.00 ಎಕರೆಯವರೆಗೆ | 34.63 | 65.37 | 231 |
| 10.01 ಎಕರೆ ಮತ್ತು ಅದಕ್ಕಿಂತ ಹೆಚ್ಚು | 57.58 | 42.42 | 33 |
| ಒಟ್ಟು % | 38.32 | 61.68 | 4301 |
| ಸಂಖ್ಯೆ | 1648 | 2653 | |

**ಚಿತ್ರ 2: ಭೂಮಾಲೀಕತ್ವ ಮತ್ತು ಕೂಲಿಗಾಗಿ ಅಥವಾ ಸ್ವಂತಕ್ಕಾಗಿ ಕೆಲಸ (%)**




## 8.2 ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಮೂಲಕ ಕೆಲಸ ಮಾಡುವ ಜನರು ಎಷ್ಟು ಅವಲಂಬಿತರಾಗಿದ್ದಾರೆ?

ಸಂಶೋಧನಾ ತನಿಖಾಧಿಕಾರಿಗಳಾಗಿ, ಉದ್ಯೋಗದ ಕಾರ್ಡ್ ಹೊಂದಿರುವವರಿಗೆ ಕೆಲಸಕ್ಕಾಗಿ ಕೂಲಿಯನ್ನು ಮತ್ತು ಸರಬರಾಜು ಮಾಡಿದ ಸಾಮಗ್ರಿಗಳಿಗೆ ಸಕಾಲಿಕವಾಗಿ ಹಣವನ್ನು ಪಾವತಿಸುವ ವಿಷಯಗಳ ಕುರಿತು ಚರ್ಚಿಸಲು ಉದ್ಯೋಗದ ಕಾರ್ಡ್ ಹೊಂದಿರುವವರ ಗುಂಪು ಸಭೆಗಳನ್ನು ಕರೆಯುವ ಅರಿವು ನಮಗೆ ಇರುತ್ತದೆ. ಪರಿಣಾಮವಾಗಿ ನಮ್ಮೊಂದಿಗೆ ಕೆಲವೇ ಕೆಲವು 'ಆಸಕ್ತ' ವ್ಯಕ್ತಿಗಳು ಭಾಗವಹಿಸುವವರಿದ್ದರು. ಮೊದಲೇ ಸೂಚಿಸಿದಂತೆ, ಅವರಲ್ಲಿ ಕೆಲವರು ಮೇಸ್ತ್ರಿಗಳು ಅಥವಾ ಗುತ್ತಿಗೆದಾರರಾಗಿದ್ದರು, ಆದರೆ ಕೂಲಿ ಪಡೆಯಲು ಖಾತೆಗಳಿಗೆ ಹಣ ಪಾವತಿಸಲು ತಮ್ಮ ಎಟಿಎಂ ಕಾರ್ಡ್‌ಗಳನ್ನು ಗುತ್ತಿಗೆದಾರರಿಗೆ ಅಥವಾ ಮೇಸ್ತ್ರಿಕೂಗಳಿಗೆ ನೀಡಿದ, ಕೂಲಿ ಕಾರ್ಮಿಕರಾಗಿ ಎಂದಿಗೂ ಕೆಲಸ ಮಾಡದ 'ಕಾರ್ಮಿಕರ' ಹೊರತಾಗಿ ಸಾಮಗ್ರಿ ಪೂರೈಕೆದಾರರು ಭಾಗವಹಿಸಿರುತ್ತಾರೆ. ಇಂತಹ ಕಾರ್ಮಿಕರು ನಿಜವಾಗಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ ಎಂದು ಪ್ರತಿಪಾದಿಸುವುದು ಆರ್ಥಿಕವಾಗಿ ಮುಖ್ಯವಾಗಿರುತ್ತದೆ. ಏಕೆಂದರೆ, ಇವರು ಉದ್ಯೋಗ ಕಾರ್ಡ್‌ಗಳು ಮತ್ತು ಡೆಬಿಟ್ ಕಾರ್ಡ್‌ಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸವನ್ನು ಇತರ ಕಾರ್ಮಿಕರು ಮಾಡದಿದ್ದಾಗ ಬಳಸುತ್ತಿದ್ದಾರೆ. ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಮತ್ತು ವೈಯಕ್ತಿಕ ಸಂಭಾಷಣೆಗಳಲ್ಲಿ, ಕೆಲವರು ತಮ್ಮ ಜಾಬ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್‌ಗಳನ್ನು ಹೇಗೆ ಆಗಾಗ್ಗೆ ಬೇರೆಯವರಿಗೆ ಎರವಲು ನೀಡಿರುವುದನ್ನು ಬಹಿರಂಗಪಡಿಸಿದ್ದಾರೆ. ಮಂಡ್ಯದ ಯತಂಬಾಡಿ ಪಂಚಾಯತ್‌ನ ಪುಟ್ಟಸ್ವಾಮಿಯವರು (ಹೆಸರು ಬದಲಾಗಿದೆ) ಒಂದು ಪ್ರಕರಣವನ್ನು ಈ ಕೆಳಗಿನಂತೆ ಹೇಳಿರುವುದನ್ನು ವರದಿ ಮಾಡಲಾಗಿರುತ್ತದೆ.

*ಸ್ವಾಮಿ, ನಮ್ಮಲ್ಲಿ ಯಾರಾದರೂ ನಮ್ಮ ಕಾರ್ಡ್‌ಗಳನ್ನು ಇತರರಿಗೆ ಎರವಲು ನೀಡಿದ್ದಾರೆಯೇ ಎಂದು ಕಂಡುಹಿಡಿಯಲು ನಿಮ್ಮ ತಂಡವು ಇಲ್ಲಿಗೆ ಬಂದಿರುತ್ತದೆ ಎಂದು ಮೊದಲಿಗೆ ನಾವು ಭಾವಿಸಿದ್ದೇವು. ನಮ್ಮ ಕಾರ್ಡ್‌ಗಳನ್ನು ನಾವು ಏಕೆ*

*ಎರವಲು ನೀಡುತ್ತೇವೆ ಎಂಬ ಸತ್ಯವನ್ನು ನಿಮಗೆ ಹೇಳಲು ಬಯಸುತ್ತಿದ್ದೇವೆ. ಯಾಕೆಂದರೆ, ನಮಗೆಲ್ಲರಿಗೂ ಆದಾಯ ಬೇಕು–ಅದು ಕೂಲಿಗಾಗಿಯೋ ಅಥವಾ ಇನ್ನಾವುದೇ ವ್ಯವಹಾರಕ್ಕಾಗಿ ಕೆಲಸ ಮಾಡುವ ಮೂಲಕ ಇರಬಹುದು. ನಮ್ಮಲ್ಲಿ ಹಲವರು ಗುತ್ತಿಗೆಗೆ ಕೆಲಸಗಳು ಲಭ್ಯವಿರುವಾಗ ಮತ್ತು ಯಾವಾಗ ಇವುಗಳನ್ನು ಕೈಗೊಳ್ಳುತ್ತಾರೆ ಎಂಬ ವಿಷಯದ ಬಗ್ಗೆ ಹಳೆಯ ದಿನಗಳಲ್ಲಿ, ಒಂದು ಯೋಜನೆಯನ್ನು ಅನುಮೋದಿಸಿದಾಗ, ನಮ್ಮ ಪಕ್ಷವು ಅಧಿಕಾರದಲ್ಲಿದ್ದರೆ ಅದನ್ನು ನಮ್ಮಲ್ಲಿ ಒಬ್ಬರಿಗೆ ನಿಯೋಜಿಸಲಾಗಿರುತ್ತದೆ. ತನ್ನ ಪಕ್ಷ ಅಧಿಕಾರದಲ್ಲಿದ್ದರೆ ಅವನು ಅದನ್ನು ಪಡೆಯುತ್ತಾನೆ (ಗುಂಪಿನಲ್ಲಿರುವ ಇನ್ನೊಬ್ಬ ವ್ಯಕ್ತಿಯನ್ನು ತೋರಿಸಿ). ಆದರೆ ಈ ಎಲ್ಲ ಜನರು ಕಾರ್ಮಿಕರಾಗಿರಬೇಕು ಮತ್ತು ಅವರಿಗೆ ಬ್ಯಾಂಕುಗಳ ಮೂಲಕ ಕೂಲಿಯನ್ನು ನೀಡಬೇಕು ಎಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ಕಡ್ಡಾಯಗೊಳಿಸಿರುತ್ತದೆ. ನಾವು ಇದನ್ನು ಸಂತೋಷದಿಂದಲೇ ಮಾಡುತ್ತಿದ್ದೇವೆ, ಆದರೆ ನಾನು ಅವರಲ್ಲಿ ಯಾರನ್ನಾದರೂ ರೂ. 300 ಕೂಲಿಗೆ ಕೆಲಸ ಮಾಡುವಂತೆ ಹೇಳಲು ಆಗುವುದಿಲ್ಲ ಕಾರಣ, ಹಳ್ಳಿಯ ಪ್ರತಿಯೊಬ್ಬರೂ ಆ ಮೊತ್ತಕ್ಕಿಂತ ಕನಿಷ್ಠ ಎರಡು ಪಟ್ಟು ಇತರೆ ಕೆಲಸಗಳಿಗೆ ಪಡೆಯುತ್ತಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ಪ್ರತಿಯೊಬ್ಬ ಕಾರ್ಮಿಕರು 8 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ನೀವು ಕಾನೂನು ಮಾಡಿರಬಹುದು. ನೀವು ಹಳ್ಳಿಯವರಾಗಿದ್ದರೆ ನಾವು ವಿಭಿನ್ನವಾಗಿ ಹೇಗೆ ಕೆಲಸ ಮಾಡುತ್ತೇವೆ ಎಂದು ನಿಮಗೆ ತಿಳಿಯುತ್ತದೆ. ನಾವು ಕೆಲಸವನ್ನು ಬೆಳಿಗ್ಗೆ 6.00 ಅಥವಾ 7.00ಕ್ಕೆ ಪ್ರಾರಂಭಿಸುತ್ತೇವೆ, ಅದು ಮುಗಿಯುತ್ತಿದ್ದಂತೆ ನಿಲ್ಲಿಸುತ್ತೇವೆ. ಆದರೆ 10.00 ಗಂಟೆಗೆ ಕೆಲಸವನ್ನು ಮಾಡುವುದನ್ನು ನಿಲ್ಲಿಸುತ್ತೇವೆ. ನಮ್ಮದೇ ಕೆಲವು ಕೆಲಸಗಳನ್ನು ಮಾಡಲು ಪಟ್ಟಣಕ್ಕೆ ಹೋಗುತ್ತೇವೆ. ನಾನು ಕೂಲಿ ಕೆಲಸಗಾರನಲ್ಲದಿದ್ದರೆ, ನಾನು ನನ್ನ ಸ್ವಂತ ಕೆಲಸದ ಸಮಯವನ್ನು ಪಾಲಿಸುತ್ತೇನೆ. ಕಾರ್ಮಿಕರು ಸಹ ಕಟ್ಟುನಿಟ್ಟಾದ ವೇಳಾಪಟ್ಟಿಯನ್ನು ಅನುಸರಿಸುವುದಿಲ್ಲ, ಅವರಿಗೆ ತಮ್ಮದೇ ಆದ ವೇಳಾ ಪಟ್ಟಿಯಿರುತ್ತದೆ. ನಾವೆಲ್ಲರೂ ಕೆಲಸದ ನಿರ್ದಿಷ್ಟ ಸ್ವರೂಪವನ್ನು ಅವಲಂಬಿಸಿ ನಮ್ಮ ಕೆಲಸವನ್ನು ವಿಭಜಿಸುತ್ತೇವೆ. ಇವೆಲ್ಲವನ್ನೂ ಸಾಧ್ಯವಾಗಿಸಲು, ಗುತ್ತಿಗೆದಾರರಾಗಿರುವ ಅನೇಕ ಮೇಸ್ತ್ರಿಗಳು ಅಥವಾ ನಾವು ಕಾರ್ಮಿಕರ ಕಾರ್ಡ್‌ಗಳನ್ನು ತೆಗೆದುಕೊಂಡು ಕೆಲಸವನ್ನು ಉತ್ತಮ ರೀತಿಯಲ್ಲಿ ಪೂರೈಸುತ್ತೇವೆ. ಕೆಲವೊಮ್ಮೆ ನಾವು ನಾಲ್ಕು ಅಥವಾ ಐದು ದಿನಗಳನ್ನು ಸ್ಥಳೀಯ ಕೂಲಿ ದರಕ್ಕೆ ಅನುಗುಣವಾಗಿ ಪಾವತಿಸಲು ಎರಡು ಅಥವಾ ಮೂರು ದಿನಗಳ ಕೆಲಸಕ್ಕಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸ ಎಂದು ಲೆಕ್ಕ ಹಾಕುತ್ತೇವೆ.*

*ನಾವು ನಮ್ಮ ಕಚೇರಿಯಲ್ಲಿ ಕುಳಿತು ಮೇಸ್ತ್ರಿಯು ನಾಮಮಾತ್ರದ ಹಾಜರಾತಿ ಪಟ್ಟಿಯನ್ನು ಸಲ್ಲಿಸುವುದನ್ನು ಕಾಯುತ್ತಿದ್ದೇವೆ, ಅದಕ್ಕೆ ಸಹಿ ಹಾಕಿ ಪೋಸ್ಟ್ ಮಾಡಲಾಗುವುದು. ಪಂಚಾಯಿತಿಗಳಲ್ಲಿ ನಮಗೆ ಇತರ ಕೆಲಸಗಳು ಮತ್ತು ಇತರ ಗುರಿಗಳಿವೆ. ಅವರು ಕೂಲಿ ಹಕ್ಕುಗಳನ್ನು ಸಲ್ಲಿಸುತ್ತಿರುವ ಕೆಲಸವು ಸರಿಯಾಗಿ ಪ್ರಮಾಣೀಕರಿಸಲ್ಪಟ್ಟಿದೆಯೆ ಎಂದು ನಾವು ಖಚಿತಪಡಿಸಿಕೊಳ್ಳಬೇಕು, ಕೆಲಸದ ಅವಧಿಯ ಕೊನೆಯಲ್ಲಿ (ವಾರ ಅಥವಾ ಹದಿನೈದು ದಿನಗಳು) ಸ್ವೀಕಾರಹದ ಹಂತವನ್ನು ತಲುಪಿದ್ದೇವೆ. ಹೆಚ್ಚಾಗಿ ಅವರು ತಮ್ಮ ಹಾಜರಾತಿ ಮತ್ತು ಕೂಲಿಯನ್ನು ತಯಾರಿಸಲು ಒಂದು ವಾರಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ.*

*ಹೆಚ್ಚಾಗಿ ಅವರು ತಮ್ಮ ಹಾಜರಾತಿ ಮತ್ತು ಕೂಲಿ ಹಕ್ಕುಗಳ ಪಟ್ಟಿಯನ್ನು (ನಾಮಮಾತ್ರದ ಹಾಜರಾತಿ ಪಟ್ಟಿಯನ್ನು) ತಯಾರಿಸಲು ಒಂದು ವಾರಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ ಮತ್ತು ಮರುದಿನವೇ ಕೂಲಿಯನ್ನು ಅವರ ಖಾತೆಗೆ ಜಮಾ ಮಾಡಬೇಕೆಂದು ನಿರೀಕ್ಷಿಸುತ್ತಾರೆ. [ದಕ್ಷಿಣ ಕನ್ನಡ ಜಿಲ್ಲೆಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ]*

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಲಾ 22.37 ಶೇಕಡಾ) ಸಮಸ್ಯೆಯಾಗಿರುವ ನಾಮಮಾತ್ರದ ಹಾಜರಾತಿ ಪಟ್ಟಿ / ಕೂಲಿ ಪಟ್ಟಿಯನ್ನು ಸಲ್ಲಿಸುವಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಅಗ್ರಸ್ಥಾನದಲ್ಲಿವೆ. ಈ ವಿಷಯದಲ್ಲಿ ಚಿಕ್ಕಬಳ್ಳಾಪುರ ಮತ್ತು ಕಲಬುರಗಿ ಆವರ್ತನದಲ್ಲಿ ಮುಂದಿನ ಸ್ಥಾನದಲ್ಲಿದ್ದು, ಈ ಎರಡು ಜಿಲ್ಲೆಗಳಲ್ಲಿ ಕ್ರಮವಾಗಿ 17.11 ಮತ್ತು 15.79 ರಷ್ಟು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇದನ್ನು ವರದಿ ಮಾಡಿರುತ್ತಾರೆ.

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಕಡೆಯಿಂದ ವಿಳಂಬವು ಒಂದು ಸಮಸ್ಯೆಯಂತೆ ಕೆಲವು ವಿಸ್ತಾರವಾದ ವಿವರಣೆಯನ್ನು ಬಯಸುತ್ತದೆ. ಕೂಲಿ ಪಾವತಿಯಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ ಕಡ್ಡಾಯ ವಿಷಯ ಎಂದು ಅವರು ಏನು ಭಾವಿಸಿದ್ದಾರೆ ಎಂದು ಕೇಳಿದಾಗ, ಶೇಕಡಾ 17 ರಷ್ಟು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ವಿಳಂಬವು ತಮ್ಮ ಭಾಗವಲ್ಲ, ಆದರೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಕಡೆಯಿಂದ ಎಂದು ಪ್ರತಿಕ್ರಿಯಿಸಿರುತ್ತಾರೆ. ಈ ಹೇಳಿಕೆಯಿಂದ ಅವರು ನಿಜವಾಗಿ ಏನು ಅರ್ಥೈಸುತ್ತಾರೆ ಎಂಬುದು ತುಂಬಾ ಸರಳವಾಗಿರುತ್ತದೆ. ನಿಧಿ ವರ್ಗಾವಣೆ ಆದೇಶವನ್ನು ಅಪ್ಲೋಡ್ ಮಾಡಲು ಅಗತ್ಯವಾದ ಎರಡೂ ಸಹಿಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಪಡೆದುಕೊಳ್ಳಬಹುದೆಂದು ಇದು ಸೂಚಿಸುತ್ತದೆ. ಆದರೆ ಕೂಲಿ/ಸಾಮಗ್ರಿ ವೆಚ್ಚಗಳನ್ನು ಸಮಯಕ್ಕೆ ಸಲ್ಲಿಸುವಲ್ಲಿ ವಿಳಂಬವಾಗುತ್ತಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ, ಈ ಹೇಳಿಕೆಯು ನಾವು ನಮ್ಮ ಕೆಲಸವನ್ನು ಮಾಡಿದ್ದೇವೆ ಎಂಬುದನ್ನು ಪ್ರತಿಬಿಂಬಿಸುವ ಉದ್ದೇಶವನ್ನು ಹೊಂದಿರುತ್ತದೆ, ಮತ್ತು ಅದು ಈಗ ಅದರ ನಂತರದ ಹಂತಗಳ ಜವಾಬ್ದಾರಿಯಾಗಿದೆ. ನೋಡಲ್ ಬ್ಯಾಂಕ್. ಸಮಸ್ಯೆಯಂತೆ, ಇದು ಉತ್ತರ ಕನ್ನಡದಲ್ಲಿ (23.08) ಮೊದಲ ಸ್ಥಾನದಲ್ಲಿದೆ ಮತ್ತು ಮಂಡ್ಯ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ (ತಲಾ 17.95) ನಂತರದ ಸ್ಥಾನದಲ್ಲಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಎತ್ತಿದ ಸಮಸ್ಯೆಗಳ ಪಟ್ಟಿಯಲ್ಲಿ ಆಧಾರ್ ಸಂಖ್ಯೆ ಹೊಂದಿರುವ ವ್ಯಕ್ತಿಗಳು ಮತ್ತು ಬ್ಯಾಂಕ್ ಖಾತೆಗಳನ್ನು ಲಿಂಕ್ ಮಾಡುವ ವಿಷಯವು ಪ್ರಾಬಲ್ಯ ಹೊಂದಿರುತ್ತದೆ, ಇದು ಗಣನೀಯ ವಿಳಂಬ ಮತ್ತು / ಅಥವಾ ಸಲ್ಲಿಸಿದ ಹಕ್ಕುಗಳ ನಿರಾಕರಣೆಗೆ ಸಹಕಾರಿಯಾಗಿದೆ ಎಂದು ಭಾವಿಸಿರುತ್ತಾರೆ. ಆದರೆ, ಮೇಲಿನ ಕೋಷ್ಟಕವು ಅವರ ಪ್ರಮುಖ ಕಾಳಜಿಯೆಂದು ಪಟ್ಟಿ ಮಾಡಲಾದ ಸಮಸ್ಯೆಗಳನ್ನು ವರದಿ ಮಾಡಿರುತ್ತದೆ, ಅದೇ ಸಮಸ್ಯೆಯು ಅವರ ಸಮಸ್ಯೆಗಳ ಪಟ್ಟಿಯಲ್ಲಿ ಎರಡನೆಯ ಅಥವಾ ಮೂರನೆಯದಾಗಿರಬಹುದು. ಮೊದಲ ಸಮಸ್ಯೆಯಂತೆ, ಬ್ಯಾಂಕ್ ಖಾತೆ ಮತ್ತು ಆಧಾರ್‌ನೊಂದಿಗೆ ಅದರ ಸಂಪರ್ಕವು ಕೇವಲ 7 ಪ್ರತಿಶತದಷ್ಟು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾತ್ರ ಪ್ರಾಥಮಿಕ ವಿಷಯವಾಗಿತ್ತು. ಆದರೆ ಒಂದು ಸಮಸ್ಯೆಯಂತೆ, ಇದು ಉತ್ತರ ಕನ್ನಡದಲ್ಲಿ (ಶೇಕಡಾ 35.71) ಹೆಚ್ಚಾಗಿದ್ದು, ದಕ್ಷಿಣ ಕನ್ನಡದಲ್ಲಿ ಇದು(ಶೇಕಡಾ 21.43) ಎರಡನೇಯ ಸ್ಥಾನದಲ್ಲಿರುತ್ತದೆ ಸುಮಾರು 26 ಪ್ರತಿಶತದಷ್ಟು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಇದು ಎರಡನೇ ಪ್ರಮುಖ ವಿಷಯವಾಗಿರುತ್ತದೆ, ಆದರೆ ಶೇಕಡಾ 21ರಷ್ಟಿರುವ ಇದು ಮೂರನೇ ಸ್ಥಾನವನ್ನು ಪಡೆದುಕೊಂಡಿರುತ್ತದೆ. ಶ್ರೇಣಿಯನ್ನು ಕಡೆಗಣಿಸಿ ಈ ವಿಷಯವು ಕಳವಳಕಾರಿಯಾಗಿದ್ದು, ಆಧಾರ್ ಮತ್ತು ಬ್ಯಾಂಕ್ ಖಾತೆಯನ್ನು ಲಿಂಕ್ ಮಾಡುವುದು ಎಲ್ಲಾ ಜಿಲ್ಲೆಗಳಲ್ಲಿ ಪ್ರಮುಖ ವಿಷಯವಾಗಿರುತ್ತದೆ. ನಮ್ಮ ದತ್ತಾಂಶ

ಸಂಗ್ರಹಣೆಯ ಅವಧಿಯಲ್ಲಿ ಈ ಪ್ರಯತ್ನವು ಹೆಚ್ಚು ಪ್ರಗತಿಯಲ್ಲಿದ್ದು, ಜನರು ಅದರ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿದ್ದು, ಹೆಚ್ಚಾಗಿ ವಿರೋಧಿಸುತ್ತಿದ್ದಾರೆ. ಪ್ರತಿಯೊಬ್ಬ ಕಾರ್ಮಿಕನಿಗೂ ಪ್ರತ್ಯೇಕ ಬ್ಯಾಂಕ್ ಖಾತೆ ಇರುವುದಕ್ಕೆ ಸಾಕಷ್ಟು ವಿರೋಧವಿತ್ತು, ಆದರೆ ಇಲ್ಲಿಯವರೆಗೆ ಪದ್ಧತಿಯು ಮನೆಯೊಂದಕ್ಕೆ ಒಂದು ಖಾತೆಯಾಗಿತ್ತು. ಆದರೆ ಈ ಉಪಕ್ರಮದ ವಿರೋಧವು ಹೆಚ್ಚಾಗಿ ಯಂತ್ರಗಳು ಮತ್ತು ಹೆವಿ ಅರ್ಥ್ ಮೋಟರ್‌ಗಳನ್ನು (ಜೆಸಿಬಿಗಳು, ಟಿಪ್ಪರ್‌ಗಳು ಇತ್ಯಾದಿ) ನಿಯೋಜಿಸುವ ಮೂಲಕ ಕೆಲಸವನ್ನು ನಿರ್ವಹಿಸಿದ ಗುತ್ತಿಗೆದಾರರಿಂದ ಮತ್ತು ವೈಯಕ್ತಿಕವಾಗಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸ ಮಾಡದ ಅನೇಕ ಕಾರ್ಮಿಕರ ಉದ್ಯೋಗ ಕಾರ್ಡ್‌ಗಳನ್ನು ಬಳಸಿಕೊಂಡಿರುವುದಾಗಿ ಹೇಳಲಾಗಿರುತ್ತದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಅವರ ಸಂದರ್ಶನದ ಸಮಯದಲ್ಲಿ, ಪಂಚಾಯತ್ ಅಥವಾ ತಾಲ್ಲೂಕು/ಕ್ಷೇತ್ರ ಮಟ್ಟದಲ್ಲಿ ಕಾರ್ಮಿಕರಿಗೆ ಕೂಲಿ ಪಾವತಿ ವಿಳಂಬಕ್ಕೆ ಕಾರಣವಾಗಬಹುದಾದ ಕೆಲವು ಸಮಸ್ಯೆಗಳ ಬಗ್ಗೆ ಪ್ರತಿಕ್ರಿಯಿಸಲು ಕೇಳಲಾಯಿತು. ಅವರಿಗೆ ಪ್ರತಿಕ್ರಿಯಿಸಲು ಸುಲಭವಾಗಿಸುವ ಉದ್ದೇಶದಿಂದ, ಮತ್ತು ಸಮಸ್ಯೆಗಳಾದ್ಯಂತ ಮತ್ತು ಜಿಲ್ಲೆಗಳಾದ್ಯಂತ ಹೋಲಿಕೆ ಮಾಡಲು ಅವಕಾಶ ಮಾಡಿಕೊಡುವ ಉದ್ದೇಶದಿಂದ, ಅವರನ್ನು ಘಟನೆಗಳು ದೊಡ್ಡದಾಗಿರಲಿ ಅಥವಾ ಸಣ್ಣದಾಗಿರಲಿ ವಿವರಿಸಲು ಕೇಳಲಾಯಿತು. ಸುಮಾರು 15 ಸಮಸ್ಯೆಗಳ ಬಗ್ಗೆ ಅವರಿಗೆ ಕೇಳಲಾಯಿತು. ನಿರೀಕ್ಷೆಯಂತೆ, ಅವುಗಳಲ್ಲಿ ಹಲವು ತಮ್ಮ ಗ್ರಾಮ ಪಂಚಾಯಿತಿಗಳಲ್ಲಿ ಸಂಭವಿಸುವುದಿಲ್ಲ ಅಥವಾ ಅವುಗಳು ಸಮಸ್ಯೆಯಾಗಿಲ್ಲ ಎಂದು ನಿರಾಕರಿಸಲಾಗಿರುತ್ತದೆ ಪಟ್ಟಿ ಮಾಡಲಾದ ಎಲ್ಲಾ ಸಮಸ್ಯೆಗಳ ವಿಷಯದಲ್ಲೂ ಇದೇ ಆಗಿತ್ತು; 50 ರಿಂದ 60 ರಷ್ಟು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವ್ಯಾಪ್ತಿಯಲ್ಲಿ, ಅವರ ಗ್ರಾಮ ಪಂಚಾಯಿತಿಗಳಲ್ಲಿ ಅಂತಹ ಸಮಸ್ಯೆಗಳ ಬಗ್ಗೆ ಕಾಳಜಿಯಿರಲಿಲ್ಲ. ಕೆಳಗಿನ ಕೋಷ್ಟಕ 9ರಲ್ಲಿನ ಕಾಲಂ 3ನ್ನು ನೋಡುವ ಮೂಲಕ ಇದು ಸ್ಪಷ್ಟವಾಗಿದ್ದು, ಇಲ್ಲಿ 'ಯಾವುದೂ ಇಲ್ಲ' ಎಂದು ತಿಳಿಸಲಾಗಿರುತ್ತದೆ.

**ಕೋಷ್ಟಕ 9: ಹಿಂದಿನ 3 ವರ್ಷಗಳಲ್ಲಿ [2015–18] ಎದುರಿಸಿದ ಸಮಸ್ಯೆಗಳ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಗ್ರಹಿಕೆಗಳು**

| ನಿರ್ದಿಷ್ಟ ತೊಂದರೆಗಳು | | ಯಾವುದೂ ಇಲ್ಲ | ಹೆಚ್ಚು ಇದೆ | ಕಡಿಮೆ ಇದೆ |
|---|---|---|---|---|
| ನಾಮಮಾತ್ರದ ಹಾಜರಾತಿ ಪಟ್ಟಿಯಲ್ಲಿ ನಮೂದು ತಪ್ಪಾಗಿರುವುದು | ಸಂಖ್ಯೆ | 178 | 15 | 37 |
| | % | 77.4 | 6.5 | 16.1 |
| ಉದ್ಯೋಗ ಕಾರ್ಡ್‌ನಲ್ಲಿ ನಮೂದು ತಪ್ಪಾಗಿರುವುದು | ಸಂಖ್ಯೆ | 157 | 15 | 58 |
| | % | 68.3 | 6.5 | 25.2 |
| ಬ್ಯಾಂಕ್ ಖಾತೆ ಸಂಖ್ಯೆಯ ನಮೂದು ತಪ್ಪಾಗಿರುವುದು | ಸಂಖ್ಯೆ | 116 | 26 | 88 |
| | % | 50.4 | 11.3 | 38.3 |
| ಉದ್ಯೋಗ ಕಾರ್ಡ್ ನೋಂದಣಿಯಾದ ನಂತರದಲ್ಲಿ ಬ್ಯಾಂಕ್ ಖಾತೆ ಸಂಖ್ಯೆಯಲ್ಲಿ ಬದಲಾವಣೆಯಾಗಿರುವುದು | ಸಂಖ್ಯೆ | 130 | 17 | 83 |
| | % | 56.5 | 7.4 | 36.1 |
| ಖಾತೆಯು ನಿಷ್ಕ್ರಿಯೆಯಾಗಿರುವುದು | ಸಂಖ್ಯೆ | 152 | 23 | 55 |
| | % | 66.1 | 10.0 | 23.9 |
| ಕೇಳಿರುವ ಕೂಲಿ ಹಕ್ಕುಗಳು ನಿರಾಕರಣೆಯಾಗಿರುವುದು | ಸಂಖ್ಯೆ | 155 | 13 | 62 |
| | % | 67.4 | 5.7 | 27.0 |
| ಜಾಗತಿಕ ಸ್ಥಾನಿಕ ವ್ಯವಸ್ಥೆಯ ವರದಿ ಮತ್ತು ಹಾಜರಾತಿ ಪಟ್ಟಿಯು ಹೊಂದಾಣಿಕೆಯಾಗದಿರುವುದು | ಸಂಖ್ಯೆ | 153 | 23 | 54 |
| | % | 66.5 | 10.0 | 23.5 |

| | | | | |
|---|---|---|---|---|
| ಮೊದಲ ಮತ್ತು ಎರಡನೆಯ ಸಹಿಗಳನ್ನು ಪಡೆಯುವಲ್ಲಿ ವಿಳಂಬವಾಗಿರುವುದು | ಸಂಖ್ಯೆ | 145 | 27 | 58 |
| | % | 63.0 | 11.7 | 25.2 |
| ಡಿಜಿಟಲ್ ಸಹಿಗಳ ಅಪ್ ಸ್ಕೇಲಿಂಗ್ ನಿದರ್ಶನಗಳು | ಸಂಖ್ಯೆ | 106 | 3 | 121 |
| | % | 46.1 | 1.3 | 52.6 |
| ಪಾವತಿಗಳಲ್ಲಿ ವಿಳಂಬವಾಗಿರುವುದು | ಸಂಖ್ಯೆ | 146 | 34 | 50 |
| | % | 63.5 | 14.8 | 21.7 |
| ಕೆಲಸ ನೀಡದಿರುವ ಬಗ್ಗೆ ದೂರುಗಳು | ಸಂಖ್ಯೆ | 158 | 21 | 51 |
| | % | 68.7 | 9.1 | 22.2 |
| ಕೆಲಸ ನಡೆಯದಿದ್ದರೂ ಕೂಲಿಗಾಗಿ ಹಕ್ಕು ಬೇಡಿಕೆಯನ್ನು ಮಾಡಿದ ಬಗ್ಗೆ ದೂರುಗಳು | ಸಂಖ್ಯೆ | 166 | 11 | 53 |
| | % | 72.2 | 4.8 | 23.0 |
| ಇತರರಿಂದ (ಗುತ್ತಿಗೆದಾರರು) ಕಾರ್ಮಿಕರ ಉದ್ಯೋಗ ಕಾರ್ಡ್‌ಗಳ ಬಳಕೆಯಾಗುತ್ತಿರುವುದು | ಸಂಖ್ಯೆ | 155 | 24 | 51 |
| | % | 67.4 | 10.4 | 22.2 |
| ಮಾಹಿತಿ ಹಕ್ಕು ಅಧಿನಿಯಮದಡಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ದೂರುಗಳು | ಸಂಖ್ಯೆ | 156 | 22 | 52 |
| | % | 67.8 | 9.6 | 22.6 |

ಮೌಲ್ಯಮಾಪನ ವರದಿಯಂತೆ, ಹೆಚ್ಚಿನ ಗ್ರಾಮ ಪಂಚಾಯಿತಿಗಳಿಗೆ ಇದು ನಿಜಕ್ಕೂ ಸಮಸ್ಯೆಯಲ್ಲ ಎಂದು ಹೇಳಬೇಕು, ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಒಳಗೊಂಡ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೂಲಿ ಮತ್ತು ಸಾಮಗ್ರಿಗಳ ಪಾವತಿಗಾಗಿ ವಿವಿಧ ಕಾರ್ಯವಿಧಾನಗಳನ್ನು ನಿರ್ವಹಿಸಲು ಮತ್ತು ಅನುಸರಿಸಲು ಸಾಕಷ್ಟು ಸಕಾರಾತ್ಮಕ ಫಲಿತಾಂಶವು ಕಾರಣವಾಗಿರುತ್ತದೆ. ಈ ಸಮಸ್ಯೆಗಳನ್ನು ತಮ್ಮ ಗ್ರಾಮ ಪಂಚಾಯಿತಿಗಳಲ್ಲಿ ಎದುರಿಸುತ್ತಿರುವ ಸಮಸ್ಯೆಯಲ್ಲ ಎಂದು ವರದಿ ಮಾಡಲು, ಈ ರೀತಿಯಲ್ಲಿ ವ್ಯಕ್ತಪಡಿಸಲು ಒಂದು ಕಾರಣವಿರಬಹುದು. ಅವುಗಳ ಘಟನೆಗಳನ್ನು ಒಪ್ಪಿಕೊಳ್ಳುವುದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ದಕ್ಷತೆಯ ಮೇಲೆ ಚೆನ್ನಾಗಿ ಪ್ರತಿಫಲಿಸುವುದರಿಂದ ಅವರು ನಿರಾಕರಣೆ ಮಾಡುತ್ತಿದ್ದಾರೆ. ಸಹಜವಾಗಿ, ಮತ್ತು ಕೊನೆಯದಾಗಿ, ಟೀಕೆಗಳಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಮಸ್ಯೆಗಳನ್ನು ಗುರುತಿಸುವಲ್ಲಿ ತಪ್ಪಾಗಿರಬಹುದು. ಆದರೆ, ಪ್ರಾಯೋಗಿಕ ಕ್ಷೇತ್ರ ಅಧ್ಯಯನಗಳ ಸಮಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ನಡೆಸಿದ ಮೊದಲಿನ ಸಮಾಲೋಚನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅಧಿಕಾರಿಗಳೊಂದಿಗೆ ನಡೆಸಿದ ಸಮಾಲೋಚನೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ನಾವು ನಡೆಸಿದ ಸಾಹಿತ್ಯದ ವಿಮರ್ಶೆ ಆಧರಿಸಿ ಇಂತಹ ಹೆಚ್ಚಿನ ಸಮಸ್ಯೆಗಳನ್ನು ಗುರುತಿಸಲಾಗಿರುತ್ತದೆ. (ಉದಾ., ನಾರಾಯಣನ್ 2016; ಬಿನೋ 2014 ಮತ್ತು ಪಾಲ್ 2016).

ಕೆಳಗಿನವುಗಳಲ್ಲಿನ ವಿಶ್ಲೇಷಣೆಯ ಉದ್ದೇಶಕ್ಕಾಗಿ ನಾವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ 'ಯಾವುದೂ ಇಲ್ಲ' ಎಂಬ ಪ್ರತಿಕ್ರಿಯೆಯನ್ನು ಬಿಟ್ಟುಬಿಡಬಹುದು ಮತ್ತು 'ಕಡಿಮೆ' ಅಥವಾ 'ಹೆಚ್ಚಿನ' ಪ್ರಮಾಣಗಳಲ್ಲಿ ಸಂಭವಿಸುವಂತಹ ವರದಿ ಮಾಡುವಿಕೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬಹುದು. ಆದಾಗ್ಯೂ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಗ್ರಾಮ ಪಂಚಾಯಿತಿಗಳಲ್ಲಿ ಕೆಲವು ಸಮಸ್ಯೆಗಳು ಸಂಭವಿಸುತ್ತಿವೆ ಎಂದು ಒಪ್ಪಿಕೊಂಡಿದ್ದರಿಂದ ಅವು ಅತಿರೇಕದ ಅಥವಾ ಅತಿ ಕಡಿಮೆ ಸಂಭವಿಸಿವೆ ಎಂದು ಅರ್ಥವಲ್ಲ.

**ಕೋಷ್ಟಕ 10: ಪಾವತಿ ವಿಳಂಬಕ್ಕೆ ಕಾರಣವಾಗುವ ಕೆಲವು ಸಮಸ್ಯೆಗಳ ಆವರ್ತನಕ್ಕೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪ್ರತಿಕ್ರಿಯೆ**

| ಕ್ರ. ಸಂ. | ನಿರ್ದಿಷ್ಟ ತೊಂದರೆಗಳು | ಸಂಭವಿಸಿರುವುದು | ಹೆಚ್ಚು | ಕಡಿಮೆ |
|---|---|---|---|---|
| 1 | ನಾಮಮಾತ್ರದ ಹಾಜರಾತಿ ಪಟ್ಟಿಯ ಸಂಖ್ಯೆಯ ನಮೂದು ತಪ್ಪಾಗಿರುವುದು | 16.25 | 28.8 | 71.2 |
| 2 | ಉದ್ಯೋಗ ಕಾರ್ಡ್‌ನಲ್ಲಿ ಸಂಖ್ಯೆಯ ನಮೂದು ತಪ್ಪಾಗಿರುವುದು | 26.25 | 40.5 | 59.5 |
| 3 | ಬ್ಯಾಂಕ್ ಖಾತೆ ಸಂಖ್ಯೆಯ ನಮೂದು ತಪ್ಪಾಗಿರುವುದು | 23.44 | 32.0 | 68.0 |
| 4 | ಉದ್ಯೋಗ ಕಾರ್ಡ್ ನೋಂದಣಿಯಾದ ನಂತರದಲ್ಲಿ ಬ್ಯಾಂಕ್ ಖಾತೆ ಸಂಖ್ಯೆಯಲ್ಲಿ ಬದಲಾವಣೆಯಾಗಿರುವುದು | 20.00 | 17.2 | 82.8 |
| 5 | ಖಾತೆಯು ನಿಷ್ಕ್ರಿಯೆಯಾಗಿರುವುದು | 26.56 | 31.8 | 68.2 |
| 6 | ಕೇಳಿರುವ ಕೂಲಿ ಹಕ್ಕುಗಳು ನಿರಾಕರಣೆಯಾಗಿರುವುದು | 22.50 | 29.2 | 70.8 |
| 7 | ಜಾಗತಿಕ ಸ್ಥಾನಿಕ ವ್ಯವಸ್ಥೆಯ ವರದಿ ಮತ್ತು ಹಾಜರಾತಿ ಪಟ್ಟಿಯು ಹೊಂದಾಣಿಕೆಯಾಗದಿರುವುದು | 24.06 | 29.9 | 70.1 |
| 8 | ಮೊದಲ ಮತ್ತು ಎರಡನೆಯ ಸಹಿಗಳನ್ನು ಪಡೆಯುವಲ್ಲಿ ವಿಳಂಬವಾಗಿರುವುದು | 38.75 | 2.4 | 97.6 |
| 9 | ಡಿಜಿಟಲ್ ಸಹಿಗಳ ಅಪ್ ಸ್ಕೇಲಿಂಗ್ ನಿದರ್ಶನಗಳು | 23.13 | 29.7 | 70.3 |
| 10 | ಪಾವತಿಗಳಲ್ಲಿ ವಿಳಂಬವಾಗಿರುವುದು | 22.81 | 20.5 | 79.5 |
| 11 | ಕೆಲಸ ನೀಡದಿರುವ ಬಗ್ಗೆ ದೂರುಗಳು | 31.25 | 17.0 | 83.0 |
| 12 | ಕೆಲಸ ನಡೆಯದಿದ್ದರೂ ಕೂಲಿಗಾಗಿ ಹಕ್ಕು ಬೇಡಿಕೆಯನ್ನು ಮಾಡಿದ ಬಗ್ಗೆ ದೂರುಗಳು | 23.44 | 17.3 | 82.7 |
| 13 | ಇತರರಿಂದ (ಗುತ್ತಿಗೆದಾರರು) ಕಾರ್ಮಿಕರ ಉದ್ಯೋಗ ಕಾರ್ಡ್‌ಗಳ ಬಳಕೆಯಾಗುತ್ತಿರುವುದು | 35.63 | 22.8 | 77.2 |
| 14 | ಮಾಹಿತಿ ಹಕ್ಕು ಅಧಿನಿಯಮದಡಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ದೂರುಗಳು | 24.38 | 29.5 | 70.5 |

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ವರದಿ ಮಾಡಿದಂತೆ, ಸಂಭವಿಸಿದ ಕೆಲವು ಘಟನೆಗಳಿಂದ ಸಮಸ್ಯೆಗಳು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ತಡೆದುಕೊಳ್ಳದೇ, ಪಾವತಿಯ ವಿಳಂಬಕ್ಕೆ ಗಮನಾರ್ಹವಾಗಿ ಕಾರಣವಾಗಬಹುದಾದರೂ ಅದರ ಪ್ರಮಾಣವು ತುಂಬಾ ಕಡಿಮೆಯಾಗಿರುತ್ತದೆ. ಉದಾಹರಣೆಗೆ, ನಿಧಿ ವರ್ಗಾವಣೆ ಆದೇಶಗಳು ಅಂಗೀಕಾರಗೊಳ್ಳಲು ಮೊದಲ ಮತ್ತು ಎರಡನೆಯ ಸಹಿಯನ್ನು ಡಿಜಿಟಲ್‌ನಲ್ಲಿ ಅಳವಡಿಸುವುದು ಅಂತಹ ವಿಳಂಬದ ವಿದ್ಯಮಾನದ ಘಟನೆಗಳಲ್ಲಿ ಒಂದು ಆಗಿರುತ್ತದೆ. ಸುಮಾರು 38.75 ರಷ್ಟು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇದನ್ನು ಸಮಸ್ಯೆಯೆಂದು ಹಂಚಿಕೊಂಡಿದ್ದರೂ, ಕೇವಲ 3 ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಮಾತ್ರ ಅದು ಶ್ರೇಣಿಯೊಂದಿಗೆ ಎಷ್ಟು ಉನ್ನತ ಸ್ಥಾನದಲ್ಲಿದೆ ಎಂದು ತಿಳಿಸಲ್ಪಟ್ಟಿರುತ್ತದೆ, ಆದರೆ 97.6 ಶೇಕಡಾ ಜನರು ಅದರ ಆವರ್ತನದಲ್ಲಿ 'ಕಡಿಮೆ' ಎಂದು ಭಾವಿಸಿದ್ದಾರೆ. ಹಂಚಿಕೊಳ್ಳುವ ಹೆಚ್ಚಿನ ಆವರ್ತನದ ಮುಂದಿನ ಒಂದು ಸಮಸ್ಯೆಯೆಂದರೆ, ಕಾರ್ಮಿಕರ ಉದ್ಯೋಗ ಕಾರ್ಡ್‌ಗಳನ್ನು ಇತರರಿಂದ(ಗುತ್ತಿಗೆದಾರರು) ಬಳಸಲ್ಪಡುವುದು ಆಗಿದ್ದು, ಶೇಕಡಾ 35.63 ಜನರಿಗೆ ಇದು ಒಂದು ನಿರ್ಣಾಯಕ ವಿಷಯವಾಗಿದೆ–ನನ್ನ ಯಂತ್ರಗಳು ಮತ್ತು ಗುತ್ತಿಗೆದಾರರಿಂದ ಕೆಲಸ ನಡೆಯುತ್ತಿರುವಾಗ ಸಾಮಾನ್ಯವಾಗಿ ಇತರರ ಉದ್ಯೋಗ ಕಾರ್ಡ್ ಬಳಸುವ ಅವಶ್ಯಕತೆಯಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಚಯದೊಂದಿಗೆ ಮಧ್ಯವರ್ತಿಗಳ ಪಾತ್ರವು ಕಡಿಮೆಯಾಗಿದೆಯೆ ಅಥವಾ

ತೆಗೆದುಹಾಕಲ್ಪಟ್ಟಿದೆಯೆ ಎಂದು ನಿರ್ಣಯಿಸುವುದು ಈ ಮೌಲ್ಯಮಾಪನದ ಉದ್ದೇಶಗಳಲ್ಲಿ ಒಂದಾಗಿರುತ್ತದೆ. ಈ ಪದ್ಧತಿಯು ಸಂಪೂರ್ಣವಾಗಿ ಕಣ್ಮರೆಯಾಗಿಲ್ಲ ಎಂಬುದಕ್ಕೆ ನಾವು ಪುರಾವೆಗಳನ್ನು ಪಡೆಯುವ ಮತ್ತೊಂದು ಸೂಚಕ ಇಲ್ಲಿದೆ. ಶೇಕಡಾ 35.6 ರಷ್ಟು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಗ್ರಾಮ ಪಂಚಾಯಿತಿಗಳಲ್ಲಿ ಇದು ಸಂಭವಿಸಿದ ಉದಾಹರಣೆಗಳಿವೆ ಎಂದು ತಿಳಿಸಿರುತ್ತಾರೆ. ಅವರಲ್ಲಿ ಶೇಕಡಾ 77.2 ರಷ್ಟು ಜನರು ಈ ಘಟನೆಯು 'ಕಡಿಮೆ' ಪ್ರಮಾಣದಲ್ಲಿದೆ ಎಂದು ವರದಿ ಮಾಡಿದ್ದರೆ, ಉಳಿದವರು (ಶೇಕಡಾ 22.8) ಇದು ತಮ್ಮ ಗ್ರಾಮ ಪಂಚಾಯಿತಿಗಳಲ್ಲಿ ಸಾಕಷ್ಟು 'ಹೆಚ್ಚು' ಇರುವುದಾಗಿ ಪರಿಗಣಿಸಿದ್ದಾರೆ.

**ಕೋಷ್ಟಕ 11: ಜಿಲ್ಲೆಗಳಾದ್ಯಂತ ವಿಳಂಬಿತ ಪಾವತಿಗಳಲ್ಲಿ ಉಂಟಾಗುವ ಸಮಸ್ಯೆಗಳ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಗ್ರಹಿಕೆ.**

| ಜಿಲ್ಲೆಯ ಹೆಸರು | ನಾಮಮಾತ್ರದ ಹಾಜರಾತಿ ಪಟ್ಟಿಯ ಸಂಖ್ಯೆಯ ನಮೂದು ತಪ್ಪಾಗಿರುವುದು | | ಉದ್ಯೋಗ ಕಾರ್ಡ್ ಸಂಖ್ಯೆಯ ನಮೂದು ತಪ್ಪಾಗಿರುವುದು | | ಬ್ಯಾಂಕ್ ಖಾತೆ ಸಂಖ್ಯೆಯ ನಮೂದು ತಪ್ಪಾಗಿರುವುದು | | ಉದ್ಯೋಗ ಕಾರ್ಡ್ ಜೋಡಣೆಯಾದ ಸಂಪರ್ಕ ಬ್ಯಾಂಕ್ ಖಾತೆ ಸಂಖ್ಯೆಯಲ್ಲಿ ಬದಲಾವಣೆಯಾಗಿರುವುದು | | ಖಾತೆಯು ನಿಷ್ಕ್ರಿಯವಾಗಿರುವುದು | | ಕೆಳಹಂತದ ಕೂಲಿ ಪಟ್ಟಿಗಳು ನಿರಾಕರಣೆಯಾಗಿರುವುದು | | ಪಾವತಿಗೆ ಸ್ವೀಕೃತ ಪತ್ರದ ವಿವರ ಮತ್ತು ಹಾಜರಾತಿ ಪಟ್ಟಿಯು ಹೊಂದಾಣಿಕೆಯಾಗದಿರುವುದು | |
|---|---|---|---|---|---|---|---|---|---|---|---|---|---|---|
| | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ |
| ಚಿಕ್ಕಬಳ್ಳಾಪುರ | 13.3 | 2.7 | 13.3 | 6.9 | 11.5 | 8.0 | 23.5 | 3.6 | 13.0 | 7.3 | 15.4 | 4.8 | 13.0 | 9.3 |
| ದಕ್ಷಿಣ ಕನ್ನಡ | 26.7 | 16.2 | 13.3 | 22.4 | 19.2 | 20.5 | 5.9 | 21.7 | 21.7 | 18.2 | 7.7 | 27.4 | 4.3 | 14.8 |
| ಧಾರವಾಡ | 33.3 | 18.9 | 53.3 | 10.3 | 23.1 | 10.2 | 23.5 | 9.6 | 30.4 | 16.4 | 69.2 | 17.7 | 52.2 | 14.8 |
| ಕಲಬುರಗಿ | 6.7 | 16.2 | 6.7 | 20.7 | 15.4 | 13.6 | 11.8 | 18.1 | 8.7 | 20.0 | | 17.7 | 8.7 | 18.5 |
| ಕೋಲಾರ | | 2.7 | | 1.7 | | 9.1 | | 8.4 | 4.3 | 1.8 | | 4.8 | | 5.6 |
| ಮಂಡ್ಯ | 6.7 | 27.0 | 13.3 | 15.5 | 7.7 | 14.8 | 11.8 | 18.1 | 8.7 | 20.0 | 7.7 | 9.7 | 8.7 | 16.7 |
| ಉತ್ತರ ಕನ್ನಡ | 6.7 | 8.1 | | 10.3 | 15.4 | 18.2 | 23.5 | 10.8 | 8.7 | 9.1 | | 8.1 | 13.0 | 13.0 |
| ಯಾದಗಿರಿ | 6.7 | 8.1 | | 12.1 | 7.7 | 5.7 | | 9.6 | 4.3 | 7.3 | | 9.7 | | 7.4 |
| ಒಟ್ಟು % | 6.5 | 16.1 | 6.5 | 25.2 | 11.3 | 38.3 | 7.4 | 36.1 | 10.0 | 23.9 | 5.7 | 27.0 | 10.0 | 23.5 |
| ಸಂಖ್ಯೆ | 15 | 37 | 15 | 58 | 26 | 88 | 17 | 83 | 23 | 55 | 13 | 62 | 23 | 54 |

[ಕೋಷ್ಟಕದಲ್ಲಿನ ಶೇಕಡಾವಾರು ಅಂಕಿಗಳು ಮಾದರಿ ಜಿಲ್ಲೆಗಳಲ್ಲಿನ ಒಟ್ಟು ಅಂಕಿಗಳು ಆಗಿರುತ್ತವೆ]

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಗ್ರಾಮ ಪಂಚಾಯಿತಿಗಳಲ್ಲಿ ಎದುರಿಸುತ್ತಿರುವ ಇತರ ಪ್ರಮುಖ ಸಮಸ್ಯೆ ಎಂದರೆ ತಪ್ಪು ನಮೂದುಗಳಲ್ಲಿ ಒಂದಾಗಿದೆ – ನಾಮಮಾತ್ರದ ಹಾಜರಾತಿ ಪಟ್ಟಿಯಲ್ಲಿನ ಸಂಖ್ಯೆ (ಶೇಕಡಾ 16), ಕಾರ್ಮಿಕರ ಹೆಸರು ಮತ್ತು ಅವರ ಉದ್ಯೋಗ ಕಾರ್ಡ್ ಸಂಖ್ಯೆಗಳು (ಶೇಕಡಾ 26), ಅಥವಾ ಅವರ ಬ್ಯಾಂಕ್ ಖಾತೆ ಸಂಖ್ಯೆಗಳು (ಶೇಕಡಾ 23). ಈ ಮೂವರಲ್ಲಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಲ್ಲಿ ಶೇಕಡಾ 45 ಕ್ಕಿಂತಲೂ ಹೆಚ್ಚು ಜನರು ಉದ್ಯೋಗ ಕಾರ್ಡ್ ಸಂಖ್ಯೆಗಳ ತಪ್ಪು ನಮೂದುಗಳು ಹೆಚ್ಚು ಆಗಿರುತ್ತವೆ ಎಂದು ವ್ಯಕ್ತಪಡಿಸಿದ್ದು, ತಪ್ಪಾದ ಬ್ಯಾಂಕ್ ಖಾತೆ ಸಂಖ್ಯೆಗಳು ಶೇಕಡಾ 32.0 ರಷ್ಟಿರುತ್ತವೆ. ಧಾರವಾಡ ಜಿಲ್ಲೆಯು ಈ ವಿದ್ಯಮಾನದ ಹೆಚ್ಚಿನ ಆವರ್ತನವನ್ನು

ಹೊಂದಿದ್ದರೆ, ಕಲಬುರಗಿ ಜಿಲ್ಲೆಯಲ್ಲಿ ಇದು ಅತ್ಯಂತ ಕಡಿಮೆ ಇರುತ್ತದೆ. ಜಿಲ್ಲೆಗಳ ಮಟ್ಟವನ್ನು ಕೇಂದ್ರೀಕರಿಸಿ, ಮಾದರಿ ಜಿಲ್ಲೆಗಳಲ್ಲಿ ಅವುಗಳ ಘಟನೆಗಳಿಗೆ ಹೋಲಿಸಿದರೆ:

- ಧಾರವಾಡದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪಟ್ಟಿ ಮಾಡಲಾದ ಹೆಚ್ಚಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸ್ವಲ್ಪ ಮಟ್ಟಿಗೆ 'ಹೆಚ್ಚಿನ' ಘಟನೆಗಳು ಹೊಂದಿದ್ದವು,ನಾಮಮಾತ್ರದ ಹಾಜರಾತಿ ಪಟ್ಟಿಯ ಸಂಖ್ಯೆಯ ನಮೂದು ತಪ್ಪಾಗಿರುವುದು (ಶೇಕಡಾ 33.3)
- ಉದ್ಯೋಗ ಕಾರ್ಡ್‌ನಲ್ಲಿ ಸಂಖ್ಯೆಯ ನಮೂದು ತಪ್ಪಾಗಿರುವುದು (ಶೇಕಡಾ 53.3)
- ಬ್ಯಾಂಕ್ ಖಾತೆ ಸಂಖ್ಯೆಯ ನಮೂದು ತಪ್ಪಾಗಿರುವುದು (ಶೇಕಡಾ 23.5)
- ಕಾರ್ಮಿಕರ ಮತ್ತು/ಅಥವಾ ಸಾಮಗ್ರಿ ಪೂರೈಕೆದಾರರ ಬ್ಯಾಂಕ್ ಖಾತೆಗಳು ನಿಷ್ಕ್ರಿಯೆಯಾಗಿರುವುದು (ಶೇಕಡಾ 30.4)
- ಕೇಳಿರುವ ಕೂಲಿ ಹಕ್ಕುಗಳು ನಿರಾಕರಣೆಯಾಗಿರುವುದು (ಶೇಕಡಾ 69.2)
- ಮಾಡಲಾದ ಕೆಲಸಕ್ಕೆ ಜಾಗತಿಕ ಸ್ಥಾನಿಕ ವ್ಯವಸ್ಥೆಯ ವರದಿಗಳು ಮತ್ತು / ಅಥವಾ ಹಾಜರಾತಿ ಪಟ್ಟಿಯು ಹೊಂದಾಣಿಕೆಯಾಗದಿರುವುದು (ಶೇಕಡಾ 52.2)

**ಕೋಷ್ಟಕ 12: ಜಿಲ್ಲೆಗಳಾದ್ಯಂತ ವಿಳಂಬಿತ ಪಾವತಿಗಳಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಗ್ರಹಿಕೆ. (ಮುಂದುವರೆದಿದೆ)**

| ಜಿಲ್ಲೆಯ ಹೆಸರು | ಮೊದಲ ಮತ್ತು ಎರಡನೆಯ ಸಹಿಯಲ್ಲಿನ ವಿಳಂಬಗಳು | | ಡಿಜಿಟಲ್ ಸಹಿಗಳ ಅಪ್ ಸ್ಕೇಲಿಂಗ್ ನಿದರ್ಶನಗಳು | | ವಿಳಂಬವಾದ ಪಾವತಿಗಳು | | ಕೆಲಸ ನೀಡದಿರುವ ಬಗ್ಗೆ ನೀಡಲಾದ ದೂರುಗಳು | | ಕೆಲಸದ ಮಾಡದಿದ್ದರೂ ಕೂಲಿಗಾಗಿ ಕೇಳಿದ ಹಕ್ಕುಗಳ ಬಗ್ಗೆ ದೂರುಗಳು | | ಕಾರ್ಮಿಕರ ಉದ್ಯೋಗ ಕಾರ್ಡ್‌ಗಳನ್ನು ಇತರರು ಬಳಸಿರುವುದು (ಗುತ್ತಿಗೆದಾರರು) | | ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ದೂರುಗಳು | |
|---|---|---|---|---|---|---|---|---|---|---|---|---|---|---|
| | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ |
| ಚಿಕ್ಕಬಳ್ಳಾಪುರ | 11.1 | 10.3 | 33.3 | 9.9 | 5.9 | 2.0 | 14.3 | 3.9 | 9.1 | 5.7 | 16.7 | 5.9 | 4.5 | 3.8 |
| ದಕ್ಷಿಣ ಕನ್ನಡ | 22.2 | 20.7 | 33.3 | 27.3 | 14.7 | 18.0 | 14.3 | 27.5 | 18.2 | 20.8 | 12.5 | 17.6 | 22.7 | 23.1 |
| ಧಾರವಾಡ | 11.1 | 6.9 | | | 29.4 | 22.0 | 14.3 | 9.8 | 45.5 | 15.1 | 20.8 | 21.6 | 50.0 | 11.5 |
| ಕಲಬುರಗಿ | 14.8 | 19.0 | | 16.5 | 11.8 | 20.0 | 14.3 | 19.6 | 9.1 | 20.8 | 20.8 | 13.7 | 4.5 | 21.2 |
| ಕೋಲಾರ | 3.7 | 8.6 | | 8.3 | 2.9 | 6.0 | 4.8 | 5.9 | | 3.8 | | 7.8 | | 5.8 |
| ಮಂಡ್ಯ | 11.1 | 15.5 | 33.3 | 19.0 | 5.9 | 16.0 | 9.5 | 19.6 | 18.2 | 13.2 | 8.3 | 17.6 | 9.1 | 11.5 |
| ಉತ್ತರ ಕನ್ನಡ | 18.5 | 10.3 | | 14.0 | 23.5 | 6.0 | 23.8 | 5.9 | | 9.4 | 16.7 | 9.8 | 4.5 | 13.5 |
| ಯಾದಗಿರಿ | 7.4 | 8.6 | | 5.0 | 5.9 | 10.0 | 4.8 | 7.8 | | 11.3 | 4.2 | 5.9 | 4.5 | 9.6 |
| ಒಟ್ಟು % | 11.7 | 25.2 | 1.3 | 52.6 | 43.5 | 43.5 | 14.8 | 21.7 | 4.8 | 23.0 | 10.4 | 22.2 | 9.6 | 22.6 |
| ಸಂಖ್ಯೆ | 27 | 58 | 3 | 121 | 100 | 100 | 34 | 50 | 11 | 53 | 24 | 51 | 22 | 52 |

ಆದಾಗ್ಯೂ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪೋರ್ಟಲ್‌ನಲ್ಲಿ ಲಭ್ಯವಿರುವ ದತ್ತಾಂಶವು ಧಾರವಾಡ ಜಿಲ್ಲೆಯ ಮಾದರಿ ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಾಡಿದ ಹಕ್ಕುಗಳೊಂದಿಗೆ ಹೊಂದಿಕೆಯಾಗುವುದಿಲ್ಲ. ಆ ಮಟ್ಟಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಅನುಭವ / ಮೌಲ್ಯಮಾಪನದ ಆಧಾರದ ಮೇಲೆ ತಮ್ಮದೇ ಆದ ಗ್ರಾಮ ಪಂಚಾಯಿತಿಗಳನ್ನು ಉಲ್ಲೇಖಿಸುತ್ತಿದ್ದರು, ಆದರೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ದತ್ತಾಂಶ ಲಭ್ಯವಿರುವ ಈ ಕೆಲವು ವಿಷಯಗಳಲ್ಲಿ ಜಿಲ್ಲಾ ಮಟ್ಟದ ಪರಿಸ್ಥಿತಿಯು ಉತ್ತಮವಾಗಿರುತ್ತದೆ.

## 8.4 ವಿಳಂಬ ವೇತನ ಪಾವತಿ

ಮೇಲಿನ ಅಧ್ಯಾಯದಲ್ಲಿ ಸೂಚಿಸಿದಂತೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರು ಮಾಡುವ ಕೆಲಸಕ್ಕೆ ಕೂಲಿಯನ್ನು 8 ದಿನಗಳಲ್ಲಿ ಪಾವತಿಸಬೇಕು, ಮತ್ತು ತಡವೆಂದರೆ 15 ದಿನಗಳವರೆಗೆ ಅಧಿನಿಯಮದ ಪ್ರಕಾರ ಪಾವತಿಸಬೇಕು. ನಮ್ಮ ವಿಶ್ಲೇಷಣೆಯ ಉದ್ದೇಶಗಳಿಗಾಗಿ, ನಾವು 2013–14ನೇ ಸಾಲಿನ (ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದ ವರ್ಷ), 2014–15ರಿಂದ 2018–19ರವರೆಗೆ ಲಭ್ಯವಿರುವ ದತ್ತಾಂಶವನ್ನು ತೆಗೆದುಕೊಂಡಿದ್ದೇವೆ. ನಿಧಿ ವರ್ಗಾವಣೆ ಆದೇಶವನ್ನು ಪೋಸ್ಟ್ ಮಾಡಿದ 15 ದಿನಗಳಲ್ಲಿ ಕೂಲಿಯನ್ನು ಪಾವತಿಸಿದರೆ, ಅಂತಹ ಪಾವತಿಯನ್ನು ವಿಳಂಬವಿಲ್ಲದೆ ಪಾವತಿಸಿದ ಕೂಲಿ ಅಥವಾ ಸಮಯಕ್ಕೆ ಪಾವತಿಸಲಾದ ಕೂಲಿ ಎಂದು ವ್ಯಾಖ್ಯಾನಿಸಬಹುದು.

ಕೆಳಗಿನ ಚಿತ್ರದಿಂದ ಗಮನಿಸಬಹುದಾದಂತೆ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪರಿಚಯಿಸುವ ಮೊದಲು ಕೂಲಿಯನ್ನು ಸಮಯಕ್ಕೆ ಸರಿಯಾಗಿ ಪಾವತಿಸುವ ಪ್ರಮಾಣವು ತುಂಬಾ ಕಡಿಮೆಯಾಗಿತ್ತು. ದತ್ತಾಂಶದ ಒಂದು ಮೂಲದ ಪ್ರಕಾರ ರಾಷ್ಟ್ರೀಯ ಸರಾಸರಿ ಸಮಯೋಚಿತ ಪಾವತಿಯು ಶೇಕಡಾ 28.39ರಿಂದ 2018–19ರ ವೇಳೆಗೆ 90.52ಕ್ಕೆ ಏರಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಚಯದಿಂದಾಗಿ ಈ ತೀವ್ರ ಬದಲಾವಣೆಯು ಸಾಧ್ಯವಾಗಿರುತ್ತದೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಆರಂಭದಲ್ಲಿ ಆಯ್ದ ರಾಜ್ಯಗಳಲ್ಲಿ ನಡೆಸಲಾಗಿದ್ದು, ಕ್ರಮೇಣ ದೇಶಾದ್ಯಂತ ವಿಸ್ತರಿಸಲಾಗಿರುತ್ತದೆ.

ಸಮಯಕ್ಕೆ ವೇತನ ಪಾವತಿಸುವಲ್ಲಿ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದ್ದರೂ, ವಾಸ್ತವವಾಗಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸುವ ಒಂದು ವರ್ಷದ ಮೊದಲು(2012–13) ಈ ರಾಜ್ಯದಲ್ಲಿ ವರ್ಷದಲ್ಲಿ ಶೇಕಡಾ 30 ರಷ್ಟಿದ್ದು, ಸಮಯೋಚಿತ ಪಾವತಿ ದರಕ್ಕೆ ಸಂಬಂಧಿಸಿದಂತೆ ಇದು 2013–14ರ ಅವಧಿಯಲ್ಲಿ ಶೇ 28.08 ರಿಂದ ಶೇ 11.5 ಕ್ಕೆ (2014–15) ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಚಯದಿಂದ ಇಳಿದಿರುತ್ತದೆ. ಇದು, ರಾಜ್ಯಕ್ಕೆ ಉತ್ತಮ ಆರಂಭವನ್ನು ನೀಡಿದ್ದು ರಾಜ್ಯದಲ್ಲಿ ಹೆಚ್ಚುತ್ತಿರುವ ದರವು ಸಾಕಷ್ಟು ಕಡಿದಾಗಿದ್ದರೂ– ರಾಷ್ಟ್ರೀಯ ಸರಾಸರಿ ದರದ ಏರಿಕೆಯಷ್ಟು ಕಡಿದಾಗಿರುವುದಿಲ್ಲ. 2018–19ರ ಹೊತ್ತಿಗೆ, ರಾಜ್ಯದ ಸಮಯೋಚಿತ ಪಾವತಿ ದರವು ಶೇಕಡಾ 75.76ರಷ್ಟಿದ್ದರೆ, ರಾಷ್ಟ್ರೀಯ ಸರಾಸರಿ ದರವು ಶೇಕಡಾ 90.52ರಷ್ಟಿದೆ.

**ಚಿತ್ರ 7: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಸಮಯೋಚಿತ ಕೂಲಿ ಪಾವತಿಯ ಬಗ್ಗೆ ಅಖಿಲ ಭಾರತ ಮತ್ತು ಕರ್ನಾಟಕ ಸರಾಸರಿಗಳ ಹೋಲಿಕೆ**




ಮೂಲ:ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ವೆಬ್ ಪೋರ್ಟಲ್ http://mnregaweb4.nic.in/netnrega/Paymentstatus.aspx?page=S&lflag=eng&rb_mode=&state_name=KARNATAKA&state_code=15&fin_year=2015-2016&source=national&Digest=OCUu/nO5pnBo9glidkxdXA

ಈ ವಿಷಯದಲ್ಲಿ ರಾಜ್ಯವು ರಾಷ್ಟ್ರೀಯ ಸರಾಸರಿಗೆ ಸಮನಾಗಿ ಉಳಿಯುವ ದೃಷ್ಟಿಯಿಂದ ಇಲ್ಲವೇ ಇತರ ರಾಜ್ಯಗಳು ಸಾಧಿಸಿದಂತೆ ಹೆಚ್ಚಿನದನ್ನು ಸಾಧಿಸಬೇಕಾಗಿರುತ್ತದೆ, ಈ ಮೌಲ್ಯಮಾಪನದ ಶಿಫಾರಸ್ಸಿನಂತೆ, ಡಿಜಿಟಲ್ ತಂತ್ರಜ್ಞಾನವು ಕೂಲಿ ಪಾವತಿಯ ಮತ್ತು ವಸ್ತು ಪಾವತಿ ವ್ಯವಹಾರವನ್ನು ಸರಾಗಗೊಳಿಸಲು ಇತರ ವೈಯಕ್ತಿಕ ಅಥವಾ ರಾಜಕೀಯ ಕಾರಣಗಳಿಗಾಗಿ ಅದನ್ನು ವಿಳಂಬ ಮಾಡುವುದಕ್ಕಿಂತ ಅಭಿವೃದ್ಧಿಯನ್ನು ಮಾನವ ಸಾಮರ್ಥ್ಯಗಳೊಂದಿಗೆ ಹೊಂದಿಸಿ ಸಮಯೋಚಿತ ಪಾವತಿಯ ಪ್ರಮಾಣಿತ ಗುರಿಯ ಬದ್ಧತೆ ತೋರಿಸಬೇಕೆಂಬ ವಿಷಯವು ನಮ್ಮ ಕ್ಷೇತ್ರ ಸಂದರ್ಶನಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ಅವಧಿಯಲ್ಲಿ ಹೊರಹೊಮ್ಮಿದ ಒಂದು ಅಂಶವಾಗಿದೆ.

## 8.5 ಸಮಯ–ವೇತನ ಪಾವತಿಯಲ್ಲಿ ಅಂತರ–ಜಿಲ್ಲೆಯ ವ್ಯತ್ಯಾಸಗಳು

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅನುಷ್ಠಾನದ ವಿವಿಧ ಅಂಶಗಳ ಕುರಿತು ವಿದ್ಯುನ್ಮಾನವಾಗಿ ಲಭ್ಯವಿರುವ ದತ್ತಾಂಶವು ಎಷ್ಟು ಪ್ರಭಾವಶಾಲಿಯಾಗಿದೆಯೆಂದರೆ, ವೈಯಕ್ತಿಕ ಫಲಾನುಭವಿಗೆ ಪ್ರಗತಿಯನ್ನು ಎಲ್ಲಾ ರೀತಿಯಲ್ಲಿ ಪತ್ತೆ ಮಾಡಬಹುದು. ಸದ್ಯಕ್ಕೆ ನಮ್ಮ ಚರ್ಚೆಯು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ್ದು, ಸಮಯೋಚಿತ ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಪಾವತಿಯನ್ನು ಸಾಧಿಸುವ ನಿಟ್ಟಿನಲ್ಲಿ ಜಿಲ್ಲೆಗಳ ನಡುವೆ ಸಾಕಷ್ಟು ವ್ಯತ್ಯಾಸವಿದೆ ಎಂದು ಕಂಡುಬರುತ್ತದೆ. ಕೆಳಗಿನ ಕೋಷ್ಟಕವು ಜಿಲ್ಲೆಗಳಾದ್ಯಂತದ ವ್ಯತ್ಯಾಸವನ್ನು ತೋರಿಸುತ್ತದೆ, ವಿವಿಧ ಜಿಲ್ಲೆಗಳು ರಾಜ್ಯ ಮತ್ತು ರಾಷ್ಟ್ರೀಯ ಸರಾಸರಿಗಿಂತ ಕೆಳಗಿವೆ – ಅಂದರೆ, 15 ದಿನಗಳ ಮಿತಿಗೆ ಮುಂಚಿತವಾಗಿ ಕಾನೂನುಬದ್ಧವಾಗಿ ಅನುಮತಿಸುವ ಕೂಲಿ ಪಾವತಿ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

**ಚಿತ್ರ 8: ಸಮಯೋಚಿತ ಕೂಲಿ ಪಾವತಿಯಲ್ಲಿ ಅಂತರಜಿಲ್ಲೆಯ ವ್ಯತ್ಯಾಸ ಹೋಲಿಕೆ**




ಟಿಪ್ಪಣಿ: ಚಿತ್ರದಲ್ಲಿನ ಸಂಖ್ಯೆ ಲೇಬಲ್‌ಗಳು ರಾಜ್ಯದ ಜಿಲ್ಲೆಗಳ ಸಂಖ್ಯೆಯನ್ನು ಸೂಚಿಸುತ್ತದೆ

ಮೂಲ: http://mnregaweb4.nic.in/netnrega/Paymentstatus.aspx

ಮೇಲಿನ ಚಿತ್ರಕ್ಕೆ ಸಂಬಂಧಿಸಿದಂತೆ, ಆಗಬೇಕಾದ ಅಪೇಕ್ಷಣೀಯ ಫಲಿತಾಂಶವೆಂದರೆ, ಹೆಚ್ಚು ಹೆಚ್ಚು ರಾಜ್ಯಗಳು 'ರಾಜ್ಯ ಸರಾಸರಿಗಿಂತ ಮೇಲ್ಪಟ್ಟವರು' ಎಂದು ಲೇಬಲ್ ಮಾಡಲಾದ ಗುಂಪಿನಲ್ಲಿ ತಮ್ಮ ಅಸ್ತಿತ್ವವನ್ನು ಪ್ರದರ್ಶಿಸಬೇಕಾಗಿರುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪೋರ್ಟಲ್‌ನ ದತ್ತಾಂಶವು ಇದನ್ನು ತೋರಿಸುತ್ತದೆ:

1. ಸಮಯೋಚಿತ ಕೂಲಿ ಪಾವತಿಯ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಕೆಲವು ಜಿಲ್ಲೆಗಳು ವಿಭಿನ್ನ ಪ್ರವೃತ್ತಿಯನ್ನು ಹೊಂದಿರುತ್ತವೆ.
2. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪರಿಚಯಿಸಿದ ವರ್ಷದಲ್ಲಿ (2013–14) ಕರ್ನಾಟಕ ರಾಜ್ಯವು ಹೆಚ್ಚಿನ ಸಂಖ್ಯೆಯ ಜಿಲ್ಲೆಗಳನ್ನು (16) ಸಮಯೋಚಿತ ಕೂಲಿ ಪಾವತಿಯಲ್ಲಿ ರಾಜ್ಯ ಸರಾಸರಿಗಿಂತ ಕಡಿಮೆ ಹೊಂದಿರುತ್ತದೆ.
3. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದ ಮುಂದಿನ ವರ್ಷದಲ್ಲಿ, ಸಮಯಕ್ಕೆ ಸರಿಯಾಗಿ ಕೂಲಿ ಪಾವತಿಸಿದ ಜಿಲ್ಲೆಗಳ ಸಂಖ್ಯೆಯಲ್ಲಿ ಅಲ್ಪ ಸುಧಾರಣೆ ಕಂಡುಬಂದಿದೆ.
4. ಸಮಯೋಚಿತ ಕೂಲಿ ಪಾವತಿಯ ಪ್ರಭಾವಶಾಲಿ ಪ್ರದರ್ಶನವನ್ನು ತೋರಿಸಲು ರಾಜ್ಯಕ್ಕೆ ಸುಮಾರು ಮೂರು ವರ್ಷಗಳು ಬೇಕಾಗಿದ್ದವು: 2018–19ರಲ್ಲಿ ಈ ವಿಭಾಗದಲ್ಲಿ 18 ಜಿಲ್ಲೆಗಳಿದ್ದವು, ಆದರೆ ರಾಜ್ಯ ಸರಾಸರಿಗಿಂತ ಹೆಚ್ಚು ವಿಳಂಬವಾದ ಕೂಲಿ ಪಾವತಿಗಳನ್ನು ಪ್ರದರ್ಶಿಸಿದ ಜಿಲ್ಲೆಗಳ ಸಂಖ್ಯೆಯು 12ಕ್ಕೆ ಇಳಿದಿರುತ್ತವೆ.

ಈಗಾಗಲೇ ಸೂಚಿಸಿರುವಂತೆ ಕೂಲಿಯನ್ನು ಸಕಾಲಿಕವಾಗಿ ಪಾವತಿಸುವುದು ಎಲ್ಲಾ ರಾಜ್ಯಗಳಲ್ಲಿ ಮತ್ತು ಕರ್ನಾಟಕದೊಳಗೆ ಎಲ್ಲಾ ವಿವಿಧ ಜಿಲ್ಲೆಗಳಲ್ಲಿ ಏಕರೂಪವಾಗಿಲ್ಲ. ಮಾದರಿ ಜಿಲ್ಲೆಗಳ ನಡುವೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು

ರಾಜ್ಯದಲ್ಲಿ ದೃಢವಾದ ಬೇರುಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರೂ ಸಹ, ಕೆಲವು ಜಿಲ್ಲೆಗಳು ಈಗಾಗಲೇ ಸಮಂಜಸವಾಗಿ ಮತ್ತು ತುಲನಾತ್ಮಕವಾಗಿ ಇತರರಿಗಿಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ 2013–14ನೇ ಹಣಕಾಸು ವರ್ಷದ ವೇಳೆಗೆ, ಮಾದರಿ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡವು ಹೆಚ್ಚಿನ ಸಮಯೋಚಿತ ವೇತನ ಪಾವತಿ ದರವನ್ನು ಹೊಂದಿದ್ದು ಅದು ಶೇಕಡಾ 72.35ರಷ್ಟಿತ್ತು. ಬೇರೆ ರೀತಿಯಲ್ಲಿ ಹೇಳುವುದಾದರೆ, ಸಲ್ಲಿಸಿದ ಕೂಲಿ ಪಾವತಿಗಳ ಹಕ್ಕುಗಳಿಂದ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಸಾಫ್ಟ್ ಸರ್ವರ್‌ನಲ್ಲಿ ಅಪ್‌ಲೋಡ್ ಮಾಡಲಾದ ಅಗತ್ಯ ನಮೂನೆಗಳಲ್ಲಿ, ಶೇಕಡಾ 72.35 ರಷ್ಟು ಹಕ್ಕುಗಳನ್ನು ಅಂಗೀಕರಿಸಲಾಗಿರುತ್ತದೆ.

**ಚಿತ್ರ 9: ಮಾದರಿ ಜಿಲ್ಲೆಗಳಲ್ಲಿ ಕೂಲಿಯ ಸಕಾಲಿಕ ಪಾವತಿ (2013–14 ರಿಂದ 2018–19)**




ಮೂಲ: http://mnregaweb4.nic.in/netnrega/Paymentstatus.aspx

ಆದಾಗ್ಯೂ, ಮಾದರಿಯನ್ನು ಒಳಗೊಂಡ ಹೆಚ್ಚಿನ ಜಿಲ್ಲೆಗಳಲ್ಲಿ ಸಮಯೋಚಿತ ಕೂಲಿ ಪಾವತಿಯ ಕಡಿಮೆ ದರದಲ್ಲಿವೆ. ಯಾದಗಿರಿ (12.41%), ಕಲಬುರಗಿ (19.61%), ಮಂಡ್ಯ (23.12%), ಮತ್ತು ಕೋಲಾರ (24.08%) ಮುಂತಾದ ಜಿಲ್ಲೆಗಳು ತೀರಾ ಕಡಿಮೆ ಮಟ್ಟದಲ್ಲಿವೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಚಯವು ಹಳೆಯ ಪದ್ಧತಿಯಿಂದ ಹೊಸದನ್ನು ಬದಲಾಯಿಸಿರುವುದಲ್ಲದೇ ಹೊಸದಾಗಿ ಪರಿಚಯಿಸಲಾದ ಕಾರ್ಯವಿಧಾನಗಳು ತಾಂತ್ರಿಕವಾಗಿ ಜಾಣತನದಿಂದ ಕೂಡಿರುತ್ತದೆ.

ಕರ್ನಾಟಕದ ಜಿಲ್ಲೆಗಳೂ ಸೇರಿದಂತೆ, ದೇಶದಲ್ಲಿ ಮೂರು ಹಂತಗಳಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯನ್ನು ಪರಿಚಯಿಸಲಾಗಿರುವುದನ್ನು ನೆನಪಿಸಿಕೊಳ್ಳಬಹುದಾಗಿರುತ್ತದೆ. ಅನುಷ್ಠಾನದ ಈ ಮೂರು ಹಂತಗಳ ಅಡಿಯಲ್ಲಿ ಬರುವ ಜಿಲ್ಲೆಗಳು ಕೂಲಿ ಮತ್ತು/ಅಥವಾ ಸಾಮಗ್ರಿಗಳ ವೆಚ್ಚವನ್ನು ಪಾವತಿಸುವ ಕಾರ್ಯಕ್ಷಮತೆಯಲ್ಲಿ ಏನಾದರೂ ವ್ಯತ್ಯಾಸವಿದೆಯೇ ಎಂದು ಪರೀಕ್ಷಿಸಲು ನಾವು ಸಂಖ್ಯಾಶಾಸ್ತ್ರೀಯ ಪರೀಕ್ಷೆಯನ್ನು ನಡೆಸಿರುತ್ತೇವೆ. ಈ ಎರಡೂ ಸೂಚಕಗಳಿಗೆ ಸಂಬಂಧಿಸಿದಂತೆ, ಅಂದರೆ, ಸಮಯೋಚಿತ ಕೂಲಿ ಪಾವತಿ ಅಥವಾ ಸಾಮಗ್ರಿಗಳ ವೆಚ್ಚಗಳಿಗೆ ಪಾವತಿಸುವುದರಲ್ಲಿ ಸಂಖ್ಯಾಶಾಸ್ತ್ರೀಯವಾಗಿ ಮಹತ್ವದ ವ್ಯತ್ಯಾಸಗಳಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ಜಿಲ್ಲೆಗಳು ಸಮಯೋಚಿತ ಪಾವತಿಯಲ್ಲಿ ಅಥವಾ ವಿಳಂಬ ಪಾವತಿಯಲ್ಲಿ, ಸಂಖ್ಯಾಶಾಸ್ತ್ರೀಯವಾಗಿ

ಮಹತ್ವದ ಯಾವುದೇ ವ್ಯತ್ಯಾಸವನ್ನು ತೋರಿಸಲಿಲ್ಲ. ಬಹುಶಃ, ಈ ಜಿಲ್ಲೆಗಳಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಈಗ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಇರುವುದರಿಂದ, ಒಂದು ಜಿಲ್ಲೆಯು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯನ್ನು ಪ್ರಾರಂಭಿಸಿದ ಹಂತವು ಈ ವಿಷಯದಲ್ಲಿ ಯಾವುದೇ ವ್ಯತ್ಯಾಸವನ್ನುಂಟು ಮಾಡುವುದಿಲ್ಲ. ಈ ಜಿಲ್ಲೆಗಳಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದ ವಿವಿಧ ಹಂತಗಳು ಅಥವಾ ಹಂತಗಳಿಗೆ ಸಂಬಂಧಿಸಿದ ದತ್ತಾಂಶವನ್ನು ಹೊಂದಿದ್ದರೆ, ಕೂಲಿಯನ್ನು ಮತ್ತು ಸರಬರಾಜು ಮಾಡಿದ ಸಾಮಗ್ರಿಗಳಿಗೆ ಸಕಾಲಿಕವಾಗಿ ಪಾವತಿಸಲು ಸಂಬಂಧಿಸಿದಂತೆ ಬದಲಾವಣೆಗಳು ಅಥವಾ ವ್ಯತ್ಯಾಸಗಳು ಯಾವುದಾದರೂ ಇದ್ದರೆ ಪರಿಶೀಲಿಸುವುದು ಆಸಕ್ತಿದಾಯಕವಾಗಿದೆ. 2012–13ರಲ್ಲಿ ಫೆಬ್ರವರಿಯಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು, ಆರಂಭದಲ್ಲಿ ಕೆಲವು ಜಿಲ್ಲೆಗಳ ಕೆಲವು ಆಯ್ದ ಕ್ಷೇತ್ರಗಳಲ್ಲಿ ಪರಿಚಯಿಸಲಾಗಿದ್ದು, ವರ್ಷದ ಅಂತ್ಯದ ವೇಳೆಗೆ ಇದು ಹೆಚ್ಚಿನ ಜಿಲ್ಲೆಗಳನ್ನು ಒಳಗೊಂಡಿದ್ದು, 2013–14ನೇ ಹಣಕಾಸು ವರ್ಷದ ಪ್ರಾರಂಭದ ವೇಳೆಗೆ ಸಂಪೂರ್ಣ ರಾಜ್ಯವು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅಡಿಯಲ್ಲಿರುತ್ತದೆ. ಒಂದೇ ವರ್ಷದ ಅವಧಿಯಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯೊಂದಿಗೆ ಪರಿಚಯಿಸಲಾದ ಅಂತಹ ಕ್ಷೇತ್ರಗಳಲ್ಲಿ ಅಥವಾ ಜಿಲ್ಲೆಗಳಲ್ಲಿ ಸಮಯೋಚಿತ ಪಾವತಿಯ ತುಲನಾತ್ಮಕ ವಿಶ್ಲೇಷಣೆಗೆ ಈ ಹಂತದಲ್ಲಿ ಹೆಚ್ಚಿನ ಅವಕಾಶವಿರಲಿಲ್ಲ.

ಹಳೆಯದರಿಂದ ಹೊಸದಾಗಿ ಪರಿಚಯಿಸಲಾದ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಉಂಟಾದ ಪರಿವರ್ತನೆಯು ದೇಶಾದ್ಯಂತ ಮತ್ತು ಕರ್ನಾಟಕದಲ್ಲಿ ಬೀರಿದ ಪರಿಣಾಮದಿಂದ, ನಂತರದ ವರ್ಷದ ಸಮಯೋಚಿತ ಕೂಲಿ ಪಾವತಿ ದರದಲ್ಲಿ ತೀವ್ರ ಕುಸಿತ ಕಂಡುಬಂದಿರುತ್ತದೆ. ಹೀಗಾಗಿ ಹಿಂದಿನ ವರ್ಷ ಹೆಮ್ಮೆಯ ಉನ್ನತ ಶ್ರೇಣಿಯನ್ನು ಹೊಂದಿದ್ದ ದಕ್ಷಿಣ ಕನ್ನಡ, 2014–15ರ ಹೊತ್ತಿಗೆ ಅತ್ಯಂತ ಕಳಪೆ ಸಾಧನೆ ತೋರಿಸಿರುತ್ತದೆ. ಆ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದರವು 30.03 ರಷ್ಟಿತ್ತು, ಇದು ಸುಮಾರು 42 ಶೇಕಡಾ ಅಂಕಗಳಿಂದ ಕುಸಿದಿರುತ್ತದೆ. ಈಗಾಗಲೇ ಸಮಯಕ್ಕೆ ಸರಿಯಾಗಿ ಕೂಲಿಯನ್ನು ಕಡಿಮೆ ಪಾವತಿಸುವ ಯಾದಗಿರಿ ಜಿಲ್ಲೆಯು ಹೆಚ್ಚು ಹಾನಿಗೊಳಗಾಗಿರುತ್ತದೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದ ನಂತರದ ವರ್ಷದಲ್ಲಿ, ದರವು ಶೇಕಡಾ 0.83 ಕ್ಕೆ ಇಳಿದಿರುತ್ತದೆ. ನಾವು ಈಗ ವೀಕ್ಷಣೆಯಾಗಿ ಮಾಡುತ್ತಿರುವುದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪೋರ್ಟಲ್‌ನಿಂದ ಗಣಿಗಾರಿಕೆ ಮಾಡಿದ ದ್ವಿತೀಯ ದತ್ತಾಂಶದ ಸಾಕ್ಷ್ಯಗಳ ಮೇಲೆ ಮಾತ್ರವಲ್ಲದೇ ಕ್ಷೇತ್ರದ ಮೇಲೆಯೂ ಆಧಾರಿತವಾಗಿರುತ್ತದೆ. ಹೊಸ ವ್ಯವಸ್ಥೆಯನ್ನು ಪರಿಚಯಿಸಿದ ವರ್ಷದ ನಂತರ ಸಮಯೋಚಿತ ಕೂಲಿ ಪಾವತಿ ದರದಲ್ಲಿನ ಕುಸಿತವನ್ನು ಒಬ್ಬರು ನಿರೀಕ್ಷಿಸಬಹುದು ಮತ್ತು ತರ್ಕಬದ್ಧಗೊಳಿಸಬಹುದು, ಆದರೆ ಆ ಸ್ಥಿತ್ಯಂತರದ ಅವಧಿಯಲ್ಲಿ ಫಲಾನುಭವಿಗಳು ಅನುಭವಿಸಿದ ಕಷ್ಟಗಳು ಹೊಸ ವ್ಯವಸ್ಥೆಯ ಬಗ್ಗೆ ಸಾಕಷ್ಟು ನಕಾರಾತ್ಮಕ ಪ್ರಭಾವ ಬೀರಿರುತ್ತದೆ. ಏಕೆಂದರೆ, ಹೊಸ ವ್ಯವಸ್ಥೆಯು ಜಾರಿಗೆ ಬಂದ ಎರಡು ವರ್ಷಗಳ ನಂತರವೂ, ಸಮಯೋಚಿತ ಕೂಲಿ ಪಾವತಿ ದರವು ಹೊಸ ವ್ಯವಸ್ಥೆಗೆ ಮುಂಚೆಯೇ ಇದ್ದದ್ದಕ್ಕೆ ಹಿಂತಿರುಗಲಿಲ್ಲ. ಉದಾಹರಣೆಗೆ, 2013–14ರಲ್ಲಿ ಶೇಕಡಾ 72.35 ರಂತೆ ಹೆಚ್ಚಿನ ದರವನ್ನು ಹೊಂದಿದ್ದ ದಕ್ಷಿಣ ಕನ್ನಡ, 2015–16ರ ವೇಳೆಗೆ ಶೇಕಡಾ 62.34 ರ ದರವನ್ನು ತೋರಿಸಿದ್ದು, ಈ ಜಿಲ್ಲೆಯು ಎರಡು ವರ್ಷಗಳಲ್ಲಿ ಗಮನಾರ್ಹ ಚೇತರಿಕೆ ತೋರಿಸಿರುತ್ತದೆ.

ಕುತೂಹಲಕಾರಿಯಾಗಿ ಈಗಾಗಲೇ ಸಾಧನೆಯು ಕಳಪೆಯಾಗಿರುವ ಅಂತಹ ಜಿಲ್ಲೆಗಳಲ್ಲಿ ಚೇತರಿಕೆಯ ದರ ಮತ್ತು ಸಮಯೋಚಿತ ಕೂಲಿ ಪಾವತಿ ದರದ ಸುಧಾರಣೆ ಹೆಚ್ಚು ಉತ್ತಮವಾಗಿರುತ್ತದೆ. ಗಮನಿಸಬೇಕಾದ ಅಂಶವೆಂದರೆ, ಈ ಜಿಲ್ಲೆಗಳಲ್ಲಿ (ಅಂದರೆ, ಕಲಬುರಗಿ, ಕೋಲಾರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ) ತಕ್ಷಣದ ಪರಿಣಾಮವು ಉತ್ತಮವಾಗಿರುತ್ತದೆ,

ಆದರೆ ಪತನದ ನಂತರದ ಚೇತರಿಕೆಯು ತುಂಬಾ ಉತ್ತಮವಾಗಿದ್ದು, ಹೊಸ ದರಗಳನ್ನು ಅದು 2013–14ರ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸುವ ವರ್ಷಕ್ಕೆ ಮೊದಲು ಇರುವುದಕ್ಕಿಂತ ಹೆಚ್ಚಿನದನ್ನು ತರುವ ಬದಲಾಗಿ ಆಘಾತಕಾರಿ ಸಂಗತಿಯೆಂದರೆ, 2013–14ರಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲೆಗಳು, ಮುಂದಿನ ವರ್ಷ ಕುಸಿತವನ್ನು ತೋರಿಸುತ್ತಿರುವಾಗ, ಹಿಂದಿನ ದರಗಳನ್ನು ಮೀರಿಸಲು ಸಾಧ್ಯವಾಗಲಿಲ್ಲ. ಹೀಗಾಗಿ, 2015–16ರ ವೇಳೆಗೆ ನಾಟಕೀಯವಾಗಿ ಚೇತರಿಸಿಕೊಂಡರೂ, ದಕ್ಷಿಣ ಕನ್ನಡದಲ್ಲಿ ದರವು 2013–14ರಲ್ಲಿ ಇದ್ದ ದರಕ್ಕಿಂತ ಹೆಚ್ಚಿನ ದರವನ್ನು ತಲುಪಲು ಸಾಧ್ಯವಾಗಿರುವುದಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸುವ ಮೊದಲು ಈ ವಿಷಯದಲ್ಲಿ ಬಹಳ ಕಳಪೆ ಪ್ರದರ್ಶನವನ್ನು ಹೊಂದಿದ್ದು, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಸಮಯೋಚಿತ ಕೂಲಿ ಪಾವತಿಯ ಇತ್ಯರ್ಥಕ್ಕೆ ತಕ್ಷಣದ ಪರಿಣಾಮವು ಅಂತಹ ಜಿಲ್ಲೆಗಳ ಮೇಲೆ ಹೆಚ್ಚು ಉತ್ತಮವಾಗಿದೆ ಎಂದು ಅಧ್ಯಯನವು ಕಂಡುಹಿಡಿದಿರುತ್ತದೆ.

ವ್ಯವಸ್ಥೆಯನ್ನು ಪರಿಚಯಿಸುವ ಮೊದಲು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದ ಅಂತಹ ಜಿಲ್ಲೆಗಳಿಗಿಂತ, ಕಳಪೆ ಕಾರ್ಯನಿರ್ವಹಣೆಯ ಜಿಲ್ಲೆಗಳು, ಹೊಸ ವ್ಯವಸ್ಥೆಯಿಂದ ಉತ್ತಮ ಪರಿಣಾಮವನ್ನು ತೋರಿಸುತ್ತಿರುವ ಕುತೂಹಲಕಾರಿ ಶೋದನೆಯು ಏನು ವಿವರಿಸುತ್ತದೆ? ಈ ಪ್ರಶ್ನೆಗೆ ಉತ್ತರಿಸುವ ನಮ್ಮ ಪ್ರಯತ್ನವು ಅತ್ಯುತ್ತಮವಾಗಿ ಊಹಾತ್ಮಕವಾಗಿದ್ದು ಒಂದು ಕಲ್ಪನೆಯಾಗಿರುತ್ತದೆ, ಏಕೆಂದರೆ ಕ್ಷೇತ್ರ ದತ್ತಾಂಶ ಸಂಗ್ರಹಣೆಯನ್ನು ಕೈಗೊಳ್ಳುವ ಸಮಯದಲ್ಲಿ ಮೌಲ್ಯಮಾಪನ ತಂಡವು ಸತ್ಯಗಳ ಬಗ್ಗೆ ತಿಳಿದಿರಲಿಲ್ಲ. ಕ್ಷೇತ್ರ ದತ್ತಾಂಶ ಸಂಗ್ರಹಣೆಯ ನಂತರ ಈ ಸಂಗತಿಗಳು ಲಭ್ಯವಾಗಿದ್ದವು. ಮೌಲ್ಯಮಾಪನ ತಂಡಕ್ಕೆ ಪೋರ್ಟಲ್‌ನಲ್ಲಿನ ದತ್ತಾಂಶವನ್ನು ಪ್ರವೇಶಿಸಲು ಅನುಕೂಲವಾಗಿದ್ದರೆ, ಕ್ಷೇತ್ರ ದತ್ತಾಂಶ ಸಂಗ್ರಹವು ಈ ಶೋಧನೆಗಳಿಗೆ ಸೂಕ್ಷ್ಮವಾಗಿರಬಹುದಾಗಿತ್ತು ಮತ್ತು ದತ್ತಾಂಶ ಸಂಗ್ರಹಣೆಯ ಗಮನವು ಹೆಚ್ಚು ಗುರಿಯನ್ನು ಮತ್ತು ಮಾಹಿತಿಯನ್ನು ಹೊಂದಿರಬಹುದಾಗಿತ್ತು. ಈ ಶೋಧನೆಯ ಕಾಲ್ಪನಿಕ ವ್ಯಾಖ್ಯಾನವು ಈ ಕೆಳಗಿನಂತಿದೆ.

ಇಲ್ಲಿಯವರೆಗೆ ಸಮಯೋಚಿತ ಕೂಲಿ ಪಾವತಿಯ ಕಳಪೆ ದಾಖಲೆಯನ್ನು ಹೊಂದಿರುವ ಅಂತಹ ಜಿಲ್ಲೆಗಳು ಉತ್ತಮ ಪ್ರದರ್ಶನ ನೀಡಲು ಒಟ್ಟುಗೂಡಿದ ಒತ್ತಡದಲ್ಲಿರಬಹುದು. ಇದನ್ನು ಸರಿಪಡಿಸುವ ಉದ್ದೇಶದಿಂದ ನಿರ್ದಿಷ್ಟವಾಗಿ ಹೊಸ ವ್ಯವಸ್ಥೆಯನ್ನು ಪರಿಚಯಿಸಿದಾಗ, ಉತ್ತಮವಾಗಿ ಕಾರ್ಯನಿರ್ವಹಿಸಲು ಎಲ್ಲಾ ಕಾರ್ಯಕರ್ತರ ಕಡೆಯಿಂದ ಪುನಶ್ಚೇತನಗೊಂಡ ಪ್ರಯತ್ನ ನಡೆದಿರಬಹುದು. ಹೊಸ ವಿತರಣೆಯ ಅಡಿಯಲ್ಲಿಯೂ ಅವರು ವಿಫಲರಾಗಿದ್ದರೆ, ತಮ್ಮ ಮೇಲೆ ಆರೋಪ ಹೊರಿಸುವುದನ್ನು ಹೊರತುಪಡಿಸಿ ಕಳಪೆ ಕಾರ್ಯಕ್ಷಮತೆಯನ್ನು ಹೇಗೆ ಪರಿಗಣಿಸಲಾಗುತ್ತದೆ? ಕನಿಷ್ಠವಾಗಿ ಭಾಗಶಃ, ಇದು ಶೋಧನೆಯ ವ್ಯಾಖ್ಯಾನಗಳಲ್ಲಿ ಒಂದಾಗಿರಬಹುದು. ಈ ಅಂಶವನ್ನು ವಿಸ್ತರಿಸುವ ಅಪಾಯದಲ್ಲಿ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲೆಗಳ ಬಗ್ಗೆ ಹೇಳಬಹುದು, ಅದು ಮೊದಲ ವರ್ಷದಲ್ಲಿ ಇದ್ದದ್ದಕ್ಕಿಂತ ಸ್ವಲ್ಪ ಕಡಿಮೆ ಇದ್ದರೂ ಅವುಗಳ ಚೇತರಿಕೆಯ ದರಗಳು ಖಂಡಿತವಾಗಿಯೂ ಉತ್ತಮವಾಗಿರುತ್ತವೆ.

ಆದರೂ ಆದರೆ ಕೂಲಿ ಪಾವತಿಗೆ ಸಂಬಂಧಿಸಿದಂತೆ ಹೆಚ್ಚು ಸುಧಾರಿತ ಪರಿಸ್ಥಿತಿಯನ್ನು ಶಕ್ತಗೊಳಿಸುವಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಭಾವವು ಸ್ಪಷ್ಟವಾಗಿರುತ್ತದೆ, ಬಹುಪಾಲು ಜಿಲ್ಲೆಗಳಲ್ಲಿ, ದತ್ತಾಂಶವು ಕಾರ್ಯಕ್ರಮದ ಪ್ರಾರಂಭದಲ್ಲಿ ಮತ್ತು ದರಗಳ ದರಗಳಿಗೆ ಹೋಲಿಸಿದರೆ ನಾಲ್ಕು ಅಥವಾ ಐದು ವರ್ಷಗಳ ಅಂತ್ಯದಲ್ಲಿ ಪ್ರಭಾವಶಾಲಿ ಕಾರ್ಯಕ್ಷಮತೆಯನ್ನು ತೋರಿಸಿರುತ್ತದೆ. ಬೆಂಗಳೂರು ಮತ್ತು ಉಡುಪಿ ಈ ಎರಡು ಜಿಲ್ಲೆಗಳು 5 ವರ್ಷಗಳ ಅಂತ್ಯದ ವೇಳೆಗೆ ಸ್ವಲ್ಪ ಕುಸಿತವನ್ನು ತೋರಿಸಿರುತ್ತವೆ: ಉಲ್ಲೇಖದ ಅವಧಿಯಲ್ಲಿ (2013–14 ರಿಂದ 2018–19) ಬೆಂಗಳೂರು ಶೇಕಡಾ 6.35 ರಷ್ಟು ಕುಸಿದಿದ್ದರೆ, ಉಡುಪಿ 2.99 ರಷ್ಟು ಕುಸಿತ ಕಂಡಿರುತ್ತದೆ. ಈ ಎರಡು ಜಿಲ್ಲೆಗಳು ಕಾರ್ಯಕ್ರಮದ

ಪ್ರಾರಂಭದಲ್ಲಿದ್ದ ಕುಸಿತವನ್ನು ತೋರಿಸಿದ್ದರೂ ಸಹ, ಅವುಗಳ ಪ್ರಸ್ತುತ ದರವು ಕಡಿಮೆ ಪ್ರಭಾವಶಾಲಿಯಾಗಿರುವುದಿಲ್ಲ: ಬೆಂಗಳೂರು ನಗರ ಜಿಲ್ಲೆಯು ಶೇಕಡಾ 72.87 ಮತ್ತು ಉಡುಪಿ, 74.74 ಶೇಕಡಾ ದರವನ್ನು ಹೊಂದಿರುತ್ತದೆ ಮೊದಲೇ ಚರ್ಚಿಸಿದಂತೆ, ಪ್ರಭಾವದ ದೃಷ್ಟಿಯಿಂದ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪರಿಚಯದ ಪರಿಣಾಮವಾಗಿ ಈಗಾಗಲೇ ಉನ್ನತ ಶ್ರೇಣಿಯ ಜಿಲ್ಲೆಗಳು ಹೆಚ್ಚು ತೀಕ್ಷ್ಣವಾದ ಹೆಚ್ಚಳವನ್ನು ತೋರಿಸಿರುವುದಿಲ್ಲ ಹೀಗಾಗಿ ಈ ಎರಡು ಜಿಲ್ಲೆಗಳಲ್ಲದೆ, ದಕ್ಷಿಣ ಕನ್ನಡವು ಶೇಕಡಾ 6.59 ರಷ್ಟು ಏರಿಕೆ ಕಂಡಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪರಿಚಯವಾದಾಗಿನಿಂದ ಐದು ವರ್ಷಗಳ ಅಂತ್ಯದ ವೇಳೆಗೆ ಕಡಿಮೆ ದರದಲ್ಲಿ ವೇತನ ಇತ್ಯರ್ಥವನ್ನು ಹೊಂದಿರುವ ಹೆಚ್ಚಿನ ಜಿಲ್ಲೆಗಳು ಪ್ರಭಾವಶಾಲಿಯಾಗಿರುತ್ತವೆ. ಶೇಕಡಾ 17ರಷ್ಟು ಕಡಿಮೆ ದರವನ್ನು ಹೊಂದಿರುವ ವಿಜಯಪುರವೂ ಸೇರಿ ಕೆಲವು ಜಿಲ್ಲೆಗಳಲ್ಲಿ 2018–19ರ ವೇಳೆಗೆ 81 ಶೇಕಡಾವರೆಗೂ ಸಮಯೋಚಿತ ಕೂಲಿ ತಲುಪಿರುತ್ತದೆ. (ಕೋಷ್ಟಕ 13 ನೋಡಿ)

**ಕೋಷ್ಟಕ 13: ಸಮಯೋಚಿತ ಕೂಲಿ ಪಾವತಿ ದರಗಳ ಮೇಲೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಣಾಮ**

| ಜಿಲ್ಲೆಯ ಹೆಸರು | ವರ್ಷಗಳಲ್ಲಿ ಸಮಯೋಚಿತ ಕೂಲಿ ಪಾವತಿ ದರಗಳು (ಶೇಕಡಾ) | | ಶೇಕಡಾ ಅಂಶಗಳಲ್ಲಿನ ವ್ಯತ್ಯಾಸ | ಸಂಯೋಜಿತ ವಾರ್ಷಿಕ ಬೆಳವಣಿಗೆಯ ದರ |
|---|---|---|---|---|
| | 2013–14 | 2018–19 | | |
| ಬೆಂಗಳೂರು ನಗರ | 72.87 | 66.52 | –6.35 | –1.807 |
| ಉಡುಪಿ | 74.74 | 71.75 | –2.99 | –0.813 |
| ದಕ್ಷಿಣ ಕನ್ನಡ | 72.35 | 78.94 | 6.59 | 1.759 |
| ಕೊಡಗು | 50.83 | 73.63 | 22.8 | 7.693 |
| ಚಿಕ್ಕಮಗಳೂರು | 55.48 | 80.04 | 24.56 | 7.605 |
| ಬೆಳಗಾವಿ | 44.36 | 77.34 | 32.98 | 11.759 |
| ಧಾರವಾಡ | 38.37 | 71.89 | 33.52 | 13.380 |
| ಚಿಕ್ಕಬಳ್ಳಾಪುರ | 43.27 | 78.33 | 35.06 | 12.603 |
| ಬೀದರ | 21.34 | 59.62 | 38.28 | 22.812 |
| ಶಿವಮೊಗ್ಗ | 40.36 | 78.98 | 38.62 | 14.370 |
| ಉತ್ತರ ಕನ್ನಡ | 34.75 | 74.57 | 39.82 | 16.499 |
| ಚಿತ್ರದುರ್ಗ | 11.87 | 51.77 | 39.9 | 34.253 |
| ಕೊಪ್ಪಳ | 27.34 | 68.56 | 41.22 | 20.186 |
| ಬಾಗಲಕೋಟೆ | 37.74 | 79.08 | 41.34 | 15.945 |
| ಬಳ್ಳಾರಿ | 39.85 | 83.51 | 43.66 | 15.948 |
| ಕಲಬುರಗಿ | 19.61 | 64.99 | 45.38 | 27.079 |
| ಬೆಂಗಳೂರು ಗ್ರಾಮಾಂತರ | 50.2 | 95.74 | 45.54 | 13.783 |
| ಹಾವೇರಿ | 25.23 | 71.67 | 46.44 | 23.221 |
| ರಾಮನಗರ | 23.08 | 71.01 | 47.93 | 25.204 |

| | | | | |
|---|---|---|---|---|
| ಚಾಮರಾಜ ನಗರ | 27.24 | 76.32 | 49.08 | 22.881 |
| ಹಾಸನ | 32.32 | 82.71 | 50.39 | 20.675 |
| ಗದಗ | 27.61 | 80.18 | 52.57 | 23.766 |
| ವಿಜಯಪುರ | 16.93 | 70.7 | 53.77 | 33.092 |
| ಕೋಲಾರ | 24.08 | 79.61 | 55.53 | 27.017 |
| ಮಂಡ್ಯ | 23.12 | 79.36 | 56.24 | 27.974 |
| ರಾಯಚೂರು | 20.53 | 77.26 | 56.73 | 30.351 |
| ತುಮಕೂರು | 24.94 | 84.06 | 59.12 | 27.508 |
| ಮೈಸೂರು | 23.64 | 86.86 | 63.22 | 29.728 |
| ಯಾದಗಿರಿ | 12.41 | 76.74 | 64.33 | 43.963 |
| ದಾವಣಗೆರೆ | 17.36 | 81.79 | 64.43 | 36.342 |
| **ಕರ್ನಾಟಕ** | **28.08** | **75.76** | **47.68** | **21.958** |

ಎರಡು ವರ್ಷಗಳ ಕೊನೆಯಲ್ಲಿ ಈ ಮಾದರಿಯ ಪ್ರಭಾವದ ವಿವರಣೆಯಾಗಿ ಒಂದು ಕಲ್ಪನೆ ಈಗಾಗಲೇ ಇದ್ದರೆ, ಐದು ವರ್ಷಗಳ ನಂತರವೂ ಪ್ರಭಾವದ ವಿಷಯದಲ್ಲಿ ಇದು ನಿಜವಾಗಿರುತ್ತದೆ. ಆದರೆ, ಈ ಕಾರ್ಯಕ್ರಮದ ಐದು ವರ್ಷಗಳ ಅಂತ್ಯದ ವೇಳೆಗೆ ಶೇಕಡಾವಾರು ಪರಿಭಾಷೆಯಲ್ಲಿ ಬೆಳವಣಿಗೆಯ ದರವನ್ನು ಸ್ಥಿರಗೊಳಿಸುವಂತೆ ತೋರುತ್ತಿರುವುದರಿಂದ ನಾವು ಇನ್ನೊಂದು ವಿವರಣೆಯನ್ನು ನೀಡಬಹುದು.

ಒಟ್ಟಾರೆಯಾಗಿ ರಾಜ್ಯಕ್ಕೆ ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರವು ಅದರಲ್ಲೂ ನಿರ್ದಿಷ್ಟವಾಗಿ ಮಾದರಿ ಜಿಲ್ಲೆಗಳಿಗೆ ಈ ಮೊದಲು ಪರಿಶೀಲಿಸಿದ ಕಲ್ಪನೆಗೆ ಪುರಾವೆಗಳನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಸಮಯೋಚಿತ ಕೂಲಿ ಪಾವತಿಯ ಉತ್ತಮ ದರವನ್ನು ಸಾಧಿಸುವಲ್ಲಿ ಉಳಿದವುಗಳಿಗಿಂತ ಹಿಂದುಳಿದಿರುವ ಅಂತಹ ಜಿಲ್ಲೆಗಳು ಸ್ಥಳದಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪಡೆದುಕೊಳ್ಳುತ್ತವೆ ಮತ್ತು ಆದ್ದರಿಂದ ಉತ್ತಮವಾದ ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರವನ್ನು ಪ್ರದರ್ಶಿಸುತ್ತವೆ. ಈಗಾಗಲೇ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಇಂತಹ ಇತರ ಜಿಲ್ಲೆಗಳಲ್ಲಿ ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರವು ಸಾಧಾರಣ ಮಾತ್ರ ಇದ್ದು, ದಕ್ಷಿಣ ಕನ್ನಡದಲ್ಲಿದ್ದಂತೆ ಶೇಕಡಾ 1.759 ರಷ್ಟು ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರವನ್ನು ಹೊಂದಿರುತ್ತದೆ.

ಇದರ ಪರಿಣಾಮವಾಗಿ ಸಮಯೋಚಿತ ಕೂಲಿ ಪಾವತಿ ದರಗಳ ಮೇಲೆ ತಾಂತ್ರಿಕ ಪ್ರಮಾಣೀಕರಣದ ಪರಿಣಾಮವಿದೆಯೇ? ಏಕೆಂದರೆ, ಹಿಂದಿನ ಕಾಲದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳು ಮತ್ತು ಸರಿಯಾಗಿ ಕಾರ್ಯನಿರ್ವಹಿಸದ ಜಿಲ್ಲೆಗಳು ಎರಡರಲ್ಲಿ ಇರುವ ಸಮಯೋಚಿತ ವೇತನ ಇತ್ಯರ್ಥದ ಯುಟೋಪಿಯನ್ ದರವು 95% ಕ್ಕಿಂತ ಹೆಚ್ಚು ಎಂದು ವಿವರಿಸಬಹುದು, ಬಹುಶಃ ಮಾನವನು ಹೊಂದಬೇಕಾಗಿರುವುದು ಕೇವಲ ಹೊಸ ತಂತ್ರಜ್ಞಾನವನ್ನು ನಿರ್ವಹಿಸುವಲ್ಲಿನ ಕೌಶಲ್ಯಗಳಲ್ಲ, ರಾಮರಾಜ್ಯದ ಕಡೆಗೆ ಕೆಲಸ ಮಾಡುವ ಸಾಮರ್ಥ್ಯವು ಅಂತಹ ರಾಮರಾಜ್ಯದ ಫಲಿತಾಂಶವನ್ನು ನೀಡುವ ಮಟ್ಟವನ್ನು ಇನ್ನೂ ತಲುಪಬೇಕಾಗಿರುತ್ತದೆ.

ನಮ್ಮ ಮಾದರಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ಯಾದಗಿರಿಯು ಹೆಚ್ಚು ಪ್ರಭಾವಿತ ಜಿಲ್ಲೆಗಳಲ್ಲಿ ಒಂದಾಗಿರುತ್ತದೆ: ಕಾರ್ಯಕ್ರಮದ ಪ್ರಾರಂಭದಲ್ಲಿ ಇದು ಶೇಕಡಾ 12.41ರಷ್ಟು ಸಮಯೋಚಿತ ಕೂಲಿ ಪಾವತಿ ದರದಲ್ಲಿತ್ತು–ಇದು ಒಟ್ಟಾರೆ ರಾಜ್ಯದಲ್ಲಿ ಪ್ರಾಸಂಗಿಕವಾಗಿ ಅತ್ಯಂತ ಕಡಿಮೆ ದರವಾಗಿದ್ದು 2018–19ರ ವೇಳೆಗೆ ಶೇ. 76.74ರ ಹೆಚ್ಚಿನ ದರಕ್ಕೆ ಹಿಂದಿರುಗಿರುತ್ತದೆ. ಇದರ ಪರಿಣಾಮವು ಶೇಕಡಾ 64.33ರಷ್ಟು ಏರಿಕೆಯಾಗಿದ್ದು, ಇದು ರಾಜ್ಯದ ಅತಿ ಹೆಚ್ಚು ಪರಿಣಾಮದ ದರಗಳಲ್ಲಿ ಒಂದಾಗಿದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಕಾರ್ಯಕ್ರಮದ ಪ್ರಾರಂಭದಲ್ಲಿ ವೇತನ ಇತ್ಯರ್ಥಕ್ಕೆ ತುಲನಾತ್ಮಕವಾಗಿ ಕಳಪೆ ದರವನ್ನು ಹೊಂದಿದ್ದ ಇತರ ಜಿಲ್ಲೆಗಳಲ್ಲೂ ಪ್ರಭಾವಶಾಲಿ ಪ್ರಭಾವದ ದರಗಳನ್ನು ತೋರಿಸಿರುತ್ತದೆ.

ನಾವು ಸಮಯೋಚಿತ ಕೂಲಿ ಪಾವತಿ ಮಾದರಿಯನ್ನು ನೋಡಿದಾಗ ಮೌಲ್ಯಮಾಪನದ ಈ ಶೋಧನೆಗಳು ಸಾಕಷ್ಟು ಅನುಕೂಲಕರವಾಗಿರುತ್ತವೆ. ಇತ್ಯರ್ಥ ಪಡಿಸುವಲ್ಲಿನ ವಿಳಂಬದ ಬಗ್ಗೆ ಮಾಹಿತಿಯೂ ಇರುತ್ತದೆ, ಇದು ಕೂಲಿ ಪಾವತಿಗಾಗಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯುನ್ನು ಅಳವಡಿಸಿಕೊಳ್ಳುವ ವರ್ಷಗಳಲ್ಲಿ ಸುಧಾರಿಸಬೇಕಾಗಿರುತ್ತದೆ. ಈ ಸಮಸ್ಯೆಯನ್ನು ಸಮಸ್ಯೆಯೆಂದು ತೋರಿಸಲು, ಒಂದು ಪ್ರಶ್ನೆಯನ್ನು ಹೀಗೆ ರೂಪಿಸಬಹುದು. ಕೆಲವು ಜಿಲ್ಲೆಗಳಲ್ಲಿ ಸಮಯೋಚಿತ ವೇತನ ಪಾವತಿಯನ್ನು ಉತ್ಪಾದಿಸಲು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ

ಪರಿಣಾಮವು ಉತ್ತಮವಾಗಿಲ್ಲದಿದ್ದರೆ, ಕೂಲಿ ಪಾವತಿಯು ಯಾವಾಗ ಸಂಭವಿಸಿತು? ಸಮಯೋಚಿತ ಪಾವತಿಯಂತೆ ಹೆಚ್ಚು ಆದರ್ಶವಾಗದಿದ್ದರೆ ಮುಂದಿನ ಅತ್ಯುತ್ತಮ ಮಾರ್ಗ ಯಾವುದು? 15 ದಿನಗಳ ನಿಗದಿತ ಸಮಯದೊಳಗೆ ಪಾವತಿ ಮಾಡಲು ಸಾಧ್ಯವಾಗದಿದ್ದರೆ, ಅದನ್ನು ಯಾವಾಗ ಮಾಡಲಾಯಿತು? ಜಿಲ್ಲಾ ಮಟ್ಟದಲ್ಲಿ ದತ್ತಾಂಶ ಲಭ್ಯವಾಗುವ ಮುಂದಿನ ಅವಧಿಯು 15 ದಿನಗಳನ್ನು ಮೀರಿದ ವಿಳಂಬ ಆದರೆ 30 ದಿನಗಳವರೆಗೆ ಇರುತ್ತದೆ. ಈ ವರ್ಗಕ್ಕೆ ಸೇರುವ ಕೂಲಿ ಇತ್ಯರ್ಥದ ಪಾಲು ಪ್ರಾಥಮಿಕವಾಗಿ ಮೊದಲ ಮತ್ತು ನಿಗದಿತ ಸಮಯದಲ್ಲಿ ಕೂಲಿಯನ್ನು ಎಷ್ಟು ಪ್ರಮಾಣದಲ್ಲಿ ನೀಡಲಾಗಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ನಿಗದಿತ ಕೂಲಿ ಪಾವತಿಸುವ ಕಾರ್ಮಿಕರ ಪ್ರಮಾಣವು ಹೆಚ್ಚಾಗಿದ್ದರೆ ನಂತರದ ಸಮಯದ ಅವಧಿಗಳಲ್ಲಿ ಕಡಿಮೆ ಪ್ರಮಾಣದ ಕಾರ್ಮಿಕರಿಗೆ ಕೂಲಿ ಪಾವತಿಸಬೇಕಾಗಿರುತ್ತದೆ.

**ಚಿತ್ರ 10: ಮಾದರಿ ಜಿಲ್ಲೆಗಳಲ್ಲಿ ವೇತನ ವಿಳಂಬ ಪಾವತಿ ಅಥವಾ ಸಮಯೋಚಿತ ಪಾವತಿ: 2013–14**



**ಚಿತ್ರ 11: ಮಾದರಿ ಜಿಲ್ಲೆಗಳಲ್ಲಿ ವೇತನ ವಿಳಂಬ ಪಾವತಿ ಅಥವಾ ಸಮಯೋಚಿತ ಪಾವತಿ: 2018–19**




ಮೇಲಿನ ಚರ್ಚೆಯಲ್ಲಿ ಗಮನಿಸಿದಂತೆ, ಕೂಲಿ ಇತ್ಯರ್ಥದಲ್ಲಿ ಸುಧಾರಣೆಯ ದರವು ಕಂಡುಬಂದಿರುತ್ತದೆ. ಆದ್ದರಿಂದ 15 ರಿಂದ 30 ದಿನಗಳವರೆಗೆ ವಿಳಂಬ ಪಾವತಿಯಲ್ಲಿ ಕಾರ್ಮಿಕರ ಕೂಲಿ ಪಾವತಿಯು ಕಡಿಮೆ ಪ್ರಮಾಣದಲ್ಲಿ ಇರುವುದನ್ನು ನಾವು ಕಾಣುತ್ತೇವೆ. ನಮ್ಮ ಮಾದರಿ ಜಿಲ್ಲೆಗಳನ್ನೂ ಸೇರಿದಂತೆ, ರಾಜ್ಯದ ಪ್ರತಿಯೊಂದು ಜಿಲ್ಲೆಗಳು, ಐದು ವರ್ಷಗಳ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಅವಧಿಯಲ್ಲಿ 15 ರಿಂದ 30 ದಿನಗಳ ವಿಳಂಬದೊಂದಿಗೆ ಪಾವತಿಸಿದವರ ಪಾಲಿನಲ್ಲಿ ಕುಸಿತವನ್ನು ತೋರಿಸಿರುತ್ತದೆ.

ಈ ಅಂಶವನ್ನು ವಿವರಿಸಲು, ನಮ್ಮ ಮಾದರಿ ಜಿಲ್ಲೆಗಳಲ್ಲಿ ಒಂದಾದ ಚಿಕ್ಕಬಳ್ಳಾಪುರವನ್ನು ತೆಗೆದುಕೊಳ್ಳೋಣ. 2013–14ರ ಅವಧಿಯಲ್ಲಿ 15 ರಿಂದ 30 ದಿನಗಳ ವಿಳಂಬದೊಂದಿಗೆ ವೇತನ ನೀಡಲಾಗುತ್ತಿದ್ದ ಕಾರ್ಮಿಕರ ಪಾಲು ಶೇಕಡಾ 30.32 ರಷ್ಟಿದ್ದು, ಈ ದರವನ್ನು ಕಡಿಮೆ ಮಾಡುವುದರಿಂದ ಸಮಯಕ್ಕೆ ಸರಿಯಾಗಿ ಪಾವತಿಸಬೇಕಾದ ಹೆಚ್ಚಿನ ಪ್ರಮಾಣದ ಕೂಲಿಯನ್ನು ಪಾವತಿಸಿರುವುದರ ಪರಿಣಾಮವಾಗಿ ಇದು 2018–19ರ ವೇಳೆಗೆ 8.45 ಕ್ಕೆ ಇಳಿದಿರುತ್ತದೆ. 30 ದಿನಗಳನ್ನು ಮೀರಿದ ವಿಳಂಬದ ಪ್ರಮಾಣವು 2013–14ರಲ್ಲಿ ಶೇಕಡಾ 26.40ರಷ್ಟಿದ್ದು, ತಂತ್ರಜ್ಞಾನವು ಈಗ ಎರಡನೇ ಹಂತದ ವಿಳಂಬವನ್ನು ಕಡಿಮೆ ಮಾಡಲು ಸಹಕಾರಿಯಾಗಿದ್ದು 2018–19ರಲ್ಲಿ ಇದು ಕೇವಲ 13.22ರಷ್ಟಿರುತ್ತದೆ. ಒಟ್ಟಾರೆಯಾಗಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಣಾಮವು ಸಮಯೋಚಿತ ಕೂಲಿ ಪಾವತಿಯನ್ನು ಸುಧಾರಿಸುವುದಲ್ಲದೇ, ಸಮಯಕ್ಕೆ ತೆರವುಗೊಳಿಸಲು ಯಶಸ್ವಿಯಾಗದ ಪಾವತಿಗಳ ನಂತರದ ವಿಳಂಬವನ್ನು ಸಹಾ ಕಡಿಮೆ ಮಾಡುತ್ತದೆ.

## 8.6 ಸರಬರಾಜು ಮಾಡಿದ ಸಾಮಗ್ರಿಗಳಿಗೆ ಪಾವತಿ ವಿಳಂಬದಲ್ಲಿ ಕಡಿತ

ಇಲ್ಲಿಯವರೆಗೆ, ಮೌಲ್ಯಮಾಪನದ ಶೋಧನೆಗಳ ಕುರಿತು ಚರ್ಚೆಯ ಗಮನವು ಸಮಯಕ್ಕೆ ಸರಿಯಾಗಿ ಕೂಲಿಯನ್ನು ಪಾವತಿಸುವುದರ ಮೇಲೆ ಕೇಂದ್ರೀಕರಿಸಿರುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಕೈಗೊಂಡ ವಿವಿಧ ಕೆಲಸಗಳಿಗೆ ಮಾರಾಟಗಾರರು ಸರಬರಾಜು ಮಾಡಿದ ಸಾಮಗ್ರಿಗಳ ಕಡೆಗೆ ಪಾವತಿಯ ಮತ್ತೊಂದು ಪ್ರಮುಖ ಅಂಶವಾಗಿರುತ್ತದೆ. ಈ ಸಾಮಗ್ರಿಗಳು ಶೌಚಾಲಯದಲ್ಲಿನ ಸರಳ ನಲ್ಲಿಗಳಿಂದ, ಕಾಂಪೌಂಡ್ ಅಥವಾ ಶಾಲಾ ಕಟ್ಟಡದ ನಿರ್ಮಾಣಕ್ಕಾಗಿ ಮರಳು ಅಥವಾ ಸಿಮೆಂಟ್‌ಗೆ, ಹೆಂಚುಗಳು ಮತ್ತು ವಿದ್ಯುತ್ ಸ್ವಿಚ್‌ಗಳಾಗಿರಬಹುದು. ಇವುಗಳಿಗೆ ಮುಂಚೂಣಿಯಲ್ಲಿರುವ ಸಾಮಗ್ರಿಗಳನ್ನು ಖರೀದಿಸುವುದು ಮತ್ತು ಮರುಪಾವತಿಗಾಗಿ ಹಕ್ಕುಗಳನ್ನು ಸಲ್ಲಿಸುವುದು ಅಗತ್ಯವಾಗಿರುತ್ತದೆ. ಈ ಉದ್ದೇಶಕ್ಕಾಗಿ ಮಾರಾಟಗಾರರನ್ನು ಗುರುತಿಸಲಾಗುತ್ತದೆ ಮತ್ತು ಕಾನೂನು ಮಾರಾಟಗಾರರೆಂದು ಗುರುತಿಸಲಾಗುತ್ತದೆ. ಅಂತಹ ಮಾರಾಟಗಾರರನ್ನು ಹೊಂದಿರುವುದು ನೀತಿ ನಿರ್ಧಾರದ ಬಗ್ಗೆ ಹೆಚ್ಚು ಚಿಂತನೆಯಾಗಿದೆ, ಆದರೆ ಅವುಗಳನ್ನು ಮಂಡಳಿಯಲ್ಲಿ ಇಟ್ಟುಕೊಳ್ಳುವುದರ ಒಂದು ಮುಖ್ಯ ಪ್ರಯೋಜನವೆಂದರೆ ಅವುಗಳು ಒಳಗೊಂಡಿರುವ ಕಾಮಗಾರಿಗಳ ವೆಚ್ಚವನ್ನು ಕಡಿಮೆ ಮಾಡಲು ಗಣನೀಯವಾಗಿ ಕೊಡುಗೆ ನೀಡುತ್ತವೆ. ವಿದ್ಯುತ್ ವಸ್ತುಗಳ ಮಾರಾಟಗಾರನು ಅಗತ್ಯವಿರುವ ವಸ್ತುಗಳ ಸಮಯೋಚಿತ ಪೂರೈಕೆಯ ಪ್ರಯೋಜನವನ್ನು ತರುತ್ತಾನೆ–ಚಿಲ್ಲರೆ ಮಾರಾಟ ಮಳಿಗೆಗಳಿಂದ ಸಣ್ಣ ಪ್ರಮಾಣದಲ್ಲಿ ಖರೀದಿಸಲು ಫಲಾನುಭವಿ ಓಡುವ ಬದಲು. ಸಂಗ್ರಹಣೆ, ಪ್ರಯಾಣ ಮತ್ತು ಉತ್ಪನ್ನಗಳ ಗುಣಮಟ್ಟಗಳ ಹೆಚ್ಚುವರಿ ವೆಚ್ಚಗಳು ಒಟ್ಟಾರೆ ವೆಚ್ಚಗಳ ಉಲ್ಬಣಕ್ಕೆ ಕಾರಣವಾಗಬಹುದು ಮತ್ತು ಕಾಮಗಾರಿಯ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತವೆ. ಇದರ ಬದಲಿಗೆ, ಮಾರಾಟಗಾರನು ಬೆಲೆಯನ್ನು ಕಡಿಮೆ ಮಾಡುವ ಪ್ರಯೋಜನವನ್ನು ತರಬಹುದು ಏಕೆಂದರೆ ಅವರು/ಅವನು ಅವುಗಳನ್ನು ಚಿಲ್ಲರೆ ಆಧಾರದ ಬದಲು ಸಗಟು ದರದಲ್ಲಿ ಸಂಗ್ರಹಿಸುತ್ತಿರಬಹುದು. ಹೆಚ್ಚುವರಿಯಾಗಿ, ಮಾರಾಟಗಾರನು ಸಾಮಾನ್ಯವಾಗಿ ಸಗಟು ಮಳಿಗೆಗಳೊಂದಿಗೆ ಗರಿಷ್ಠ ಸಾಲವನ್ನು ಪಡೆಯುತ್ತಾನೆ ಹಾಗೂ ಫಲಾನುಭವಿಗಿಂತ ಭಿನ್ನವಾಗಿ ವಸ್ತುಗಳ ಮೇಲೆ ಮುಂಗಡ ಹೂಡಿಕೆ ಮಾಡುವ ಆರ್ಥಿಕ ಸಾಮರ್ಥ್ಯವನ್ನು ಹೊಂದಿರುತ್ತಾನೆ.

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮನೋಭಾವವು ಕಾರ್ಮಿಕರಿಗೆ ಮತ್ತು ಸಾಮಗ್ರಿ ಸರಬರಾಜುದಾರರಿಗೆ ಕ್ರಮವಾಗಿ ಕೂಲಿಯನ್ನು ಮತ್ತು ವೆಚ್ಚವನ್ನು ಇತ್ಯರ್ಥಗೊಳಿಸಲು ಅನ್ವಯಿಸುತ್ತದೆ, ಸಾಮಗ್ರಿ ಪೂರೈಕೆದಾರರಿಗೆ ಸಮಯೋಚಿತವಾಗಿ ಪಾವತಿಸುವುದಕ್ಕಿಂತ ಉತ್ಸಾಹಕ್ಕೆ ಒತ್ತು ನೀಡುವುದು ಕೂಲಿ ಕಾರ್ಮಿಕರ ಪರವಾಗಿ ಹೆಚ್ಚು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ, ಅದರಲ್ಲೂ ವಿಶೇಷವಾಗಿ ಕೇಂದ್ರೀಕೃತ ಗುಂಪು ಚರ್ಚೆಗಳು ನಡೆದ ಎಲ್ಲಾ ಪಂಚಾಯಿತಿಗಳಲ್ಲಿ ಇದು ಸ್ಪಷ್ಟವಾಗಿತ್ತು. ಈ ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಭಾಗವಹಿಸಿರುವವರಲ್ಲಿ ಸುಮಾರು 30ರಿಂದ 40 ಪ್ರತಿಶತದಷ್ಟು ಮಂದಿ ಮಾರಾಟಗಾರರಾಗಿದ್ದರು ಎಂಬುದು ಪ್ರಮುಖ ಅಂಶವಾಗಿದೆ, ಅವರಲ್ಲಿ ಹೆಚ್ಚಿನವರು ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಒಂದಕ್ಕಿಂತ ಹೆಚ್ಚು ಪಂಚಾಯತ್‌ಗಳಲ್ಲಿ ಒಂದು ಕ್ಷೇತ್ರದೊಳಗೆ ಕಂಡುಬರುತ್ತಾರೆ. ನಡೆದ ಚರ್ಚೆಯ ಸಂದರ್ಭದಲ್ಲಿ, ಅವರಲ್ಲಿ ಅನೇಕರು ಕೇವಲ ಸಾಮಗ್ರಿಗಳ ಮಾರಾಟಗಾರರಾಗಿದ್ದರೂ ಸಹ ಕೂಲಿ ಪಾವತಿಗಳನ್ನು ವಿಳಂಬಗೊಳಿಸುವ ಕಾರಣಕ್ಕಾಗಿ ಅವರ ಪರವಾಗಿ ಮಾತನಾಡುತ್ತಿದ್ದರು. ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಕೆಲವೇ ಕೆಲವು ಭಾಗವಹಿಸಿದ ಕೂಲಿ ಕಾರ್ಮಿಕರು ನಿಷ್ಕ್ರಿಯ ಪಾಲ್ಗೊಳ್ಳುವವರಾಗಿದ್ದು, ಅವರು ಹೆಚ್ಚು ಸ್ಪಷ್ಟವಾಗಿ ಮಾರಾಟಗಾರರಿಗೆ ಅವರ ಪರವಾಗಿ ಮಾತನಾಡಲು ಅವಕಾಶ ಮಾಡಿಕೊಡುತ್ತಾರೆ. ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಜನರಿಂದ ನಾವು ಪಡೆದ ಒಂದು ಪ್ರಮುಖ ನಿರ್ಣಯವೆಂದರೆ, ಮಾರಾಟಗಾರರು ಆಗಾಗ್ಗೆ ಏಕರೂಪವಾಗಿ ಇರದಿದ್ದರೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ

ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆ ಈ ಎರಡನ್ನು ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿರುವ ಮಧ್ಯವರ್ತಿಗಳು ಮತ್ತು ಗುತ್ತಿಗೆದಾರರು ಕಾರ್ಯನಿರ್ವಹಿಸುತ್ತಾರೆ. ಈ ವಿದ್ಯಮಾನದ ಹೆಚ್ಚಿನ ವಿವರಗಳು ಈ ವರದಿಯಲ್ಲಿ ಮಧ್ಯವರ್ತಿಗಳು ಮತ್ತು ಗುತ್ತಿಗೆದಾರರ ಪಾತ್ರವನ್ನು ಚರ್ಚಿಸಲು ಮೀಸಲಾಗಿರುವ ನಂತರದ ಅಧ್ಯಾಯದಲ್ಲಿ ಪ್ರತಿಬಿಂಬಿಸಲಾಗಿರುತ್ತದೆ. ಸದ್ಯಕ್ಕೆ, ಸರಬರಾಜುದಾರರು ಯಾರೇ ಆಗಿರಲಿ ಅವರು ಕಾನೂನಿಗೆ ವಿರುದ್ಧವಾಗಿರಲಿ ಅಥವಾ ಇಲ್ಲದಿರುವುದಕ್ಕಿಂತ ಸರಬರಾಜು ಮಾಡಿದ ಸಾಮಗ್ರಿಗಳಿಗೆ ಸಮಯೋಚಿತವಾಗಿ ಪಾವತಿಸುವಂತೆ ನಮ್ಮ ಒತ್ತಾಯವು ಹೆಚ್ಚಾಗಿರುತ್ತದೆ.

ನಮ್ಮ ರಾಜ್ಯದ ಪರಿಶೀಲನೆ ಮತ್ತು ಹೋಲಿಕೆ ಉದ್ದೇಶಗಳಿಗಾಗಿ ರಾಷ್ಟ್ರಮಟ್ಟದ ದತ್ತಾಂಶಗಳೆಡೆಗೆ ಎರಡು ಕೇಂದ್ರೀಕೃತ ಗಮನಗಳನ್ನು ಹೊಂದಿರುತ್ತದೆ. ಮೊದಲನೆಯದಾಗಿ, ಸರಬರಾಜು ಮಾಡಿದ ಸಾಮಗ್ರಿಗಳಿಗೆ ಪಾವತಿಸಿದಾಗ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಭಾವದ ಮಾದರಿ ಏನು? ಎರಡನೆಯದಾಗಿ, ಅವರಲ್ಲಿ ಯಾರಾದರೂ ಕೂಲಿ ಕಾರ್ಮಿಕರು ಮತ್ತು ಸಾಮಗ್ರಿ ಪೂರೈಕೆದಾರರು ಈ ಪ್ರಭಾವಕ್ಕೆ ಸಂಬಂಧಿಸಿದಂತೆ ಉತ್ತಮ ಸ್ಥಾನದಲ್ಲಿದ್ದಾರೆಯೇ? ಈ ನಂತರದ ಹೋಲಿಕೆಗೆ ನಾವು ಮುಂದಾಗುತ್ತಿದ್ದಂತೆ ಒಂದು ಕಲ್ಪನೆಯನ್ನು ರೂಪಿಸುವುದು ಸೂಕ್ತವಲ್ಲ. ಕಲ್ಪನೆಯ ಪ್ರಕಾರ, ಸಾಮಗ್ರಿ ಪೂರೈಕೆದಾರರಿಗೆ ಮಾರಾಟಗಾರರು ಸಮಯೋಚಿತ ಪಾವತಿಯ ಉತ್ತಮ ದರವನ್ನು ಹೊಂದಿರುತ್ತಾರೆ, ಅಥವಾ ಕೂಲಿ ಕಾರ್ಮಿಕರು ಅನುಭವಿಸುವುದಕ್ಕಿಂತ ಕಡಿಮೆ ವಿಳಂಬ ಪಾವತಿಯನ್ನು ಹೊಂದಿರುತ್ತಾರೆ. ಕಲ್ಪನೆಯ ಹಿಂದಿನ ಅಂತಹ ಊಹೆಯ ಆಧಾರವನ್ನು ತಿಳಿಯಲು ಒಬ್ಬರು ಬಯಸಬಹುದು. ಯಾವುದೇ ಅನುಮೋದಿತ ಕೆಲಸದಲ್ಲಿ ಕೂಲಿ ಕಾರ್ಮಿಕರು ಒಟ್ಟಾಗಿ ಕಾರ್ಮಿಕರ ಗುಂಪನ್ನು ಒಳಗೊಂಡಿರುತ್ತಾರೆ, ಮತ್ತು ಮೇಸ್ತ್ರಿಯ ಮೂಲಕ ಗುಂಪಿಗೆ ಅಥವಾ ಗುಂಪಿನಲ್ಲಿರುವ ವೈಯಕ್ತಿಕ ಕೆಲಸಗಾರರಿಗೆ ಹಲವಾರು ಅಧಿಕಾರಿಗಳ ಮೇಲೆ ವಿವಿಧ ಹಂತಗಳಲ್ಲಿ ಪಾವತಿಸುವ ಮೊದಲು ಮತ್ತು ಸಮಯದಲ್ಲಿ ಯಾವುದೇ ಒತ್ತಡವನ್ನು ಹೇರಲು ಕಡಿಮೆ ಅವಕಾಶವಿರಬಹುದು. ಮಾಡಿದ ಕೆಲಸಕ್ಕಾಗಿ. ಇದಕ್ಕೆ ತದ್ವಿರುದ್ಧವಾಗಿ, ಮಾರಾಟಗಾರರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯು ಗಣನೀಯವಾಗಿ ಭಿನ್ನವಾಗಿರುತ್ತದೆ, ಮತ್ತು ಸ್ವೀಕಾರಾರ್ಹವಾಗಲಿ ಅಥವಾ ಇಲ್ಲದಿರಲಿ, ಸಂಬಂಧಪಟ್ಟ ಅಧಿಕಾರಿಗಳ ಕ್ರಮಗಳ ಮೇಲೆ ಒತ್ತಡ ಮತ್ತು ಪ್ರಭಾವವನ್ನು ಬೀರುವಲ್ಲಿ ಮಾರಾಟಗಾರರು ಉತ್ತಮ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ, ಮಾರಾಟಗಾರನು ಊಹಿಸಿದಂತೆ, ಸಾಮಾನ್ಯ ಕೂಲಿ ಕೆಲಸಗಾರ ಅಥವಾ ಫಲಾನುಭವಿಗಿಂತ ಎಂಜಿನಿಯರ್‌ನನ್ನು ಸ್ಥಳ ಪರಿಶೀಲನೆಗಾಗಿ ತರುವುದು ಉತ್ತಮವಾಗಿದೆ. ಆದ್ದರಿಂದ, ಪಾವತಿ ಮಾದರಿಗಳು – ವಿಶೇಷವಾಗಿ ಸಮಯೋಚಿತ ಅಥವಾ ಕನಿಷ್ಠ ವಿಳಂಬಗಳಿಗೆ – ಕಾರ್ಮಿಕರಿಗಿಂತ ಮಾರಾಟಗಾರರಿಗೆ ಒಲವು ತೋರುವ ಸಾಧ್ಯತೆಯಿದೆ ಎಂದು ಊಹಿಸಲಾಗಿದೆ. ಇದನ್ನು ದೃಢೀಕರಿಸಿದರೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಕಾರ್ಮಿಕರಿಗಿಂತ ಹೆಚ್ಚು ಮಾರಾಟಗಾರರಿಗೆ ಒಲವು ತೋರುತ್ತಿದೆ, ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಇತರರಿಗಿಂತ ಹೆಚ್ಚು ದುರ್ಬಲರಾಗಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ದತ್ತಾಂಶಗಳು ನಮಗೆ ಏನು ತಿಳಿಸುತ್ತವೆ ಎಂಬುದನ್ನು ನೋಡಲು ಮುಂದುವರಿಯೋಣ.

ಕರ್ನಾಟಕ ಮತ್ತು ಅಖಿಲ ಭಾರತಕ್ಕೆ ಸಂಬಂಧಿಸಿದ ದತ್ತಾಂಶಗಳ ಪರಿಶೀಲನೆಯು, ಮೊದಲನೆಯದಾಗಿ, (ಎ) ಕೂಲಿಗಳ ಸಮಯೋಚಿತ ಅಥವಾ ವಿಳಂಬ ಪಾವತಿ ಮತ್ತು ಸರಬರಾಜು ಮಾಡಿದ ಸಾಮಗ್ರಿಗಳಿಗೆ ಅಲ್ಪ / ಅತ್ಯಲ್ಪ ವ್ಯತ್ಯಾಸವಿದೆ; (ಬಿ) ಕರ್ನಾಟಕ ಮತ್ತು ಅಖಿಲ ಭಾರತದಲ್ಲಿ ಇವುಗಳ ಸರಾಸರಿಗಳ ಪರಿಶೀಲನೆ. 2013–14 ರಿಂದ ಪ್ರತಿವರ್ಷ, ಅಖಿಲ ಭಾರತ ಸರಾಸರಿ ನಿಧಿ ವರ್ಗಾವಣೆ ಆದೇಶಗಳನ್ನು ಪಂಚಾಯಿತಿಗಳಿಂದ ಸಾಮಗ್ರಿಗಳ ಕಡೆಗೆ ಪಾವತಿ ಪ್ರಕ್ರಿಯೆಗಾಗಿ ಸಂಬಂಧಪಟ್ಟ ಬ್ಯಾಂಕುಗಳಿಗೆ ರವಾನಿಸುವಲ್ಲಿ ಶೇಕಡಾ 100ಕ್ಕಿಂತ ಸ್ವಲ್ಪ ಕಡಿಮೆಯಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ

ಕರ್ನಾಟಕವು ನಿಧಿ ವರ್ಗಾವಣೆ ಆದೇಶಗಳನ್ನು ಹೊರಡಿಸುವುದರಲ್ಲಿ ಶೇಕಡಾ 100ರಷ್ಟು ದರವನ್ನು ಕಾಯ್ದುಕೊಳ್ಳುವಲ್ಲಿ ಹೆಚ್ಚು ಸ್ಥಿರವಾಗಿರುತ್ತದೆ. ಇದಕ್ಕೆ ಹೊರತಾಗಿರುವುದು ಇತ್ತೀಚಿನ ಹಣಕಾಸು ವರ್ಷದಲ್ಲಿ ಅಂದರೆ 2018–19ರಲ್ಲಿ ಭಾರತ ಮತ್ತು ಕರ್ನಾಟಕದ ಸರಾಸರಿ ದರಗಳು ಸ್ವಲ್ಪಮಟ್ಟಿಗೆ (ತುಲನಾತ್ಮಕವಾಗಿ ಹೇಳುವುದಾದರೆ) ಕ್ರಮವಾಗಿ 6.32 ಮತ್ತು 2.37ರಷ್ಟಿದೆ. ಬಹುಶಃ, ನಿಧಿ ವರ್ಗಾವಣೆ ಆದೇಶದ ಹಂತವನ್ನು ತಲುಪುವ ಮೊದಲು ಮತ್ತು ಸಂಸ್ಕರಣೆಯಲ್ಲಿ ಸಾಮಾನ್ಯ ವಿಳಂಬವನ್ನು ನೀಡಿದರೆ, ಪಾವತಿಗಾಗಿ ಬ್ಯಾಂಕುಗಳು ನಿಧಿ ವರ್ಗಾವಣೆ ಆದೇಶಗಳನ್ನು ಹೊರಡಿಸದೇ ತಡೆಹಿಡಿಯಬಹುದು. ಇತ್ತೀಚಿನ ವರ್ಷದಲ್ಲಿ ಈ ವಿದ್ಯಮಾನದ ಸಂಭವವಿರುತ್ತದೆ. ಹೇಗಾದರೂ, ಕೂಲಿ ಮತ್ತು ಸಾಮಗ್ರಿಗಳಿಗಾಗಿ ನಿಧಿ ವರ್ಗಾವಣೆ ಆದೇಶಗಳನ್ನು ಹೊರಡಿಸುವ ನಡುವಿನ ಒಟ್ಟಾರೆ ಮಾದರಿಯನ್ನು ನೋಡಿದಾಗ, ಇದು ಕಾಣುತ್ತದೆ ಅಂದರೆ, ಬಹಳ ಸೀಮಿತ ಅರ್ಥದಲ್ಲಿ ಕರ್ನಾಟಕವು ದೇಶದ ಇತರ ಭಾಗಗಳಿಗಿಂತ ಸಾಮಗ್ರಿ ಮಾರಾಟಗಾರರಿಗೆ ಹೆಚ್ಚು ಅನುಕೂಲಕರವಾಗಿದೆ, ಅಂದರೆ ಸುಮಾರು 4 ಪ್ರತಿಶತದಷ್ಟು ಉತ್ತಮ ಅಂಕಗಳ ವ್ಯತ್ಯಾಸವಿದೆ.

**ಚಿತ್ರ 12: ಬ್ಯಾಂಕಿಗೆ ಕಳುಹಿಸದ ನಿಧಿ ವರ್ಗಾವಣೆ ಆದೇಶಗಳು: ಕೂಲಿ ಮತ್ತು ಸಾಮಗ್ರಿಗಳ ಹೋಲಿಕೆ (ಅಖಿಲ ಭಾರತ)**




**ಚಿತ್ರ 13: ಬ್ಯಾಂಕಿಗೆ ಕಳುಹಿಸದ ನಿಧಿ ವರ್ಗಾವಣೆ ಆದೇಶಗಳು: ಕೂಲಿ ಮತ್ತು ಸಾಮಗ್ರಿಗಳ ಹೋಲಿಕೆ (ಕರ್ನಾಟಕ)**



ಆದಾಗ್ಯೂ, ಬ್ಯಾಂಕಿನಿಂದ ಅನುಮೋದನೆ ಪಡೆಯುವ ಪಾವತಿಗಾಗಿ ಸಾಮಗ್ರಿ ಸರಬರಾಜುದಾರರಿಗೆ ಅವರ ಹಕ್ಕುಗಳಿಗೆ ಸಂಬಂಧಿಸಿದಂತೆ ಕೂಲಿ ಕಾರ್ಮಿಕರ ಹಕ್ಕುಗಳಿಗಿಂತ ಒಂದು ಪ್ರಯೋಜನವಿರುತ್ತದೆ. ಚಿತರ್ಗಳಲ್ಲಿ ಸೂಚಿಸಿದಂತೆ, ಸಂಖ್ಯೆಗಳು ಸಂಪೂರ್ಣವಾಗಿ ತುಂಬಾ ಚಿಕ್ಕದಾಗಿದ್ದು, ಬಹುತೇಕ ಅತ್ಯಲ್ಪವಾಗಿರುತ್ತವೆ. ಆದರೂ, ಇದನ್ನು ಸಾಮಗ್ರಿ ಸರಬರಾಜುದಾರರಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ನೋಡಬಹುದು–ಅದು ಅವರ ಬ್ಯಾಂಕ್ ಖಾತೆಗಳು ಮಾನ್ಯವಾಗಿರಲಿ, ಅವರ ತೆರಿಗೆಯ ಪ್ಯಾನ್ ಕಾರ್ಡ್ ಅಥವಾ ಅಧಾರ್ ಸಂಖ್ಯೆಗೆ ಲಿಂಕ್ ಆಗಿರಲಿ, ಇತ್ಯಾದಿ. ಕೂಲಿ ಕಾರ್ಮಿಕರ ಖಾತೆಗಳಿಗಿಂತ ಹೆಚ್ಚು ಆಗಿರುತ್ತದೆ.

**ಚಿತ್ರ 14: ಬ್ಯಾಂಕುಗಳಿಂದ ಸಂಸ್ಕರಿಸಲ್ಪಟ್ಟ ವಹಿವಾಟುಗಳು(%): ಸಂಸ್ಕರಿಸಲ್ಪಟ್ಟ ಕೂಲಿಗಳು ಮತ್ತು ಸಾಮಗ್ರಿಗಳ ವಹಿವಾಟುಗಳು (ಅಖಿಲ ಭಾರತ)**




**ಚಿತ್ರ 15: ಬ್ಯಾಂಕುಗಳಿಂದ ಸಂಸ್ಕರಿಸಲ್ಪಟ್ಟ ವಹಿವಾಟುಗಳು(%): ಸಂಸ್ಕರಿಸಲ್ಪಟ್ಟ ಕೂಲಿಗಳು ಮತ್ತು ಸಾಮಗ್ರಿಗಳ ವಹಿವಾಟುಗಳು (ಕರ್ನಾಟಕ)**



**ಚಿತ್ರ 16: –ಸಾಮಗ್ರಿಗಳ ಪಾವತಿಯ ಬಗ್ಗೆ ಬ್ಯಾಂಕುಗಳ ಪ್ರತಿಕ್ರಿಯೆ (ಅಖಿಲ ಭಾರತ)**




**ಚಿತ್ರ 17: – ಕೂಲಿ ಪಾವತಿಯ ಬಗ್ಗೆ ಬ್ಯಾಂಕುಗಳ ಪ್ರತಿಕ್ರಿಯೆ (ಅಖಿಲ ಭಾರತ)**




**ಚಿತ್ರ 18: ಸಾಮಗ್ರಿಗಳ ಪಾವತಿಯ ಬಗ್ಗೆ ಬ್ಯಾಂಕುಗಳ ಪ್ರತಿಕ್ರಿಯೆ (ಕರ್ನಾಟಕ)**



**ಚಿತ್ರ 19: – ಕೂಲಿ ಪಾವತಿಯ ಬಗ್ಗೆ ಬ್ಯಾಂಕುಗಳ ಪ್ರತಿಕ್ರಿಯೆ (ಕರ್ನಾಟಕ)**




ಕುತೂಹಲಕಾರಿಯಾಗಿ, ಅಖಿಲ ಭಾರತ ಸರಾಸರಿಯಲ್ಲಿ ನಾವು ಸಾಮಗ್ರಿ ಸರಬರಾಜುದಾರರಿಂದ ಕೆಲವು ಅಮಾನ್ಯ ಬ್ಯಾಂಕ್ ಖಾತೆಗಳನ್ನು ಕಾಣುತ್ತೇವೆ, ಆದರೆ ಕೂಲಿ ಕಾರ್ಮಿಕರು ತಮ್ಮ ದಾಖಲೆಗಳಲ್ಲಿ ಅಂತಹ ತಪ್ಪುಗಳನ್ನು ಹೊಂದಿರುವುದಿಲ್ಲ. ಇದಕ್ಕೆ ಎದುರಾಗಿ ಕರ್ನಾಟಕ ಕೂಲಿ ಕಾರ್ಮಿಕರು ಮತ್ತು ಸಾಮಗ್ರಿ ಸರಬರಾಜುದಾರರ ಹಕ್ಕುಗಳನ್ನು ತಿರಸ್ಕರಿಸಲಿಲ್ಲ ಅಥವಾ ನಿಧಿ ವರ್ಗಾವಣೆ ಆದೇಶಗಳಲ್ಲಿ ಅಮಾನ್ಯ ಖಾತೆ ಸಂಖ್ಯೆಗಳನ್ನು ನಮೂದಿಸಿದ್ದರೂ ವಿಳಂಬವಾಗಿರಲಿಲ್ಲ. ಆದಾಗ್ಯೂ, ಬ್ಯಾಂಕುಗಳು ಸಾಮಗ್ರಿ ಸರಬರಾಜುದಾರರಕ್ಕಿಂತ, ಕೂಲಿ ಕಾರ್ಮಿಕರನ್ನು ಒಂದು ಅಥವಾ ಇನ್ನೊಂದು ಕಾರಣಗಳಿಗಾಗಿ ತಪ್ಪಾಗಿ ನೋಡಿರುತ್ತವೆ. ಸಾಮಗ್ರಿ ಪೂರೈಕೆದಾರರು ಈ ವಿಷಯದಲ್ಲಿ ಹೆಚ್ಚು ಸುರಕ್ಷಿತರಾಗಿದ್ದರು.

ಈ ಅಧ್ಯಾಯದಲ್ಲಿ ಮೊದಲು ಕೇಳಿದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಾವು ನಮ್ಮ ಶೋಧನೆಗಳನ್ನು ಹೇಗೆ ಒಟ್ಟುಗೂಡಿಸುತ್ತೇವೆ? ಮೌಲ್ಯಮಾಪನವು ಬಹಳ ಸೀಮಿತ ಮಟ್ಟಿಗೆ ಇದ್ದರೂ, ಬ್ಯಾಂಕುಗಳು ಕಳುಹಿಸುವ ಅಥವಾ ಸಂಸ್ಕರಿಸುವ ತಮ್ಮ ನಿಧಿ ವರ್ಗಾವಣೆ ಆದೇಶಗಳಲ್ಲಿ ಕೂಲಿ ಕಾರ್ಮಿಕರಿಗಿಂತ ಸಾಮಗ್ರಿ ಸರಬರಾಜುದಾರರನ್ನು ಉತ್ತಮವಾಗಿ ನೋಡುತ್ತಾರೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದ ಆರು ವರ್ಷಗಳ ನಂತರವೂ ಅಖಿಲ ಭಾರತ ಮಟ್ಟದಲ್ಲಿ ಕೂಲಿ ಗಳಿಸುವವರಲ್ಲಿ ಶೇಕಡಾ 3.47 ರಷ್ಟು, ಕಾರ್ಮಿಕರ ಹಕ್ಕುಗಳನ್ನು ಬ್ಯಾಂಕುಗಳು ಪ್ರಕ್ರಿಯೆಗೊಳಿಸಿರುವುದಿಲ್ಲ ಮತ್ತು ಇನ್ನೂ 3.47 ರಷ್ಟು ಜನರ ಹಕ್ಕುಗಳನ್ನು 2018–19ರ ವೇಳೆಗೆ ಬ್ಯಾಂಕುಗಳು ತಿರಸ್ಕರಿಸಿರುತ್ತವೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಕಾರ್ಯಕ್ರಮದ ಪ್ರಾರಂಭದಲ್ಲಿ, ಅಂದರೆ, 2013–14ರಲ್ಲಿ ಈ ದರವು ಬ್ಯಾಂಕುಗಳು ಪ್ರಕ್ರಿಯೆಗೊಳಿಸದ ಹಕ್ಕುಗಳ ಶೇಕಡಾ 3.24ರಷ್ಟಿತ್ತು ಮತ್ತು ಶೇಕಡಾ 2.47 ರಷ್ಟು ಪ್ರಕರಣಗಳನ್ನು ತಿರಸ್ಕರಿಸಿರುವುದನ್ನು ಎಂದು ಗಮನಿಸಬೇಕು. ವಾಸ್ತವವಾಗಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನಕ್ಕೆ ವರ್ಷಗಳು ಉರುಳಿದಂತೆ ಎರಡನೆಯದು ಈ ಘಟನೆಯಲ್ಲಿ ಸ್ವಲ್ಪ ಏರಿಕೆ ಕಂಡಿರುತ್ತದೆ. ಇದಕ್ಕೆ ಎದುರಾಗಿ, ಅಖಿಲ ಭಾರತ ಮಟ್ಟದಲ್ಲಿ ಸಾಮಗ್ರಿ ಪೂರೈಕೆದಾರರ ಹಕ್ಕುಗಳು ಕೇವಲ 1.8 ಶೇಕಡಾದಷ್ಟು ತಿರಸ್ಕರಿಸಲ್ಪಟ್ಟಿದ್ದು, ಶೇಕಡಾ 0.8ರಷ್ಟು ಹಕ್ಕುಗಳು ಪ್ರಕ್ರಿಯೆಗೊಂಡಿರಲಿಲ್ಲ ಮತ್ತು ಕ್ರಮವಾಗಿ ತಿರಸ್ಕರಿಸಲ್ಪಟ್ಟಿದ್ದವು. ಇದು ರಾಷ್ಟ್ರೀಯ ಮಟ್ಟದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ದೃಶ್ಯವಾಗಿದ್ದರೆ, ಕರ್ನಾಟಕದಲ್ಲಿ ಇದು ಹೇಗಿತ್ತು?

ಕರ್ನಾಟಕದ ಕಾರ್ಮಿಕರು ಮತ್ತು ಮಾರಾಟಗಾರರಿಗೆ ಬ್ಯಾಂಕುಗಳು ಪ್ರಕ್ರಿಯೆಗೊಳಿಸುತ್ತಿರುವ ಕೂಲಿ ಮತ್ತು ಸಾಮಗ್ರಿ ಪಾವತಿಗಳಿಗೆ ಸಂಬಂಧಿಸಿದಂತೆ ಎರಡು ಪ್ರಮುಖ ಅವಲೋಕನಗಳನ್ನು ಮಾಡಬೇಕಾಗಿರುತ್ತದೆ. ಸಾಮಗ್ರಿ ಪೂರೈಕೆದಾರರು ತಮ್ಮ ಹಕ್ಕುಗಳನ್ನು ಬ್ಯಾಂಕುಗಳು ಪ್ರಕ್ರಿಯೆಗೊಳಿಸದಿದ್ದಲ್ಲಿ ಪ್ರಗತಿಶೀಲ ಕುಸಿತವನ್ನು ಹೊಂದಿರುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದ ನಂತರ ವರ್ಷಗಳು ಉರುಳಿದಂತೆ, ಬ್ಯಾಂಕುಗಳು ತಮ್ಮ ನಿಧಿ ವರ್ಗಾವಣೆ ಆದೇಶಗಳನ್ನು ಪ್ರಕ್ರಿಯೆಗೊಳಿಸದಿರುವ ಪ್ರಮಾಣದಲ್ಲಿ ಕ್ರಮೇಣ ಕುಸಿತವು ಕಂಡುಬಂದಿರುತ್ತದೆ. ಬ್ಯಾಂಕುಗಳು ತಮ್ಮ ಹಕ್ಕುಗಳನ್ನು ತಿರಸ್ಕರಿಸಿದ ದರಕ್ಕೆ ಸಂಬಂಧಿಸಿದಂತೆ ಇದು ನಿಜವಾಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಕೂಲಿಯನ್ನು ಪಡೆಯುವ ಕಾರ್ಮಿಕರ ನಿಧಿ ವರ್ಗಾವಣೆ ಆದೇಶಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳು ಹೆಚ್ಚು ನಿಖರತೆಯನ್ನು ತೋರಿಸಿರುತ್ತವೆ: ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಾರಂಭದಲ್ಲಿ ತಮ್ಮ ನಿಧಿ ವರ್ಗಾವಣೆ ಆದೇಶಗಳನ್ನು ಪ್ರಕ್ರಿಯೆಗೊಳಿಸದ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿದ್ದು, ನಂತರದ ವರ್ಷಗಳಲ್ಲಿ ಅನುಪಾತದಲ್ಲಿ ಕ್ರಮೇಣ ಏರಿಕೆಯು ಕಂಡುಬಂದಿರುತ್ತದೆ. ಕರ್ನಾಟಕದಲ್ಲಿ 2013–14ರ ವೇಳೆಗೆ, ಬ್ಯಾಂಕುಗಳು ಪ್ರಕ್ರಿಯೆಗೊಳಿಸದ ವಹಿವಾಟು ನಿರಾಕರಣೆ ಮತ್ತು ಹಕ್ಕುಗಳ ದರಗಳು ತಲಾ 6.07ರಷ್ಟಿದ್ದು, ಇದು 2018–19ರ ವೇಳೆಗೆ ತಲಾ 18.98ಕ್ಕೆ ಏರಿರುತ್ತದೆ.

ಈಗ ಕೂಲಿ ಮತ್ತು ಸಾಮಗ್ರಿ ಸರಬರಾಜಿನ ಮೇಲೆ ವಿಳಂಬವಾಗಿ ಅಥವಾ ಸಮಯೋಚಿತವಾಗಿ ಪಾವತಿಸುವ ಕುರಿತು ಚರ್ಚೆಯನ್ನು ಮುಕ್ತಾಯಗೊಳಿಸಲು, ನಾವು ಮೊದಲೇ ಹೇಳಿದ್ದನ್ನು ಪುನರುಚ್ಚರಿಸುತ್ತಿದ್ದೇವೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ತ್ವರಿತವಾಗಿ ಕೂಲಿಯನ್ನು ವಿತರಿಸುವಲ್ಲಿ ಅಥವಾ ಮಾರಾಟಗಾರರಿಗೆ ಸಾಮಗ್ರಿ ವೆಚ್ಚವನ್ನು ಪಾವತಿಸುವಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದ್ದರೂ, ಪ್ರಮಾಣಿತ ಮಿತಿಯ ಶೇಕಡಾ 70 ರಷ್ಟು ಸಮಯೋಚಿತ ಪಾವತಿಯ ಪ್ರಮಾಣವನ್ನು ಮೀರಿಸುವ ಅವಶ್ಯಕತೆಯಿರುತ್ತದೆ. ಪ್ರಾಥಮಿಕ ಹಂತಗಳನ್ನು ಪೂರೈಸುವ ಮಾನವ ಸಾಮರ್ಥ್ಯಗಳನ್ನು ಹೆಚ್ಚಿಸಲು ಕೂಲಿ ಚೀಟಿಗಳನ್ನು ಭರ್ತಿ ಮಾಡುವಲ್ಲಿ ಸರಿಯಾದ ತರಬೇತಿ ನೀಡುವ, ಮತ್ತು ಸರಿಯಾದ ಬ್ಯಾಂಕ್ ಖಾತೆಗಳನ್ನು ಒದಗಿಸುವುದು ಇತ್ಯಾದಿ. ಅವಶ್ಯಕತೆಯಿರುತ್ತದೆ.

## 8.7 ಪಾವತಿ ಹಕ್ಕುಗಳ ನಿರಾಕರಣೆ

ನಿಧಿ ವರ್ಗಾವಣೆ ಆದೇಶವನ್ನು ಕಾರ್ಮಿಕನ ಪರವಾಗಿ ಮಾಡಿದರೂ, ವಾಣಿಜ್ಯ ಬ್ಯಾಂಕ್ ಹಣವನ್ನು ಬಿಡುಗಡೆ ಮಾಡದಿದ್ದರೆ ಈ ಕಾರಣದಿಂದಾಗಿ ಹಣವು ಅವನಿಗೆ ಅಥವಾ ಅವಳಿಗೆ ತಲುಪುವುದಿಲ್ಲ ಬ್ಯಾಂಕ್ ಸ್ಪಂದಿಸದಿರಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಒಂದು ಬ್ಯಾಂಕ್ ಖಾತೆ ಸಂಖ್ಯೆ ದಾಖಲೆಗಳಲ್ಲಿರುವದಕ್ಕೆ ಹೊಂದಿಕೆಯಾಗದ ಕಾರಣವಾಗಿರುತ್ತದೆ. ಎರಡನೆಯದಾಗಿ, ಪಾವತಿಸಬೇಕಾದ ಹಣವನ್ನು ವಿತರಿಸಲು ಸಾಕಷ್ಟು ಬಾಕಿ ಲಭ್ಯವಿಲ್ಲದಿರಬಹುದು. ಮೂರನೆಯದಾಗಿ, ಅಪ್‌ಲೋಡ್ ಮಾಡಿದ ನಿಧಿ ವರ್ಗಾವಣೆ ಆದೇಶದಲ್ಲಿ ಒಂದು ಅಥವಾ ಇನ್ನೊಂದು ದೋಷದಿಂದಾಗಿ ಹಕ್ಕುಗಳನ್ನು ತಿರಸ್ಕರಿಸಲಾಗುತ್ತದೆ.

ಹಕ್ಕುಗಳನ್ನು ತಿರಸ್ಕರಿಸಿರುವುದಕ್ಕೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ನಿರ್ವಹಿಸುತ್ತಿರುವ ಪೋರ್ಟಲ್ ಕೆಲವು ಹೇಳಿಕೆಗಳಲ್ಲಿ ವಿವರಣೆಗಳನ್ನು ನೀಡಿರುತ್ತದೆ ನಾವು ಈ ದತ್ತಾಂಶದ ಸಂಗ್ರಹವನ್ನು ಪಡೆದಿರುತ್ತೇವೆ ಮತ್ತು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಅನುಷ್ಠಾನಗೊಂಡ ನಂತರದ ವರ್ಷಗಳಲ್ಲಿ ಮತ್ತು ಅದರ ಪರಿಚಯಕ್ಕೆ ಕೆಲವು ವರ್ಷಗಳ ಮೊದಲು ಅದು ಬದಲಾದ ವಿಧಾನವನ್ನು ಗಮನಿಸಿರುತ್ತೇವೆ. ಮೊದಲಿಗೆ,

ಒಟ್ಟಾರೆಯಾಗಿ ರಾಷ್ಟ್ರಕ್ಕೆ ನಿರಾಕರಣೆಯ ದರಗಳ ಬಗ್ಗೆ ದತ್ತಾಂಶವು ಏನು ಹೇಳುತ್ತದೆ ಮತ್ತು ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ಹೇಗೆ ದರ ವಿಧಿಸುತ್ತದೆ ಎಂಬುದನ್ನು ಪರಿಶೀಲಿಸೋಣ.

ನಿಧಿ ವರ್ಗಾವಣೆ ಆದೇಶಗಳನ್ನು ಬ್ಯಾಂಕುಗಳು ತಿರಸ್ಕರಿಸುವ ಸಾಧ್ಯತೆ ಕಡಿಮೆ ಇದೆ ಎಂದು ರಾಷ್ಟ್ರಮಟ್ಟದ ದತ್ತಾಂಶಗಳು ತೋರಿಸುತ್ತವೆ. 2015–16ರಲ್ಲಿ, ಇದು ನಿಧಿ ವರ್ಗಾವಣೆ ಆದೇಶಗಳನ್ನು ಹೊರಡಿಸಿದ ಒಟ್ಟು ವಹಿವಾಟಿನ ಶೇಕಡಾ 2.08ರಷ್ಟಿತ್ತು. ನಂತರದ ವರ್ಷಗಳಲ್ಲಿ 2017–18ರ ಅವಧಿಯಲ್ಲಿ ಇದು ಇದೇ ವ್ಯಾಪ್ತಿಯಲ್ಲಿ ಉಳಿದಿದ್ದರೂ, 2018–19ರಲ್ಲಿ ಇದು ಶೇಕಡಾ ಒಂದರಷ್ಟು ಏರಿಕೆಯಾಗಿ 3.59 ಶೇಕಡಾವನ್ನು ತಲುಪಿರುತ್ತದೆ. ವಿವಿಧ ರಾಜ್ಯಗಳು ನಿಧಿ ವರ್ಗಾವಣೆ ಆದೇಶಗಳ ನಿರಾಕರಣೆಯ ದರಗಳಲ್ಲಿ ವಿಭಿನ್ನ ಮಾದರಿಗಳನ್ನು ಹೊಂದಿರುತ್ತವೆ, ಅಲ್ಲಿ 2015–16ರಲ್ಲಿ ರಾಷ್ಟ್ರೀಯ ಸರಾಸರಿ 2.08ಕ್ಕಿಂತ ಮೇಲೆ 17 ರಾಜ್ಯಗಳು ಇದ್ದವು– ಇದು ಹೆಚ್ಚಿನ ನಿರಾಕರಣೆಯ ದರವನ್ನು ಸೂಚಿಸುತ್ತದೆ, ಆದರೆ ಇದು 2017–18ರ ವೇಳೆಗೆ ಇನ್ನೂ ಒಂದು ರಾಜ್ಯದಿಂದ 18 ಸಂಖ್ಯೆಗಳಿಗೆ ಏರಿರುತ್ತದೆ. 2016–17ರಲ್ಲಿ, ರಾಷ್ಟ್ರೀಯ ಸರಾಸರಿಗಿಂತ (2.95 ರ) ಹೆಚ್ಚು ಇರುವ ರಾಜ್ಯಗಳ ಸಂಖ್ಯೆಯಲ್ಲಿ ಕುಸಿತವನ್ನು ಕಂಡಿರುತ್ತದೆ.

ಕೋಷ್ಟಕ 14ರಲ್ಲಿ ನೋಡಬಹುದಾದಂತೆ, ಕರ್ನಾಟಕವು ಈ ವಿಷಯದಲ್ಲಿ ಏರಿಳಿತದ ರೀತಿಯನ್ನು ಹೊಂದಿರುತ್ತದೆ. ಆದರೆ ಖಂಡಿತವಾಗಿಯೂ ಇದು ಅನುಗುಣವಾದ ವರ್ಷಗಳಲ್ಲಿ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿರುತ್ತದೆ. ಆದರೆ, 2018–19ನೇ ವರ್ಷದಲ್ಲಿ ನಿಧಿ ವರ್ಗಾವಣೆ ಆದೇಶ ನಿರಾಕರಣೆ ದರಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಅತಿದೊಡ್ಡ ಶೇಕಡಾ ಪಾಲು ಅಂದರೆ, ಶೇಕಡಾ 23.44 ರಷ್ಟು. ಇರುತ್ತದೆ.

**ಕೋಷ್ಟಕ 14: ನಿಧಿ ವರ್ಗಾವಣೆ ಆದೇಶ ನಿರಾಕರಣೆ ದರಗಳು – ರಾಷ್ಟ್ರೀಯ ಸರಾಸರಿ ದರಗಳೊಂದಿಗೆ ಕರ್ನಾಟಕದ ಸರಾಸರಿ ದರಗಳ ಹೋಲಿಕೆ**

| ವರ್ಷ | ರಾಷ್ಟ್ರೀಯ ಸರಾಸರಿ | ಕರ್ನಾಟಕದ ಸರಾಸರಿ | ರಾಷ್ಟ್ರೀಯ ಸರಾಸರಿಗಿಂತ | | ಒಟ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು |
|---|---|---|---|---|---|
| | | | ಹೆಚ್ಚಿನ ಸರಾಸರಿ ಹೊಂದಿರುವ ರಾಜ್ಯಗಳು. | ಕಡಿಮೆ ಸರಾಸರಿ ಹೊಂದಿರುವ ರಾಜ್ಯಗಳು. | |
| 2015–16 | 2.08 | **4.16** | 17 | 17 | 34 |
| 2016–17 | 2.95 | **8.49** | 12 | 22 | 34 |
| 2017–18 | 2.68 | **2.96** | 18 | 16 | 34 |
| 2018–19 | 3.59 | **23.44** | 14 | 20 | 34 |

ನಿಧಿ ವರ್ಗಾವಣೆ ಆದೇಶ ನಿರಾಕರಣೆ ದರಗಳ ಏರಿಳಿತದ ದರಗಳು ಏನು ವಿವರಿಸುತ್ತದೆ? ವಿದ್ಯುನ್ಮಾನವಾಗಿ ನಿಧಿ ವರ್ಗಾವಣೆ ಆದೇಶಗಳನ್ನು ಅಪ್‌ಲೋಡ್ ಮಾಡಲಾಗಿದ್ದು, ಇಬ್ಬರು ವ್ಯಕ್ತಿಗಳು ಡಿಜಿಟಲ್ ಸಹಿ ಮಾಡಬೇಕಾಗಿದ್ದು, ಕಾರ್ಮಿಕರ ಎಲ್ಲಾ ವಿವರಗಳು ಈಗಾಗಲೇ ವ್ಯವಸ್ಥೆಯಲ್ಲಿರುವುದನ್ನು ಮತ್ತು ಕೆಲಸವನ್ನು ಅನುಮೋದಿಸಲಾಗಿರುವುದನ್ನು ಪೋರ್ಟಲ್‌ನಲ್ಲಿ ಹೈಲೈಟ್ ಮಾಡಲಾಗಿರುವುದನ್ನು, ಬ್ಯಾಂಕ್ ನಿಧಿ ವರ್ಗಾವಣೆ ಆದೇಶವನ್ನು ತಿರಸ್ಕರಿಸಿರುವುದನ್ನು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತ್ ಮಟ್ಟಗಳಲ್ಲಿ ಹಾಗೂ ಕ್ಷೇತ್ರ ಮಟ್ಟದಲ್ಲಿರುವ ಅಧಿಕಾರಿಗಳು ಮಾಡಿದ ಕೆಲಸ, ಕೂಲಿ ಹಕ್ಕು ಹಾಗೂ ಮುಂತಾದವುಗಳನ್ನು ಪರಿಶೀಲಿಸುವ ಕೆಲಸವನ್ನು ಮಾಡಬಹುದಾಗಿದ್ದು, ನಿಧಿ ವರ್ಗಾವಣೆ ಆದೇಶಗಳ ಸಮಸ್ಯೆಗೆ ಬ್ಯಾಂಕ್ ಒಂದು ಪರಿಹಾರ ಅಥವಾ ಇನ್ನೊಂದನ್ನು

ಕಂಡುಕೊಳ್ಳಬಹುದಾಗಿರುತ್ತದೆ. ನಿಧಿ ವರ್ಗಾವಣೆ ಆದೇಶಗಳ ಸಮಸ್ಯೆಗೆ ಯಾವುದೇ ನಿಧಿಗಳಿಲ್ಲದ ಕಾರಣ, ನಿಧಿ ವರ್ಗಾವಣೆ ಆದೇಶಗಳನ್ನು ಹಿಂತೆಗೆದುಕೊಳ್ಳುವುದನ್ನು ತಿರಸ್ಕರಿಸಲಾಗಿದೆ ಎಂದು ಪರಿಗಣಿಸಲಾಗುವುದಿಲ್ಲ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಮಾಜಿ ಓಂಬುಡ್ಸ್ಮನ್ ಅವರೊಂದಿಗಿನ ನಮ್ಮ ಸಮಾಲೋಚನೆಗಳು, ಕಾರ್ಮಿಕರ/ಸಾಮಗ್ರಿ ಸರಬರಾಜುದಾರರ ಖಾತೆ ಸಂಖ್ಯೆಗಳನ್ನು ಅವರು ಹೊಂದಿರುವ ದಾಖಲೆಗಳೊಂದಿಗೆ ಹೊಂದಿಕೆಯಾಗದಿದ್ದಾಗ ನೋಡಲ್ ಬ್ಯಾಂಕ್ ನಿಧಿ ವರ್ಗಾವಣೆ ಆದೇಶಗಳನ್ನು ತಿರಸ್ಕರಿಸಲು ಮುಖ್ಯ ಮತ್ತು ಬಹುಶಃ ಏಕೈಕ ಕಾರಣ ಎಂದು ತಿಳಿದುಬಂದಿರುತ್ತದೆ. ಇದು ಹಲವಾರು ಮತ್ತು ಪ್ರಮುಖ ಕಾರಣಗಳಿಗಾಗಿ ಸಂಭವಿಸಬಹುದು ಎಂದು ಗಮನಸೆಳೆಯಲಾಗಿರುತ್ತದೆ.

ಮೊದಲನೆಯದಾಗಿ, ಕಾರ್ಮಿಕ ಅಥವಾ ಅವನ ಕುಟುಂಬದ ಸದಸ್ಯರು ತಪ್ಪಾಗಿ (ಅಸ್ತಿತ್ವದಲ್ಲಿಲ್ಲದ) ಖಾತೆ ಸಂಖ್ಯೆಯನ್ನು ನಮೂದಿಸಿರಬಹುದು. ಹಣಕಾಸು ಸಂಕೇತಕ್ಕಾಗಿ ಫಲಾನುಭವಿಯ ಬ್ಯಾಂಕ್ ಸಂಕೇತವನ್ನು ಕೆಲವೊಮ್ಮೆ ತಪ್ಪಾಗಿ ನಮೂದಿಸಬಹುದು. ಎರಡನೆಯದಾಗಿ, ವೇತನ ವಿತರಣೆಯ ಉದ್ದೇಶಗಳಿಗಾಗಿ ನಮೂದಿಸಿರುವ ಉದ್ಯೋಗ ಕಾರ್ಡ್ ಸಂಖ್ಯೆ ಉದ್ಯೋಗ ಕಾರ್ಡ್ ನೀಡುವ ಮತ್ತು ನೋಂದಾಯಿಸುವ ಸಮಯದಲ್ಲಿ ನಮೂದಿಸಿದ್ದಕ್ಕಿಂತ ಭಿನ್ನವಾಗಿರುತ್ತದೆ. ಮೂರನೆಯದಾಗಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ವಹಿವಾಟು ಉದ್ದೇಶಗಳಿಗಾಗಿ ಖಾತೆಯನ್ನು 'ಸ್ಥಗಿತಗೊಳಿಸಿರಬಹುದು' ಮತ್ತು ಒಂದು ಅಥವಾ ಇನ್ನೊಂದು ಆಡಳಿತಾತ್ಮಕ ಕಾರಣವಿರಬಹುದು ಆದ್ದರಿಂದ ಪಾವತಿಸಬೇಕಾದ ಹಣವನ್ನು ಪ್ರಕ್ರಿಯೆಗೊಳಿಸದಿರಬಹುದು. ನಾಲ್ಕನೆಯದಾಗಿ, ಕಾರ್ಮಿಕನ ಉದ್ಯೋಗ ಕಾರ್ಡ್ ತಯಾರಿಸಲಾಗಿದ್ದರೆ, ಅದು ಕುಟುಂಬದ ಒಂದು ಭಾಗವಾಗಿರಬಹುದು ಮತ್ತು ದಾಖಲಾತಿಗಳ ಸಮಯದಲ್ಲಿ, ಯಾವುದೇ ಸದಸ್ಯರ ಸ್ವತಂತ್ರ ಖಾತೆಯನ್ನು ನೋಂದಾಯಿಸಿರಬಹುದು ಅಥವಾ ಜಂಟಿ ಖಾತೆಯನ್ನು ನೋಂದಾಯಿಸಿರಬಹುದು. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಅಂತಹ ಜಂಟಿ ಖಾತೆಗಳು ಮತ್ತು ಕಾರ್ಮಿಕನನ್ನು ಹೊರತುಪಡಿಸಿ ಕುಟುಂಬದ ಇತರ ಸದಸ್ಯರ ಖಾತೆಗಳಲ್ಲಿ ಸಮಸ್ಯೆಗಳನ್ನು ಎದುರಿಸಲಾರಂಭಿಸಿದಾಗ, ಈ ವಿಷಯದ ನೀತಿಯಲ್ಲಿ ಪ್ರಮುಖ ಬದಲಾವಣೆಯಾಗಿರುತ್ತದೆ. ಪ್ರತಿಯೊಬ್ಬ ಉದ್ಯೋಗ ಕಾರ್ಡ್ ಹೊಂದಿರುವವರು ಈಗ ಪ್ರತ್ಯೇಕ ಮತ್ತು ಸ್ವತಂತ್ರ ಬ್ಯಾಂಕ್ ಖಾತೆಯನ್ನು ಹೊಂದುವ ನಿರೀಕ್ಷೆಯಿರುತ್ತದೆ. ಈ ಸ್ಥಿತ್ಯಂತರದ ಪ್ರಕ್ರಿಯೆಯು ಪಂಚಾಯತ್ ಅಧಿಕಾರಿಗಳು ಮೊದಲು ಕಾರ್ಡ್‌ಗಳನ್ನು ಮರುಪಡೆಯಲು, ಬ್ಯಾಂಕ್ ಖಾತೆ ವಿವರಗಳನ್ನು ಪಡೆದುಕೊಳ್ಳಲು, ಅಗತ್ಯ ಬದಲಾವಣೆಗಳನ್ನು ಮಾಡಲು ಮತ್ತು ಕಾರ್ಡ್‌ಗಳನ್ನು ಮರುಹಂಚಿಕೆ ಮಾಡಲು ಸಾಕಷ್ಟು ಸಮಯ ಮತ್ತು ಶ್ರಮವನ್ನು ತೆಗೆದುಕೊಂಡಿರುತ್ತಾರೆ. ಆದರೆ ಈ ಪ್ರಕ್ರಿಯೆಯ ಪೂರ್ಣಗೊಳ್ಳಲು ಹೆಚ್ಚುವರಿ ಸಮಯ ಮತ್ತು ತೊಂದರೆಗಳನ್ನು ತೆಗೆದುಕೊಂಡಿರುತ್ತದೆ. ಏಕೆಂದರೆ ಹಿಂದಿನ ಉದ್ಯೋಗ ಕಾರ್ಡ್‌ಗಳು ಹೆಚ್ಚಾಗಿ ಮೇಸ್ತ್ರಿಗಳು ಅಥವಾ ಗುತ್ತಿಗೆದಾರರೊಂದಿಗೆ ಇರುತ್ತವೆ.

ಬ್ಯಾಂಕ್ ಖಾತೆಯ ಹೆಚ್ಚು ಸವಾಲಿನ ಸಮಸ್ಯೆಯೆಂದರೆ, ಒಂದು ದಶಕದ ಹಿಂದಿನಂತಲ್ಲದೆ, ಗ್ರಾಮೀಣ ಕುಟುಂಬಗಳು ಇಂದು ಬ್ಯಾಂಕಿನಲ್ಲಿ ಅನೇಕ ಖಾತೆಗಳನ್ನು ಹೊಂದಿರುತ್ತಾರೆ. ಅಂತಹ ಸದಸ್ಯರು – ಕೆಲವೊಮ್ಮೆ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳು ಬ್ಯಾಂಕಿನೊಂದಿಗೆ ಸಾಲ ವಹಿವಾಟು ನಡೆಸಿರುತ್ತಾರೆ ಆದರೆ ಸಾಮಾನ್ಯವೆಂಬಂತೆ ಸಾಲವನ್ನು ಮರುಪಾವತಿಸುತ್ತಿಲ್ಲ. ಯಾವುದೇ ಹಣದ ಠೇವಣಿ (ಉದಾಹರಣೆಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಿಂದ) ಅವರು ಪಾವತಿಸಬೇಕಾದ ಕಂತುಗಳಿಗೆ ಸರಿಹೊಂದಿಸಬಹುದೆಂಬ ಭಯದಿಂದ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅನೇಕ ಕಾರ್ಮಿಕರು ಅಥವಾ

ಫಲಾನುಭವಿಗಳು ಉದ್ದೇಶಪೂರ್ವಕವಾಗಿ ಬೇರೆ ಬ್ಯಾಂಕ್ ಖಾತೆಯನ್ನು ನೀಡಲು ಒಲವು ತೋರಿಸಿರುತ್ತಾರೆ. ಇದರ ಪರಿಣಾಮವಾಗಿ, 'ಅಧಿಕೃತ' ಖಾತೆ ಸಂಖ್ಯೆ ಈಗ ಫಲಾನುಭವಿಗಳು ನೀಡುತ್ತಿರುವದಕ್ಕಿಂತ ಭಿನ್ನವಾಗಿರುವುದರಿಂದ ಬ್ಯಾಂಕಿನಿಂದ ಹಣವನ್ನು ವರ್ಗಾಯಿಸುವ ಪ್ರಯತ್ನವು ಯಶಸ್ವಿಯಾಗುವುದಿಲ್ಲ. ಕುತೂಹಲಕಾರಿಯಾಗಿ, ಎಲ್ಲಾ ಬ್ಯಾಂಕ್ ಖಾತೆಗಳನ್ನು ಈಗ ವ್ಯಕ್ತಿಯ ಆಧಾರ್ ಸಂಖ್ಯೆಗೆ ಲಿಂಕ್ ಮಾಡಬೇಕಾಗಿರುತ್ತದೆ. ಈ ಖಾತೆಗಳನ್ನು ಆಧಾರ್‌ಗೆ ಲಿಂಕ್ ಮಾಡುವುದು 2017–18 ರಿಂದ ಇತ್ತೀಚಿನ ವಿದ್ಯಮಾನವಾಗಿರುತ್ತದೆ. ಇದರ ಪರಿಣಾಮವಾಗಿ ಮೇಲಿನ ಕೋಷ್ಟಕದಲ್ಲಿ ಗಮನಿಸಿದಂತೆ ಹೆಚ್ಚಿನ ನಿರಾಕರಣೆಯ ಪ್ರಮಾಣವಿರುತ್ತದೆ.

## 8.8 ಈ ವ್ಯವಸ್ಥೆಯು ಮಧ್ಯವರ್ತಿಗಳ ಹಸ್ತಕ್ಷೇಪ ಮತ್ತು ಭ್ರಷ್ಟಾಚಾರದ ನಿದರ್ಶನಗಳನ್ನು ಕಡಿಮೆಗೊಳಿಸಿದೆಯೇ?

ನಮ್ಮ ಮೌಲ್ಯಮಾಪನ ಉದ್ದೇಶದಿಂದ ಉದ್ಭವಿಸುವ ಈ ಪ್ರಶ್ನೆಗೆ ಸರಳ ಮತ್ತು ನೇರ ಪ್ರತಿಕ್ರಿಯೆ 'ಸಂಪೂರ್ಣವಲ್ಲ.' ನಮ್ಮ ಉದ್ದೇಶದ ಈ ಅಂಶದ ಬಗ್ಗೆ ಸಾಕಷ್ಟು ವಿವರವಾದ ಮತ್ತು ಆಳವಾದ ಗುಣಾತ್ಮಕ ದತ್ತಾಂಶಗಳು ಲಭ್ಯವಿದೆ. ನಮ್ಮ ಸಮೀಕ್ಷೆಯಲ್ಲಿನ ಒಂದು ಪ್ರಶ್ನೆಯು ಈ ಸಮಸ್ಯೆಯನ್ನು ಪರಿಹರಿಸಿದೆ, ಗುತ್ತಿಗೆದಾರರು ಅಥವಾ ಮಧ್ಯವರ್ತಿಗಳು ಇದ್ದಾರೆಯೇ ಎಂಬ ಬಗ್ಗೆ. ಪ್ರತಿಯೊಬ್ಬ ಪ್ರತಿಕ್ರಿಯೆದಾರರು ಅವರಿಬ್ಬರ ಅಸ್ತಿತ್ವವನ್ನು ನಿರಾಕರಿಸಿರುತ್ತಾರೆ. ದಾಖಲೆಯ, ಅಥವಾ ಖಾಸಗಿ ಸಂಭಾಷಣೆಗಳು ಇದಕ್ಕೆ ವಿರುದ್ಧವಾಗಿ ವಿಷಯವನ್ನು ಬಹಿರಂಗಪಡಿಸಿರುತ್ತವೆ. ನಮ್ಮ ಶೋಧನೆಗಳ ಬಲದ ಸೂಚನೆಯನ್ನು ನೀಡಲು ಈ ಹಂತದಲ್ಲಿ ಕೆಲವು ಅಂಶಗಳನ್ನು ಇಲ್ಲಿ ಪ್ರಸ್ತುತಪಡಿಸಬಹುದಾಗಿರುತ್ತದೆ. ಕೋಲಾರ ಜಿಲ್ಲೆಯ ಪಂಚಾಯತ್‌ಗಳಲ್ಲಿ ಒಬ್ಬರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಒಂದು ರೀತಿಯಲ್ಲಿ, ಗುತ್ತಿಗೆದಾರರ ಕಣ್ಮರೆ ಅಥವಾ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಅವರ ಪಾತ್ರದ ಬಗ್ಗೆ ಒಂದು ವಾಸ್ತವಿಕತೆಯನ್ನು ತಿಳಿಸಿರುತ್ತಾರೆ. ಕೆಳಗಿನವು ಈ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಹೇಳಬೇಕಾಗಿರುವ ವಿಷಯಗಳನ್ನು (ಹೇಳಿಕೆಗಳನ್ನು ವಿರೂಪಗೊಳಿಸದೆ) ತಿಳಿಸಲಾಗಿರುತ್ತದೆ, ಅವರು ತಾವು ಯಾರು ಎಂದು ಹೆಸರಿಸಬಾರದು ಎಂದು ಒತ್ತಾಯಿಸಿರುತ್ತಾರೆ.

ನಮ್ಮ ಸಮಾಜದಲ್ಲಿ ಕೆಲವು ವಿಷಯಗಳನ್ನು ತೊಡೆದುಹಾಕಲು ಇನ್ನೂ ಯಾವುದೇ ರಾಸಾಯನಿಕ ಕೀಟನಾಶಕವನ್ನು ಕಂಡುಹಿಡಿಯಲಾಗಿಲ್ಲ..... ಅವುಗಳಲ್ಲಿ ಗುತ್ತಿಗೆದಾರರು ಒಬ್ಬರು. ಕಾನೂನು ಅಥವಾ ನಿಯಮಗಳ ಪ್ರಕಾರ, ನೀವು ಅವುಗಳನ್ನು ನಿಷೇಧಿಸಬಹುದು..... ಆದರೆ ಹೆಚ್ಚುತ್ತಿರುವ ಜೆಸಿಬಿಗಳು ಮತ್ತು ಇತರ ಭೂ ಚಲಿಸುವ ವಾಹನಗಳನ್ನು ನೋಡೋಣ. ನಮ್ಮ ಪಂಚಾಯತ್‌ನ ವ್ಯಾಪ್ತಿಯಲ್ಲಿಯೇ ನಮ್ಮಲ್ಲಿ ಮೂರು ಜೆಸಿಬಿಗಳು, ಮತ್ತು ನೂರಕ್ಕೂ ಹೆಚ್ಚು ಟ್ರಾಕ್ಟರುಗಳು ಮತ್ತು ಕೆಲವು ರಸ್ತೆ ರೋಲರ್‌ಗಳಿವೆ. ಈ ಕಾರ್ಯಕ್ರಮವು ಗ್ರಾಮೀಣ ಬಡವರಿಗೆ ಸಹಾಯ ಮಾಡಲಿ ಅಥವಾ ಇಲ್ಲದಿರಲಿ, ಇದು ಖಂಡಿತವಾಗಿಯೂ ಭಾರೀ ಮತ್ತು ಭೂಮಿಯ ಚಲಿಸುವ ವಾಹನ ಉದ್ಯಮಕ್ಕೆ ಸಹಾಯ ಮಾಡಿದೆ. ......ನನ್ನ ಸ್ವಂತ ಕ್ಷೇತ್ರದಲ್ಲಿ (ತಾಲ್ಲೂಕು) ಗುತ್ತಿಗೆದಾರರು ಕಾರ್ಮಿಕರನ್ನು ಆರಿಸಿ ಸರಕು–ವಾಹನಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸ ಪ್ರಗತಿಯಲ್ಲಿರುವ ವಿವಿಧ ತಾಣಗಳಿಗೆ ಸಾಗಿಸುವ ಕನಿಷ್ಠ 4 ಅಥವಾ 5 ರಸ್ತೆ ಬದಿಯ ಗ್ರಾಮಗಳಿವೆ. ದಾಖಲೆಯಲ್ಲಿ, ಅಲ್ಲಿ ಬೇರೊಬ್ಬರು ಕೆಲಸದಲಿದ್ದರೆ, ವಾಸ್ತವದಲ್ಲಿ, ಈ ಕೆಲಸಗಾರರೇ ಈ ಕೆಲಸವನ್ನು ಮಾಡುತ್ತಾರೆ.

ಗುತ್ತಿಗೆದಾರರ ನಿರಂತರ ಅಸ್ತಿತ್ವಕ್ಕೆ ಹಲವಾರು ಅನುಕೂಲಕರ ಅಂಶಗಳಿವೆ ಎಂದು ಕ್ಷೇತ್ರ ದತ್ತಾಂಶವು ನಮಗೆ ತಿಳಿಸುತ್ತದೆ. ಮೊದಲ ಸ್ಥಾನದಲ್ಲಿ ಚುನಾಯಿತ ನಾಯಕರ ಬೆಂಬಲದ ಆಧಾರವು ಅವರ ಕ್ಷೇತ್ರಗಳ ಸಾಮಾನ್ಯ ನಾಗರಿಕರಷ್ಟೇ ಅಲ್ಲ, ಆ ಬಿಲ್ಡರ್‌ಗಳು, ಗುತ್ತಿಗೆದಾರರು ಅಥವಾ ಇದೇ ರೀತಿಯ ವ್ಯಾಪಾರ ಹಿತಾಸಕ್ತಿಗಳನ್ನು ಹೊಂದಿರುವ ಇತರರಿಗೂ ಕೂಡಿರುತ್ತದೆ. ವಿಕೇಂದ್ರೀಕರಣ ಘಟಕಗಳ ಪ್ರಜಾಪ್ರಭುತ್ವದ ಬಲವನ್ನು ಗಮನಿಸಿದರೆ, ಸಂಸ್ಥೆಗಳು ಮತ್ತು ಪ್ರಮುಖ ವ್ಯಕ್ತಿಗಳು ತಮ್ಮ ಪ್ರತಿನಿಧಿಗಳಾಗಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಪ್ರಮುಖ ಪಾಲುದಾರರಾಗಿ ಅವರನ್ನು ಮುಂಚೂಣಿಗೆ ತರುತ್ತಾರೆ. ಗುತ್ತಿಗೆದಾರರು ತಮ್ಮ ಸ್ಥಳವನ್ನು ಒಂದು ರೀತಿಯಲ್ಲಿ ಅಥವಾ ಇನ್ನೊಂದು ರೀತಿಯಲ್ಲಿ ಕಂಡುಕೊಳ್ಳುತ್ತಾರೆ. ವಾಸ್ತವವಾಗಿ, ನಮ್ಮ ಬಹುಪಾಲು ಪ್ರತಿಕ್ರಿಯೆದಾರರು, ತಮ್ಮ ಉದ್ಯೋಗ ಕಾರ್ಡ್‌ಗಳನ್ನು ತಮ್ಮ ವ್ಯಕ್ತಿಯ ಮೇಲೆ ಅಥವಾ ಅವರ ನಿವಾಸಗಳಲ್ಲಿ ಹೊಂದಿಲ್ಲ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾವು ಕಂಡುಕೊಂಡಿದ್ದೇವೆ. ಕೆಲವರ ಪ್ರಕಾರ, ಅವರು ಮೇಸ್ತ್ರಿ ಎಂದು ಹೆಚ್ಚು ಕರೆಯಲ್ಪಡುವ ವ್ಯಕ್ತಿಯೊಂದಿಗೆ ಇದ್ದರು. ಮೇಸ್ತ್ರಿ ಇಲ್ಲದೆ ವ್ಯವಸ್ಥೆಯು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ, ಏಕೆಂದರೆ ಅವನು ಅಥವಾ ಅವಳು ವೇತನ ಪಟ್ಟಿ, ವಿವಿಧ ಕಾರ್ಮಿಕರ ಹೆಸರುಗಳೊಂದಿಗೆ ಹಾಜರಾತಿ ಪಟ್ಟಿ ಮತ್ತು ಅದರಲ್ಲಿ ಅವರು ಮಾಡಿದ ಕೆಲಸದ ವಿವರಗಳನ್ನು ಸಂಗ್ರಹಿಸುತ್ತಾರೆ. ಅವನು ಅಥವಾ ಅವಳು ನಮೂನೆಯನ್ನು ಭರ್ತಿ ಮಾಡಿ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸಬೇಕು. ಯಾವುದೇ ಮಧ್ಯವರ್ತಿಗಳಿಲ್ಲದಿದ್ದರೂ, ಗ್ರಾಮ ಪಂಚಾಯಿತಿಯ ಅಥವಾ ಕಾಮಗಾರಿಯನ್ನು ವಹಿಸಿದ ಸಂಸ್ಥೆಯ (ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾಪಂಚಾಯಿತಿ ನಡುವೆ ಸಂಬಂಧಿಯಾಗಿ ಕಾರ್ಯನಿರ್ವಹಿಸುವ ವ್ಯಕ್ತಿ, ಮತ್ತು ಕಾರ್ಮಿಕರು ಕಾನೂನು ತಪ್ಪಿಸಲು ಬಯಸುವ 'ಮಧ್ಯವರ್ತಿ' ಆಗಿರುತ್ತಾರೆ. ಇದಲ್ಲದೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಯವಿಧಾನಗಳು ಪೂರೈಕೆ–ಚಾಲಿತ ಕಾರ್ಮಿಕ ಮಾರುಕಟ್ಟೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲ್ಪನೆಯ ಮೇಲೆ ರೂಪುಗೊಂಡಿರುತ್ತವೆ. ಇದು ಭಾಗಶಃ ನಿಜವಾಗಿದ್ದರೂ – ಕನಿಷ್ಠ ಒಬ್ಬರು ಭೂಮಿ ಮತ್ತು ಇತರ ಆಸ್ತಿ–ರಹಿತ ಕಾರ್ಮಿಕರನ್ನು ಪರಿಗಣಿಸಬೇಕಾದರೆ – ತೀವ್ರವಾದ ಬರ ಅಥವಾ ಇತರ ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ಸಹ, ಹೆಚ್ಚಿನ ಉದ್ಯೋಗ ಕಾರ್ಡ್ ಹೊಂದಿರುವವರು ಕೂಲಿ ಕಾರ್ಮಿಕರಾಗಿ ಕೆಲಸ ಮಾಡಲು ಸುಲಭವಾಗಿ ಲಭ್ಯವಿರುವುದಿಲ್ಲ. ಅನೇಕ ಉದ್ಯೋಗ ಕಾರ್ಡ್ ಹೊಂದಿರುವ ಗ್ರಾಮೀಣ ಭೂಮಾಲೀಕರು ಸಹ ಉತ್ತಮವಾಗಿ ಕೆಲಸ ಮಾಡುತ್ತಾರೆ, ಆದರೆ ಒಬ್ಬರು ಸಾಂದರ್ಭಿಕವಾಗಿ ಕೃಷಿಯೇತರ ಉದ್ಯೋಗದಲ್ಲಿ ತೊಡಗಿರುವ ವ್ಯಕ್ತಿಯನ್ನು ಶಿಕ್ಷಕ, ದರ್ಜಿ ಅಥವಾ ಹಾಲು ಡೈರಿ ಸಹಕಾರಿ ಕಾರ್ಯದರ್ಶಿಯಾಗಿ ಕಾಣಬಹುದು. ಆದ್ದರಿಂದ, ವಾಸವ್ಯದಲ್ಲಿ ನಾವು ಕಾಣುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಬೇಡಿಕೆ–ಚಾಲಿತ ಕಾರ್ಮಿಕ ಮಾರುಕಟ್ಟೆಯಾಗಿದೆ, ಏಕೆಂದರೆ ಒಂದು ದಿನಕ್ಕೆ ಸ್ಥಳೀಯವಾಗಿ ಕೆಲಸಗಾರನಿಗೆ ಸಿಗಬಹುದಾದ ಕೂಲಿ ದರಗಳು ಅರ್ಧಕ್ಕಿಂತಲೂ ಕಡಿಮೆ ಇರುತ್ತದೆ.

ಕೆಲವು ಲಾಭದಾಯಕ ವೈಯಕ್ತಿಕ ಯೋಜನೆಗಳು ಅಂದರೆ, ಉದಾಹರಣೆಗೆ ವಸತಿ ನಿರ್ಮಿಸುವುದು, ಒಂದು ಕ್ಷೇತ್ರಗಳಲ್ಲಿ ಚೆಕ್–ಡ್ಯಾಮ್ ಹಾಕುವುದು, ಅಥವಾ ತೋಟಗಾರಿಕಾ ಕ್ಷೇತರವನ್ನು ಅಭಿವೃದ್ಧಿಪಡಿಸುವುದು ಇತ್ಯಾದಿಗಳನ್ನು ನಿರ್ವಹಿಸಲು ಇತರರಿಗೆ ಹೊರಗುತ್ತಿಗೆಗೆ ನೀಡಲಾಗುತ್ತದೆ ಮತ್ತು ಗ್ರಾಮ ಪಂಚಾಯಿತಿಯ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಡಿ ಒಬ್ಬರು ಪಡೆಯಬಹುದಾದ ಮೊತ್ತಕ್ಕಿಂತ ಹೆಚ್ಚಿನ ಖರ್ಚುಗಳನ್ನು ಒಳಗೊಂಡಿರುತ್ತದೆ ಪರಿಣಾಮವಾಗಿ, ಫಲಾನುಭವಿಯು ತನ್ನನ್ನು ಮತ್ತು ಕುಟುಂಬದ ಇತರ ಸದಸ್ಯರುಗಳನ್ನು ಕಾರ್ಮಿಕರಾಗಿ ತೋರಿಸುತ್ತಿದ್ದು, ಇದು ನಿರ್ಮಾಣ ಅಥವಾ ಕೈಗೊಳ್ಳಬೇಕಾದ ಕೆಲಸದ ಹೆಚ್ಚುವರಿ ವೆಚ್ಚಗಳನ್ನು ಪೂರೈಸುವ

ಒಂದು ಮಾರ್ಗವಾಗಿದೆ. ಸ್ಥಳೀಯ ಅಥವಾ ವಲಸೆಗಾರ, ಯಂತ್ರಗಳನ್ನು ಬಳಸುವುದರ ಮೂಲಕ ಕಾರ್ಮಿಕರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡದಿದ್ದಲ್ಲಿ – ಸ್ಥಳೀಯ ಅಥವಾ ವಲಸಿಗರೊಂದಿಗೆ ತನ್ನದೇ ಆದ ಕಾರ್ಮಿಕರ ಜೊತೆ ಕಾರ್ಯವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಕೈಗೊಳ್ಳುವ ಗುತ್ತಿಗೆದಾರನು, ಫಲಾನುಭವಿಗಳಿಂದ ಕೈಗೊಳ್ಳಲಾದ ಕೆಲಸ ಎಂದು ದಾಖಲೆಯಲ್ಲಿ ತೋರಿಸುತ್ತಾನೆ. ಫಲಾನುಭವಿಯಿಂದ ನಿಗದಿತ ರೂಪದಲ್ಲಿ ಕೆಲಸದ ಬೇಡಿಕೆಯನ್ನು ನೋಂದಾಯಿಸುತ್ತದೆ ಮತ್ತು ಕುಟುಂಬದ ಇತರ ಸದಸ್ಯರು ತಮ್ಮ ಶ್ರಮಕ್ಕೆ ಕೊಡುಗೆ ನೀಡಬಹುದೆಂದು ತೋರಿಸಲು ಅಗತ್ಯವಾದ ದಾಖಲೆಗಳಿಗೆ ಸಹಿ ಹಾಕುತ್ತಾರೆ. ಪಡೆಯಬಹುದಾದ ಕೂಲಿಯನ್ನು 'ಗುತ್ತಿಗೆದಾರ' ಸಂಗ್ರಹಿಸುತ್ತಾನೆ. ಬಹುತೇಕ ಎಲ್ಲ ವಸತಿ ಯೋಜನೆಗಳಲ್ಲಿ ಇದನ್ನು ನಾವು ಪ್ರಮಾಣಿತ ಅಭ್ಯಾಸವಾಗಿ ಕಂಡುಕೊಂಡಿದ್ದೇವೆ. 'ಮಧ್ಯವರ್ತಿಯ' ಕಡೆಯಿಂದ, ತುಲನಾತ್ಮಕವಾಗಿ ಕಡಿಮೆ ದರದಲ್ಲಿ ವಸ್ತುಗಳನ್ನು ಪಡೆಯುವುದು ಅವನಿಗೆ ಸುಲಭವಾಗಿದೆ – ಏಕೆಂದರೆ ಅವನು ಅವುಗಳನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸುತ್ತಾನೆ, ಮತ್ತು ಕೆಲವು ಬದ್ಧ ಕೆಲಸಗಾರರನ್ನು ಅವನೊಂದಿಗೆ ಇಟ್ಟುಕೊಂಡು ಅನೇಕ 'ಯೋಜನೆಗಳನ್ನು' ಕಾರ್ಯಗತಗೊಳಿಸುತ್ತಾನೆ.

ನಮ್ಮ ಶೋಧನೆಗೆ ಹೆಚ್ಚಿನ ಪುರಾವೆ ಒದಗಿಸಲು, 8 ಜಿಲ್ಲೆಗಳು ಮತ್ತು 49 ಕ್ಷೇತ್ರಗಳು ಮತ್ತು 300 ಕ್ಕೂ ಹೆಚ್ಚು ಪಂಚಾಯತ್‌ಗಳಲ್ಲಿ 6356 ಪ್ರತಿಕ್ರಿಯೆದಾರರಲ್ಲಿ, ಸುಮಾರು ಮೂರನೇ ಒಂದು ಭಾಗದಷ್ಟು (32.3 ಶೇಕಡಾ) ಜನರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಒಂದು ಬಾರಿಯೂ ಸಹ ಕೆಲಸ ಮಾಡಿಲ್ಲ ಎಂಬುದನ್ನು ನಾವು ಗಮನಿಸಬೇಕಾಗಿರುತ್ತದೆ. ಆದರೆ ಅವರೆಲ್ಲರೂ ಉದ್ಯೋಗ ಕಾರ್ಡ್ ಹೊಂದಿರುವವರು, ಮತ್ತು ಕೆಲಸ ಕೋರಿ ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ. ಈ ವ್ಯಕ್ತಿಗಳಲ್ಲದೆ, ಇನ್ನೂ 53.8 ಪ್ರತಿಶತದಷ್ಟು ಮಂದಿ ನೋಂದಾಯಿತ ಮತ್ತು ಉದ್ಯೋಗ ಕಾರ್ಡ್ ಪಡೆದ ನಂತರ ಕೇವಲ ಒಂದು ಬಾರಿ ಮಾತ್ರ ಕೆಲಸ ಮಾಡಿರುವುದಾಗಿ ಎಂದು ಹೇಳಿಕೊಂಡಿದ್ದಾರೆ. ಕ್ಷೇತ್ರ ದತ್ತಾಂಶ ಸಂಗ್ರಹಣೆ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ಸಮಯದಲ್ಲಿ ಸಂಗ್ರಹಿಸಿದ ಗುಣಾತ್ಮಕ ಸಾಕ್ಷ್ಯಗಳ ಆಧಾರದ ಮೇಲೆ, ನಮ್ಮ ವಾದವೆಂದರೆ, ಹೆಚ್ಚಿನ 'ಕೆಲಸ ಮಾಡದ' ಉದ್ಯೋಗ ಕಾರ್ಡ್ ಹೊಂದಿರುವವರು ತಮ್ಮ ಕಾರ್ಡ್‌ಗಳನ್ನು ಇತರ ಮೇಸ್ತ್ರಿ ಅಥವಾ ಗುತ್ತಿಗೆದಾರರಿಗೆ ಸಾಲ ನೀಡಿದ್ದಾರೆ, ಅವರು ಯಂತ್ರಗಳ ಮೂಲಕ ನಿಯೋಜಿತ ಕೆಲಸವನ್ನು ಪಡೆದು (ಟ್ರ್ಯಾಕ್ಟರ್‌ಗಳು, ಟಿಪ್ಪರ್‌ಗಳು, ಜೆಸಿಬಿಗಳು, ಇತ್ಯಾದಿ.) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ನೋಂದಾಯಿತ ಕಾರ್ಮಿಕರು ಕೈಗೊಂಡ ಕೆಲಸವೆಂದು ತೋರಿಸುತ್ತಾರೆ.

**ಕೋಷ್ಟಕ 15: ಉದ್ಯೋಗ ಕಾರ್ಡ್ ಮಾಡಿದ ವರ್ಷ ಮತ್ತು ಕೆಲಸ ಮಾಡಿದ ಸಮಯಗಳ ಸಂಖ್ಯೆ**

| ಕೆಲಸ ಮಾಡಿದ ಸಮಯಗಳ ಸಂಖ್ಯೆ | 2012 ಅಥವಾ ಅದಕ್ಕಿಂತ ಮೊದಲು | 2013 | 2014 | 2015 | 2016 ಅಥವಾ ಅದರ ನಂತರ | ನೆನಪಾಗುತ್ತಿಲ್ಲ | ಒಟ್ಟು |
|---|---|---|---|---|---|---|---|
| ಎಂದಿಗೂ ಮಾಡಲಿ□□□ | 31.48 | 2.04 | 3.45 | 6.86 | 11.58 | 44.57 | 2055 |
| ಒಂದು ವರ್ಷ ಮಾತ್ರ | 32.10 | 2.90 | 3.78 | 7.05 | 13.90 | 40.27 | 3417 |
| ಎರಡು ವರ್ಷಗಳು | 40.33 | 4.05 | 3.79 | 3.54 | 10.49 | 37.80 | 791 |
| ಮೂರು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳು | 46.67 | 6.67 | 1.11 | 6.67 | 4.44 | 34.55 | 93 |
| **ಒಟ್ಟು %** | **33.12** | **2.82** | **3.63** | **6.54** | **12.59** | **41.30** | **6356** |
| **ಸಂಖ್ಯೆ** | **2105** | **179** | **231** | **416** | **800** | **2625** | |

ಈ ನಿಟ್ಟಿನಲ್ಲಿ ನಮ್ಮ ಊಹೆಯನ್ನು ಖಚಿತಪಡಿಸಲು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪೋರ್ಟಲ್‌ನಲ್ಲಿ ಎಂದಿಗೂ ಕೆಲಸ ಮಾಡದ ವರ್ಗದ ನಮ್ಮ ಪ್ರತಿಕ್ರಿಯೆದಾರರು ತಮ್ಮ ಉದ್ಯೋಗ ಕಾರ್ಡ್ ಸಂಖ್ಯೆಗಳನ್ನು ಬಳಸಿಕೊಂಡು ಒದಗಿಸಿದ ಮಾಹಿತಿಯ ಮಾದರಿ ಮರು ಪರಿಶೀಲಿಸಲಾಗಿರುತ್ತದೆ. ನಮ್ಮ ಆಶ್ಚರ್ಯಕ್ಕೆ, ನಮ್ಮ ಮಾದರಿಯ ಶೇಕಡಾ 68ರಷ್ಟು ಪ್ರತಿಕ್ರಿಯೆದಾರರು ಒಮ್ಮೆಯಾದರೂ ಕೆಲಸ ಮಾಡಿರುವುದಗಿ ದಾಖಲೆಯಲ್ಲಿ ತೋರಿಸಿರುತ್ತಾರೆ. ಸೀಮಿತ ಸಮಯ ಮತ್ತು ಪೋರ್ಟಲ್‌ನಲ್ಲಿನ ದತ್ತಾಂಶವನ್ನು ನೋಡಿದರೆ, ವಿವಿಧ ಜಿಲ್ಲೆಗಳ 500 ಜನರ ಸಣ್ಣ ಉಪ–ಮಾದರಿಗಾಗಿ ನಾವು ಈ ಮರು ಪರಿಶೀಲನೆಯನ್ನು ಕೈಗೊಳ್ಳಬಹುದಾಗಿದ್ದು, ಅಂತಹ ಕಾರ್ಮಿಕರಲ್ಲದವರು ವೈಯಕ್ತಿಕ ಯೋಜನೆಗಳ ಫಲಾನುಭವಿಗಳಾಗಿರಬಹುದು (ಕೃಷಿ ಕೊಳ, ಶೌಚಾಲಯ ನಿರ್ಮಾಣ, ಅಥವಾ ವಸತಿ ಯೋಜನೆಗಳಲ್ಲಿ ಒಂದರ ಅಡಿಯಲ್ಲಿ ಇರುವ ಘಟಕ, ಕಟ್ಟಡ ನಿರ್ಮಾಣದಲ್ಲಿ ಅಥವಾ ತಮ್ಮ ಜಮೀನಿನಲ್ಲಿ ಅಥವಾ ಪಕ್ಕದಲ್ಲಿರುವ ಕಾಲುವೆಗಾಗಿ ಅಣೆಕಟ್ಟಿಗಾಗಿ ಭಾಗವಹಿಸಿದ್ದರೆ) ಆದರೂ, ಸಮೀಕ್ಷೆಯ ಭಾಗವಾಗಿ ನಮ್ಮ ಪ್ರಶ್ನೆಗೆ ಉತ್ತರವಾಗಿ, ಅವರು ಎಂದಿಗೂ ಕೆಲಸ ಮಾಡಿರುವುದಿಲ್ಲ ಎಂದು ಹೇಳಿದ್ದಾರೆ!

ಈ ಅವಲೋಕನಗಳು ನಾವು ತಲುಪುವ ತೀರ್ಮಾನವನ್ನು ಮಾತ್ರ ದೃಢೀಕರಿಸುತ್ತವೆ: ಅಂದರೆ, ಮಧ್ಯವರ್ತಿಗಳು ಅಥವಾ ಗುತ್ತಿಗೆದಾರರು ಕಣ್ಮರೆಯಾಗಿಲ್ಲ, ಆದರೆ ದಾಖಲೆಗಳಲ್ಲಿ ಮಾತ್ರ ಕೆಲಸ ಮಾಡಿದ್ದಾರೆ ಅಥವಾ ಉದ್ಯೋಗ ಕಾರ್ಡ್ ಹೊಂದಿರುವವರಾಗಿದ್ದರೂ ಕೇವಲ ಒಂದು ಬಾರಿ ಕೆಲಸ ಮಾಡಿದ್ದಾರೆ ಎಂಬ ದಾಖಲೆಯು ಆರರಿಂದ ಏಳು ವರ್ಷಗಳವರೆಗೆ – ಭ್ರಷ್ಟಾಚಾರವು ಪ್ರಚಲಿತವಾಗಿರುವುದನ್ನು ಸೂಚಿಸುತ್ತದೆ.

ಮೇಲಿನ ಕೋಷ್ಟಕ 15 ರಲ್ಲಿ ಗಮನಿಸಬೇಕಾದ ಅಂಶವೆಂದರೆ, ಉದ್ಯೋಗ ಕಾರ್ಡ್ ಹೊಂದಿದ್ದರೂ ಸಹ ಎಂದಿಗೂ ಕೆಲಸ ಮಾಡದವರಲ್ಲಿ, ಶೇಕಡಾ 44ರಷ್ಟು ಜನರು ತಮ್ಮ ಉದ್ಯೋಗ ಕಾರ್ಡ್ ಮಾಡಿದ ಸಮಯವನ್ನು ನೆನಪಿಸಿಕೊಳ್ಳಲಾಗಲಿಲ್ಲ, ಸುಮಾರು ಮೂರನೇ ಒಂದು ಭಾಗದಷ್ಟು ಜನರು ಅದನ್ನು 2012ರ ವರ್ಷದಲ್ಲಿ ಅಥವಾ ಅದಕ್ಕಿಂತ ಮೊದಲೇ ಮಾಡಿಸಿರುತ್ತಾರೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ಹೆಚ್ಚು ಪಾರದರ್ಶಕ ಮತ್ತು ಮಧ್ಯವರ್ತಿಗಳಿಲ್ಲದವರನ್ನಾಗಿ ಮಾಡುವ ಹಂತಗಳನ್ನು ಪ್ರಾರಂಭಿಸದ ಸಮಯವೂ ಇದಾಗಿರುತ್ತದೆ. ಆದರೆ ಅವರೆಲ್ಲರೂ ಕೇಂದ್ರೀಕೃತ ಗುಂಪು ಚರ್ಚೆಗಳು ಮತ್ತು ನಮ್ಮ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದು, ಕೂಲಿಗಳನ್ನು ಸಮಯೋಚಿತವಾಗಿ ಇತ್ಯರ್ಥಪಡಿಸುವುದು, ಕುಟುಂಬದಲ್ಲಿ ಅನೇಕ ಬ್ಯಾಂಕ್ ಖಾತೆಗಳನ್ನು ಹೊಂದಿರುವುದನ್ನು ತಪ್ಪಿಸುವುದು. ಇತ್ಯಾದಿಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ನಂತರದ ಅಧ್ಯಾಯಗಳಲ್ಲಿ ನಾವು ನೋಡುವಂತೆ, ಕೂಲಿ ಇತ್ಯರ್ಥ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸಲು ಎಲ್ಲರೂ ಒಂದು ಮುಂದುವರಿಕೆಯ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಲ್ಲಿರುತ್ತಾರೆ.

ಆದಾಗ್ಯೂ, ತೀರ್ಮಾನಕ್ಕೆ ಬರುವ ಇತರ ಮೂರು ತಕ್ಷಣದ ಅಂಶಗಳನ್ನು ಈ ಹಂತದಲ್ಲಿ ತಿಳಿಸಬಹುದು. ಮೊದಲನೆಯದಾಗಿ, ಹೆಚ್ಚಿನ ಸಾಮಗ್ರಿ ಸರಬರಾಜುದಾರರು ಸಹ (ಕೆಲವು ಗಮನಾರ್ಹವಾದ ವಿನಾಯಿತಿಗಳೊಂದಿಗೆ) ಅಂತಹ ಗುತ್ತಿಗೆದಾರರು ಅಥವಾ ಮಧ್ಯವರ್ತಿಗಳು. ಎರಡನೆಯದಾಗಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರ ವೇತನವನ್ನು ವರ್ಗಾವಣೆ ಮಾಡುವುದನ್ನು ಮೊದಲೇ ಊಹಿಸಿದರೂ ಸಹ, ವ್ಯಾಪಕವಾದ ಘಟನೆಗಳು ಕಂಡುಬರುತ್ತವೆ ಬ್ಯಾಂಕಿನ ಎಟಿಎಂ ಅಥವಾ ಡೆಬಿಟ್ ಕಾರ್ಡ್‌ನ್ನು ಅಂತಹ 'ಮಧ್ಯವರ್ತಿಗಳು'ತಮ್ಮ ಬಳಿ ಉಳಿಸಿಕೊಳ್ಳುತ್ತಾರೆ. ನಮ್ಮ ಕ್ಷೇತ್ರದಿಂದ ಪಡೆದ ಮಾಹಿತಿಯ ಪ್ರಕಾರ, ಎಟಿಎಂ ಕಾರ್ಡ್ ಸ್ವೈಪ್

ಮಾಡಲು ರೂ.100 ರಿಂದ 250ನ್ನು 'ಬಳಕೆ' ಶುಲ್ಕವಾಗಿ ಪಾವತಿಸಬೇಕಾಗುತ್ತದೆ. ಅಂತಿಮವಾಗಿ, ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಕೂಲಿ ವಿತರಣೆಯ ಪ್ರಕ್ರಿಯೆಯಲ್ಲಿ ಹೊಸ ರೀತಿಯ ಮಧ್ಯವರ್ತಿಗಳ ಬಗ್ಗೆ ಆಂದರೆ, ಹೊರಗುತ್ತಿಗೆಯ ಮೇಲೆ ಪಡೆದ ದತ್ತಾಂಶ ಎಂಟ್ರಿ ಆಪರೇಟರ್‌ಗಳ ಬಗ್ಗೆ ತಿಳಿಸಲಾಗಿರುತ್ತದೆ. ಅವರ ಸಮಯೋಚಿತ ದತ್ತಾಂಶ ನಮೂದು ಕಾರ್ಯಾಚರಣೆಗಳ ಪಾತ್ರಕ್ಕಾಗಿ ಅಥವಾ ನಿಧಿ ವರ್ಗಾವಣೆ ಆದೇಶಗಳನ್ನು ಅಪ್‌ಲೋಡ್ ಮಾಡಲು, ಇಬ್ಬರ ಡಿಜಿಟಲ್ ಸಹಿಗಳು ಇತ್ಯಾದಿಗಳಿಗಾಗಿ ಶುಲ್ಕವನ್ನು ಕೇಳುತ್ತಿದ್ದಾರೆ.

## 8.9 ಈ ವ್ಯವಸ್ಥೆಯು ಹಣವನ್ನು ನಿಲುಗಡೆ ಮಾಡುವುದನ್ನು ತಪ್ಪಿಸಿದೆಯೇ ಹಾಗೂ ಅದರ ಉತ್ತಮ ನಿರ್ವಹಣೆಗೆ ಕೊಡುಗೆ ನೀಡಿದೆಯೇ?

ಸಮಯಕ್ಕೆ ಸರಿಯಾಗಿ ಈ ಸಂಶೋಧನೆಯನ್ನು ಪೂರ್ಣಗೊಳಿಸಲು ಯಾವುದೇ ವಿಳಂಬವಾಗಿದ್ದರೆ, ಈ ದತ್ತಾಂಶವನ್ನು ಸಂಬಂಧಪಟ್ಟ ಬ್ಯಾಂಕುಗಳಲ್ಲಿ ಮತ್ತು ನಮ್ಮ ಮಾದರಿಯಲ್ಲಿ ನಿರ್ದಿಷ್ಟ ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಪ್ರವೇಶಿಸಲು ನಾವು ವಿಫಲರಾಗಿದ್ದೇವೆ. ಆದ್ದರಿಂದ, ಈ ಪ್ರಶ್ನೆಗೆ ಉತ್ತರಿಸಲು, ಪ್ರಾರಂಭಿಕ ಶಿಲ್ಕಿನ (ರಾಜ್ಯ, ಜಿಲ್ಲಾ ಮತ್ತು ಕಷೇತ್ರ ಮಟ್ಟದಲ್ಲಿ) ದತ್ತಾಂಶವನ್ನು ನಿರ್ಣಯಿಸುವುದರ ಮೂಲಕ ಕಂಡುಹಿಡಿಯಬೇಕಾಗಿರುತ್ತದೆ. ಕೆಲವು ದತ್ತಾಂಶವು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಲಭ್ಯವಿರುವುದಿಲ್ಲ. ವರ್ಷಾಂತ್ಯದಲ್ಲಿ ಖರ್ಚು ಮಾಡದ ಹಣದ ದರವು ವರ್ಷಗಳಲ್ಲಿ ಕುಸಿದಿದ್ದರೂ ಸಹ, ಖರ್ಚು ಮಾಡದಿರುವ ಬಾಕಿ ಮೊತ್ತವನ್ನು ಮುಂದುವರಿಸಲಾಗುತ್ತಿದೆ. ಇದು ತಾಂತ್ರಿಕವಾಗಿ, ಹಣದ ನಿಲುಗಡೆ ಎಂದು ಕರೆಯಲ್ಪಡುವ ಮೊತ್ತವಾಗಿರುತ್ತದೆ. ಆದಾಗ್ಯೂ, ನಿಧಿ ವರ್ಗಾವಣೆ ಆದೇಶವನ್ನು ಎಷ್ಟು ಸಮಯದವರೆಗೆ ಬ್ಯಾಂಕುಗಳು ಅಂಗೀಕರಿಸಿಲ್ಲ ಎಂಬ ಮಾಹಿತಿಯು ಸುಲಭವಾಗಿ ಲಭ್ಯವಿರುವುದಿಲ್ಲ. ಈ ಅಂಶವನ್ನು ಸ್ಪಷ್ಟಪಡಿಸುವ ದೃಷ್ಟಿಯಿಂದ ನಾವು ಸಮಯೋಚಿತ ಪಾವತಿಯ ಪ್ರಸ್ತುತ ತಿಳುವಳಿಕೆಯು ಗ್ರಾಮ ಪಂಚಾಯಿತಿ ಅಥವಾ ಇತರ ಸೂಕ್ತ ಹಂತಗಳಲ್ಲಿ ನಿಧಿ ವರ್ಗಾವಣೆ ಆದೇಶಗಳನ್ನು ರವಾನಿಸುವುದಾಗಿದೆ ಎಂದು ನಾವು ಒತ್ತಿ ಹೇಳಬೇಕಾಗಿರುತ್ತದೆ. ಈ ನಿಧಿ ವರ್ಗಾವಣೆ ಆದೇಶಗಳು ಅಂಗೀಕರಿಸಲ್ಪಟ್ಟಿದೆಯೋ ಇಲ್ಲವೋ, ಕಾರ್ಮಿಕರಿಗೆ ಸಂಬಳ ನೀಡಲಾಗಿದೆಯೋ ಇಲ್ಲವೋ ಎಂಬುದು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಹಿತಿ ಲಭ್ಯವಿಲ್ಲ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಅಥವಾ ಇತರ ಸಹಿ ಮಾಡಿದವರ ಮಟ್ಟಕ್ಕೆ ಸಂಬಂಧಿಸಿದಂತೆ, ನಿಧಿ ವರ್ಗಾವಣೆ ಆದೇಶಕ್ಕೆ ಸಹಿ ಮಾಡಿ ಅಪ್‌ಲೋಡ್ ಮಾಡಿದ ನಂತರ, ಕೂಲಿಯನ್ನು ಪಾವತಿಸಲಾಗಿದೆಯೆಂದು ಪರಿಗಣಿಸಲಾಗುತ್ತದೆ. ಪಂಚಾಯತ್ ಕಚೇರಿಗಳಲ್ಲಿ ನಮ್ಮ ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಭಾಗವಹಿಸಿದ ಹೆಚ್ಚಿನ ವ್ಯಕ್ತಿಗಳು ಅಂತಹ 'ಕಾರ್ಮಿಕರು' ಅಥವಾ ಸಾಮಗ್ರಿ ಪೂರೈಕೆದಾರರು ತಮ್ಮ ಕೂಲಿ ಅಥವಾ ಪಾವತಿಗಳನ್ನು ಸ್ವೀಕರಿಸಲಿಲ್ಲ. ಅಂತಹ ಪಾವತಿಸದ ಹಣವು ಪರಿಣಾಮಕಾರಿಯಾಗಿ ನಿಲುಗಡೆ ಮಾಡಿದ ಹಣವಾಗಿದೆ. ಈ ವಿವರಣೆಯ ಹೊರತಾಗಿಯೂ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಹಣದ ಹರಿವಿನ ಬಗ್ಗೆ ಹಣಕಾಸಿನ ಹೇಳಿಕೆಗಳಲ್ಲಿ ನಾವು ಸಾಮಾನ್ಯವಾಗಿ ಕಾಣುತ್ತೇವೆ, ಅದು ಸಾಮಾನ್ಯವಾಗಿ ವರ್ಷದ 'ಲಭ್ಯವಿರುವ ಹಣ'ದ ಸುಮಾರು 10 ಅಥವಾ 15 ಪ್ರತಿಶತದಷ್ಟು ಹಣವನ್ನು ಖರ್ಚು ಮಾಡಲಾಗುವುದಿಲ್ಲ ಎಂದು ತೋರಿಸಲಾಗುತ್ತದೆ ಆದರೆ ಬಾಕಿ ಇರುವ ಕೂಲಿ ಅಥವಾ ಸಾಮಗ್ರಿಗಳಿಗೆ ವಿರುದ್ಧವಾಗಿ ವೆಚ್ಚ ವಿತರಣೆಯನ್ನು ತೋರಿಸಲಾಗುತ್ತದೆ.

'ನಿಧಿಗಳ ನಿಲುಗಡೆ' ಎಂಬ ಅನಪೇಕ್ಷಿತ ವಿದ್ಯಮಾನದ ಮೇಲೆ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಯಾವುದೇ ಪರಿಣಾಮವಿದೆಯೇ ಎಂದು ನಿರ್ಣಯಿಸುವುದು ಈ ಮೌಲ್ಯಮಾಪನದ ಉದ್ದೇಶಗಳಲ್ಲಿ ಒಂದಾಗಿರುತ್ತದೆ. ಈ ವಿದ್ಯಮಾನವು ಅನೇಕ ಹಂತಗಳಲ್ಲಿ ಸಂಭವಿಸುತ್ತದೆ – ಹಣವನ್ನು ಕೇಂದ್ರ ಸರ್ಕಾರವು ಹಂಚಿಕೆ ಮಾಡಿದ ನಂತರ ಮತ್ತು ಹಣವನ್ನು

ನೇರವಾಗಿ ಫಲಾನುಭವಿಗಳಿಗೆ ಪಾವತಿಸಬೇಕಾಗಿದ್ದರೂ ಸಹ, ಈ ಹಣವನ್ನು ಮುಖ್ಯ ಬ್ಯಾಂಕುಗಳಲ್ಲಿ ಹಿಂತಿರುಗಿಸಲು ಹಲವಾರು ಮಾರ್ಗಗಳಿವೆ. ಹಂಚಿಕೆಯಾದ ಹಣವು ಆಯಾ ರಾಜ್ಯಗಳಲ್ಲಿ ಗೊತ್ತುಪಡಿಸಿದ 'ಲೀಡ್ ಬ್ಯಾಂಕ್'ಗೆ ತಲುಪಿದ ನಂತರ, ಹೊರಡಿಸುವ ನಿಧಿ ವರ್ಗಾವಣೆ ಆದೇಶಗಳು ಒಂದಲ್ಲಾ ಅಥವಾ ಇನ್ನೊಂದು ನ್ಯೂನತೆಯನ್ನು ಹೊಂದಿರಬಹುದು, ಫಲಾನುಭವಿಗಳ ಬ್ಯಾಂಕ್ ಖಾತೆಗಳು ದಾಖಲೆಗಳನ್ನು ನಮೂದಿಸುವಲ್ಲಿ ದೋಷವನ್ನು ಹೊಂದಿರಬಹುದು ಅಥವಾ ಇತ್ತೀಚಿನ ಆಧಾರ್ ಸಂಪರ್ಕಿತ ಬ್ಯಾಂಕ್ ಖಾತೆ (ಆಧಾರ್ ಪಾವತಿ ಸಂಪರ್ಕಿತ ವ್ಯವಸ್ಥೆಯಡಿ) ಯಾವ ಹಣವನ್ನು ಜಮಾ ಮಾಡಿರಬಹುದು, ಮತ್ತು ಹೀಗೆ. ಮೊದಲೇ ಸೂಚಿಸಿದಂತೆ ಸಂಬಂಧಪಟ್ಟ ಪಂಚಾಯತ್ (ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು) ಎರಡು ಅಧಿಕಾರಿಗಳಿಂದ ನಿಧಿ ವರ್ಗಾವಣೆ ಆದೇಶಕ್ಕೆ ಸಹಿ ಹಾಕಿದ ನಂತರ, ಕಾರ್ಮಿಕನಿಗೆ ಬರಬೇಕಾದದ್ದನ್ನು ಪಾವತಿಸಲಾಗಿದೆ ಮತ್ತು ಅವರಿಗೆ ಸಂಬಂಧಪಟ್ಟಂತೆ ಈ ವಿಷಯವು ಕೊನೆಗೊಳ್ಳುತ್ತದೆ ಎಂಬ ಅಭಿಪ್ರಾಯದಲ್ಲಿರಬಹುದು. ಕಾರ್ಮಿಕ/ರು, ತಮ್ಮ ಹಣವನ್ನು ತಮ್ಮ ಖಾತೆಗೆ ಏಕೆ ಜಮಾ ಮಾಡಿಲ್ಲ ಎಂಬ ಬಗ್ಗೆ ವಿವರಣೆಯನ್ನು ಕೋರಿ ಪಂಚಾಯತ್ ಕಚೇರಿಗೆ ಹಲವಾರು ಬಾರಿ ಭೇಟಿ ನೀಡುತ್ತಾರೆ. ಇವೆರಡೂ ಸಾಮಾನ್ಯವಾಗಿ ಉತ್ತರವನ್ನು ಕಂಡುಹಿಡಿಯುವ ಸಾಮರ್ಥ್ಯವನ್ನು ಹೊಂದಿಲ್ಲವಾದರೂ, ಸಂಬಂಧಪಟ್ಟ ಬ್ಯಾಂಕ್ ನಿಧಿ ವರ್ಗಾವಣೆ ಆದೇಶದ ಜೊತೆ ಕೆಲವು ಸಮಸ್ಯೆಗಳನ್ನು ಹೊಂದಿರಬಹುದು ಮತ್ತು/ಅಥವಾ ಪಾವತಿಯನ್ನು ತಿರಸ್ಕರಿಸಬಹುದು. ಹೀಗೆ ಪಾವತಿಸಬೇಕಾದ ಹಣವು ಬ್ಯಾಂಕಿನೊಂದಿಗೆ ನಿಲುಗಡೆಗೊಳ್ಳುತ್ತದೆ. ಹಣವನ್ನು ನಿಲುಗಡೆ ಮಾಡುವ ಇನ್ನೊಂದು ವಿಧಾನವಿದೆ. ಅಂದರೆ, ವಿವಿಧ ಹಂತಗಳಲ್ಲಿ, ವಾರಗಳವರೆಗೆ ಮತ್ತು ತಿಂಗಳುಗಳ ಸಮಯದಲ್ಲಿ ಒಟ್ಟಿಗೆ ವಿತರಣೆಗಾಗಿ ಹಕ್ಕುಗಳು ಇದ್ದರೂ ಸಹ, ಪಂಚಾಯತ್‌ಗಿಂತ ಹೆಚ್ಚಿನ ಮಟ್ಟದಿಂದ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಕೂಲಿಗೆ ಸಂಬಂಧಿಸಿದಂತೆ ಕೇಂದ್ರದಿಂದ ನೇರವಾಗಿ ಫಲಾನುಭವಿಗೆ ಹಣ ಬರಬೇಕಾಗಿದ್ದರೂ, ಇನ್ನೂ ಕೆಲವು ಇತರೆ ಪಾವತಿಗಳಿರುತ್ತವೆ–ಉದಾಹರಣೆಗೆ ನುರಿತ ಕಾರ್ಮಿಕರ ಕೂಲಿ, ಮತ್ತು ಸಾಮಗ್ರಿಗಳಿಗಾಗಿ, ಕಾರ್ಯಕ್ರಮಗಳನ್ನು ನಿರ್ವಹಿಸುವ ವೆಚ್ಚಗಳ ಕಡೆಗೆ–ಅನೇಕ ರಾಜ್ಯಗಳಲ್ಲಿ ರಾಜ್ಯ ನೌಕರರ ಖಾತರಿ ನಿಧಿಯಿಂದ ಪೂರೈಸಬೇಕಾಗಿರುತ್ತದೆ. ಆಗಾಗ್ಗೆ ರಾಜ್ಯವು ಬಾಕಿಗಳನ್ನು ವಿತರಿಸುವಲ್ಲಿ ಸಾಕಷ್ಟು ವಿಳಂಬವನ್ನು ಮಾಡುತ್ತದೆ, ಇದರ ಪರಿಣಾಮವಾಗಿ ಹಂಚಿಕೆಯಾದ ಹಣವನ್ನು ತಡೆಹಿಡಿಯಲು ಸಹಕರಿಸುತ್ತದೆ. ಇದು ಕೂಡ ಕೂಲಿ ಪಾವತಿ ಮತ್ತು ಸಾಮಗ್ರಿಗಳಿಗಾಗಿ ವೆಚ್ಚ ನೀಡುವಲ್ಲಿನ ಹಣವನ್ನು ನಿಲುಗಡೆ ಮಾಡುವ ಮತ್ತೊಂದು ರೂಪವಾಗಿರುತ್ತದೆ.

ಹೆಚ್ಚಿನ ಮೌಲ್ಯಮಾಪನ ಅಥವಾ ಶೈಕ್ಷಣಿಕ ಸಂಶೋಧನೆಯು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಇತರ ಆಯಾಮಗಳ ಮೇಲೆ ಕೇಂದ್ರೀಕೃತವಾಗಿರುವುದರಿಂದ, ದೀರ್ಘಕಾಲದವರೆಗೆ, ಹಣವನ್ನು ನಿಲುಗಡೆ ಮಾಡುವ ಬಗ್ಗೆ ಕಾಳಜಿ ಬರಲಿಲ್ಲ. ಪರಿಣಾಮವಾಗಿ, ನಿಧಿಗಳ ನಿಲುಗಡೆ ಬಹುತೇಕ ಗಮನಿಸದೆ ಹಾದುಹೋಗಿರುತ್ತದೆ. ಸಮಯಕ್ಕೆ ವೇತನವನ್ನು ಪಾವತಿಸದಿರುವ ಬಗ್ಗೆ ಸರ್ಕಾರವು ದೂರುಗಳನ್ನು ಸ್ವೀಕರಿಸಲು ಪ್ರಾರಂಭಿಸಿದಾಗ, ಮತ್ತು ಕೈಗೊಳ್ಳಬೇಕಾದ ಯೋಜನೆಗಳಿಗೆ ಹಣ ಸರಾಗವಾಗಿ ಹರಿಯುತ್ತಿಲ್ಲ, ಮತ್ತು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನಕ್ಕೆ ಸಿದ್ಧತೆಗಳು ವೇಗವನ್ನು ಪಡೆದುಕೊಳ್ಳುತ್ತಿದ್ದಂತೆ, ವಿವಿಧ ಹಂತಗಳಲ್ಲಿ ಹಣವನ್ನು ನಿಲುಗಡೆ ಮಾಡುವ ಬಗ್ಗೆ ಕಾಳಜಿ ಬರಲು ಪ್ರಾರಂಭಿಸಿರುತ್ತದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಫೈನಾನ್ಸ್ ಅಂಡ್ ಪಾಲಿಸಿ (ನವದೆಹಲಿ)ಯಲ್ಲಿ ವಿದ್ವಾಂಸರು ನಡೆಸಿದ ಒಂದು ಪ್ರಭಾವಶಾಲಿ ಅಧ್ಯಯನವು ವಿದ್ವಾಂಸರು ಮತ್ತು ನೀತಿ ನಿರೂಪಕರಲ್ಲಿ ಸಾಕಷ್ಟು ಗಮನ ಸೆಳೆದಿರುತ್ತದೆ (ನೋಡಿರಿ, ಭಾನುಮೂರ್ತಿ ಮತ್ತು ಇತರರು. 2014).

ಆದ್ದರಿಂದ 2012–13ರ ಮೊದಲು ಹಣದ ನಿಲುಗಡೆಯು ವ್ಯಾಪಕವಾಗಿತ್ತು, ಇದು ಅಖಿಲ ಭಾರತ ಮಟ್ಟದಲ್ಲಿ ಕಾರ್ಯಕ್ರಮಕ್ಕಾಗಿ ಪಡೆದ ನಿಧಿಯ ಮೂರನೇ ಒಂದು ಭಾಗಕ್ಕಿಂತ ಹೆಚ್ಚಿನದಾಗಿರುತ್ತದೆ. ಭಾನುಮೂರ್ತಿ ಮತ್ತು ಇತರರ ಶೋಧನೆಗಳನ್ನು (2014) ನಾವು ಪುನರುಚ್ಚರಿಸುತ್ತೇವೆ. ಈ ನಿಟ್ಟಿನಲ್ಲಿ, ಈ ವರದಿಯನ್ನು ಸಲ್ಲಿಸಿದ ನಂತರ, ವಿವಿಧ ಹಂತಗಳಲ್ಲಿ ಹಣವನ್ನು ನಿಲುಗಡೆ ಮಾಡುವುದನ್ನು ತಡೆಯಲು ಭಾರತ ಸರ್ಕಾರವು ಕ್ರಮ ಕೈಗೊಂಡಿರುತ್ತದೆ.

**ಕೋಷ್ಟಕ 16: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆ:**

**ಅಖಿಲ ಭಾರತ–ಆರ್ಥಿಕ ಪ್ರಗತಿ (ಕೋಟಿ ರೂ.)**

| ವರ್ಷ | ನಿಧಿ ಬಿಡುಗಡೆ | ಖರ್ಚು ಮಾಡದ ಬಾಕಿ ಹಣ | ಬಳಕೆಯಾಗದ ಹಣ % |
|---|---|---|---|
| 2008–2009 | 29945.44 | 10039.6 | 33.53 |
| 2009–2010 | 33506.61 | 11597.94 | 34.61 |
| 2010–2011 | 35242.71 | 13238.26 | 37.56 |
| 2011–2012 | 29184.86 | 9371.22 | 32.11 |
| 2012–2013 | 30001.01 | 5182.15 | 17.27 |

(ಆಧಾರ: ಭಾನುಮೂರ್ತಿ ಮತ್ತು ಇತರರು 2014: ಪುಟ 2)

ಅಧ್ಯಯನದ ಪ್ರಕಾರ, ಕನಿಷ್ಠ ಖರ್ಚು ಮಾಡದ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಕರ್ನಾಟಕ ರಾಜ್ಯವು ಉಳಿದ ರಾಜ್ಯಗಳಿಗಿಂತ ಗಮನಾರ್ಹವಾಗಿ ಭಿನ್ನವಾಗಿತ್ತು. ಇದನ್ನು ಇತರ ರಾಜ್ಯಗಳೊಂದಿಗೆ ಗುಂಪು ಮಾಡಲಾಗಿದೆ, ಇದನ್ನು 'ಕಡಿಮೆ' ಖರ್ಚು ಮಾಡದ ಸಮತೋಲನ ಅಥವಾ ನಿಧಿಗಳ ನಿಲುಗಡೆ ಸಂಭವ ಎಂದು ವ್ಯಾಖ್ಯಾನಿಸಲಾಗಿದೆ. ಆದಾಗ್ಯೂ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಚಯದೊಂದಿಗೆ, ಉದ್ಯೋಗ ಖಾತರಿಗಾಗಿ ರಾಜ್ಯ ನಿಧಿಯಡಿಯಲ್ಲಿ ರಾಜ್ಯದ ಹಂಚಿಕೆ ಕೇಂದ್ರದ ಹಂಚಿಕೆಯಂತೆ ಬಂದಿರುವುದಿಲ್ಲ.

**ಚಿತ್ರ 20: ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಒಟ್ಟು ಖರ್ಚು (ಶೇಕಡಾ)**




ಮೂಲ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಜಾಲತಾಣದ ಮಾಹಿತಿ ನಿರ್ವಹಣಾ ಪುಟದಿಂದ ಸಂಕಲನ

http://mnregaweb4.nic.in/netnrega/writereaddata/citizen_out/fundstreportMtemp_Out15_1314_.html

ಕಾರ್ಯಕ್ರಮದ ಉತ್ತಮ ಒಟ್ಟಾರೆ ಕಾರ್ಯಕ್ಷಮತೆಯ ಸೂಚಕಗಳಲ್ಲಿ ಒಂದು ಹಿಂದಿನ ವರ್ಷಗಳಲ್ಲಿ ಕನಿಷ್ಠ ಹಣಕಾಸಿನ ಹೊಣೆಗಾರಿಕೆಗಳನ್ನು ಹೊಂದಲು ಸಾಧ್ಯವಾಗುತ್ತದೆ. ಯೋಜನೆಗಳನ್ನು ಪೂರ್ಣಗೊಳಿಸುವಲ್ಲಿ ಹೆಚ್ಚಿನ ಸಮಯ ಚಾಲನೆಯಲ್ಲಿರಬಹುದು ಮಾತ್ರವಲ್ಲ, ವೆಚ್ಚ ಮತ್ತು ಕೂಲಿಯನ್ನು ಪಾವತಿಸಲು ಖರ್ಚು ಮಾಡದ ಹಣವೂ ಇರಬಹುದು. ಸೂಚಿಸಿದಂತೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಮುಖ ಗುರಿಗಳಲ್ಲಿ ಒಂದು ಸಮಯೋಚಿತ ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಪಾವತಿ ಮಾತ್ರವಲ್ಲದೆ ನಿಧಿಗಳ ನಿಲುಗಡೆ ಮತ್ತು ಉತ್ತಮ ನಿಧಿಯ ನಿರ್ವಹಣೆಯನ್ನು ಕಡಿಮೆ ಮಾಡುವುದು. ಹಿಂದಿನ ವರ್ಷದ ಖರ್ಚು ಮಾಡದ ಬಾಕಿ ಮೊತ್ತದ ಅನುಪಾತವನ್ನು ನಾವು ಮೊದಲೇ ನೋಡಿದ್ದೇವೆ. ಹಿಂದಿನ ವರ್ಷದ ಹೊಣೆಗಾರಿಕೆಗಳ ದರಗಳು ಕುಸಿಯುತ್ತಿರುವ ಸೂಚಕದೊಂದಿಗೆ ಉತ್ತಮವಾದ ಒಟ್ಟಾರೆ ಯೋಜನಾ ನಿರ್ವಹಣೆ ಎಷ್ಟರ ಮಟ್ಟಿಗೆಇದೆ ಎಂಬುದನ್ನು ಕೆಳಗಿನ ಚಿತ್ರವು ಸೂಚಿಸುತ್ತದೆ.

**ಚಿತ್ರ 21: ಪ್ರಸಕ್ತ ವರ್ಷದ ವಿನಿಯೋಗದಿಂದ ಹಿಂದಿನ ವರ್ಷದ ಶೇಕಡಾ ಹೊಣೆಗಾರಿಕೆಗಳು: ಕರ್ನಾಟಕ**




ಮೂಲ:http://mnregaweb4.nic.in/netnrega/state_html/outlayvscomest.aspx?page=s&lflag=eng&state_name=KARNATAKA&state_code=15&fin_year=2018-2019&source=national&Digest=1GUZ+JlMWW9Sh7V/cGX2UA

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪ್ರಾರಂಭದಲ್ಲಿ, ಹೊಣೆಗಾರಿಕೆಗಳ ದರವನ್ನು ಶೇಕಡಾ 34.62ಕ್ಕೆ ನಿಗದಿಪಡಿಸಲಾಗಿದ್ದು, ಇದು 2017–18ರ ವೇಳೆಗೆ ಶೇಕಡಾ 9.15ಕ್ಕೆ ಇಳಿದಿರುತ್ತದೆ. ಅದರ ಹಿಂದಿನ ವರ್ಷಕ್ಕಿಂತ 2018–19ರಲ್ಲಿ ಈ ದರವು ದ್ವಿಗುಣಗೊಂಡಿರುತ್ತದೆ. ರಾಜ್ಯ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆಯ ಕಾರಣದಿಂದಾಗಿ ಚುನಾವಣಾ ನೀತಿ ಸಂಹಿತೆಯ ಕಾರಣದಿಂದಾಗಿ ಮೂರು ತಿಂಗಳಿಗೂ ಹೆಚ್ಚು ಸಮಯವು ಕಳೆದುಹೋಗುವುದೂ ಈ ಹೆಚ್ಚಳಕ್ಕೆ ಕಾರಣವಾಗಿರುತ್ತದೆ. ಆದರೂ, ಈ ಘಟಕದಲ್ಲಿನ ಸ್ಥಿರವಾದ ಕುಸಿತವು ಸುಧಾರಿತ ನಿಧಿ ಮತ್ತು ಯೋಜನಾ ನಿರ್ವಹಣೆಯ ಸ್ಪಷ್ಟ ಸೂಚನೆಯಾಗಿದೆ, ಇದು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪರಿಚಯಕ್ಕೆ ಕಾರಣವಾಗಿರುತ್ತದೆ.

ಮಾದರಿ ಜಿಲ್ಲೆಗಳನ್ನು ಪ್ರತ್ಯೇಕವಾಗಿ ಕೇಂದ್ರೀಕರಿಸಿ, ಎರಡು ಜಿಲ್ಲೆಗಳು ವಾಸ್ತವವಾಗಿ ಸಕಾರಾತ್ಮಕ ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರವನ್ನು ಹೊಂದಿವೆ ಎಂಬುದನ್ನು ನಾವು ಗಮನಿಸಬಹುದಾಗಿರುತ್ತದೆ. ಇದು ಹಿಂದಿನ ವರ್ಷದ ನಿಧಿಗಳು ಮತ್ತು ಯೋಜನೆಗಳನ್ನು ನಿರ್ವಹಿಸದಿರುವ ಸೂಚನೆಯಾಗಿದೆ ಮತ್ತು ಇತರೆ ಜಿಲ್ಲೆಗಳು ಋಣಾತ್ಮಕ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವನ್ನು ಹೊಂದಿರುತ್ತವೆ. ಮಾದರಿಯಲ್ಲಿ ತಪ್ಪಾಗಿರುವ ಎರಡು ಜಿಲ್ಲೆಗಳು ಚಿಕ್ಕಬಳ್ಳಾಪುರ ಮತ್ತು ದಕ್ಷಿಣ ಕನ್ನಡ.

**ಚಿತ್ರ 22: ಪ್ರಸಕ್ತ ವರ್ಷದ ವಿನಿಯೋಗದಿಂದ ಹಿಂದಿನ ವರ್ಷದ ಶೇಕಡಾ ಹೊಣೆಗಾರಿಕೆಗಳು: ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರ**




ಮೂಲ:http://mnregaweb4.nic.in/netnrega/state_html/outlayvscomest.aspx?page=s&lflag=eng&state_name=KARNATAKA&state_code=15&fin_year=2018-2019&source=national&Digest=1GUZ+JlMWW9Sh7V/cGX2UA

ಆದಾಗ್ಯೂ, ಈ ಎರಡು ಜಿಲ್ಲೆಗಳು ಈಗಾಗಲೇ 2013–14ರೊಳಗೆ ಕ್ರಮವಾಗಿ ಕಡಿಮೆ ಹೊಣೆಗಾರಿಕೆ ದರವನ್ನು ಅಂದರೆ ಕ್ರಮವಾಗಿ 12.29 ಮತ್ತು ಶೇಕಡಾ 8.00 ಹೊಂದಿರುತ್ತವೆ. ಈ ದರಗಳು, ಆ ವರ್ಷದಲ್ಲಿ ರಾಜ್ಯದ ಅತ್ಯಂತ ಕಡಿಮೆ ದರವಾಗಿದ್ದು ಮಾದರಿ ಜಿಲ್ಲೆಗಳಲ್ಲಿ ಇವುಗಳು ಸೇರಿರುತ್ತವೆ. ವಾಸ್ತವವಾಗಿ, ಈ ದರಗಳು ರಾಜ್ಯದ ಸರಾಸರಿ ಶೇಕಡಾ 34.62ಕ್ಕಿಂತಲೂ ಕಡಿಮೆ ಇರುತ್ತವೆ. 2018–19ರ ಅಂತ್ಯದ ವೇಳೆಗೆ ಅವುಗಳ ದರಗಳಲ್ಲಿ ಅಲ್ಪ ಏರಿಕೆಯು ಕಂಡುಬಂದಿದ್ದು ಅದು ಕ್ರಮವಾಗಿ 15.11 ಮತ್ತು 13.5ರಷ್ಟು ಇರುತ್ತದೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳಿಗೆ ಸಂಬಂಧಿಸಿದ ಈ ಬದಲಾವಣೆಯು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಂತಹ ಯಾವುದೇ ಯೋಜನೆಯೊಂದಿಗೆ ಪ್ರಗತಿಯನ್ನು ಸ್ಥಿರಗೊಳಿಸುವ ಪ್ರಶ್ನೆಗೆ ನಮ್ಮನ್ನು ಮರಳಿ ತರುತ್ತದೆ.

## 8.10 ಅಗತ್ಯವಿದ್ದಾಗ ಫಲಾನುಭವಿಗಳು ಬ್ಯಾಂಕುಗಳಿಂದ ಹಣವನ್ನು ಹಿಂಪಡೆಯಲು ಸಮರ್ಥರಾಗಿದ್ದಾರೆಯೇ ಅಥವಾ ವಾಪಸಾತಿ ಮತ್ತು ಇನ್ನಾವುದೇ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳೊಂದಿಗೆ ವ್ಯವಹರಿಸುವಾಗ ಅವರು ತೊಂದರೆಗಳನ್ನು ಎದುರಿಸುತ್ತಿದ್ದಾರೆಯೇ?

ಅಧ್ಯಯನವು ಪ್ರಾರಂಭವಾಗಿ ಮತ್ತು ಪ್ರಗತಿಯಲ್ಲಿರುವಾಗಲೂ, ಈ ವಿಷಯದ ಕುರಿತು ನಮ್ಮ ಪ್ರಶ್ನೆಗಳ ಕೋಶಕ್ಕೆ ಮಾದರಿಯಲ್ಲಿ ಸಾಕಷ್ಟು ಸುಧಾರಣೆ ಮತ್ತು ನಿರ್ದಿಷ್ಟ ಪ್ರತಿಕ್ರಿಯೆಯನ್ನು ನಾವು ಗಮನಿಸಿದ್ದೇವೆ. ಏಕೆಂದರೆ, ನೀತಿಯಂತೆ ಜಂಟಿ ಬ್ಯಾಂಕ್ ಖಾತೆಗಳಿಂದ ವೈಯಕ್ತಿಕ ಬ್ಯಾಂಕ್ ಖಾತೆಗಳಿಗೆ ಪ್ರಮುಖ ಬದಲಾವಣೆಯಾಗಿರುತ್ತದೆ. ಇದರ ಪರಿಣಾಮವಾಗಿ, ಒಂದು ಕುಟುಂಬದೊಳಗೆ ಒಬ್ಬರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪಾವತಿಗಳ ಉದ್ದೇಶಕ್ಕಾಗಿ ನೋಂದಾಯಿಸಿರಬಹುದಾದ ಇತರ ಬ್ಯಾಂಕ್ ಸದಸ್ಯರನ್ನು ಅವಲಂಬಿಸಬೇಕಾಗಿಲ್ಲ. ಆದ್ದರಿಂದ ಹಿಂದಿನ ವ್ಯವಸ್ಥೆಯಲ್ಲಿರುವ ಒಬ್ಬ ವ್ಯಕ್ತಿಯು ತಾನು ಕಷ್ಟಪಟ್ಟು ಸಂಪಾದಿಸಿದ ವೇತನವನ್ನು ಬೇರೆ ಯಾರಿಗೋ ಕಳೆದುಕೊಳ್ಳುವ ಪರಿಸ್ಥಿತಿ ಹೊಂದಿದ್ದನು. ಸಾಮಾನ್ಯವಾಗಿ ಒಬ್ಬ ಪುರುಷ ಸದಸ್ಯನ ಹೆಸರಿನಲ್ಲಿ ಬ್ಯಾಂಕ್ ಖಾತೆ ಇರುತ್ತದೆಯೋ ಅದನ್ನು ಆತನು ನಿರ್ವಹಿಸುತ್ತಿದ್ದು, ಹಣವನ್ನು ಹಿಂಪಡೆಯಲು ಎಟಿಎಂ/ಡೆಬಿಟ್ ಕಾರ್ಡ್‌ನ್ನು ಬಳಸುತ್ತಿದ್ದು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ವ್ಯವಹಾರದಿಂದಾಗಿ ಬ್ಯಾಂಕ್ ಅಧಿಕಾರಿಗಳೊಂದಿಗೆ ವ್ಯವಹರಿಸುವುದರಿಂದ ಯಾವುದೇ ವಿಶಿಷ್ಟ ಅನುಕೂಲಗಳು ಅಥವಾ ಅನಾನುಕೂಲಗಳು ಇರುವುದಿಲ್ಲ. ಆದಾಗ್ಯೂ, ಬ್ಯಾಂಕ್ ಖಾತೆಗಳಿಗೆ ನೇರ ವರ್ಗಾವಣೆಗಿಂತ ನಗದು–ಕೂಲಿ ಪಾವತಿಗಾಗಿ ನಮ್ಮ ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಭಾಗವಹಿಸುವವರಿಂದ ಮತ್ತು ನಮ್ಮ ಮಾದರಿ ಸಮೀಕ್ಷೆಯ ಪ್ರತಿಕ್ರಿಯೆದಾರರಿಂದ ಸಾಕಷ್ಟು ಬೇಡಿಕೆ ಇತ್ತು. ಏಕೆಂದರೆ, ಬ್ಯಾಂಕಿನಿಂದ ಹಣವನ್ನು ಹಿಂಪಡೆಯಲು ಕಾಲ್ನಡಿಗೆಯಲ್ಲಿ, ದ್ವಿಚಕ್ರ ವಾಹನಗಳಲ್ಲಿ ಅಥವಾ ಬಸ್ ಅಥವಾ ಇತರ ಸಾರಿಗೆ ವಿಧಾನಗಳಲ್ಲಿ ಪ್ರಯಾಣಿಸುವುದು ಅನೇಕರಿಗೆ ಕಷ್ಟಕರವಾಗಿತ್ತು. ಮುಖ್ಯ ವರದಿಯು ಕುಟುಂಬದ ಸದಸ್ಯರು ಹತ್ತಿರದ ಎಟಿಎಂ ಅಥವಾ ಬ್ಯಾಂಕ್‌ಗೆ ಪ್ರಯಾಣಿಸುವ ಸರಾಸರಿ ದೂರ, ಪ್ರಯಾಣದ ವಿಧಾನ ಮತ್ತು ಅಂತಹ ಪ್ರಯಾಣದಲ್ಲಿ ಅವರು ಬ್ಯಾಂಕ್‌ಗೆ ಖರ್ಚು ಮಾಡುವ ಹಣದ ಬಗ್ಗೆ ಉಪ–ಮಾದರಿಯ ದತ್ತಾಂಶದಿಂದ ವಿಶ್ಲೇಷಣೆ ಮಾಡುತ್ತದೆ. ಅವರ ಬ್ಯಾಂಕಿಂಗ್ ಸಾಮರ್ಥ್ಯಗಳಲ್ಲಿ ಖಂಡಿತವಾಗಿಯೂ ಗಣನೀಯ ಮತ್ತು ಸಕಾರಾತ್ಮಕ ಬದಲಾವಣೆಯಾಗಿರುತ್ತದೆ, ಆದರೂ ಅನೇಕ ಮಹಿಳೆಯರು ಮತ್ತು ಕಡಿಮೆ ವಿದ್ಯಾವಂತರು ಅಥವಾ ವಯಸ್ಸಾದವರು ಬ್ಯಾಂಕ್ ಖಾತೆಗಳು ಅಥವಾ ಎಟಿಎಂಗಳನ್ನು ನಿರ್ವಹಿಸಲು ಇತರರ ಮೇಲೆ ಅವಲಂಬಿತರಾಗಿರುತ್ತಾರೆ.

## 18.11 ಶಿಕ್ಷಣ ಮತ್ತು ಬ್ಯಾಂಕ್ ಖಾತೆ ವಿವರಗಳು

ಈ ಮೌಲ್ಯಮಾಪನದ ಪ್ರಮುಖ ಕಾಳಜಿಯೆಂದರೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿರುವ ಉದ್ಯೋಗ ಕಾರ್ಡ್ ಹೊಂದಿರುವವರು ಬ್ಯಾಂಕಿಂಗ್ ಸೌಲಭ್ಯಗಳನ್ನು ಸುಲಭವಾಗಿ ಹೊಂದಿದ್ದಾರೆಯೇ ಮತ್ತು ಅವರ ಬ್ಯಾಂಕ್ ಖಾತೆಗಳನ್ನು ಸುಲಭವಾಗಿ ನಿರ್ವಹಿಸಲು ಮತ್ತು ವಹಿವಾಟು ನಡೆಸಲು ಸಮರ್ಥರಾಗಿದ್ದಾರೆಯೇ ಎಂದು ನಿರ್ಣಯಿಸುವುದು. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಯಶಸ್ಸು ಹಣಕಾಸಿನ ಸೇರ್ಪಡೆಯ ವ್ಯಾಪ್ತಿಯನ್ನು ಗಮನಾರ್ಹವಾಗಿ ಅವಲಂಬಿಸಿರುತ್ತದೆ, ಹಾಗೆಯೇ ಹಣಕಾಸಿನ ಸಾಕ್ಷರತೆಯು ಅವರ ಖಾತೆಯನ್ನು ಸ್ವತಂತ್ರವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ.

ಲಭ್ಯವಿರುವ ಯಾವುದೇ ಪ್ರತಿಕ್ರಿಯೆದಾರರು ಸಮೀಕ್ಷೆ ಪರಿಕರಗಳಲ್ಲಿ ನಮ್ಮ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಆದ್ದರಿಂದ ಆ ವ್ಯಕ್ತಿಯ ಶೈಕ್ಷಣಿಕ ಅರ್ಹತೆಯನ್ನು ಗಣನೆಗೆ ತೆಗೆದುಕೊಳ್ಳುವುದು ಇಡೀ ಕುಟುಂಬದ ಶೈಕ್ಷಣಿಕ ಹಿನ್ನೆಲೆಯನ್ನು ನಿರ್ಣಯಿಸಲು ಸರಿಯಾದ ಸಾಧನವಾಗಿರುವುದಿಲ್ಲ. ಆದ್ದರಿಂದ ನಾವು ಕುಟುಂಬದ ಯಾವುದೇ ವ್ಯಕ್ತಿಯ ಉನ್ನತ ಶೈಕ್ಷಣಿಕ ಮಟ್ಟವನ್ನು ಗಣನೆಗೆ ತೆಗೆದುಕೊಂಡಿದ್ದೇವೆ ಕಾರಣ ಆ ವ್ಯಕ್ತಿಯು ಕುಟುಂಬದ ಇತರ ಉದ್ಯೋಗ ಕಾರ್ಡ್ ಹೊಂದಿರುವ ಸದಸ್ಯರಿಗೆ ಸಹಾಯ ಮಾಡಲು ಅಥವಾ ಸಲಹೆ ನೀಡಲು ಸಾಧ್ಯವಾಗುತ್ತದೆ ಎಂದು ನಂಬಲಾಗಿರುತ್ತದೆ. ಅಂತಹ ವಿದ್ಯಾವಂತ ವ್ಯಕ್ತಿಯು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ರವಾನಿಸಲು ಸಾಧ್ಯವಾಗುತ್ತದೆ, ಉದಾಹರಣೆಗೆ ಪ್ರತಿ ನೋಂದಾಯಿತ ವ್ಯಕ್ತಿಗೆ ವೇತನ ವಿಳಂಬಕ್ಕೆ ಅಥವಾ ನಿರುದ್ಯೋಗಕ್ಕೆ ಪರಿಹಾರವನ್ನು ಪಡೆಯುವ ಹಕ್ಕು ಹೊಂದಿರುವ 25 ರಷ್ಟು ಕುಟುಂಬಗಳು ಎಸ್‌ಎಸ್‌ಎಲ್‌ಸಿಯನ್ನು ತನ್ನ ಸದಸ್ಯರಿಗೆ ಅತ್ಯುನ್ನತ ಶಿಕ್ಷಣವಾಗಿ ಹೊಂದಿರುತ್ತವೆ.

ಮಾದರಿ ಕುಟುಂಬಗಳಲ್ಲಿ ಇರುವ ಅತ್ಯುನ್ನತ ಶಿಕ್ಷಣ ಮಟ್ಟವನ್ನು ಪರಿಗಣಿಸಿದಾಗ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರಿಗೆ ಕುಟುಂಬದೊಳಗಿನಿಂದ ಅಥವಾ ಹೊರಗಿನಿಂದ ಅವರ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಇತರರ ಸಹಾಯದ ಅಗತ್ಯವಿರುವ ಹೆಚ್ಚಿನ ಸಾಧ್ಯತೆಗಳಿವೆ ಏಕೆಂದರೆ, ಎಸ್‌ಎಸ್‌ಎಲ್‌ಸಿ ಅಥವಾ 10 ನೇ ತರಗತಿ ಶಿಕ್ಷಣಕ್ಕಿಂತ ಕಡಿಮೆ ಇರುವ ವ್ಯಕ್ತಿಗಳು ಸ್ವತಃ ಬ್ಯಾಂಕ್ ಖಾತೆಯನ್ನು ನಿರ್ವಹಿಸುವುದು ಕಷ್ಟಕರವೆಂದು ನಾವು ಭಾವಿಸುತ್ತೇವೆ. ಮಾದರಿ ಕುಟುಂಬಗಳಲ್ಲಿ ಸುಮಾರು ಮೂರರಿಂದ ಐದನೇ ಒಂದು ಭಾಗವು 7 ನೇ ತರಗತಿಯವರೆಗೆ ಹೆಚ್ಚಿನ ಶಿಕ್ಷಣವನ್ನು ಹೊಂದಿರುತ್ತದೆ. 25 ರಷ್ಟು ಕುಟುಂಬಗಳು ಎಸ್‌ಎಸ್‌ಎಲ್‌ಸಿಯನ್ನು ತನ್ನ ಸದಸ್ಯರಿಗೆ ಅತ್ಯುನ್ನತ ಶಿಕ್ಷಣವಾಗಿ ಹೊಂದಿರುತ್ತವೆ. ಆದ್ದರಿಂದ, ಶಿಕ್ಷಣದ ಮಟ್ಟವನ್ನು ಪರಿಗಣಿಸಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರಿಗೆ ಸಹಾಯ ಮಾಡಲು ವಾಣಿಜ್ಯ ಬ್ಯಾಂಕಿನ ಸಿಬ್ಬಂದಿಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಕಾರ್ಮಿಕರು ಕೂಲಿಗೆ ಮನ್ನಣೆ ನೀಡಲಾಗಿದೆಯೆ ಅಥವಾ ಇಲ್ಲವೇ ಎಂಬ ಬಗ್ಗೆ ಮಾಹಿತಿ ಪಡೆಯಲು ಬ್ಯಾಂಕಿಗೆ ಹೋದಾಗ ಭಾಗಶಃ ಮೊತ್ತವನ್ನು ಮಾತ್ರ ಕ್ರೆಡಿಟ್ ಮಾಡಿದ್ದರೆ ಅದು ಬ್ಯಾಂಕಿನ ತಪ್ಪಲ್ಲ ಎಂದು ವಿವರಿಸಲು ಈ ಹೆಚ್ಚಿನ ಜವಾಬ್ದಾರಿ ಇರುತ್ತದೆ. ವಾಸ್ತವವಾಗಿ, ನಮ್ಮ ಕ್ಷೇತ್ರ ದತ್ತಾಂಶ ಸಂಗ್ರಹಣೆ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ಅವಧಿಯಲ್ಲಿ ಇದು ಸ್ಪಷ್ಟವಾದಂತೆ, ಬ್ಯಾಂಕುಗಳೊಂದಿಗಿನ ಹೆಚ್ಚಿನ ಗೊಂದಲ ಅಥವಾ ಸ್ಪಷ್ಟತೆಯ ಕೊರತೆಯು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮತ್ತು ನೇರ ವರ್ಗಾವಣೆಯ ಬಗ್ಗೆ ಫಲಾನುಭವಿಗಳಿಗೆ ಋಣಾತ್ಮಕ ಅಭಿಪ್ರಾಯಗಳನ್ನು ನೀಡುತ್ತದೆ

**ಕೋಷ್ಟಕ 17: ಮಾದರಿ ಕುಟುಂಬಗಳಲ್ಲಿ ಉನ್ನತ ಶಿಕ್ಷಣ:**

| ಮಾದರಿ ಕುಟುಂಬಗಳಲ್ಲಿ ಉನ್ನತ ಶಿಕ್ಷಣ: | | | | | | | | | | |
|---|---|---|---|---|---|---|---|---|---|---|
| ಶಿಕ್ಷಣದ ವಿವರ: | ಜಿಲ್ಲೆಯ ಹೆಸರು | | | | | | | | ಒಟ್ಟು | |
| | ಚಿಕ್ಕಬಳ್ಳಾಪುರ | ದಕ್ಷಿಣ ಕನ್ನಡ | ದಾವಣಗೆರೆ | ಕಲಬುರಗಿ | ಕೋಲಾರ | ಮಂಡ್ಯ | ಉತ್ತರ ಕನ್ನಡ | ಯಾದಗಿರಿ | | |
| <4 ನೇ ತರಗತಿ | 43.27 | 13.86 | 39.34 | 76.31 | 22.22 | 10.44 | 47.12 | 92.74 | 1927 | 44.80 |
| > 7 ನೇ ತರಗತಿ | 16.00 | 21.60 | 26.54 | 5.03 | 14.25 | 5.22 | 16.99 | 2.97 | 614 | 14.28 |
| ಎಸ್‌ಎಸ್‌ಎಲ್‌ಸಿ | 31.64 | 30.84 | 30.33 | 15.31 | 33.62 | 36.14 | 26.03 | 3.30 | 1094 | 25.44 |
| ಪಿಯುಸಿ | 6.36 | 15.98 | 3.79 | 1.79 | 16.52 | 25.70 | 6.16 | 0.66 | 364 | 8.46 |
| ಐಟಿಐ / ಡಿಪ್ಲೊಮಾ | | 2.00 | | 0.11 | 2.85 | 6.02 | | | 42 | 0.98 |
| ಸ್ನಾತಕೋತ್ತರ ಪದವಿ | 2.36 | 13.61 | | 1.45 | 8.55 | 13.65 | 3.56 | 0.33 | 226 | 5.25 |
| ವೃತ್ತಿಪರ ಪದವಿ | | 1.00 | | | 0.57 | 1.20 | | | 13 | 0.30 |
| ಸ್ನಾತಕೋತ್ತರ ಪದವಿ | 0.36 | 1.12 | | | 1.42 | 1.61 | 0.14 | | 21 | 0.49 |
| □□□□□□ | 550 | 801 | 422 | 895 | 351 | 249 | 730 | 303 | 4301 | |

ಕ್ಷೇತ್ರಕಾರ್ಯಗಳು ಪ್ರಗತಿಯಲ್ಲಿದ್ದಾಗಲೂ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯೊಂದಿಗೆ ನೋಂದಾಯಿಸಿಕೊಂಡಿರುವ ಪ್ರತಿಯೊಬ್ಬ ಕೆಲಸಗಾರನು ತನಗಾಗಿ ಪ್ರತ್ಯೇಕ ಖಾತೆಯನ್ನು ಹೊಂದಿರಬೇಕು ಎಂಬ ಪ್ರಮುಖ ನಿರ್ಧಾರವಿತ್ತು. ಇಲ್ಲಿಯವರೆಗೆ ಅಭ್ಯಾಸವು ಕುಟುಂಬದ ಇನ್ನೊಬ್ಬ ಸದಸ್ಯರೊಂದಿಗೆ ಜಂಟಿ ಖಾತೆಯನ್ನು ಹೊಂದಲು ಕೆಲಸಗಾರನಿಗೆ ಅನುಮತಿ ನೀಡುವುದು, ಆ ಖಾತೆಯ ಕೂಲಿಯನ್ನು ವರ್ಗಾಯಿಸಬಹುದು. ಜಂಟಿ ಖಾತೆಗಳನ್ನು ಸ್ವೀಕರಿಸುವ ಇಂತಹ ವ್ಯವಸ್ಥೆಯಡಿಯಲ್ಲಿ ಸಮಯೋಚಿತ ವೇತನ ಪಾವತಿಯ ವಿಷಯದಲ್ಲಿ ಪ್ರಗತಿ ಕಂಡುಬಂದಿದೆಯೋ ಇಲ್ಲವೋ, ಮುಖ್ಯ ಅನಾನುಕೂಲವೆಂದರೆ ಕೆಲವು ಸದಸ್ಯರು ತಮ್ಮ ಖಾತೆಗಳನ್ನು ನಿರ್ವಹಿಸಲು ಕುಟುಂಬದ ಇತರರನ್ನು ಅವಲಂಬಿಸಬೇಕಾಗಿತ್ತು. ಹೀಗಾಗಿ ಮಹಿಳಾ ಕಾರ್ಮಿಕರು, ಮತ್ತು/ಅಥವಾ ಕುಟುಂಬದ ಇತರ ಅವಲಂಬಿತರು ಖಾತೆದಾರನು ಬಲವಾದ ಪಿತೃಪ್ರಧಾನನಾಗಿದ್ದರೆ ಅಥವಾ ಅಂತಹ ಇತರ ಅವಲಂಬಿತ ಸದಸ್ಯರ ಗಳಿಕೆಯನ್ನು ದುರುಪಯೋಗಪಡಿಸಿಕೊಂಡರೆ ತಮ್ಮ ಗಳಿಕೆಯನ್ನು ಕಳೆದುಕೊಳ್ಳುವ ನಿರೀಕ್ಷೆಯನ್ನು ಹೊಂದಿದ್ದರು.

ನೀತಿಯು ಈಗ ಸ್ವತಂತ್ರ ಖಾತೆಗಳತ್ತ ಸಾಗಿದೆ ಮತ್ತು ಪ್ರಗತಿಯು ಈ ದಿಕ್ಕಿನಲ್ಲಿ ನಿಧಾನವಾಗಿ ನಡೆಯುತ್ತಿದೆ. ಇದರ ಪರಿಣಾಮವಾಗಿ, ಒಟ್ಟಾರೆಯಾಗಿ ಕರ್ನಾಟಕ ರಾಜ್ಯದಲ್ಲಿ, ಸಕ್ರಿಯವಾಗಿರುವ ವೈಯಕ್ತಿಕ ಖಾತೆಗಳು 2013–14ರ ಅವಧಿಯಲ್ಲಿ 863877ರಿಂದ 2018–19ರ ವೇಳೆಗೆ 6529315ಕ್ಕೆ ಏರಿರುತ್ತದೆ. ವೈಯಕ್ತಿಕ ಖಾತೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯಕ್ಕೆ ಸಂಯುಕ್ತ ವಾರ್ಷಿಕ ಬೆಳವಣಿಗೆ ದರ 22,42 ಆಗಿದೆ. ಕಲಬುರಗಿ ಮತ್ತು ಚಿಕ್ಕಬಳ್ಳಾಪುರ ಈ ಎರಡು ಜಿಲ್ಲೆಗಳು ಹೆಚ್ಚಿನ ಸಂಯುಕ್ತ ವಾರ್ಷಿಕ ಬೆಳವಣಿಗೆ ದರ ಹೊಂದಿರುವ ಎರಡು ಜಿಲ್ಲೆಗಳು, ಹೆಚ್ಚು ಸೂಕ್ತವಾಗಿ ಈ ಎರಡು ಜಿಲ್ಲೆಗಳು ಕಡಿಮೆ ವೈಯಕ್ತಿಕ ಬ್ಯಾಂಕ್ ಖಾತೆಗಳನ್ನು ಹೊಂದಿದ್ದವು. ಇದಕ್ಕೆ ಅನುಗುಣವಾಗಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ

ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ಜಂಟಿ ಖಾತೆಗಳ ಸ್ಥಿರ ಕುಸಿತ ಕಂಡುಬಂದಿದೆ: ಕರ್ನಾಟಕವು ಒಂದು ರಾಜ್ಯವಾಗಿ ನಕಾರಾತ್ಮಕ ಸಂಯುಕ್ತ ವಾರ್ಷಿಕ ಬೆಳವಣಿಗೆ ದರಕ್ಕೆ ಸಾಕ್ಷಿಯಾಗಿರುತ್ತದೆ, ಇದು ಜಂಟಿ ಖಾತೆಗಳಿಗಾಗಿ 23.31 ರ ಅಖಿಲ ಭಾರತ ಸಂಯುಕ್ತ ವಾರ್ಷಿಕ ಬೆಳವಣಿಗೆ ದರದ ಎದುರು 17.16 ರಲ್ಲಿರುತ್ತದೆ. ಈ ಮೌಲ್ಯಮಾಪನದಲ್ಲಿನ ಮಾದರಿ ಜಿಲ್ಲೆಗಳಲ್ಲಿ, ಕಲಬುರಗಿ ಮತ್ತು ಚಿಕ್ಕಬಳ್ಳಾಪುರ ವೈಯಕ್ತಿಕ ಖಾತೆಗಳ ಅತ್ಯಧಿಕ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವನ್ನು ಕಂಡ ಈ ಎರಡು ಜಿಲ್ಲೆಗಳು ಅತಿದೊಡ್ಡ ಕುಸಿತವನ್ನು ದಾಖಲಿಸಿರುತ್ತವೆ

**ಕೋಷ್ಟಕ 18: ಸಕ್ರಿಯ ಬ್ಯಾಂಕ್ ಖಾತೆಗಳ ವಾರ್ಷಿಕ ಬೆಳವಣಿಗೆ ದರಗಳು**
**(2013–14 ರಿಂದ 2018–19)**

| ಜಿಲ್ಲೆಗಳು | ವೈಯಕ್ತಿಕ | ಜಂಟಿ | ಒಟ್ಟು |
|---|---|---|---|
| ಚಿಕ್ಕಬಳ್ಳಾಪುರ | 10.96 | –8.33 | 10.33 |
| ದಕ್ಷಿಣ ಕನ್ನಡ | 10.00 | –7.66 | 9.40 |
| ಧಾರವಾಡ | 10.60 | –8.77 | 9.61 |
| ಕಲಬುರಗಿ | 11.92 | –9.97 | 10.73 |
| ಕೋಲಾರ | 10.58 | –8.24 | 9.89 |
| ಮಂಡ್ಯ | 9.84 | –6.85 | 9.49 |
| ಉತ್ತರ ಕನ್ನಡ | 9.10 | –6.00 | 8.86 |
| ಯಾದಗಿರಿ | 9.76 | –8.94 | 7.94 |
| **ಕರ್ನಾಟಕ** | 22.42 | –17.60 | 20.89 |
| **ಅಖಿಲ ಭಾರತ** | 32.98 | –22.31 | 31.99 |

ಮೂಲ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪೋರ್ಟಲ್
http://mnregaweb4.nic.in/netnrega/MISreport4.aspx?fin_year=2013-2014&rpt=RP&source=national ಮತ್ತು ಅನುಗುಣವಾದ ವರ್ಷಗಳು

ಮ್ಯಾಕ್ರೋ ದತ್ತಾಂಶವು ಇವುಗಳನ್ನು ನಮಗೆ ಹೇಳುತ್ತಿದ್ದರೆ, ನಮ್ಮ ಮಾದರಿ ಜಿಲ್ಲೆಗಳು ಮತ್ತು ಬ್ಯಾಂಕಿಂಗ್ ಸೌಲಭ್ಯಗಳಿಗೆ ಸಂಬಂಧಿಸಿದ ಪ್ರತಿಕ್ರಿಯೆದಾರರಿಗೆ ಸಂಬಂಧಿಸಿದಂತೆ ಕ್ಷೇತ್ರ ದತ್ತಾಂಶವು ಏನು ಹೇಳುತ್ತದೆ ಎಂಬುದರತ್ತ ನಮ್ಮ ಗಮನವನ್ನು ಬದಲಾಯಿಸೋಣ.

**ಚಿತ್ರ 23: ಕುಟುಂಬದ ಉದ್ಯೋಗ ಕಾರ್ಡ್‌ಗಳ ಸಂಖ್ಯೆ ಮತ್ತು ಬ್ಯಾಂಕ್ ಖಾತೆಗಳ ಸಂಖ್ಯೆ**




ಕುಟುಂಬಗಳು ಕಡಿಮೆ ಸಂಖ್ಯೆಯ ಉದ್ಯೋಗ ಕಾರ್ಡ್‌ಗಳನ್ನು ಹೊಂದಿರುವಾಗ ಒಂದೇ ಖಾತೆಯನ್ನು ಬಹು ಉದ್ಯೋಗ ಕಾರ್ಡ್ ಹಂಚಿಕೊಳ್ಳುವ ಸಂಭವವು ತುಂಬಾ ಹೆಚ್ಚಾಗಿದೆ ಎಂದು ಗಮನಿಸಬಹುದು. ಆದ್ದರಿಂದ ಕುಟುಂಬಗಳು ಹೆಚ್ಚಿನ ಸಂಖ್ಯೆಯ ಉದ್ಯೋಗ ಕಾರ್ಡ್‌ಗಳನ್ನು ಹೊಂದಿರುವುದರಿಂದ, ಅವರು ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ಹೊಂದುವ ಸಾಧ್ಯತೆಯಿದೆ ಮತ್ತು ಖಂಡಿತವಾಗಿಯೂ ಅದೇ ಖಾತೆಯನ್ನು ಹಂಚಿಕೊಳ್ಳುವ ಸಂಭವವು ಅವರಲ್ಲಿ ಬಹುತೇಕ ಸ್ಪಷ್ಟವಾಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಎರಡು ಉದ್ಯೋಗ ಕಾರ್ಡ್ ಹೊಂದಿರುವ ಕುಟುಂಬಗಳಲ್ಲಿ ಶೇಕಡಾ 39.9ರಷ್ಟು ಕುಟುಂಬಗಳು ಕೇವಲ ಒಂದು ಜಂಟಿ ಖಾತೆಯನ್ನು ಹೊಂದಿರುತ್ತವೆ, ಅಂದರೆ, ಯಾವುದೇ ಸಂದರ್ಭದಲ್ಲಿ, ನಮ್ಮ ಮಾದರಿಯಲ್ಲಿ ಸುಮಾರು ಅರ್ಧದಷ್ಟು ಉದ್ಯೋಗ ಕಾರ್ಡ್ ಹೊಂದಿರುವವರು ಬ್ಯಾಂಕ್ ಖಾತೆಗಳನ್ನು ಹೊಂದಿರುವ ಮತ್ತು ನಿರ್ವಹಿಸುವ ಇತರರ ಮೇಲೆ ಅವಲಂಬಿತರಾಗಿರಬೇಕು ಎಂಬುದು ಸಹ ಗಮನಿಸಬೇಕಾದ ಸಂಗತಿಯಾಗಿರುತ್ತದೆ. ಹೀಗಾಗಿ, ಅಂತಹ ಜಂಟಿ ಖಾತೆಗಳಿಗೆ ಕೂಲಿಯನ್ನು ಜಮಾ ಮಾಡಲಾಗಿದ್ದರೂ ಸಹ, ಇನ್ನೂ ಹೆಚ್ಚಿನ ಕಾಲ್ಪನಿಕ ವಿಳಂಬವಿರುತ್ತದೆ, ಆ ಮೂಲಕ ಕೂಲಿಯನ್ನು ಖಾತೆಗೆ ಜಮಾ ಮಾಡಿರಬಹುದು, ಖಾತೆಯ ನಿರ್ವಾಹಕರು ಹಣವನ್ನು ಹಿಂಪಡೆಯಲು ಮುಕ್ತವಾಗಿರುವ ಸಮಯದವರೆಗೆ ಕಾಯಬೇಕಾಗುತ್ತದೆ. ಹೇಗಾದರೂ, ಒಟ್ಟಾರೆಯಾಗಿ ನಾವು ರಾಜ್ಯದಲ್ಲಿ ಸಾಕ್ಷಿಯಾದ ಜಂಟಿ ಖಾತೆಗಳ ಕುಸಿತದ ಪ್ರವೃತ್ತಿಯು ಕಂಡುಬಂದರೆ, ಈ ಸಂಕಷ್ಟವು ಕಡಿಮೆಯಾಗುವ ಸಂಕೇತವಿರುತ್ತದೆ.

ಬ್ಯಾಂಕ್ ಖಾತೆಯನ್ನು ನಿರ್ವಹಿಸಲು ಕನಿಷ್ಠ ಮೂರು ಮಾರ್ಗಗಳಿವೆ – ಹಣವನ್ನು ಹಿಂಪಡೆಯಲು ಅಥವಾ ವರ್ಗಾವಣೆ ಮಾಡಲು. ಮೊದಲನೆಯದು ಬ್ಯಾಂಕ್‌ಗೆ ಹೋಗಿ ಅವರ ಅಥವಾ ಅವರ ಜಂಟಿ ಖಾತೆಗೆ ಕೂಲಿ ಹಣದ ಸಾಲವಿದೆಯೇ ಎಂದು ಕಂಡುಹಿಡಿಯುವುದು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರಂತೆ ಅಷ್ಟೊಂದು ತಿಳುವಳಿಕೆಯಿಲ್ಲದ ಗ್ರಾಹಕರಿಗೆ ಅಗತ್ಯವಾದ ಮಾಹಿತಿಯನ್ನು ನೀಡುವಲ್ಲಿ ಬ್ಯಾಂಕ್ ಅಧಿಕಾರಿಗಳು ಮುಂಬರುತ್ತಿಲ್ಲ ಎಂದು ಹೆಚ್ಚಿನ ಪ್ರತಿಕ್ರಿಯೆದಾರರು ಸಾಕಷ್ಟು ದೂಷಿಸಿರುತ್ತಾರೆ. ಬ್ಯಾಂಕ್ ವಹಿವಾಟಿನ ಡಿಜಿಟಲೀಕರಣದ ಪ್ರಗತಿಯೊಂದಿಗೆ, ಪಾಸ್‌ಬುಕ್‌ನ್ನು ಮುದ್ರಕ ಅಥವಾ ಟೆಲ್ಲರ್ ಯಂತ್ರವನ್ನು ಬಳಸಿಕೊಂಡು

ನವೀಕರಿಸಬೇಕು. ಆದರೆ, ಠೇವಣಿ ಮಾಡಲಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಸಾಕಷ್ಟು ಜ್ಞಾನವಿರಬೇಕು, ಅಥವಾ ಭಾಗಶಃ ಪಾವತಿ ಸಲ್ಲುತ್ತದೆ ಎಂದು ಅರ್ಥಮಾಡಿಕೊಳ್ಳಬೇಕು. ಎಟಿಎಂನ್ನು ನಿರ್ವಹಿಸುವುದರ ಮೂಲಕ ಬ್ಯಾಂಕ್ ಬ್ಯಾಲೆನ್ಸ್‌ನ್ನು ಯಾರಾದರೂ ಅಥವಾ ಕ್ರೆಡಿಟ್ ಮಾಡಲಾಗಿದೆಯೆ ಅಥವಾ ಇಲ್ಲವೇ ಎಂದು ತಿಳಿದುಕೊಳ್ಳಬಹುದು ಇದು ಎರಡನೆಯ ಪ್ರಮುಖ ವಿಧಾನವಾಗಿರುತ್ತದೆ, ಎಟಿಎಂ ಸಾಕಷ್ಟು ಹತ್ತಿರದಲ್ಲಿರಬಹುದು ಅಥವಾ ಸ್ವಲ್ಪ ದೂರದಲ್ಲಿರಬಹುದು. ಕಾರ್ಮಿಕರಿಗೆ ಟೆಲ್ಲರ್ ಯಂತ್ರವನ್ನು ನಿರ್ವಹಿಸುವ ಜ್ಞಾನವಿರಬೇಕು ಹಾಗೂ ಅವನು ಅಥವಾ ಅವಳು ಖಾತೆಗೆ ಲಿಂಕ್ ಮಾಡಲಾದ ಡೆಬಿಟ್ ಕಾರ್ಡ್‌ನ ಸೌಲಭ್ಯವನ್ನು ಹೊಂದಿರಬೇಕು ಇದು ಜಂಟಿ ಖಾತೆಯಾಗಿದ್ದರೆ, ಮುಖ್ಯ ಖಾತೆ ಆಯೋಜಕರಿಗೆ ಅನುಕೂಲವಿರುವುದರಿಂದ ಡೆಬಿಟ್ ಕಾರ್ಡ್ ಹೊಂದುವ ಸಾಧ್ಯತೆಗಳು ಒಂದು ಆಯ್ಕೆಯಾಗಿರುವುದಿಲ್ಲ. ಮೂರನೆಯದು ಖಂಡಿತವಾಗಿಯೂ ಯಾವುದೇ ಬ್ಯಾಂಕ್ ವಹಿವಾಟಿನ ಬಗ್ಗೆ ಬ್ಯಾಂಕಿನಿಂದ ಎಸ್‌ಎಂಎಸ್ ಸಂದೇಶವನ್ನು ಸ್ವೀಕರಿಸುವ ವಿಧಾನವಾಗಿರುತ್ತದೆ. ಆದರೆ ಇದು ಸಂಭವಿಸಬೇಕಾದರೆ, ಖಾತೆದಾರರು ಸಂದೇಶಗಳನ್ನು ಸ್ವೀಕರಿಸುವ ಆಯ್ಕೆಯನ್ನು ಸಕ್ರಿಯಗೊಳಿಸಿರಬೇಕು. ಮತ್ತೊಂದು ವಿಧಾನವಿದೆ, ಇದನ್ನು ಸೈದ್ಧಾಂತಿಕ ಉದ್ದೇಶಕ್ಕಾಗಿ ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ ಏಕೆಂದರೆ 4301 ರ ಮಾದರಿಯಲ್ಲಿ ಕೇವಲ ಇಬ್ಬರು ವ್ಯಕ್ತಿಗಳನ್ನು ಹೊರತುಪಡಿಸಿ ಇದಕ್ಕೆ ಅಗತ್ಯವಾದ ಸೌಲಭ್ಯವಿದೆ ಅದು ನೆಟ್ ಬ್ಯಾಂಕಿಂಗ್ ಆಗಿರುತ್ತದೆ.

ಒಟ್ಟಾರೆಯಾಗಿ ಮಾದರಿಯನ್ನು ತೆಗೆದುಕೊಂಡರೆ, ಶೇಕಡಾ 41.25 ರಷ್ಟು ಜನರು ತಮ್ಮ ಹಳ್ಳಿಗಳಲ್ಲಿನ ಕಾರ್ಮಿಕರಿಗೆ ಒಂದು ಕಿಲೋ ಮೀಟರ್‌ಗಿಂತ ಕಡಿಮೆ ಅಂತರದಲ್ಲಿ ವಾಣಿಜ್ಯ ಬ್ಯಾಂಕ್ ಲಭ್ಯವಿದೆ ಎಂದು ವರದಿ ಮಾಡಿದ್ದಾರೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮಹತ್ವಾಕಾಂಕ್ಷೆಯ ಪರಿಚಯದ ಹಿನ್ನೆಲೆಯಲ್ಲಿ ಇದು ನಿಜಕ್ಕೂ ಗ್ರಾಮೀಣ ಬ್ಯಾಂಕಿಂಗ್ ಸೇವೆಯ ಉತ್ತಮ ಲಕ್ಷಣವಾಗಿರುತ್ತದೆ. ಸುಮಾರು 40 ಪ್ರತಿಶತದಷ್ಟು ಕಾರ್ಮಿಕರು ತಮ್ಮ ಖಾತೆಗಳನ್ನು ಪರಿಶೀಲಿಸಲು ಮತ್ತು/ಅಥವಾ ಅವರ ಖಾತೆಗಳನ್ನು ನಿರ್ವಹಿಸಲು ಬ್ಯಾಂಕಿಗೆ ಹೋಗುವ ಆಯ್ಕೆಯನ್ನು ಹೊಂದಿರುತ್ತಾರೆ. 1.00 ರಿಂದ 2.50 ಕಿಲೋ ಮೀಟರ್ ದೂರದಲ್ಲಿರುವ ಬ್ಯಾಂಕ್ ಹೊಂದಿರುವ ಈ ಗುಂಪಿನೊಂದಿಗೆ ನಾವು ಇನ್ನೊಂದು ಗುಂಪನ್ನು ಸೇರಿಸಿಕೊಂಡರೆ, ನಮ್ಮಲ್ಲಿ ಶೇಕಡಾ 55 ಕ್ಕಿಂತ ಹೆಚ್ಚು ಕಾರ್ಮಿಕರು ಬ್ಯಾಂಕಿನೊಂದಿಗೆ 2.50 ಕಿ.ಮೀ. ಒಳಗಿನ ದೂರದಲ್ಲಿರುವ ಬ್ಯಾಂಕ್‌ನ್ನು ಹೊಂದಿರುತ್ತಾರೆ. 2.51 ರಿಂದ 5.00 ಕಿ.ಮೀ ದೂರದಲ್ಲಿರುವ ಬ್ಯಾಂಕ್ ಹೊಂದಿರುವವರು ಶೇಕಡಾ 25.53 ರಷ್ಟಿದ್ದಾರೆ, 75% ಕ್ಕಿಂತ ಹೆಚ್ಚು ಜನರು 5.00 ಕಿ.ಮೀಗಳ ದೂರದಲ್ಲಿರುವ ಬ್ಯಾಂಕನ್ನು ಹೊಂದಿದ್ದಾರೆ.

ಆದಾಗ್ಯೂ ನಮ್ಮ ಮಾದರಿ ಜಿಲ್ಲೆಗಳಾದ ಯಾದಗಿರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮೇಲೆ ಕೇಂದ್ರೀಕರಿಸಿದ ನಾವು 10 ಕಿ.ಮೀ.ಗಿಂತ ಹೆಚ್ಚಿನ ದೂರದಲ್ಲಿರುವ ಬ್ಯಾಂಕಿನವರಲ್ಲಿ ಹೆಚ್ಚಿನ ಪಾಲು ಹೊಂದಿರುವ ಕಾರ್ಮಿಕರನ್ನು ಕಾಣುತ್ತೇವೆ. ಉತ್ತರ ಕನ್ನಡದ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಈ ದೂರವನ್ನು ಶೇಕಡಾ 25.07 ಮತ್ತು 37.29ರಷ್ಟು ದೊಡ್ಡ ಪಾಲನ್ನು ಪ್ರತಿಕ್ರಿಯೆದಾರರು ಕ್ರಮವಾಗಿ ಹೊಂದಿರುತ್ತಾರೆ.

**ಚಿತ್ರ 24: ಮಾದರಿ ಜಿಲ್ಲೆಗಳಲ್ಲಿ ಬ್ಯಾಂಕಿಗೆ ಇರುವ ದೂರ**




**ಚಿತ್ರ 25: ಜಿಲ್ಲೆಗಳು ಮತ್ತು ಎಟಿಎಂಗೆ ಇರುವ ದೂರ**




ಧಾರವಾಡ, ಮತ್ತು ಯಾದಗಿರಿಯಲ್ಲಿ ಪ್ರತಿಕ್ರಿಯೆದಾರರ ನಿವಾಸದಿಂದ ಅರ್ಧ ಕಿಲೋಮೀಟರ್‌ಗಿಂತಲೂ ಕಡಿಮೆ ದೂರದಲ್ಲಿ ಬ್ಯಾಂಕುಗಳು ಇರುತ್ತದೆ ಧಾರವಾಡಿನಲ್ಲಿ ಇದು ಮಾದರಿ ಪ್ರತಿಕ್ರಿಯೆದಾರರಲ್ಲಿ ಶೇಕಡಾ 28.20ರಷ್ಟಿದ್ದರೆ, ಯಾದಗಿರಿಯಲ್ಲಿ ಶೇಕಡಾ 21.78ರಷ್ಟು ಜನರು ಬ್ಯಾಂಕಿನಿಂದ ಅರ್ಧ ಕಿಲೋಮೀಟರ್ ದೂರದಲ್ಲಿದ್ದಾರೆ. ದಕ್ಷಿಣ ಕನ್ನಡ, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ 40ರಷ್ಟು ಪ್ರತಿಕ್ರಿಯಿಸಿದ ಕಾರ್ಮಿಕರಿಗೆ 2.51 ರಿಂದ 5.00 ಕಿ.ಮೀ.ವರೆಗಿನ ಅಂತರದಲ್ಲಿ ಬ್ಯಾಂಕಿನ ವ್ಯವಸ್ಥೆ ಇರುತ್ತದೆ. ವಾಸಸ್ಥಳದಿಂದ ಹತ್ತಿರದ ಎಟಿಎಂಗೆ ಇರುವ ಅಂತರವು ಬ್ಯಾಂಕಿನ ಅಂತರವನ್ನೇ ಹೋಲುತ್ತದೆ. ಒಂದೇ ವ್ಯತ್ಯಾಸವೆಂದರೆ ಹೆಚ್ಚಿನ ಸಂದರ್ಭಗಳಲ್ಲಿ ಗ್ರಾಮೀಣ ಕಾರ್ಮಿಕರು ತಮ್ಮ ಖಾತೆಯು ಬೇರೆಡೆ ಮತ್ತು ದೂರದಲ್ಲಿರುವ ಬ್ಯಾಂಕಿನ ಶಾಖೆಯಲ್ಲಿದ್ದರೂ

ಯಾವುದೇ ವಾಣಿಜ್ಯ ಬ್ಯಾಂಕ್ ನಿರ್ವಹಿಸುವ ಎಟಿಎಂನ ಪ್ರಯೋಜನವನ್ನು ಹೊಂದಿರುತ್ತಾರೆ. ಆದ್ದರಿಂದ, ಯಾದಗಿರಿಯಲ್ಲಿ ನಮ್ಮ ಪ್ರತಿಕ್ರಿಯೆದಾರರಲ್ಲಿ ಶೇಕಡಾ 37ರಷ್ಟು ಜನರು ತಮ್ಮ ವಾಣಿಜ್ಯ ಬ್ಯಾಂಕಿನ ಶಾಖೆಯನ್ನು 10 ಕಿಲೋಮೀಟರ್‌ಗಿಂತ ಹೆಚ್ಚು ದೂರದಲ್ಲಿ ಹೊಂದಿದ್ದರು, ಆದರೆ 25 ಪ್ರತಿಶತದಷ್ಟು ಜನರಿಗೆ ಎಟಿಎಂ ಅದೇ ಅಂತರದಲ್ಲಿರುತ್ತದೆ.

ಚಿತ್ರ 26: ವಾಣಿಜ್ಯ ಬ್ಯಾಂಕಿಗೆ ಪ್ರಯಾಣಿಸುವ ವಿಧಾನಗಳು




ಚಿತ್ರ 27: ಬ್ಯಾಂಕಿಗೆ ಇರುವ ದೂರ ಮತ್ತು ಪ್ರಯಾಣದ ವೆಚ್ಚಗಳು



**ಚಿತ್ರ 28: ಎಟಿಎಂಗೆ ಇರುವ ದೂರ ಮತ್ತು ಪ್ರಯಾಣಿಸುವ ವಿಧಾನಗಳು**




**ಚಿತ್ರ 29: ಎಟಿಎಂಗೆ ಇರುವ ದೂರ ಮತ್ತು ಪ್ರಯಾಣದ ವೆಚ್ಚಗಳು**




ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವ ಉದ್ದೇಶದಿಂದ ವಾಣಿಜ್ಯ ಬ್ಯಾಂಕ್‌ಗೆ ಭೇಟಿ ನೀಡುವ ಸಂಕಷ್ಟದ ದೃಷ್ಟಿಕೋನದಿಂದ ಪ್ರಾಮುಖ್ಯತೆ ಏನು (ಹಣವನ್ನು ಪಡೆಯಬೇಕೇ ಅಥವಾ ಕೂಲಿಯನ್ನು ಜಮಾ ಮಾಡಲಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಲು ಒಬ್ಬರು ಬ್ಯಾಂಕಿಗೆ ಅಥವಾ ಎಟಿಎಂ ಹೋಗಬೇಕಾಗಿತ್ತು). ಈ ಎರಡು ಸೌಲಭ್ಯಗಳ ದೂರದಲ್ಲಿ, ಕೇವಲ ಕಾಲ್ನಡಿಗೆಯಲ್ಲಿ ಹೋಗುವುದಕ್ಕಿಂತ ಬೇರೆ ವಿಧಾನಗಳನ್ನು ಅವಲಂಬಿಸುವ ಅವಶ್ಯಕತೆಯಿರುತ್ತದೆ. ಮೇಲಿನ ಎರಡು ಅಂಶಗಳು ಈ ಎರಡು ಸೌಲಭ್ಯಗಳಿಗೆ ಇರುವ ಅಂತರದ ಬಗ್ಗೆ ಮತ್ತು ಕಾಲ್ನಡಿಗೆಯಿಂದ,

ಸಾರ್ವಜನಿಕವಾಗಿ ಅಥವಾ ಒಬ್ಬರ ಸ್ವಂತ ಸಾರಿಗೆ ಸೌಲಭ್ಯಗಳಿಂದ ಹೇಗೆ ಆವರಿಸಲ್ಪಟ್ಟಿದೆ ಎಂಬ ಕಲ್ಪನೆಯನ್ನು ನಮಗೆ ನೀಡುತ್ತದೆ.

ಪ್ರಯಾಣ ದೂರ ಮತ್ತು ವೆಚ್ಚದ ದತ್ತಾಂಶದ ಬಗ್ಗೆ ಕೆಲವು ತ್ವರಿತ ಅವಲೋಕನಗಳನ್ನು ಇಲ್ಲಿ ಮಾಡಬಹುದು, ಅದಕ್ಕಾಗಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸಗಾರರಾದ ನಮ್ಮ ಮಾದರಿ ಪ್ರತಿಕ್ರಿಯೆದಾರರ ಬಗ್ಗೆಯೂ ಅವಲೋಕಿಸಲಾಗಿರುತ್ತದೆ. ಮೊದಲೇ ಗಮನಿಸಿದಂತೆ, ಬ್ಯಾಂಕಿಂಗ್ ಸೌಲಭ್ಯಗಳು ದೇಶದಲ್ಲಿ ಮತ್ತು ನಮ್ಮ ಮಾದರಿ ಪಂಚಾಯಿತಿಗಳು ಮತ್ತು ಜಿಲ್ಲೆಗಳಲ್ಲೂ ಸಹ ಸಾಕಷ್ಟು ಪ್ರಗತಿಯನ್ನು ಸಾಧಿಸಿರುತ್ತವೆ. ಬ್ಯಾಂಕ್ ಅಥವಾ ಎಟಿಎಂ ಸಮೀಪವಿರುವ ಕಾರಣ, ಹೆಚ್ಚಿನ ಪ್ರತಿಕ್ರಿಯೆದಾರರು ದೂರವನ್ನು ಕ್ರಮಿಸಲು ಕಾಲ್ನಡಿಗೆಯಲ್ಲಿ ಹೋಗುತ್ತಾರೆ. ವರದಿ ಮಾಡಲಾದ ದೂರವು ಕಿಲೋಮೀಟರ್‌ಗಿಂತ ಕಡಿಮೆಯಿರುವುದರಿಂದ, ಈ ಸೌಲಭ್ಯಗಳು ಅವರ ವಾಸಸ್ಥಳಕ್ಕೆ ಹತ್ತಿರದಲ್ಲಿವೆ ಎಂದರ್ಥ. ಬಹುತೇಕ ಎಲ್ಲ ಗ್ರಾಮ ಪಂಚಾಯತ್‌ಗಳಲ್ಲಿ ಒಂದು ವಾಣಿಜ್ಯ ಬ್ಯಾಂಕಿನ ಒಂದು ಔಟ್‌ಲೆಟ್ ಇದೆ ಮತ್ತು ಇದು ಕಾರ್ಮಿಕರಿಗೆ ಬ್ಯಾಂಕ್ ವೆಚ್ಚವನ್ನು ನಿರ್ವಹಿಸಲು ಅನುಕೂಲವಾಗುತ್ತದೆ. ಹಣಕಾಸು ನಿರ್ವಹಣೆಯ ಸಾಧನವಾಗಿ ಮತ್ತು ಕೂಲಿ ವಿತರಣೆಯ ಸಾಧನವಾಗಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಗ್ರಾಮೀಣ ಬ್ಯಾಂಕಿಂಗ್ ಸೌಲಭ್ಯಗಳಲ್ಲಿ ಪ್ರಗತಿಯೊಂದಿಗೆ ಹೆಚ್ಚಿನ ಸಂದರ್ಭಗಳಲ್ಲಿ ಕೈಜೋಡಿಸಿರುವುದನ್ನು ಇದು ಸೂಚಿಸುತ್ತದೆ.

ಎರಡನೆಯದಾಗಿ, ದೂರದಲ್ಲಿರುವ ವಾಣಿಜ್ಯ ಬ್ಯಾಂಕುಗಳ ಉದಾಹರಣೆ, ಅಂದರೆ, ವಾಸಸ್ಥಳಕ್ಕೆ ಹತ್ತಿರದಲ್ಲಿ ಲಭ್ಯವಿಲ್ಲದ ಕಾರಣ 10 ಕಿ.ಮೀ. ದೂರದಲ್ಲಿರುವ ಸೌಲಭ್ಯವನ್ನು ಈಗಾಗಲೇ ಅನೇಕ ಕಾರ್ಮಿಕರು ತಮ್ಮ ಬ್ಯಾಂಕ್ ಖಾತೆಗಳನ್ನು ಹೊಬಳಿ ಅಥವಾ ಕ್ಷೇತ್ರ ಪ್ರಧಾನ ಕಚೇರಿಯಲ್ಲಿ ತೆರೆದಿದ್ದರು, ಅಲ್ಲಿ ಕೆಲವು ವರ್ಷಗಳ ಹಿಂದೆ ಈ ಸೌಲಭ್ಯ ಲಭ್ಯವಿರಬಹುದು. ಹೆಚ್ಚು ಮುಖ್ಯವಾಗಿ, ಅನೇಕ ಗ್ರಾಮೀಣ ಜನರು ಬಡವರು ಅಥವಾ ಶ್ರೀಮಂತರು ಸಮಾನವಾಗಿ ಬ್ಯಾಂಕಿಂಗ್ ಸೇವೆಗಳನ್ನು ಅಂತಹ ಶಾಖೆಗಳಲ್ಲಿ ಸಂಯೋಜಿಸದಿರಲು ಬಯಸುತ್ತಾರೆ, ಅಲ್ಲಿ ಅವರು ಸಾಲ ಖಾತೆಯನ್ನು ಹೊಂದಿರಬಹುದು. ತಮ್ಮ ಕೂಲಿ ಅಥವಾ ಇನ್ನಾವುದೇ ಪ್ರಯೋಜನಗಳಿಗೆ ಠೇವಣಿ ಇಡುವಾಗ ಮತ್ತು ಬಾಕಿ ಇರುವ ಮೊತ್ತವನ್ನು ಬಾಕಿ ಮೊತ್ತಕ್ಕೆ ಸರಿಹೊಂದಿಸಬೇಕೆಂದು ಅವರು ಬಯಸುವುದಿಲ್ಲ. ಸಾಲ ಮನ್ನಾ ಅಥವಾ ಬಡ್ಡಿಯನ್ನು ಪಾವತಿಸುವ ನಿಷೇಧದ ಆಗಾಗ್ಗೆ ನೀತಿಗಳು ತಮ್ಮ ಸಾಲದ ಖಾತೆಗಳ ಇತ್ಯರ್ಥವನ್ನು ವಿಳಂಬಗೊಳಿಸಲು ಜನರನ್ನು ಪ್ರೋತ್ಸಾಹಿಸುತ್ತವೆ. ಆದ್ದರಿಂದ, ಸರ್ಕಾರಿ ಯೋಜನೆಗಳ ಅನೇಕ ಫಲಾನುಭವಿಗಳು ಅಂತಹ ವಹಿವಾಟುಗಳಿಗೆ ಪ್ರತ್ಯೇಕ ಖಾತೆಯನ್ನು ನಿರ್ವಹಿಸಲು ಬಯಸುತ್ತಾರೆ, ಆದರೆ ಕೂಲಿಯ ಮನ್ನಣೆ ಸೇರಿದಂತೆ ಯಾವುದೇ ನೇರ ವರ್ಗಾವಣೆಯೊಂದಿಗೆ ಬೆರೆಯುವುದಿಲ್ಲ. ವಾಸ್ತವವಾಗಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವಿರುದ್ಧ ನಮ್ಮ ಪ್ರತಿಕ್ರಿಯೆದಾರರು ಹೊಂದಿರುವ ಹೆಚ್ಚಿನ ಟೀಕೆಗಳು ಈ ಭಯ ಅಥವಾ ಕೂಲಿಗೆ ಮನ್ನಣೆ ನೀಡುವ ಸಾಧ್ಯತೆಯ ಕಾರಣದಿಂದಾಗಿ, ಸಾಲದ ಮೊತ್ತದ ವಿರುದ್ಧ ಅಥವಾ ಬಡ್ಡಿಗಳ ಕಡೆಗೆ ಸರಿಹೊಂದಿಸಬೇಕಾಗಿದೆ. ಕೆಲವು ಬ್ಯಾಂಕಿನವರು ಸೂಚಿಸಿದಂತೆ, ವಿಳಂಬಿತ ಪಾವತಿಗಳ ವಿರುದ್ಧ ದೂರು ನೀಡಲು ಒಂದು ಕಾರಣವೆಂದರೆ, ಅನೇಕ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವಹಿವಾಟಿಗೆ ಯಾವ ಖಾತೆಯನ್ನು ಲಿಂಕ್ ಮಾಡಿರಬಹುದು ಎಂಬುದು ಸ್ಪಷ್ಟವಾಗಿಲ್ಲದಿರಬಹುದು.

ಬ್ಯಾಂಕ್ ಶಾಖೆಗೆ ಅಥವಾ ಎಟಿಎಂ ಸೌಲಭ್ಯಕ್ಕೆ ದೂರಕ್ಕೆ ಹೋದರೆ, ಠೇವಣಿ ಮಾಡಲಾಗಿದೆಯೆ ಎಂದು ಪರಿಶೀಲಿಸಲು ಅಥವಾ ಹಣವನ್ನು ಹಿಂಪಡೆಯಲು ಅಥವಾ ಇತರ ವಹಿವಾಟುಗಳಲ್ಲಿ ತೊಡಗಿಸಿಕೊಳ್ಳಲು ಕಾರ್ಮಿಕರು ಮಾಡಬಹುದಾದ ಸಂಭಾವ್ಯ ವೆಚ್ಚಗಳನ್ನು ಪರಿಗಣಿಸುವುದು ಸಹ ಮುಖ್ಯವಾಗಿರುತ್ತದೆ. ಈ ಸಮಯದಲ್ಲಿ, ಕೂಲಿ ಪಾವತಿಯ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಯೋಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಎಲ್ಲ ಪ್ರತಿಕ್ರಿಯಿಸಿದವರು ಒಂದು ಪ್ರಮುಖ ಖಾತೆಯಲ್ಲಿ ಸಂತೋಷಪಡುತ್ತಾರೆ ಎಂದು ಗಮನಸೆಳೆಯುವುದು ಸೂಕ್ತವಾಗಿರುತ್ತದೆ. ಅಂದರೆ, ಹಣವನ್ನು ನೇರವಾಗಿ ತಮ್ಮ ಖಾತೆಗೆ ವರ್ಗಾಯಿಸುವುದರೊಂದಿಗೆ ಅವರು ಪಂಚಾಯತ್ ಕಚೇರಿಯಲ್ಲಿ ಅಥವಾ ಹಿಂದಿನಂತೆ ಗುತ್ತಿಗೆದಾರರ ಮುಂದೆ ದೀರ್ಘಕಾಲ ಕಾಯಬೇಕಾಗಿಲ್ಲ ಅಥವಾ ತ್ವರಿತ ಪಾವತಿ ಮಾಡಲು ಖರ್ಚು ಮಾಡಬೇಕಾಗಿಲ್ಲ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ವಹಿವಾಟಿಗೆ ಸಂಬಂಧಿಸಿದಂತೆ ಬ್ಯಾಂಕ್ ಶಾಖೆ ಅಥವಾ ಎಟಿಎಂಗೆ ಭೇಟಿ ನೀಡಲು ಅಂದಾಜು ವೆಚ್ಚಗಳನ್ನು ವರದಿ ಮಾಡುವಾಗ, ಬಹುತೇಕ ಎಲ್ಲ ಪ್ರತಿಕ್ರಿಯೆದಾರರು ಈಗ ಪ್ರಸ್ತಾಪಿಸಲಾದ ವೆಚ್ಚಗಳು ಒಂದೆರಡು ವರ್ಷಗಳ ಹಿಂದೆ ಇದ್ದ ವೆಚ್ಚಕ್ಕಿಂತ ಹೇಗೆ ಕಡಿಮೆಯಾಗಿದೆ ಎಂಬುದನ್ನು ಗಮನಿಸಿರುತ್ತಾರೆ. ಈ ಹಿಂದೆ ಅವರು ಸ್ವತಃ ಕೂಲಿಗಾಗಿ ಕೆಲಸ ಮಾಡಿರಲಿ ಅಥವಾ ಇಲ್ಲದಿರಲಿ, ಅವರು ಕನಿಷ್ಠ ಹಿಂದಿನ ಕಾರ್ಮಿಕರ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತಿದ್ದರು.

**ಚಿತ್ರ 30: ಸೌಲಭ್ಯಕ್ಕೆ ಇರುವ ದೂರ ಮತ್ತು ಸರಾಸರಿ ಪ್ರಯಾಣ ವೆಚ್ಚಗಳು (ರೂ. / ಭೇಟಿ)**




ವಾಣಿಜ್ಯ ಬ್ಯಾಂಕ್ ಅಥವಾ ಎಟಿಎಂ ಸೌಲಭ್ಯವನ್ನು ಪಡೆಯಲು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕನು ಮಾಡುವ ಸರಾಸರಿ ಖರ್ಚಿನ ಕಲ್ಪನೆಯನ್ನು ಮೇಲಿನ ಚಿತ್ರವು ನಮಗೆ ಒದಗಿಸುತ್ತದೆ. ಕುತೂಹಲಕಾರಿಯಾಗಿ ಆಗಾಗ್ಗೆ ಒಬ್ಬ ಸಹಾಯಕನ ಪ್ರಯಾಣದ ಖರ್ಚಿನ ವೆಚ್ಚವನ್ನು ಅವರು ನಂಬುತ್ತಾರೆ ಮತ್ತು ಬ್ಯಾಂಕ್ ಅಥವಾ ಎಟಿಎಂ ಕಾರ್ಯಾಚರಣೆಗಳನ್ನು ನಡೆಸಲು ಸಹಾಯ ಮಾಡಲು ವ್ಯಕ್ತಿಯೊಂದಿಗೆ ತೆರಳುವ ವೆಚ್ಚವು ಒಳಗೊಂಡಿರುತ್ತದೆ, ಈ ಸನ್ನಿವೇಶದಲ್ಲಿಯೇ ಹೆಚ್ಚಿನ ಪ್ರತಿಕ್ರಿಯೆದಾರರು 'ವಾಣಿಜ್ಯ ಬ್ಯಾಂಕ್ ಸಿಬ್ಬಂದಿ ಮಾತ್ರ ಗ್ರಾಮೀಣ ಬ್ಯಾಂಕರ್‌ಗಳ ಬಗ್ಗೆ ಸ್ವಲ್ಪ ಹೆಚ್ಚು ತಾಳ್ಮೆ ಮತ್ತು ದಯೆ ತೋರಿದರೆ, ನಾವು ಬ್ಯಾಂಕಿಂಗ್‌ನ್ನು ಅವಲಂಬಿಸಿರುವುದರಿಂದ ಬಹಳಷ್ಟು ಮಧ್ಯವರ್ತಿಗಳಿಂದ ಉಳಿಸಬಹುದು. 'ನಮ್ಮ ಸಂದರ್ಶನಗಳ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ಅವಧಿಯಲ್ಲಿ ನಾವು ತಿಳಿದುಕೊಂಡಿರುವುದೇನೆಂದರೆ, ಅನೇಕ ಮಾಹಿತಿಯುಕ್ತ ವ್ಯಕ್ತಿಗಳು ನಾಮಮಾತ್ರ

ಅಥವಾ ಸಹಾಯ ಮಾಡಿರುವುದಕ್ಕೆ ಶುಲ್ಕವನ್ನು ಸುಮಾರು ರೂ. 50ರಿಂದ ರೂ. 100ನ್ನು ಪಡೆಯುತ್ತಿದ್ದು, ಇದು ಬ್ಯಾಂಕ್ ಅಥವಾ ಎಟಿಎಂನಲ್ಲಿ ಹಿಂಪಡೆಯುವ ಮೊತ್ತವನ್ನು ಅವಲಂಬಿಸಿರುತ್ತದೆ. ಗ್ರಾಹಕರ ಸ್ನೇಹಿಯಲ್ಲದ ಬ್ಯಾಂಕ್ ಸಿಬ್ಬಂದಿಗಳ ಕಾರಣದಿಂದಾಗಿ ಅವರು ಅಗತ್ಯವಿರುವ ಹೊಸದಾಗಿ ಬಂದಿರುವ ಈ 'ಮಧ್ಯವರ್ತಿಗಳ' ಬಗ್ಗೆ ಕೆಲವು ಗ್ರಾಮ ಪಂಚಾಯಿತಿಗಳಿಗೆ ತಿಳಿಸಿರುತ್ತಾರೆ. ಈ ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಭಾಗವಹಿಸುವವರು ನೀಡಿದ ಒಂದು ಸಲಹೆಯೆಂದರೆ, ಈ ಆರ್ಥಿಕ ಸೇರ್ಪಡೆಯ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳ ಗ್ರಾಮೀಣ ಮತ್ತು ಫಲಾನುಭವಿಗಳಿಂದ ವಹಿವಾಟನ್ನು ಸುಲಭಗೊಳಿಸಲು ಅನುಕೂಲವಾಗುವಂತೆ ಬ್ಯಾಂಕುಗಳು ಸಿಬ್ಬಂದಿಗಳನ್ನು ನೇಮಿಸ ಬೇಕಾಗಿರುತ್ತದೆ.

ಬ್ಯಾಂಕ್ ಮತ್ತು ವೇತನ ಸಾಲ ಪ್ರಕ್ರಿಯೆಗೆ ಸಂಬಂಧಿಸಿದ ಒಂದು ಕೊನೆಯ ಅವಲೋಕನವೆಂದರೆ ಸಮಯಕ್ಕೆ, ಸರಿಯಾಗಿ ಗ್ರಾಮೀಣ ಕಾರ್ಮಿಕ ಮಾರುಕಟ್ಟೆಯ ರಚನೆಗೆ ಈಗಾಗಲೇ ಉಲ್ಲೇಖಿಸಲಾಗಿರುತ್ತದೆ. ಹೆಚ್ಚಿನ ರೀತಿಯ ಕೆಲಸಗಳಿಗೆ, ಕೃಷಿ, ತೋಟಗಾರಿಕಾ, ಕುಶಲಕರ್ಮಿ ಅಥವಾ ಇತರರಿಗೆ, ಕಾರ್ಮಿಕರಿಗೆ ಅವರ ಸೇವೆಗಳು ಅಗತ್ಯವಿದ್ದಾಗ ಸಂಭವನೀಯ ದಿನಾಂಕಗಳ ಬಗ್ಗೆ ಮುಂಗಡ ಮಾಹಿತಿ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ನೀಡಿದ ಭರವಸೆಯನ್ನು ಈಡೇರಿಸುವ ಪ್ರೋತ್ಸಾಹವಾಗಿ, ಕಾರ್ಮಿಕರು ತಮ್ಮ ತಕ್ಷಣದ ಅಗತ್ಯವನ್ನು ಪೂರೈಸಲು ಒಂದು ಮೊತ್ತವನ್ನು ಮುಂಚಿತವಾಗಿ ನೀಡಲಾಗುತ್ತದೆ. ತಾತ್ವಿಕವಾಗಿ ಇದನ್ನು ಕೈಗೊಂಡ ನಂತರ ಕೂಲಿಯನ್ನು ಇತ್ಯರ್ಥಪಡಿಸಿದಾಗ ಕಡಿತಗೊಳಿಸಬೇಕು. ಹೆಚ್ಚಾಗಿ, ಈ ಮೊತ್ತವು ಕೆಲಸಗಾರ ಮತ್ತು ಉದ್ಯೋಗದಾತರ ನಡುವೆ ಪ್ರಸ್ತುತ ಖಾತೆ ಅಥವಾ ಚಾಲನೆಯಲ್ಲಿರುವ ಖಾತೆಯಲ್ಲಿ ಅನಿಶ್ಚತತೆಯಲ್ಲಿರುತ್ತದೆ ಒಂದು ಕಾರ್ಮಿಕನಿಗೆ ಪಾವತಿಸಲಾಗುತ್ತಿರುವುದು ವಹಿವಾಟಿನ ಸಮಯದಲ್ಲಿ ಕೂಲಿಯಾಗಿದೆಯೋ ಇಲ್ಲವೋ, ಅಂತಹ ವಹಿವಾಟುಗಳು ಅಗತ್ಯವಿದ್ದಾಗ ಕೆಲಸಕ್ಕೆ ತುಲನಾತ್ಮಕವಾಗಿ ನಂಬಲರ್ಹವಾದ ಕಾರ್ಮಿಕ ಪೂರೈಕೆಯನ್ನು ಖಚಿತಪಡಿಸುತ್ತದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಾಸ್ತವದಲ್ಲಿ ಕಂಡುಬಂದ ಸಂಗತಿಯೆಂದರೆ, ಕೂಲಿ ಬಿಲ್ಲುಗಳನ್ನು ಸಲ್ಲಿಸಿದಾಗ ಮತ್ತು ನಿಧಿ ವರ್ಗಾವಣೆ ಆದೇಶಗಳನ್ನು ಹೊರಡಿಸಿದಾಗ, ಕಾರ್ಮಿಕನಿಗೆ ಅವನ ಅಥವಾ ಅವಳ ಕೂಲಿ ಇತ್ಯಾದಿಗಳನ್ನು ಹದಿನೈದು ದಿನಕ್ಕೊಮ್ಮೆ ಪಾವತಿಸಬೇಕು. ಈಗಾಗಲೇ ಕೆಲಸ ಮಾಡಿದ ನಂತರ, ಕಾರ್ಮಿಕರು ಸ್ವಲ್ಪಮಟ್ಟಿಗೆ ಒತ್ತಡವನ್ನು ಹಾಕಲು ಪ್ರಾರಂಭಿಸುತ್ತಾರೆ ಹಾಗೂ ಕೂಲಿಯನ್ನು ಪಡೆಯಲು ಇದನ್ನು ಬ್ಯಾಂಕಿನಲ್ಲಿ ಠೇವಣಿ ಮಾಡಲಾಗಿದೆಯೆ ಅಥವಾ ಇಲ್ಲವೇ ಎಂದು ಕಂಡುಹಿಡಿಯಲು ಪ್ರೇರೇಪಿಸುತ್ತದೆ. ಮೊಬೈಲ್ ಫೋನ್ ಹೊಂದಿರುವವರು ಈಗ ಬಹುತೇಕ ಎಲ್ಲ ಕುಟುಂಬಗಳಲ್ಲಿ ಗ್ರಾಮೀಣ ಅಥವಾ ನಗರ, ಶ್ರೀಮಂತರು ಅಥವಾ ಬಡವರು ಸಮಾನವಾಗಿ ಜೀವನ ವಿಧಾನವಾಗಿ ಮಾರ್ಪಟ್ಟಿದ್ದರೂ ಸಹ, ಅವರೆಲ್ಲರೂ ತಮ್ಮ ಖಾತೆಗಳಲ್ಲಿ ಯಾವುದೇ ಡೆಬಿಟ್ ಅಥವಾ ಕ್ರೆಡಿಟ್ ದಾಖಲೆಗಾಗಿ ಎಸ್‌ಎಂಎಸ್ ಮೂಲಕ ಮಾಹಿತಿ ನೀಡುವ ಸೌಲಭ್ಯವನ್ನು ಹೊಂದಿರುವುದಿಲ್ಲ. ಕೆಳಗಿನ ಕೋಷ್ಟಕದಲ್ಲಿ ನೋಡಬಹುದಾದಂತೆ, ಕೇವಲ 1.35 ಪ್ರತಿಶತದಷ್ಟು ಜನರು ಕೂಲಿಗೆ ಮನ್ನಣೆ ನೀಡಲಾಗಿದೆಯೆ ಅಥವಾ ಇಲ್ಲವೇ ಎಂದು ಪರಿಶೀಲಿಸಲು ಬ್ಯಾಂಕ್ ಕಳುಹಿಸಿದ ಎಸ್‌ಎಂಎಸ್‌ನ್ನು ಅವಲಂಬಿಸಿದ್ದಾರೆ. ಪ್ರಾಸಂಗಿಕವಾಗಿ, ಇದು ಕೂಡ ಒಂದು ಪ್ರಮುಖ ಸೇವೆಯಾಗಿದ್ದು, ವಾಣಿಜ್ಯ ಬ್ಯಾಂಕುಗಳು ತಮ್ಮ ಆವರಣದಲ್ಲಿ ಅನಗತ್ಯ ಜನಸಂದಣಿಯನ್ನು ಮತ್ತು ವಹಿವಾಟಿನ ವಿಪರೀತ ಒತ್ತಡವನ್ನು ತಪ್ಪಿಸಲು ತಮ್ಮದೇ ಆದ ಕ್ರಮವನ್ನು ಮೇಲಿನಂತೆ ಪ್ರಾರಂಭಿಸಬಹುದು: ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗಳಿಗೆ ಸ್ವಯಂ–ಎಸ್‌ಎಂಎಸ್ ಮಾಹಿತಿಯನ್ನು ಸಕ್ರಿಯಗೊಳಿಸುವ ಮೂಲಕ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ

ಖಾತರಿ ಅಧಿನಿಯಮ ಯೋಜನೆಯ ಪ್ರಸ್ತುತ ಕಾರ್ಮಿಕರ ಮೊಬೈಲ್ ಸಂಖ್ಯೆಯನ್ನು ಈ ರೀತಿ ನೋಂದಾಯಿಸುವಲ್ಲಿ ಆಧಾರ್ ನೋಂದಣಿ ಇತ್ಯಾದಿಗಳನ್ನು ಲಿಂಕ್ ಮಾಡುವ ಅವರ ದೊಡ್ಡ ಕಾರ್ಯಕ್ರಮದ ಭಾಗವಾಗಿ ನಡೆಯುತ್ತಿದೆ.

**ಕೋಷ್ಟಕ 19: ಬ್ಯಾಂಕಿಗೆ ಇರುವ ದೂರ ಮತ್ತು ಕೂಲಿಯನ್ನು ಪರಿಶೀಲಿಸುವ ಆವರ್ತನ**

| ಬ್ಯಾಂಕಿಗೆ ಇರುವ ದೂರ | ಬ್ಯಾಂಕಿಗೆ ಜಮಾ ಮಾಡಿದ ಕೂಲಿಯನ್ನು ಪರಿಶೀಲಿಸುವ ಆವರ್ತನ | | | | | | | |
|---|---|---|---|---|---|---|---|---|
| | ಪರಿಶೀಲಿಸಿಲ್ಲ | ಒಮ್ಮೆ ಅಥವಾ ಎರಡು ಬಾರಿ | ಮೂರು ಬಾರಿ | ನಾಲ್ಕು ಬಾರಿ | ಐದು ಬಾರಿ | 6 ಅಥವಾ ಅದಕ್ಕಿಂತ ಹೆಚ್ಚು ಬಾರಿ | ಎಸ್‌ಎಂಎಸ್‌ನ್ನು ಅವಲಂಬಿಸಿದೆ | ಒಟ್ಟು |
| < 0.5 ಕಿ.ಮೀ | 0.87 | 47.58 | 23.18 | 2.60 | 9.17 | 12.98 | 3.63 | 578 |
| 0.51 ರಿಂದ 1.00 ಕಿ.ಮೀಗಳು | 0.50 | 44.90 | 7.36 | | 26.76 | 18.90 | 1.59 | 1196 |
| 1.01 ರಿಂದ 2.50 ಕಿ.ಮೀಗಳು | 2.36 | 69.48 | 0.51 | | 16.36 | 11.30 | | 593 |
| 2.51 ರಿಂದ 5.00 ಕಿ.ಮೀಗಳು | 1.09 | 58.50 | 0.59 | 2.67 | 21.94 | 14.23 | 0.99 | 1012 |
| 5.01 ರಿಂದ 10.00 ಕಿ.ಮೀಗಳು | 1.09 | 55.36 | 0.66 | | 21.44 | 21.23 | 0.22 | 457 |
| 10.01 ಕಿ.ಮೀಗಿಂತಲೂ ಹೆಚ್ಚು | 1.08 | 69.03 | 0.43 | | 22.80 | 5.16 | 1.51 | 465 |
| ಒಟ್ಟು % | 1.07 | 55.57 | 5.49 | 0.98 | 20.83 | 14.72 | 1.35 | 4301 |
| ಸಂಖ್ಯೆ | 46 | 2390 | 236 | 42 | 896 | 633 | 58 | |

ಈ ಸೌಲಭ್ಯಗಳ ಅನುಪಸ್ಥಿತಿಯಲ್ಲಿ, ಕಾರ್ಮಿಕರು ತಮ್ಮ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲು ಈ ಹಿಂದೆ ಹಲವಾರು ಪ್ರವಾಸಗಳನ್ನು ಕೈಗೊಳ್ಳಬೇಕಾಗಿತ್ತು. ಆವರ್ತನವು ಈಗ ತೀವ್ರವಾಗಿ ಕಡಿಮೆಯಾಗಿದೆ ಎಂಬ ಸರ್ವಾನುಮತದ ಅಭಿಪ್ರಾಯವಿದ್ದರೂ, ಬ್ಯಾಂಕ್‌ಗೆ ಮತ್ತು/ಅಥವಾ ಎಟಿಎಂ ಸ್ಥಳಗಳಿಗೆ ಪುನರಾವರ್ತಿತ ಭೇಟಿಯ ಸಂಭವವಿರುತ್ತದೆ. ಕೂಲಿ ಸಾಲದಲ್ಲಿ ಬ್ಯಾಂಕಿನೊಂದಿಗೆ ಪರಿಶೀಲಿಸುವ ಆವರ್ತನದ ದತ್ತಾಂಶವನ್ನು ವಿಶ್ಲೇಷಣೆಯನ್ನು ಮಾಡಬೇಕಾಗಿರುತ್ತದೆ ಇಲ್ಲದಿದ್ದರೆ. ಅದರಲ್ಲಿ ಬ್ಯಾಂಕಿನ ಒಂದು ಪಾತ್ರವು ಇರುವುದಿಲ್ಲ, ಅಲ್ಲಿ ನಾವು ಬಲವಾದ ನಕಾರಾತ್ಮಕ ಸಂಬಂಧವನ್ನು ಹೊಂದುತ್ತೇವೆ. ಅಂದರೆ, ಮುಂದೆ ನಿವಾಸದ ಸ್ಥಳದಿಂದ ಅಂತರವನ್ನು ಕಡಿಮೆ ಮಾಡಿ ಬ್ಯಾಂಕಿನೊಂದಿಗೆ ಒಂದು ಪರಿಶೀಲನೆ ಮಾಡಬೇಕಾಗಿರುತ್ತದೆ.

ಮೌಲ್ಯವು–4.604 ಆಗಿದ್ದು, ಇದು ಬ್ಯಾಂಕಿನ ಅಂತರದೊಂದಿಗೆ ಪರಿಶೀಲಿಸುವ ಆವರ್ತನದ ಬಲವಾದ ನಕಾರಾತ್ಮಕ ಸಂಬಂಧವನ್ನು ಸೂಚಿಸುತ್ತದೆ. ಅಂತರದ ಪ್ರತಿ ಹಂತವು ಹೆಚ್ಚಾಗುತ್ತಿದ್ದಂತೆ, ಬ್ಯಾಂಕಿನಲ್ಲಿ ಅವರು ಬ್ಯಾಲೆನ್ಸ್‌ನ್ನು ಪರಿಶೀಲಿಸುವ ಮುನ್ಸೂಚನೆಯು ಶೇಕಡಾ 4.604 ರಷ್ಟು ಕಡಿಮೆಯಾಗಿರುತ್ತದೆ.

ಈ ಕೋಷ್ಟಕ ಮತ್ತು ಸಾಂಖ್ಯಿಕ ಪರೀಕ್ಷೆಯು ನಮಗೆ ಮತ್ತು ಸ್ಪಷ್ಟವಾದ ಸತ್ಯದ ನೀತಿ ನಿರೂಪಣೆಯನ್ನು ಹೇಳುತ್ತದೆ: ಬ್ಯಾಂಕಿನಿಂದ ದೂರದಲ್ಲಿರುವವರಿಗೆ ಪಾವತಿ ವಿಳಂಬದ ಒತ್ತಡಗಳು ಹೆಚ್ಚು ಇರುತ್ತವೆ. ಯಾಕೆಂದರೆ ಹಣಕ್ಕೆ ಮನ್ನಣೆ ನೀಡಲಾಗಿದೆಯೆ ಅಥವಾ ಇಲ್ಲವೇ ಎಂಬುದು ಅವರಿಗೆ ತಿಳಿದಿರುವುದಿಲ್ಲ, ಅಥವಾ ಹಣವನ್ನು ಜಮಾ ಮಾಡಲಾಗಿದೆಯೆ ಅಥವಾ ಇಲ್ಲವೇ ಎಂದು ತಿಳಿಯಲು ಪುನರಾವರ್ತಿತ ಭೇಟಿಯನ್ನು ಮಾಡಲು ಅವರಿಗೆ ಸುಲಭವಾಗಿ ಸಾಧ್ಯವಿರುವುದಿಲ್ಲ.

ಹಣವನ್ನು ಜಮಾ ಆಗದ ವಿಷಯವನ್ನು ತಿಳಿದು ಅವರು, ನಿರಾಶೆಗೆ ಕಾರಣವಾಗುವ ಪ್ರತಿ ಭೇಟಿಯು ಕಾರ್ಮಿಕರನ್ನು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಗೆ ವಿರುದ್ಧವಾಗಿ ತಳ್ಳಬಹುದು, ಮೇಲಿನ ಚಿತ್ರವು ನಮಗೆ ತಿಳಿಸಿದಂತೆ, ಸರಾಸರಿ ಖರ್ಚಿನಲ್ಲಿ ವ್ಯಕ್ತಿಯು ಹೆಚ್ಚುವರಿ ರೂ. 65 ಇದೇ ರೀತಿಯ ಭೇಟಿಗಳಿಗಾಗಿ ಈಗಾಗಲೇ ಖರ್ಚು ಮಾಡಿರಬಹುದು.

ಮೌಲ್ಯಮಾಪನದ ಈ ಹಂತದಿಂದ, ತಿಳಿದುಕೊಳ್ಳಬೇಕಾದ ಅಂಶವೆಂದರೆ, ಬ್ಯಾಂಕಿನಲ್ಲಿ ಪರಿಶೀಲಿಸಲು ಮಾಡಿದ ಭೇಟಿಗಳ ಸಂಖ್ಯೆಯನ್ನು ವರದಿ ಮಾಡುತ್ತಿದ್ದ ಹೆಚ್ಚಿನ ವ್ಯಕ್ತಿಗಳು ಸಹ ಈ ಘಟನೆಗಳು ಈಗ ಗಣನೀಯವಾಗಿ ಕಡಿಮೆಯಾಗಿದೆ ಎಂದು ಒತ್ತಿಹೇಳುತ್ತಿದ್ದಾರೆ. ಏಕೆಂದರೆ ಅವರು ಈಗ ಮೊದಲಿಗಿಂತ ಬೇಗನೆ ಕೂಲಿಯನ್ನು ಪಡೆಯುತ್ತಿದ್ದಾರೆ.

ಮೌಲ್ಯಮಾಪನ ವರದಿಯು ಈಗ ಕೆಲವು ನಿರ್ದಿಷ್ಟ ಮೌಲ್ಯಮಾಪನ ಪ್ರಶ್ನೆಗಳಿಗೆ ಉತ್ತರಿಸುವತ್ತ ತನ್ನ ಗಮನವನ್ನು ಹರಿಸಬಹುದು. ಮೇಲಿನ ಕೆಲವು ನಿರ್ದಿಷ್ಟ ಮೌಲ್ಯಮಾಪನ ಉದ್ದೇಶಗಳನ್ನು ಪೂರೈಸುವಾಗ ಇವುಗಳಲ್ಲಿ ಕೆಲವು ಗಮನಹರಿಸಲಾಗಿರುತ್ತದೆ. ಆದರೆ, ಈ ಪ್ರಶ್ನೆಗಳಿಗೆ ನಿರ್ದಿಷ್ಟ ಮತ್ತು ಸಂಕ್ಷಿಪ್ತ ಪ್ರತಿಕ್ರಿಯೆಗಳನ್ನು ಈ ಕೆಳಗಿನಂತೆ ಪ್ರಸ್ತುತಪಡಿಸಲಾಗಿರುತ್ತದೆ.

**ಎ. ವಿಳಂಬವನ್ನು ತಪ್ಪಿಸಲು ಎಲ್ಲಾ ಸಿಬ್ಬಂದಿಗಳು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಸಾಫ್ಟ್‌ವೇರ್‌ನ್ನು ನಿರ್ವಹಿಸುತ್ತಾರೆಯೇ? ಇಲ್ಲದಿದ್ದರೆ, ಏಕೆ? ಹೌದು, ಎಂದಾದರೆ, ಇವರೆಲ್ಲರೂ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಎಲ್ಲಾ ಅಂಶಗಳ ಬಗ್ಗೆ ತರಬೇತಿಯನ್ನು ಪಡೆದಿದ್ದಾರೆಯೇ?**

ಹೆಚ್ಚಿನ ಗ್ರಾಮ ಪಂಚಾಯಿತಿಗಳು ಬಿಲ್ ಕಲೆಕ್ಟರ್ಸ್ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳಿಗಾಗಿ ಹೊರಗುತ್ತಿಗೆ ನೀಡಿದ್ದಾರೆ, ಡಾಟಾ ಎಂಟ್ರಿ ಆಪರೇಟರ್‌ಗಳಲ್ಲಿ ಅನೇಕರು ಕಂಪ್ಯೂಟರ್ ಅರಿತವರಾಗಿರುತ್ತಾರೆ. ಅನೇಕ ಪಂಚಾಯಿತಿಗಳಿಂದ ಸಂದರ್ಶನ ಮಾಡಿದ 256 ಬಿಲ್ ಕಲೆಕ್ಟರ್‌ಗಳಲ್ಲಿ, ಶೇಕಡಾ 45% ರಷ್ಟು ಹೊರಗುತ್ತಿಗೆ ಅಥವಾ ತಾತ್ಕಾಲಿಕ ಸಿಬ್ಬಂದಿಗಳಾಗಿರುತ್ತಾರೆ. ಬಿಲ್ ಕಲೆಕ್ಟರ್‌ಗಳು ಹೊಂದಿರುವ ದೊಡ್ಡ ದೂರು ಏನೆಂದರೆ, ಅವರ ಕೆಲಸವು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸದ ಸುಮಾರು 50 ರಿಂದ 75%ರಷ್ಟಿದ್ದರೂ, ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ವಿಷಯಗಳಲ್ಲಿ ಅವರಿಗೆ ಯಾವುದೇ ತರಬೇತಿಯನ್ನು ನೀಡಿರುವುದಿಲ್ಲ. ಪರಿಣಾಮವಾಗಿ, ಡಾಟಾ ಎಂಟ್ರಿ ಆಪರೇಟರ್‌ಗಳು ತುಂಬಾ ನಿರ್ಣಾಯಕವಾಗಿರುತ್ತಾರೆ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ಸಂಪೂರ್ಣ ಕೆಲಸದ ಪ್ರಕ್ರಿಯೆಯು ಅವರ ಹೆಗಲ ಮೇಲಿರುತ್ತದೆ ಎಂದು ಅವರು ಭಾವಿಸುತ್ತಾರೆ. ಧಾರವಾಡದ ಗ್ರಾಮ ಪಂಚಾಯಿತಿಗಳಲ್ಲಿ ಬಿಲ್ ಕಲೆಕ್ಟರ್ ಮಾಡಿದ ಹೇಳಿಕೆಯನ್ನು ಈ ಅಧ್ಯಯನದಲ್ಲಿ ಇತರರು ಪ್ರತಿಧ್ವನಿಸಿದ್ದಾರೆ:

ನಮ್ಮಲ್ಲಿ ಹಲವರು ಶಾಶ್ವತವಾದ ಉದ್ಯೋಗದಲ್ಲಿಲ್ಲ, ಮತ್ತು ನಮ್ಮ ಸಂಬಳ ನಿಯಮಿತವಾಗಿಲ್ಲ. ನೋಂದಾಯಿತ ಕಾರ್ಮಿಕರು ಕೈಗೊಂಡ ಕಾರ್ಯಗಳ ಭೌತಿಕ ಪರಿಶೀಲನೆಗೆ ಬಂದಾಗ, ನಾವು ಇಂಜಿನಿಯರ್‌ನನ್ನು ಸ್ಥಳಕ್ಕೆ ಕರೆದೊಯ್ಯಬೇಕು ಮತ್ತು ಅಳತೆಗಳನ್ನು ಕೈಗೊಳ್ಳಬೇಕು. ನಮಗೆ ಕೆಲಸದ ಬಗ್ಗೆ ಎಲ್ಲಾ ಜ್ಞಾನ ಮತ್ತು ಅಗತ್ಯವಾದ ಮಾಹಿತಿ ಇದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ದತ್ತಾಂಶವನ್ನು ಅಪ್‌ಲೋಡ್ ಮಾಡಲು ಬಂದಾಗ ಒಳ್ಳೆಯದಾಗಿ ಗಳಿಸುತ್ತಾರೆ. ಔಪಚಾರಿಕ ತರಬೇತಿಯನ್ನು ನಮಗೆ ನೀಡಿದರೆ ನಾವೂ ಗಳಿಸುತ್ತೇವೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ಸುಗಮವಾಗಿ ಕಾರ್ಯನಿರ್ವಹಿಸಲು ಬಿಲ್ ಕಲೆಕ್ಟರ್‌ಗಳ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳ ಪಾತ್ರವು ನಿರ್ಣಾಯಕವಾಗಿರುತ್ತದೆ. ಈ ಎರಡು ರೀತಿಯ ಕಾರ್ಯಕರ್ತರ ಕೆಲಸದ ಸ್ಥೈರ್ಯವನ್ನು ಮಾತ್ರ ಗಮನಿಸಿದರೆ ಈ ಮೊದಲು ಚರ್ಚಿಸಲಾದ ಕಾರ್ಯವಿಧಾನದ ವಿಳಂಬದ ವಿವರವಾದ ಲೆಕ್ಕವನ್ನು ಕಡಿಮೆ ಮಾಡಬಹುದಾಗಿರುತ್ತದೆ. ಅನುಮಾನಗಳಿಗೆ ಉತ್ತರಿಸುವಲ್ಲಿ, ದೂರುಗಳಿಗೆ ಸ್ಪಂದಿಸುವಲ್ಲಿ ಮತ್ತು ಅವರ ಸಮಸ್ಯೆಗಳೊಂದಿಗೆ ತಮ್ಮ ಬಳಿಗೆ ಹೋಗುವ ಕಾರ್ಮಿಕರಿಗೆ ಮಾರ್ಗದರ್ಶನ ನೀಡುವಲ್ಲಿ ಅವು ಒಟ್ಟುಗೂಡಿಸುವ ಅಂಶಗಳಾಗಿರುತ್ತವೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಜರಾಗಬೇಕಾದ ಕೆಲಸದ ಒತ್ತಡಗಳು ಮತ್ತು ಸಭೆಗಳ ಸರಣಿಯನ್ನು ಗಮನಿಸಿದರೆ, ಬಿಲ್ ಕಲೆಕ್ಟರ್‌ಗಳು ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳು ಕಾರ್ಮಿಕರು, ಪೂರೈಕೆದಾರರು ಮತ್ತು ಕುಶಲಕರ್ಮಿಗಳನ್ನು ನಿಯಮಿತವಾಗಿ ಭೇಟಿಯಾಗುತ್ತಾರೆ. ಅವರು ಎದುರಿಸುತ್ತಿರುವ ಸಮಸ್ಯೆಗಳಿದ್ದರೆ, ಅವುಗಳ ಬಗ್ಗೆ ಮೊದಲು ತಿಳಿದುಕೊಳ್ಳುವುದು ಅವರೇ, ಏಕೆಂದರೆ ಅವರನ್ನೇ ಮೊದಲು ಸಂಪರ್ಕಿಸಲಾಗುತ್ತದೆ. ಬಿಲ್ ಕಲೆಕ್ಟರ್‌ಗಳು ಸ್ವೀಕರಿಸಿದ ದೂರುಗಳ ಸ್ವರೂಪ ಕುರಿತ ಪ್ರಶ್ನೆಗೆ ಪ್ರತಿಕ್ರಿಯೆ ಮಾದರಿಗಳನ್ನು ಕೆಳಗಿನ ಕೋಷ್ಟಕದಲ್ಲಿ ಪ್ರಸ್ತುತಪಡಿಸಲಾಗಿರುತ್ತದೆ.

**ಕೋಷ್ಟಕ 20: ಪದೇ ಪದೇ ದೂರುಗಳು**

| ಜಿಲ್ಲೆ | ಯಾವುದೇ ದೂರುಗಳಿಲ್ಲ | ಪಾವತಿಗಳಲ್ಲಿ ವಿಳಂಬದ ಬಗ್ಗೆ | ವಸ್ತು ಪಾವತಿ ಬಗ್ಗೆ | ಇತರರಿಂದ ಮೋಸವಾಗುವ ಬಗ್ಗೆ | ಕಡಿಮೆ ವೇತನ ಪಾವತಿ | ಕೂಲಿಯು ತಪ್ಪಾದ ಖಾತೆಗೆ ಸೇರಿರುತ್ತದೆ | ಒಟ್ಟು |
|---|---|---|---|---|---|---|---|
| ಚಿಕ್ಕಬಳ್ಳಾಪುರ | 11.11 | 83.33 | | | 5.56 | | 18 |
| ದಕ್ಷಿಣ ಕನ್ನಡ | 5.13 | 69.23 | 12.82 | 7.69 | | 5.13 | 39 |
| ಧಾರವಾಡ | | 90.00 | | 10.00 | | | 10 |
| ಕಲಬುರಗಿ | 6.06 | 81.82 | 6.06 | 3.03 | 3.03 | | 33 |
| ಕೋಲಾರ | 25.00 | 70.00 | | 5.00 | | | 20 |
| ಮಂಡ್ಯ | 10.00 | 62.00 | 8.00 | 10.00 | 10.00 | | 50 |
| ಉತ್ತರ ಕನ್ನಡ | 11.76 | 76.47 | | 5.88 | 5.88 | | 17 |
| ಯಾದಗಿರಿ | 13.56 | 57.63 | 13.56 | 13.56 | | 1.69 | 59 |
| **ಒಟ್ಟು %** | **10.57** | **69.11** | **7.72** | **8.13** | **3.25** | **1.22** | **246** |
| **ಸಂಖ್ಯೆ** | **26** | **170** | **19** | **20** | **8** | **3** | |

ಕಾರ್ಯದರ್ಶಿ ಅಥವಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಯಾವಾಗಲೂ ಕಂಪ್ಯೂಟರ್‌ಗಳನ್ನು ನಿರ್ವಹಿಸುವಲ್ಲಿ ಅಥವಾ ಡಿಜಿಟಲ್ ಸಾಕ್ಷರರತೆಯಲ್ಲಿ ಸಮರ್ಥರಾಗಿರುವುದಿಲ್ಲ. ಕುತೂಹಲಕಾರಿಯಾಗಿ, ಅವರೆಲ್ಲರೂ ಆಂಡ್ರಾಯ್ಡ್ ಅಥವಾ ಸ್ಮಾರ್ಟ್ ಫೋನ್ ತಿಳಿದುಕೊಂಡಿರುತ್ತಾರೆ, ಆದರೆ ಕಂಪ್ಯೂಟರಗಳನ್ನು ಮತ್ತು ಸಂಬಂಧಿತ ಸಾಫ್ಟ್‌ವೇರ್‌ನ್ನು ನಿರ್ವಹಿಸುವಲ್ಲಿ ಅಲ್ಲ. ಡಾಟಾ ಎಂಟ್ರಿ ಆಪರೇಟರ್‌ಗಳು, ಅವರ ಹೆಚ್ಚಿನ ಸೇವಾವಧಿಯಲ್ಲಿ ಡಿಜಿಟಲ್ ಸ್ನೇಹಿಯಾಗಿರುತ್ತಾರೆ. ಅಂತೆಯೇ, ಅವರು ವಾಸಿಸುವ ಪ್ರದೇಶದ ('ಸ್ಥಳೀಯ ಸ್ಥಳ') ಹೆಚ್ಚು ಹತ್ತಿರದಲ್ಲಿ ನೀಡುವುದು ಅವರಿಗೆ ಒಂದು ಕೊಡುಗೆಯಾಗಿರುತ್ತದೆ,

ಏಕೆಂದರೆ ಅನೇಕ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ದತ್ತಾಂಶ ನಮೂದು ಕಾರ್ಯವನ್ನು ನಿರ್ವಹಿಸಲು ಡಾಟಾ ಎಂಟ್ರಿ ಆಪರೇಟರ್‌ಗಳು ಹೇಗೆ ಲಭ್ಯವಿರುವುದಿಲ್ಲ ಎಂಬ ಬಗ್ಗೆ ದೂರು ನೀಡುತ್ತಿದ್ದರು.

ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ವಿವಿಧ ರೀತಿಯ ತರಬೇತಿಗಳನ್ನು ವಿಶೇಷವಾಗಿ, ಮಾಹಿತಿ ನಿರ್ವಹಣಾ ವ್ಯವಸ್ಥೆಗೆ ಸಂಬಂಧಿತ ಸಮಸ್ಯೆಗಳು, ನೇರ ಲಾಭ ವರ್ಗಾವಣೆ ಯೋಜನೆಗಳು ಮತ್ತು ಡಿಜಿಟಲ್ ಪಾವತಿ ವ್ಯವಸ್ಥೆಗಳ ಬಗ್ಗೆ ವಿಶೇಷವಾಗಿ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿಗಳ ಮತ್ತು ತಾಲ್ಲೂಕು ಪಂಚಾಯಿತಿಗಳ ಮಟ್ಟದಲ್ಲಿ ಇತರ ಅಧಿಕಾರಿಗಳಿಗೆ ರಾಜ್ಯ ತರಬೇತಿ ಸಂಸ್ಥೆಗಳ ಮೂಲಕವೂ ತರಬೇತಿಗಳನ್ನು ನೀಡಲಾಗಿರುತ್ತದೆ, ಹೆಚ್ಚಿನ ತರಬೇತಿ ಕಾರ್ಯಕ್ರಮಗಳು ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ನಡೆದಿರುತ್ತವೆ. ಮಾಜಿ ತರಬೇತುದಾರರು ಸೂಚಿಸಿದಂತೆ ನೀಡಿರುವ ತರಬೇತಿಗಳು ಸಾಕಾಗುವುದಿಲ್ಲ. 'ಸಾಮಾನ್ಯವಾಗಿ ನಾವು ಏನಾಗಬೇಕೆಂಬುದರ ಬಗ್ಗೆ ತರಬೇತಿ ನೀಡುತ್ತೇವೆ, ಆದರೆ ತಳಮಟ್ಟದಲ್ಲಿ ಅಗತ್ಯವಿರುವುದಕ್ಕೆ ಅಪರೂಪವಾಗಿ ಪ್ರತಿಕ್ರಿಯಿಸುತ್ತೇವೆ.' ಧಾರವಾಡದ ಒಬ್ಬ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಸಂಯೋಜಕ, ಯಾವುದೇ ಪ್ರಮಾಣದ ತಾಂತ್ರಿಕ ಅಥವಾ ಆಡಳಿತಾತ್ಮಕ ತರಬೇತಿಯು ಎಲ್ಲಿಯವರೆಗೆ ಹೆಚ್ಚು ಪ್ರಸ್ತುತತೆಯಿಲ್ಲ ಎಂದು ಗಮನಸೆಳೆದಿರುತ್ತಾರೆ ಈ ತರಬೇತಿಗಳಿಗೆ ಮೌಲ್ಯಮಾಪನ ಅಥವಾ ಪರೀಕ್ಷೆಗಳಿಲ್ಲ. ಕಲಿತ ವಿಷಯಗಳ ಬಗ್ಗೆ ಅಂತಹ ಹೊಣೆಗಾರಿಕೆಯಿಲ್ಲದೆ, ಕೆಳ ಹಂತದ ಕಾರ್ಯಕರ್ತರು ಈ ತರಬೇತಿಯನ್ನು ಗಂಭೀರವಾಗಿ ಅಪರೂಪಕ್ಕೆ ಪರಿಗಣಿಸುತ್ತಾರೆ, ಎಂದು ಅವರು ಗಮನಸೆಳೆದಿರುತ್ತಾರೆ.

ಸ್ವೀಕರಿಸಿದ ದೂರುಗಳ ವ್ಯವಸ್ಥಿತ ನಿರ್ವಹಣೆಯು ಒಂದು ಪ್ರಮುಖ ಮತ್ತು ತುರ್ತು ಅವಶ್ಯಕತೆಯಾಗಿರುತ್ತದೆ. ಫಲಾನುಭವಿಗಳು, ಅವರು ತಾಂತ್ರಿಕ ಅಥವಾ ಆಡಳಿತಾತ್ಮಕ ಸಮಸ್ಯೆಯನ್ನು ಎದುರಿಸಿದಾಗ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಿಂತ ಹೆಚ್ಚು ಲಭ್ಯವಿರುವ ಡಾಟಾ ಎಂಟ್ರಿ ಆಪರೇಟರ್ ಅಥವಾ ಬಿಲ್ ಕಲೆಕ್ಟರ್‌ಗಳಿಗೆ ಏಕರೂಪವಾಗಿ ಆ ಸಮಸ್ಯೆಯನ್ನು ತೆಗೆದುಕೊಂಡು ಹೋಗುತ್ತಾರೆ. ಚುನಾಯಿತ ಪ್ರತಿನಿಧಿಗಳು ಸಹ ಅವರಿಗೆ ಸಮಸ್ಯೆಗಳ ಬಗ್ಗೆ ತಿಳಿಸಿದ್ದರೆ, ಈ ಕಾರ್ಯಕರ್ತರ ಬಳಿ ವಿಷಯವನ್ನು ತೆಗೆದುಕೊಂಡು ಹೋಗುತ್ತಾರೆ.. ಸಮಸ್ಯೆಗಳು ವ್ಯಾಪಕ ಶ್ರೇಣಿಯ ಪ್ರಕಾರಗಳಾಗಿರಬಹುದು: ವೇತನ ಪಾವತಿ ವಿಳಂಬ; ಹಾಜರಾತಿ ಮತ್ತು/ಅಥವಾ ವೇತನವನ್ನು ತಿರಸ್ಕರಿಸಲಾಗಿದೆ ಎಂದು ಹೇಳಲಾದ ಬಗ್ಗೆ ಅಸಮಾಧಾನ; ಮಾಪನ ಪುಸ್ತಕದಿಂದ ದಾಖಲೆಗಳನ್ನು ಸಲ್ಲಿಸಲು ಮತ್ತು ಅನುಮೋದಿಸಲು ವಿಳಂಬವಾಗಿರುವುದು (ಸಾಮಾನ್ಯವಾಗಿ ಇದನ್ನು ಎಂಬಿ ರೆಕಾರ್ಡ್ಸ್ ಎಂದು ಕರೆಯಲಾಗುತ್ತದೆ); ಹಾಜರಾತಿ ಪಟ್ಟಿಗಳಲ್ಲಿ ತಪ್ಪುಗಳು; ಬ್ಯಾಂಕ್ ಖಾತೆ ಸಂಖ್ಯೆಗಳು ಮತ್ತು ಇತರ ವಿವರಗಳ ತಪ್ಪು ನಮೂದನೆಗಳು; ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬಿಡುಗಡೆಯಾದ ಹಣದ ಗೊಂದಲ ಅಂದರೆ ಮೊತ್ತವನ್ನು ಠೇವಣಿ ಮಾಡಲಾಗಿದೆಯೆಂದು ತಿಳಿಸದೇ ಇರುವುದು. ಡಾಟಾ ಎಂಟ್ರಿ ಆಪರೇಟರ್‌ಗಳು ಮತ್ತು ಬಿಲ್ ಕಲೆಕ್ಟರ್‌ಗಳು ದೂರು ನೀಡುವಂತೆ ಆಗಾಗ್ಗೆ ಎದುರಾಗುವ ಮತ್ತೊಂದು ಸಮಸ್ಯೆಯೆಂದರೆ ಚುನಾಯಿತ ಪ್ರತಿನಿಧಿಗಳು ಬ್ಯಾಂಕ್ ನಿಧಿ ವರ್ಗಾವಣೆ ಆದೇಶವನ್ನು ಭಾಗಶಃ ತೆರವುಗೊಳಿಸಿದಾಗ ಕೆಲವು ಕಾರ್ಮಿಕರಿಗೆ ಸಂಬಳ ನೀಡಲಾಗುತ್ತದೆ ಮತ್ತು ಇತರರು ನೀಡಲಾಗುವುದಿಲ್ಲ. ತೀಕ್ಷ್ಣವಾದ ವಾದಗಳಿಗೆ ಮತ್ತು ದುರುಪಯೋಗದ ವಿನಿಮಯಕ್ಕೆ ನಾವು ಸಾಕ್ಷಿಯಾಗುವುದು ಅಸಾಮಾನ್ಯವೇನಲ್ಲ, ಏಕೆಂದರೆ ಕೊನೆಯದಾಗಿ ಪ್ರಸ್ತಾಪಿಸಿದ ಉದ್ದೇಶವು ರಾಜಕೀಯ ಅಥವಾ ಹೆಚ್ಚುವರಿ ಆಡಳಿತಾತ್ಮಕ ಉದ್ದೇಶಗಳ ಪರಿಣಾಮವಾಗಿ ವ್ಯಾಖ್ಯಾನಿಸಲ್ಪಡುತ್ತದೆ.

ಈ ಸಂದರ್ಭದಲ್ಲಿ ಅಂತಹ ಎಲ್ಲ ವಿಷಯಗಳಲ್ಲಿ, ಕಾರ್ಯಕರ್ತರ ಗಮನಕ್ಕೆ ತರಲಾದ ಕುಂದುಕೊರತೆಗಳ ವ್ಯವಸ್ಥಿತ ದಾಖಲೆಗಳು ಇರುವುದಿಲ್ಲ ಅಥವಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅವುಗಳನ್ನು ಉನ್ನತ ಪ್ರಾಧಿಕಾರದ ಗಮನಕ್ಕೆ ತರುತ್ತಾರೆ. ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ, ತಾಲ್ಲೂಕು (ಕ್ಷೇತ್ರ) ಅಥವಾ ಜಿಲ್ಲಾ ಮಟ್ಟದಲ್ಲಿ ಗೊತ್ತುಪಡಿಸಿದ ಅಧಿಕಾರಿಗಳೊಂದಿಗೆ ವ್ಯವಸ್ಥಿತ ಅನುಸರಣೆಯನ್ನು ಮಾಡುವುದು ಅವಶ್ಯಕವಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಗೆ ಸಂಬಂಧಿಸಿದಂತೆ, ಕ್ಷೇತ್ರ ಮಟ್ಟದಲ್ಲಿ ಗೊತ್ತುಪಡಿಸಿದ ಮಾಹಿತಿ ನಿರ್ವಹಣಾ ಪದ್ಧತಿಯ ಸಂಯೋಜಕರಿದ್ದಾರೆ, ಅವರು ಅಲ್ಲಿ ಸಿಗದಿದ್ದರೆ ಜಿಲ್ಲಾ ಮಟ್ಟದಲ್ಲಿ ಅವರನ್ನು ಸಂಪರ್ಕಿಸಬಹುದು. ಬಿಲ್ ಸಂಗ್ರಹಕಾರರು ಮತ್ತು ವಿಶೇಷವಾಗಿ ಡಾಟಾ ಎಂಟ್ರಿ ಆಪರೇಟರ್‌ಗಳು ಕಂಪ್ಯೂಟರ್ ಸಿಸ್ಟಮ್ ಗೆ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಎರಡನ್ನೂ ನವೀಕರಿಸುವ ಅಗತ್ಯವಿದೆ ಎಂದು ದೂರಿರುತ್ತಾರೆ. ಇಂಟರ್ನೆಟ್ ವೇಗವು ಹತಾಶೆಯ ಸಾಮಾನ್ಯ ಮೂಲವಾಗಿದೆ, ಏಕೆಂದರೆ ಆಗಾಗ್ಗೆ ಅವರು ದತ್ತಾಂಶವನ್ನು ಅಳವಡಿಸಲು ಸಾಧ್ಯವಾಗುವುದಿಲ್ಲ, ಅಥವಾ ನಿಧಿಗಳ ಹಕ್ಕುಗಳ ಸಮನ್ವಯವನ್ನು ಉಂಟುಮಾಡಲು ಆಗುವುದಿಲ್ಲ.

ನಮ್ಮ ಕಡೆಯಿಂದ, ಕಲಬುರಗಿ ಪಟ್ಟಣದಿಂದ ಸ್ವಲ್ಪ ದೂರದಲ್ಲಿರುವ ಪಂಚಾಯತ್‌ನಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಲ್ಲಿ ಒಬ್ಬರು ನೀಡಿದ ದೂರಿನ ಹೆಚ್ಚಿನ ಸ್ಪಷ್ಟೀಕರಣ ಅಥವಾ ದೃಢೀಕರಣವನ್ನು ಪಡೆಯಲು ನಮಗೆ ಸಾಧ್ಯವಾಗಲಿಲ್ಲ. ಈ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಪ್ರಕಾರ, ಅವರು ಕಾರ್ಯನಿರ್ವಹಿಸುವ ಪ್ರದೇಶದಲ್ಲಿನ ನಿಧಾನಗತಿಯ ಇಂಟರ್ನೆಟ್ ವೇಗವು ಯಾವುದೇ ಹಣದ ವ್ಯಯಕ್ಕೆ ಕಾರಣವಾಗುತ್ತದೆ ಇದಕ್ಕಾಗಿ ಕೇಂದ್ರ ಸರ್ಕಾರದ ಇಲಾಖೆ ಬಿಡುಗಡೆಗಳು ಖಾಲಿಯಾಗುವುದರಿಂದ ಹೆಚ್ಚಿನವರು ವ್ಯವಸ್ಥೆಯನ್ನು ತುಲನಾತ್ಮಕವಾಗಿ ಉತ್ತಮ ವೇಗದಲ್ಲಿ ನಿರ್ವಹಿಸುತ್ತಾರೆ ಮತ್ತು ಇಂಟರ್ನೆಟ್ ಕೂಡ ಸಾಕಷ್ಟು ವೇಗವಾಗಿರುತ್ತದೆ. ಲಾಗಿನ್ ಮಾಡಲು ಮತ್ತು ಸರಿಯಾದ ಸಂಪರ್ಕವನ್ನು ಮಾಡಲು ನಾವು ಯಶಸ್ವಿಯಾಗುವ ಹೊತ್ತಿಗೆ, ಬಿಡುಗಡೆಯಾದ ಎಲ್ಲಾ ಹಣವು ಖಾಲಿಯಾಗುತ್ತದೆ! 'ಸಿಸ್ಟಮ್ ಹೇಗೆ ಕಾರ್ಯನಿರ್ವಹಿಸುತ್ತದೆ ಎಂದು ನಾವು ನಂಬುವುದಿಲ್ಲ, ಆದರೆ ಇದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ಬರುವಂತೆ ಆಗುತ್ತಿದೆ, ಇದು ಉತ್ತಮವಾದ ತುರ್ತು ಅಗತ್ಯವನ್ನು ಸೂಚಿಸುತ್ತದೆ ನಿಧಿಯ ನಿರ್ವಹಣೆಯನ್ನು ಹೇಗೆ ನಡೆಸಲಾಗುತ್ತದೆ ಎಂದರೆ ಕೂಲಿ ಪಾವತಿಯ ವಿತರಣೆಯನ್ನು ತಳಮಟ್ಟದ ಅಧಿಕಾರಿಗಳು ಮಾಡುತ್ತಾರೆ. ಯಾಕೆಂದರೆ, ವಿಳಂಬದ ಬಗ್ಗೆ ಆಗಾಗ್ಗೆ ನಿರಾಶೆಗೊಂಡ ಕಾರ್ಮಿಕರಿಗೆ ಉತ್ತರಿಸಬೇಕಾದವರು ಅವರೇ ಆಗಿರುತ್ತಾರೆ. ತಪ್ಪಾದ ಮಾಹಿತಿಯು ಜನರನ್ನು ಹೊಸ ಪದ್ಧತಿಯ ಹಣದ ವಿತರಣೆಯ ಬಗ್ಗೆ ಅಸಹಿಷ್ಣುತೆಯನ್ನುಂಟುಮಾಡುತ್ತದೆ, ಅದೂ ಸಹ ಒಂದು ಸಂದರ್ಭದಲ್ಲಿ ಅದು ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿದೆ. ಗುತ್ತಿಗೆದಾರರು, ಕೆಲವು ಪಂಚಾಯತ್ ಮಟ್ಟದ ಕಾರ್ಯಕರ್ತರು ಮತ್ತು ವಸ್ತು ಪೂರೈಕೆದಾರರಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಬಗ್ಗೆ ಸಾಕಷ್ಟು ವಿರೋಧವಿದೆ ಎಂಬುದು ಅಚ್ಚರಿಯೇನಲ್ಲ.

**ಕೋಷ್ಟಕ 21: ಮಾದರಿ ಜಿಲ್ಲೆಗಳಲ್ಲಿ ಕಚೇರಿಯಲ್ಲಿ ಪ್ರಮುಖ ಹುದ್ದೆಗಳು (2018–19)**

| ಜಿಲ್ಲೆ | ಕ್ಷೇತ್ರಗಳ ಸಂಖ್ಯೆ | ಭರ್ತಿಯಾದ ಜಿಲ್ಲಾ ಮಟ್ಟದ ಸಿಬ್ಬಂದಿ ಸಂಖ್ಯೆ | ಭರ್ತಿಯಾದ ಕ್ಷೇತ್ರ ಮಟ್ಟದ ಸಿಬ್ಬಂದಿ ಸಂಖ್ಯೆ | ಭರ್ತಿಯಾದ ಪಂಚಾಯಿತಿ ಮಟ್ಟದ ಸಿಬ್ಬಂದಿ ಸಂಖ್ಯೆ | ಮಾಹಿತಿ ನಿರ್ವಹಣಾ ವ್ಯವಸ್ಥೆಯ ಸಂಯೋಜಕ | ಕಂಪ್ಯೂಟರ್ ಸಹಾಯಕ | ಡೇಟಾ ಎಂಟ್ರಿ ಆಪರೇಟರ್ |
|---|---|---|---|---|---|---|---|
| ಚಿಕ್ಕಬಳ್ಳಾಪುರ | 6 | 56 | 160 | 555 | 1 | 0 | 1 |
| ದಕ್ಷಿಣ ಕನ್ನಡ | 5 | 56 | 144 | 659 | 1 | 1 | 2 |
| ಧಾರವಾಡ | 5 | 121 | 270 | 1235 | 0 | 0 | 0 |
| ಕಲಬುರಗಿ | 7 | 87 | 214 | 1032 | 1 | 0 | 1 |
| ಕೋಲಾರ | 5 | 86 | 141 | 654 | 0 | 0 | 0 |
| ಮಂಡ್ಯ | 7 | 88 | 255 | 847 | 1 | 0 | 3 |
| ಉತ್ತರ ಕನ್ನಡ | 11 | 53 | 355 | 2536 | 0 | 0 | 0 |
| ಯಾದಗಿರಿ | 3 | 52 | 134 | 505 | 2 | 0 | 0 |
| **ಕರ್ನಾಟಕ ರಾಜ್ಯ** | **176** | **2760** | **6421** | **33946** | **28** | **2** | **21** |

ಮೂಲ:http://mnregaweb4.nic.in/netnrega/Staff_reg_detail_report.aspx?page=S&lflag=eng&state_name=KARNATAKA&state_code=15&fin_year=2013-2014&source=national&Digest=1Mnm9YPi43Hvn80NVtAftQ

ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲು ಮೀಸಲಾಗಿರುವ ಜಿಲ್ಲಾ ಮತ್ತು ಕ್ಷೇತ್ರ ಮಟ್ಟಗಳಲ್ಲಿ ತಜ್ಞರು ಇದ್ದರೂ, ದೂರುಗಳನ್ನು ಅವರ ಗಮನಕ್ಕೆ ತರದಿದ್ದರೆ, ಸಮಸ್ಯೆಗಳು ಸ್ಥಳೀಯ ಮಟ್ಟದಲ್ಲಿಯೇ ಉಳಿಯುತ್ತವೆ. ಚಿಕ್ಕಬಳ್ಳಾಪುರ ಜಿಲ್ಲೆಯ ಮಾಹಿತಿ ನಿರ್ವಹಣಾ ಪದ್ಧತಿಯ ಸಂಯೋಜಕರೊಬ್ಬರು, 'ಮಾಹಿತಿ ನಿರ್ವಹಣಾ ಪದ್ಧತಿಯು ಎರಡೂ ಮಾರ್ಗಗಳಲ್ಲಿ ಒಂದು ಮಾರ್ಗದಲ್ಲಿರಬೇಕು. ಗ್ರಾಮ ಮತ್ತು ಗ್ರಾಮ ಪಂಚಾಯಿತಿ ಮಟ್ಟದಿಂದ ಪ್ರತಿಕ್ರಿಯೆ ಪಡೆಯಲು ನಾವು ಆಡಳಿತದ ಉನ್ನತ ಮಟ್ಟದಲ್ಲಿದ್ದೇವೆ.'

ನಾವು ಈ ವರದಿಯನ್ನು ಅಂತಿಮಗೊಳಿಸುತ್ತಿದ್ದಂತೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನಕ್ಕೆ ಮಾರ್ಗದರ್ಶನ ನೀಡುವ ಕೆಲವು ಪ್ರಮುಖ ತಾಂತ್ರಿಕ ಸ್ಥಾನಗಳನ್ನು ವಿಶೇಷವಾಗಿ ಮಾದರಿ ಜಿಲ್ಲೆಗಳು ಮತ್ತು ರಾಜ್ಯ ಮಟ್ಟದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ–ಸಿಬ್ಬಂದಿಗಳನ್ನು ಮೇಲಿನ ಕೋಷ್ಟಕ 21 ರಲ್ಲಿ ಪ್ರಸ್ತುತಪಡಿಸಲಾಗಿರುತ್ತದೆ.

ಕರ್ನಾಟಕದ ಕೆಲವು ಜಿಲ್ಲೆಗಳು ಅಂದರೆ ಬೆಂಗಳೂರು (ನಗರ), ಧಾರವಾಡ, ಕೋಲಾರ, ರಾಮನಗರ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಪೂರ್ಣ ಅವಧಿಯ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಸಂಯೋಜಕರಾಗಿರಲಿಲ್ಲ: ಅವುಗಳಲ್ಲಿ ಎರಡು ಜಿಲ್ಲೆಗಳು, ಧಾರವಾಡ ಮತ್ತು ಉತ್ತರ ಕನ್ನಡ ಈ ಅಧ್ಯಯನದ ಮಾದರಿ ಜಿಲ್ಲೆಗಳು ಆಗಿರುತ್ತವೆ. ಸ್ಥಳದಲ್ಲಿರುವ

ಎರಡು ಹುದ್ದೆಗಳ ಬಗ್ಗೆ ವಿಚಾರಿಸಿದಾಗ, ಕ್ಷೇತ್ರ ಮಟ್ಟದಿಂದ ಒಬ್ಬರು ಅಥವಾ ಇನ್ನೊಬ್ಬ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಆಪರೇಟರ್‌ನ್ನು ನಿಯೋಜಿಸಲಾಗುವುದು ಅಥವಾ ಹೆಚ್ಚುವರಿ ಶುಲ್ಕವನ್ನು ನೀಡಲಾಗುವುದು ಎಂದು ನಮಗೆ ತಿಳಿಸಲಾಗಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ದೋಷರಹಿತ ಕಾರ್ಯನಿರ್ವಹಣೆಗೆ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಸಂಯೋಜಕರ ಕಚೇರಿಯು ತುಂಬಾ ಮುಖ್ಯವಾದ ಕಚೇರಿಯಾಗಿದ್ದು, ಅದಕ್ಕೆ ಪೂರ್ಣ ಅವಧಿಯ ಅಧಿಕಾರಿಯ ಅಗತ್ಯವಿರುತ್ತದೆ. ವಾಸ್ತವವಾಗಿ ಕೆಲಸದ ಪ್ರಮಾಣವನ್ನು ಅವಲಂಬಿಸಿ, ಮಾಹಿತಿ ನಿರ್ವಹಣಾ ವ್ಯವಸ್ಥೆಯ ಸಂಯೋಜಕರ ಸಂಖ್ಯೆಯನ್ನು ತುಂಬಬೇಕು, ಎಂದು ಭಾವಿಸಲಾಗಿರುತ್ತದೆ. ಉದಾಹರಣೆಗೆ ಬೀದರ್ ಜಿಲ್ಲೆಯಲ್ಲಿ 3 ಮಾಹಿತಿ ನಿರ್ವಹಣಾ ವ್ಯವಸ್ಥೆಯ ಸಂಯೋಜಕರು ಇದ್ದರೆ, ಮಂಡ್ಯ ಅಥವಾ ಬೆಂಗಳೂರು ಗ್ರಾಮೀಣ ಪ್ರದೇಶದಂತಹ ದೊಡ್ಡ ಜಿಲ್ಲೆಯು ತಲಾ ಒಂದು ಸಂಯೋಜಕರನ್ನು ಹೊಂದಿರುತ್ತದೆ. ಬೀದರ್ ಜಿಲ್ಲೆಯು 5 ಕ್ಷೇತ್ರಗಳು ಮತ್ತು 186 ಗ್ರಾಮ ಪಂಚಾಯಿತಿಗಳನ್ನು ಹೊಂದಿರುತ್ತದೆ; ಆದರೆ ಮಂಡ್ಯದಲ್ಲಿ 7 ಕ್ಷೇತ್ರಗಳು ಮತ್ತು 234 ಗ್ರಾಮ ಪಂಚಾಯಿತಿಗಳಿವೆ. ಜಿಲ್ಲೆಗಳೊಳಗೆ ಕ್ಷೇತ್ರಗಳಲ್ಲಿ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಆಪರೇಟರ್‌ಗಳ ನಿಯೋಜನೆಯು ಸ್ವಲ್ಪಮಟ್ಟಿಗೆ ಅಸಮರ್ಪಕವಾಗಿರುತ್ತದೆ. ಮಂಡ್ಯದ ನಾಗಮಂಗಲವು (27 ಗ್ರಾಮ ಪಂಚಾಯಿತಿಗಳೊಂದಿಗೆ) 3 ಮಾಹಿತಿ ನಿರ್ವಹಣಾ ವ್ಯವಸ್ಥೆಯ ಆಪರೇಟರ್‌ಗಳನ್ನು ಹೊಂದಿದ್ದರೆ, ಜಿಲ್ಲೆಯ ಇತರ ಅನೇಕ ಕ್ಷೇತ್ರಗಳು–30 ಗ್ರಾಮ ಪಂಚಾಯಿತಿಗಳಿಗಿಂತ ದೊಡ್ಡದಾಗಿದ್ದರೂ ಅವರಿಗೆ ತಲಾ ಒಬ್ಬ ಮಾಹಿತಿ ನಿರ್ವಹಣಾ ವ್ಯವಸ್ಥೆಯ ಆಪರೇಟರ್ ಇರುತ್ತಾರೆ.

**ಕೋಷ್ಟಕ 22: ಮಾದರಿ ಜಿಲ್ಲೆಗಳಲ್ಲಿ ಮತ್ತು ಕರ್ನಾಟಕದಲ್ಲಿ ಡಿಜಿಟಲ್ ಪಾವತಿ ತರಬೇತಿ ಸ್ಥಿತಿ**

| ಜಿಲ್ಲೆಗಳು | ಕ್ಷೇತ್ರ | ಗ್ರಾಮ ಪಂಚಾಯಿತಿಗಳ ಸಂಖ್ಯೆ | ಒಟ್ಟು ವಿವಿಧ ಹಂತಗಳಲ್ಲಿ ತರಬೇತಿ ಪಡೆದವರು | | |
|---|---|---|---|---|---|
| | | | ಕ್ಷೇತ್ರ | ಗ್ರಾಮ ಪಂಚಾಯಿತಿಗಳು | ಒಟ್ಟು |
| ದಕ್ಷಿಣ ಕನ್ನಡ | 5 | 232 | 0 | 0 | 0 |
| ಧಾರವಾಡ | 5 | 144 | 1 | 0 | 1 |
| ಕಲಬುರಗಿ | 7 | 266 | 8 | 3 | 11 |
| ಕೋಲಾರ | 5 | 156 | 1 | 0 | 1 |
| ಮಂಡ್ಯ | 7 | 234 | 7 | 53 | 60 |
| ಉತ್ತರ ಕನ್ನಡ | 11 | 233 | 40 | 21 | 61 |
| ಚಿಕ್ಕಬಳ್ಳಾಪುರ | 6 | 157 | 30 | 133 | 163 |
| ಯಾದಗಿರಿ | 3 | 126 | 1 | 1 | 2 |
| ಮಾದರಿ | 48 | 1548 | 88 | 211 | 299 |
| **ಕರ್ನಾಟಕ** | **176** | **6099** | **925** | **2724** | **3744** |

ಮೂಲ::http://mnregaweb4.nic.in/netnrega/digi_training_report.aspx?type=1&lflag=&page=S&state_name=KARNATAKA&state_code=15&fin_year=2013-2014&Digest=GYrdiVWkccDpjIl Wqv1a0Q

ಅಧಿಕಾರಿಗಳು ಯಾವ ತರಬೇತಿಗಳಿಗೆ ಹಾಜರಾಗಿದ್ದಾರೆ ಎಂಬ ಬಗ್ಗೆ ಕ್ಷೇತ್ರ ಅಥವಾ ಪಂಚಾಯತ್ ಮಟ್ಟದಲ್ಲಿ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಕೇಳಿದಾಗ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೂಲಿ ಪಾವತಿ ಅಥವಾ ಕಚೇರಿ ಆಡಳಿತದ ಬಗ್ಗೆ ನೀಡಲಾದ ಒಂದು ಅಥವಾ ಎರಡು ತರಬೇತಿ ಕಾರ್ಯಕ್ರಮಗಳಲ್ಲಿ ಅಸ್ಪಷ್ಟ ಪ್ರತಿಕ್ರಿಯೆ ಇರುತ್ತದೆ. ಬಹುಶಃ ಇದು ತರಬೇತಿಯ ಸ್ವೀಕರಿಸುವವರ ಮೇಲೆ ಪ್ರಭಾವ ಬೀರಿರುವ ಅಥವಾ ವಿಫಲವಾದ ಪ್ರಭಾವದ ಪ್ರತಿಬಿಂಬವಾಗಿ ಕಾಣಬಹುದಾಗಿರುತ್ತದೆ.  ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಗುರಿಗಳನ್ನು ಈಡೇರಿಸುವಲ್ಲಿ ಅವರು ಉತ್ತಮವಾಗಿ ಕಾರ್ಯನಿರ್ವಹಿಸಲು ಏನು ನಿರೀಕ್ಷಿಸುತ್ತಾರೆ ಎಂದು ಕೇಳಿದಾಗ, ಬಿಲ್ ಕಲೆಕ್ಟರ್‌ಗಳು ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳು ಮಾಡಿದ ಸಾಮಾನ್ಯ ಬೇಡಿಕೆಗಳಲ್ಲಿ ಒಂದು ಕಂಪ್ಯೂಟರ್ ಕೌಶಲ್ಯಗಳ ಬಗ್ಗೆ ಹೆಚ್ಚಿನ ತರಬೇತಿ ಮತ್ತು ಸಾಫ್ಟ್‌ವೇರ್‌ನ ನವೀಕರಣಗಳ ಬಗ್ಗೆ ಎಂದು ತಿಳಿಸಿರುತ್ತಾರೆ. ಕೋಲಾರದ ಗ್ರಾಮ ಪಂಚಾಯಿತಿಯಲ್ಲಿ ಸುನಿತಾ ಎಂಬ ಹೆಸರಿನ ಒಂದು ಡಾಟಾ ಎಂಟ್ರಿ ಆಪರೇಟರ್ ಗಮನಿಸಿದಂತೆ, ಸೂಚಿಸಲಾದ ಸಾಫ್ಟ್‌ವೇರ್ ಮತ್ತು ಕಾರ್ಯವಿಧಾನಗಳಲ್ಲಿನ ಬದಲಾವಣೆಗಳೊಂದಿಗೆ ತಮ್ಮನ್ನು ತಾವು ನವೀಕರಿಸಿಕೊಳ್ಳುವ ಅವಶ್ಯಕತೆಯಿದೆ: 'ನಾವು ದೂರದ ಹಳ್ಳಿಯಲ್ಲಿ ವಾಸಿಸುತ್ತೇವೆ ಮತ್ತು ಕೆಲಸ ಮಾಡುತ್ತೇವೆ, ಪ್ರಾಯೋಗಿಕವಾಗಿ ನಗರಕ್ಕೆ ಅಥವಾ ಅಧಿಕೃತ ಕೇಂದ್ರ ಸ್ಥಾನಗಳಿಗೆ ಹೋಗುವುದನ್ನು ಕಡಿತಗೊಳಿಸುತ್ತೇವೆ. ವಿಡಿಯೋ ಕಾನ್ಫರೆನ್ಸಿಂಗ್ ತರಬೇತಿ ಸಾಧನವಾಗಿ ಹೆಚ್ಚು ಸಹಾಯ ಮಾಡುವುದಿಲ್ಲ, ಏಕೆಂದರೆ ನಮ್ಮ ಅನುಮಾನಗಳ ಬಗ್ಗೆ ಸ್ಪಷ್ಟೀಕರಣಗಳನ್ನು ಪಡೆಯಲು ನಮಗೆ ಸಾಕಷ್ಟು ಅವಕಾಶಗಳು ಸಿಗುತ್ತಿಲ್ಲ. ನಿಮ್ಮ ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚು ಮಹಿಳಾ ಸ್ನೇಹಿಯನ್ನಾಗಿ ಮಾಡಬೇಕು, ಏಕೆಂದರೆ ನಾವು ಸ್ಥಳಕ್ಕೆ ಹೋಗಿ ನೆಲೆಗೊಳ್ಳುವ ಹೊತ್ತಿಗೆ ತರಬೇತಿ ಸ್ವತಃ ಮುಗಿದಿರುತ್ತದೆ.'

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಪೋರ್ಟಲ್‌ನಿಂದ ಪ್ರವೇಶಿಸಲಾದ ಡಿಜಿಟಲ್ ಪಾವತಿ ತರಬೇತಿಯ ಒಂದು ದತ್ತಾಂಶ ಮೂಲವು ಕಾರ್ಯಕಾರಿಗಳಿಂದ ಪಡೆದ ತರಬೇತಿಯ ಕಲ್ಪನೆಯನ್ನು ನಮಗೆ ನೀಡುತ್ತದೆ. ಜಿಲ್ಲೆಗಳಾದ್ಯಂತ ಮತ್ತು ಜಿಲ್ಲೆ ಮತ್ತು ಕ್ಷೇತ್ರಗಳ ಕೆಳಗಿರುವ ಹಂತಗಳಲ್ಲಿ ಜ್ಞಾನ ಮತ್ತು ಕೌಶಲ್ಯ ತೆರಳುವಿಕೆಯಲ್ಲಿ ಅಸಮತೋಲನವು ಕಂಡುಬರುತ್ತಿದೆ. ಈ ಸಂದರ್ಭದಲ್ಲಿ ಮತ್ತೊಮ್ಮೆ ಮಾಡಿದ ಅವಲೋಕನವನ್ನು ಪುನರಾವರ್ತಿಸಬೇಕಾಗಿರುತ್ತದೆ: ಕೆಲವು ಜಿಲ್ಲೆಗಳಲ್ಲಿನ ಅಧಿಕಾರಿಗಳು ಮತ್ತು ಕಾರ್ಯಕಾರಿಗಳು ಈ ರೀತಿಯ ಔಪಚಾರಿಕ ತರಬೇತಿಯನ್ನು ಪಡೆಯುತ್ತಿದ್ದರೆ, ಕೆಲವು ಸಿಬ್ಬಂದಿ ಅಥವಾ ಗ್ರಾಮ ಪಂಚಾಯಿತಿಗಳ ಸಂಖ್ಯೆಗೆ ಸಂಬಂಧಿಸಿದಂತೆ ಅಷ್ಟೇನೂ ಇಲ್ಲ. ಹೀಗಾಗಿ, ದಕ್ಷಿಣ ಕನ್ನಡವು ಡಿಜಿಟಲ್ ಪಾವತಿ ವಿಷಯದ ಬಗ್ಗೆ ತನ್ನ ಅಧಿಕಾರಿಗಳಿಗೆ ಒಂದೇ ಒಂದು ತರಬೇತಿಯನ್ನು ನೀಡಿರುವುದಿಲ್ಲ, ಆದರೆ ಧಾರವಾಡ ಅಥವಾ ಕೋಲಾರದಲ್ಲಿನ ಅಧಿಕಾರಿಗಳಂತಹ ಇತರ ಜಿಲ್ಲೆಗಳು ಯಾವುದನ್ನೂ ಪಡೆದಿರುವುದಿಲ್ಲ. ಈ ಅಸಮತೋಲನವನ್ನು ತ್ವರಿತವಾಗಿ ಸರಿಪಡಿಸಬೇಕಾಗಿದೆ. ಅಂತಹ ತರಬೇತಿಗಳಿಗೆ ಹಾಜರಾಗುವುದು, ಮತ್ತು ಪ್ರಾಥಮಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರಬೇಕು ಮತ್ತು ಅಂತಹ ಕೌಶಲ್ಯಗಳನ್ನು ಪಡೆಯಲು ಕೆಲವು ಪ್ರೋತ್ಸಾಹಕಗಳನ್ನು ನೀಡಬೇಕು.

**ಬಿ. ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಿ ಕುಂದುಕೊರತೆ ನಿವಾರಣಾ ಕಾರ್ಯವಿಧಾನ ಯಾವುದು? ಬೇಡಿಕೆ ನೋಂದಣಿ, ಅಳತೆ, ವೇತನ ಲೆಕ್ಕಾಚಾರ, ನಿಧಿ ವರ್ಗಾವಣೆ ಆದೇಶ ಹೊರಡಿಸುವುದು ಮತ್ತು ಖಾತೆಗಳನ್ನು ಫಲಾನುಭವಿಗಳಿಗೆ ಜಮಾ ಮಾಡುವ ಕುರಿತು ಎಷ್ಟು ದೂರುಗಳು ಬಂದಿವೆ? ರಚಿಸಲಾದ ಸಂಬಂಧಪಟ್ಟ ಅಧಿಕಾರಿಗಳು / ಸಮಿತಿಗಳು ಈ ಕುಂದುಕೊರತೆಗಳ ಪರಿಹಾರಕ್ಕಾಗಿ ಏನು ಕ್ರಮ ಕೈಗೊಂಡಿವೆ?**

ಕುಂದುಕೊರತೆ ಪರಿಹಾರವು ಹೆಚ್ಚಾಗಿ ಅನೌಪಚಾರಿಕವಾಗಿ ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಿದೆ. ವಿಶೇಷ ಸಂಯೋಜಕರು ಇದ್ದರೂ, ಮತ್ತು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಒಂಬುಡ್ಸ್‌ಮ್ಯಾನ್ ಇದ್ದರೂ ಸಹ, ಔಪಚಾರಿಕವಾಗಿ ಕುಂದುಕೊರತೆಗಳನ್ನು ನೋಂದಾಯಿಸುವ ಬಹಳ ಉದಾಹರಣೆಗಳಿಲ್ಲ.

ಹಕ್ಕು ಪಡೆಯುವುದಕ್ಕೆ ವ್ಯತಿರಿಕ್ತವಾಗಿ ಪಾವತಿಸಬೇಕಾದ ಕೂಲಿಯನ್ನು ಕಡಿಮೆ ಬದಲಾಯಿಸುವ ದೂರುಗಳು ಇದ್ದರೂ, ಹೆಚ್ಚು ಔಪಚಾರಿಕ ಪ್ರತಿಭಟನೆ ಅಥವಾ ದೂರುಗಳನ್ನು ನೋಂದಾಯಿಸುವುದು ಇಲ್ಲ. ವಿಳಂಬವೂ ಸಹ ಹಾಗಲ್ಲ

ಕುಂದುಕೊರತೆ ವಸತಿ ವಿಷಯ. ನಾವು ಜಿಲ್ಲಾ ಮಟ್ಟದಲ್ಲಿ ಒಬ್ಬ ಒಂಬುಡ್ಸ್‌ಮ್ಯಾನ್ ಅವರೊಂದಿಗೆ ಮಾತನಾಡಿದೆವು. ಕುಂದುಕೊರತೆ ಬಗ್ಗೆ ಹೇಳುವುದು ಅಥವಾ ಅದರ ಪರಿಹಾರದ ಬಗ್ಗೆ ನಮ್ಮ ಪ್ರಶ್ನೆಗೆ ಪ್ರತಿಕ್ರಿಯೆಯಾಗಿ ತಿಳಿಸಿರುವುದನ್ನು ಹೀಗೆ ಸಂಕ್ಷೇಪಿಸಬಹುದು:

'ನಾವು ಸ್ವೀಕರಿಸುವ ಹೆಚ್ಚಿನ ಕುಂದುಕೊರತೆಗಳೆಂದರೆ ಕೆಲಸ ಮುಗಿಯದೇ ಪಾವತಿಗಾಗಿ ಹಕ್ಕುಗಳನ್ನು ಕೇಳುವ ವಂಚನೆಗಳ ಬಗ್ಗೆ. ಇದು ಸಾಮಾನ್ಯವಾಗಿ ಒಂದು ಕಡೆ ಪಂಚಾಯತ್‌ನ ಚುನಾಯಿತ ಸದಸ್ಯರು ಮತ್ತು ಇನ್ನೊಂದೆಡೆ ಚುನಾವಣೆಯಲ್ಲಿ ಸೋತವರ ನಡುವಿನ ರಾಜಕೀಯ ಯುದ್ಧವಾಗಿದೆ. ದೂರುಗಳನ್ನು ಸಲ್ಲಿಸುವ ಮಾಹಿತಿ ಹಕ್ಕು ಕೇಳುವ ತಜ್ಞರೂ ಇದ್ದಾರೆ ... ನಾನು ಸುಮಾರು ಎರಡು ವರ್ಷಗಳ ಕಾಲ ಒಂಬುಡ್ಸ್‌ಮ್ಯಾನ್ ಆಗಿ ಸೇವೆ ಸಲ್ಲಿಸಿದ್ದೇನೆ ಮತ್ತು ಕೂಲಿ ಪಾವತಿ ವಿಳಂಬ ಅಥವಾ ಹಕ್ಕು ಪಡೆಯುವ ಮೊತ್ತದ ಕೊರತೆಯ ವಿರುದ್ಧ ಒಂದೇ ಒಂದು ದೂರನ್ನು ನಾನು ಸ್ವೀಕರಿಸಲಿಲ್ಲ.'

ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ, ಯಾವುದೇ ಸಾಮಾನ್ಯ ವ್ಯಕ್ತಿಗೆ ಒಂದು ವೇದಿಕೆ ಇದೆ ಅದರಲ್ಲಿ ಸಂಬಂಧಪಟ್ಟ ನಾಗರಿಕ, ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ, ಕೆಲಸಗಾರ ಅಥವಾ 'ಅತಿ ಮುಖ್ಯ ವ್ಯಕ್ತಿ' ಅಥವಾ ಸಂಬಂಧಪಟ್ಟ ಇಲಾಖೆಗಳ ಜವಾಬ್ದಾರಿಯುತ ಅಧಿಕಾರಿಯಾಗಿ ಇರುತ್ತಾರೆ ಇಲ್ಲಿ ಎಲ್ಲರಿಗೂ ಅವಕಾಶವಿರುವುದಿಲ್ಲ ಪ್ರಗತಿಯಲ್ಲಿರುವ ಅಥವಾ ಪೂರ್ಣಗೊಂಡ ಕೆಲಸದ ನಿಖರ ಸ್ಥಿತಿ ಯಾವುದು, ಫಲಾನುಭವಿ ಯಾರು ಅಥವಾ ಅದಕ್ಕಾಗಿ ಖರ್ಚು ಮಾಡಿದ ಹಣ ಯಾವುದು ಇತ್ಯಾದಿಗಳನ್ನು ನೋಡಲು ಮಾತ್ರ ಈ ವೇದಿಕೆಯು ಇರುತ್ತದೆ. ಇವುಗಳನ್ನು ನಿರ್ಣಯಿಸಲು ಕೆಲಸ ಪ್ರಗತಿಯಲ್ಲಿರುವ ಅಥವಾ ಪೂರ್ಣಗೊಂಡ ಸ್ಥಳಕ್ಕೆ ಒಬ್ಬರು ಹೋಗಬೇಕಾಗಿಲ್ಲ. ಇವೆಲ್ಲವೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅನುಷ್ಠಾನದೊಂದಿಗೆ ಈಗ ಸಾಧ್ಯವಿರುವ ಪಾರದರ್ಶಕತೆಯ ಅತ್ಯಂತ ಮಹತ್ವದ ಲಕ್ಷಣಗಳಾಗಿರುತ್ತವೆ. ಪಾರದರ್ಶಕತೆಯ ವ್ಯಾಪ್ತಿಯನ್ನು ಗಮನಿಸಿದರೆ ಒಬ್ಬರು ಕುಂದುಕೊರತೆಗಳ ಪರಿಹಾರವನ್ನು ಕೋರಿ ದೂರುಗಳ ಪ್ರವಾಹವನ್ನು ನಿರೀಕ್ಷಿಸುತ್ತಾರೆ.

ಆದಾಗ್ಯೂ, ಕುಂದುಕೊರತೆ ಅಥವಾ ದೂರುಗಳಿಗೆ ಸಂಬಂಧಿಸಿದ ಪುಟವನ್ನು ತೆರೆಯಲು ಪೋರ್ಟಲ್‌ನಲ್ಲಿ ಕೆಲವು ಸಮಸ್ಯೆಗಳಿವೆ. ಮೊದಲ ನಿದರ್ಶನದಲ್ಲಿ, ಈ ಪುಟವು ಹಿಂದಿನ ದಿನ 21.00 ಗಂಟೆಗಳಲ್ಲಿ ಮರುದಿನ 06.00

ಗಂಟೆಗಳವರೆಗೆ ತೆರೆಯುವುದಿಲ್ಲ. ಎಂದು ತಿಳಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಈ ಪುಟದ ಪಾರದರ್ಶಕತೆಯು 24/7 ವಿದ್ಯಮಾನವಲ್ಲ. ಎರಡನೆಯದಾಗಿ, ಪುಟವು ಕೋಶದಲ್ಲಿನ ಪ್ರತಿಯೊಂದು ನಮೂದುಗಳಿಗೆ ಹೈಪರ್ ಲಿಂಕ್‌ನ್ನು ನೀಡುತ್ತದೆ – ಇದು ಜಿಲ್ಲಾ ಪಂಚಾಯಿತಿ ಅಥವಾ ಕ್ಷೇತ್ರ ಪಂಚಾಯತ್ ಅಥವಾ ಗ್ರಾಮ ಪಂಚಾಯಿತಿ ವಿರುದ್ಧದ ದೂರುಗಳ ಸಂಖ್ಯೆಯಾಗಿರಬಹುದು. ಆದರೆ, ಅಂತಹ ಯಾವುದೇ ಲಿಂಕ್‌ಗಳನ್ನು ಅನುಸರಿಸುವಾಗ ಪುಟವು ಪೂರ್ಣವಾಗಿ ತೆರೆಯುವುದಿಲ್ಲ ಅಥವಾ ಪೂರ್ಣ ಪ್ರಮಾಣದ ದೂರುಗಳನ್ನು ಪ್ರದರ್ಶಿಸುವುದಿಲ್ಲ. ಹೀಗಾಗಿ, ಚಿಕ್ಕಬಳ್ಳಾಪುರ ಜಿಲ್ಲೆಯ ಕಾರ್ಮಿಕರು ಹೇಳುವ 24 ದೂರುಗಳ ಪಟ್ಟಿಯಿದ್ದರೂ ಸಹ, ದೂರುಗಳ ಸಂಪೂರ್ಣ ವಿಶ್ಲೇಷಣೆ ಮಾಡಲು ನಮಗೆ ಸಾಧ್ಯವಾಗುತ್ತಿಲ್ಲ, ಏಕೆಂದರೆ ದೂರುಗಳ ವಿಷಯ ಏನೆಂದು ನಮಗೆ ತಿಳಿದಿಲ್ಲ. ಹೀಗಾಗಿ, ಕೂಲಿ ಪಾವತಿಯಲ್ಲಿನ ವಿಳಂಬವನ್ನು ತೆಗೆದುಹಾಕಲು ಮೌಲ್ಯಮಾಪನದಲ್ಲಿ ಮತ್ತು ಕುಂದುಕೊರತೆ ಪರಿಹಾರಕ್ಕೆ ಆಯ್ಕೆಯನ್ನು ನೀಡುವ ಮೂಲಕ ವ್ಯವಸ್ಥೆಯನ್ನು ಪಾರದರ್ಶಕಗೊಳಿಸುವುದರಲ್ಲಿ, ಕಾರ್ಮಿಕರಿಂದ ವಾಸ್ತವವಾಗಿ, ವಿಳಂಬವಾದ ಕೂಲಿ ಪಾವತಿ ಅಥವಾ ಕೂಲಿಯ ತಪ್ಪು ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ, ಇತ್ಯಾದಿ ಎಷ್ಟು ದೂರುಗಳು ಬಂದವು ಎಂಬುದು ನಮಗೆ ತಿಳಿದಿಲ್ಲ,. ಅದೇ ರೀತಿ, ಮಾಪನಗಳಲ್ಲಿನ ವಂಚನೆಗಳು, ಹಣ ವಿತರಣೆ ಇತ್ಯಾದಿಗಳ ಬಗ್ಗೆ ನಮಗೆ ಸಂಪೂರ್ಣ ದೂರುಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇವುಗಳ ಗಮನವನ್ನು ಬೆಂಗಳೂರಿನ ಕೇಂದ್ರ ಕಛೇರಿಯ ಅಧಿಕಾರಿಗಳ ಗಮನಕ್ಕೆ ತರಲಾಯಿತು, ನಾವು ಅರ್ಥಮಾಡಿಕೊಂಡಿದ್ದೇವೆ ಅವುಗಳನ್ನು ದೆಹಲಿಯ ರಾಷ್ಟ್ರೀಯ ಮಾಹಿತಿ ಕೇಂದ್ರದ ಸಂಯೋಜಕರಿಗೆ ತಿಳಿಸಿರುತ್ತಾರೆ.

ಉಲ್ಲೇಖದಲ್ಲಿರುವ ಪೋರ್ಟಲ್‌ನ ಪುಟದಲ್ಲಿನ ಅಂತಿಮ ಸಮಸ್ಯೆಯೆಂದರೆ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಜಾರಿಗೆ ಬಂದಾಗಿನಿಂದ ವಿವಿಧ ವರ್ಷಗಳ ಅವಧಿಯಲ್ಲಿ ದೂರುಗಳು ನೋಂದಾಯಿಸಲ್ಪಟ್ಟ ದರವನ್ನು ನೋಡಲು ಸಾಧ್ಯವಾಗುವುದಿಲ್ಲ. ಬದಲಾಗಿ, ಪೋರ್ಟಲ್ ದತ್ತಾಂಶವನ್ನು ಪ್ರಸ್ತುತ ಏಕೀಕೃತ ಆಧಾರದ ಮೇಲೆ ಮಾತ್ರ ಒದಗಿಸುತ್ತದೆ. ಇದರ ಪರಿಣಾಮವಾಗಿ ಒಬ್ಬರು ಪಡೆದ ಪ್ರಗತಿಯನ್ನು ತಲುಪಲು ಸಾಧ್ಯವಾಗುತ್ತಿಲ್ಲ ಅಥವಾ ಸ್ವೀಕರಿಸಿದ ದೂರುಗಳನ್ನು ಪರಿಹರಿಸುವಲ್ಲಿ ಅಥವಾ ಕೈಗೊಂಡ ಕ್ರಮಗಳಿಲ್ಲ. ಕುಂದುಕೊರತೆ ಪರಿಹಾರದ ಮೊದಲ ತೆರೆದ ಪುಟದ ಪರಿಶೀಲನೆಯೂ ಸಹ, ಹೆಚ್ಚಿನ ಕುಂದುಕೊರತೆಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಶೈಲಿಯ ಕಾರ್ಯವೈಖರಿಯ ಬಗ್ಗೆ ದೂರುಗಳಾಗಿವೆ ಎಂಬುದು ಸ್ಪಷ್ಟವಾಗಿರುತ್ತದೆ. ನಮೂನೆ ಸಂಖ್ಯೆ–6ನ್ನು (ಉದ್ಯೋಗ ಹಕ್ಕು ಪಡೆಯಲು) ನೀಡಲಾಗುವುದಿಲ್ಲ, ಅಥವಾ ಅಧಿಕಾರಿಗಳು, ಗ್ರಾಮ ಪಂಚಾಯಿತಿಗಳು ಅಥವಾ ಯಾವಾಗ ಮತ್ತು ಎಲ್ಲಿ ಹೆಸರುಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲದೆ ಹಣವನ್ನು ನಿರ್ವಹಿಸುತ್ತಿವೆ.

ಆದಾಗ್ಯೂ, ಈ ಮೌಲ್ಯಮಾಪನದಲ್ಲಿ ಈ ಕೆಳಗಿನವುಗಳು ವಿಶೇಷ ಉಲ್ಲೇಖಕ್ಕೆ ಅರ್ಹವಾಗಿರುತ್ತವೆ: ಕೂಲಿ ಮತ್ತು/ಅಥವಾ ಸರಬರಾಜು ಮಾಡಿದ ಸಾಮಗ್ರಿಗಳ ವಿಳಂಬ ಪಾವತಿಯ ನಿದರ್ಶನಗಳಲ್ಲಿ ಕುಸಿತವು ಕಂಡುಬಂದರೂ, ಅವು ಪ್ರಮಾಣಕ್ಕೆ ಅನುಗುಣವಾಗಿ ಪ್ರತಿಫಲಿಸಿದಂತೆ ಕಾಣಿಸುತ್ತಿಲ್ಲ ಸ್ವೀಕರಿಸಿದ ದೂರುಗಳ ವ್ಯಾಪ್ತಿ. ನಾಗರಿಕ ಗುಂಪುಗಳ ತುಲನಾತ್ಮಕವಾಗಿ ಹೆಚ್ಚಿನ ಪ್ರಾತಿನಿಧ್ಯವಿದ್ದರೂ, ಪ್ರಾಥಮಿಕ ಮಧ್ಯಸ್ಥಗಾರರು ತಮ್ಮ ದೂರುಗಳನ್ನು ಅಥವಾ ಕುಂದುಕೊರತೆಗಳನ್ನು ಯಾವುದಾದರೂ ಇದ್ದರೆ ಸಲ್ಲಿಸಲು ಬರುತ್ತಿಲ್ಲ.

ನಮ್ಮ ಕಡೆಯಿಂದ ಈ ಶೋಧನೆಯ ಹಿಂದೆ ಮೂರು ಅಂಶಗಳು ಅಂದರೆ ಮೊದಲನೆಯದಾಗಿ, ನಮ್ಮ ಅಧ್ಯಯನದ ಅವಧಿಯಲ್ಲಿ ತೆರಳಲಾಗದೇ ನೋಂದಾಯಿತ ಸಂಪೂರ್ಣ ಶ್ರೇಣಿಯ ದೂರುಗಳನ್ನು ನಾವು ಅಧ್ಯಯನ ಮಾಡಿರುವುದಿಲ್ಲ

ಎರಡನೆಯದಾಗಿ, ಕಾರ್ಮಿಕರು ಅಥವಾ ಸಾಮಗ್ರಿಗಳ ಸರಬರಾಜುದಾರರು ತಮ್ಮ ಭವಿಷ್ಯದ ವಹಿವಾಟುಗಳು ಪ್ರತಿಕೂಲ ಪರಿಣಾಮ ಬೀರಬಹುದು ಎಂಬ ಭಯದಿಂದ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ಔಪಚಾರಿಕ ದೂರು ನೀಡಲು ಅನಾನುಕೂಲವಾಗಿರುತ್ತದೆ. ಮೂರನೆಯದಾಗಿ, ವಿಳಂಬವಾದ ಅಥವಾ ದೋಷಪೂರಿತ ಕೂಲಿ ಲೆಕ್ಕಾಚಾರ ಮತ್ತು ಪಾವತಿಯ ಬಗ್ಗೆ ದೂರು ನೀಡುವ ಆಯ್ಕೆಯ ಬಗ್ಗೆ ಅವರ ಕಡೆಯಿಂದ, ವಿಶೇಷವಾಗಿ ಕಾರ್ಮಿಕರಲ್ಲಿ ಸಾಕಷ್ಟು ಅರಿವು ಇಲ್ಲದಿರುವುದು. ಕೊನೆಯ ಎರಡು ವಿವರಣೆಗಳು ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೃಢೀಕರಣವನ್ನು ಕಂಡುಕೊಂಡಿರುತ್ತವೆ.

**ಕೋಷ್ಟಕ 23: ಕರ್ನಾಟಕ ಮತ್ತು ಮಾದರಿ ಜಿಲ್ಲೆಗಳಲ್ಲಿ ದೂರುಗಳು ಮತ್ತು ಅವುಗಳ ಸ್ಥಿತಿ**

| ಜಿಲ್ಲೆಯ ಹೆಸರು | ಸಲ್ಲಿಸಿದ ದೂರುಗಳು | | | | | | | | | ಯಾರ ವಿರುದ್ಧ ದೂರುಗಳನ್ನು ಸಲ್ಲಿಸಿದೆ | | | | | | | ದೂರುಗಳ ಸ್ಥಿತಿ | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | ನಾಗರಿಕ | ಕೆಲಸಗಾರ | ಗ್ರಾಮ ಪಂಚಾಯಿತಿ | ಸರ್ಕಾರೇತರ ಸಂಸ್ಥೆ | ಅತ್ಯಂತ ಪ್ರಮುಖ ವ್ಯಕ್ತಿ | ಮಾಧ್ಯಮ | ರಾಜ್ಯ | ಇಂಜಿನಿಯರ್ | ಒಟ್ಟು | ಗ್ರಾಮ ಪಂಚಾಯಿತಿ | ತಾಲ್ಲೂಕು ಪಂಚಾಯಿತಿ | ಪಿಒ | ಜಿಲ್ಲಾ ಪಂಚಾಯಿತಿ | ಡಿಪಿಸಿ | ಅನುಷ್ಠಾನ ಸಂಸ್ಥೆ | ಒಟ್ಟು | ಬಾಕಿ | ಕಳುಹಿಸಲಾಗಿದೆ | ಮಧ್ಯಂತರ ಉತ್ತರವನ್ನು ಕಳುಹಿಸಲಾಗಿದೆ | ಭಾಗಶಃ ವಿಲೇವಾರಿ | ವಿಲೇವಾರಿ |
| ಚಿಕ್ಕಬಳ್ಳಾಪುರ | 83 | 24 | 1 | 1 | 2 | 3 | 38 | 0 | 152 | 121 | 4 | 10 | 2 | 15 | 0 | 152 | 26 | 7 | 0 | 0 | 119 |
| ದಕ್ಷಿಣ ಕನ್ನಡ | 6 | 9 | 0 | 5 | 0 | 1 | 9 | 0 | 30 | 26 | 1 | 1 | 1 | 1 | 0 | 30 | 5 | 0 | 0 | 0 | 25 |
| ಧಾರವಾಡ | 16 | 1 | 2 | 0 | 0 | 1 | 3 | 0 | 23 | 16 | 1 | 2 | 0 | 4 | 0 | 23 | 1 | 3 | 0 | 0 | 19 |
| ಕಲಬುರಗಿ | 37 | 94 | 0 | 0 | 4 | 0 | 26 | 1 | 162 | 156 | 1 | 1 | 2 | 2 | 0 | 162 | 72 | 2 | 0 | 0 | 88 |
| ಕೋಲಾರ | 69 | 15 | 0 | 3 | 3 | 2 | 31 | 0 | 123 | 111 | 1 | 1 | 8 | 0 | 2 | 123 | 14 | 17 | 0 | 0 | 92 |
| ಮಂಡ್ಯ | 40 | 8 | 2 | 1 | 4 | 0 | 12 | 1 | 68 | 63 | 0 | 0 | 0 | 3 | 2 | 68 | 30 | 6 | 0 | 0 | 32 |
| ಉತ್ತರ ಕನ್ನಡ | 20 | 14 | 0 | 0 | 1 | 8 | 6 | 1 | 50 | 40 | 2 | 2 | 6 | 0 | 0 | 50 | 8 | 1 | 0 | 0 | 41 |
| ಯಾದಗಿರಿ | 41 | 14 | 1 | 2 | 1 | 0 | 28 | 0 | 88 | 82 | 0 | 0 | 5 | 1 | 0 | 88 | 14 | 16 | 0 | 0 | 58 |
| **ಒಟ್ಟು** | **1212** | **1291** | **50** | **51** | **67** | **46** | **504** | **6** | **3240** | **2842** | **82** | **69** | **104** | **98** | **45** | **3240** | **556** | **176** | **1** | **10** | **2497** |

□□□:http://mnregaweb4.nic.in/netnrega/citizen_html/citipoattend_rep.aspx?page=S&state_name=KARNATAKA&state_code=15&Digest=SAa1xnUybV6AoT1KKwH7CA

(ಗಮನಿಸಿ: ಸಾರಾಂಶ. ಅತ್ಯಲ್ಪ ಸಂಖ್ಯೆಗಳನ್ನು ಬಿಟ್ಟಿರುವುದರಿಂದ ಕೋಶಗಳಲ್ಲಿ ಅವುಗಳು ಸೇರಿರುವುದಿಲ್ಲ.)

ಉತ್ತರ ಕನ್ನಡದ ಓರ್ವ ಸಾಮಗ್ರಿ ಪೂರೈಕೆದಾರರು ಸಂದರ್ಶನವೊಂದರಲ್ಲಿ ಈ ಕೆಳಗಿನವುಗಳನ್ನು ವಿವರಿಸಿದ್ದಾರೆ

ಸ್ವಾಮಿ, ನಿಮಗೆ ತಿಳಿದಿರುವಂತೆ, ಯಾವುದೇ ಸರ್ಕಾರಿ ಯೋಜನೆಗಳ ಪಾವತಿಗಳು ಸಾಮಾನ್ಯವಾಗಿ ಸಮಯ ತೆಗೆದುಕೊಳ್ಳುತ್ತದೆ. ಗಮನಿಸಬೇಕಾದ ಹಲವು ಪರಿಗಣನೆಗಳು ಇವೆ. ನಾವು ಇವುಗಳಿಗೆ ಒಗ್ಗಿಕೊಂಡಿದ್ದೇವೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯು ರಾಷ್ಟ್ರೀಯ ಗಮನವನ್ನು ಹೆಚ್ಚು ಆಕರ್ಷಿಸುತ್ತದೆ ಮತ್ತು ನಿಮ್ಮಂತಹ ಶಿಕ್ಷಣ ತಜ್ಞರ ಆಸಕ್ತಿಯಿಂದಾಗಿ, ಇದು ಇತರ ಅನೇಕ ಸರ್ಕಾರಿ ಯೋಜನೆಗಳಿಂದ ಭಿನ್ನವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಅರ್ಥವಲ್ಲ. ಪಾವತಿಯಲ್ಲಿ ವಿಳಂಬ ಅಥವಾ ನಮಗೆ ಬರಬೇಕಾದದ್ದನ್ನು ತಪ್ಪಾಗಿ ಲೆಕ್ಕಾಚಾರ ಮಾಡಿರುವುದರಿಂದ, ನಾವು ವೇದಿಕೆಗೆ ಧಾವಿಸಿ ದೂರು ನೀಡಲು ಸಾಧ್ಯವಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಅವರ ಮಿತಿಗಳನ್ನು ನಾವು ತಿಳಿದಿದ್ದೇವೆ, ಹಾಗೆಯೇ ಅವರು ಯಾವ ಒತ್ತಡದಲ್ಲಿ ಕೆಲಸ ಮಾಡುತ್ತಾರೆ. ಲೋಕಾಯುಕ್ತನಿಗೆ ಅನೇಕ ದೂರುಗಳು ದಾಖಲಾಗಿವೆ ಎಂದು ನೀವು ನಿರೀಕ್ಷಿಸುತ್ತೀರಾ ಅದು ಭ್ರಷ್ಟಾಚಾರದ ವ್ಯಾಪಕ ನಿದರ್ಶನಗಳಿಗೆ ಹೋಲಿಸಬಹುದು. ಆದ್ದರಿಂದ, ವಿಳಂಬ ಅಥವಾ ದುರುಪಯೋಗದ ಪ್ರತಿಯೊಂದು ಸಂದರ್ಭದಲ್ಲೂ ನಾವು ಓಂಬುಡ್ಸಮ್ಯಾನ್ ಅಥವಾ ಕುಂದುಕೊರತೆ ಪರಿಹಾರ ಕೋಶಕ್ಕೆ ಧಾವಿಸುವುದಿಲ್ಲ!

**ಎ. ವಿಳಂಬವಾದ ಪಾವತಿಗಳಿಗೆ ವಿಳಂಬ ಕೂಲಿ ಪಾವತಿಗೆ ಪರಿಹಾರವೇನು? ಪಾವತಿ ವಿಳಂಬವಾಗಲು ಕಾರಣಗಳು ಯಾವುವು? ಸಂಸ್ಥೆ/ಅಧಿಕಾರಿಯಿಂದ ವಿಳಂಬ ಸಂಭವಿಸಿದಲ್ಲಿ, ಸಂಸ್ಥೆ/ಅಧಿಕಾರಿಯಿಂದ ವಸೂಲಿ ಮಾಡಿದ ಮೊತ್ತವು ವಿಳಂಬಕ್ಕೆ ಕಾರಣವಾಗಿದೆಯೇ? ಹೌದು, ಎಂದಾದರೆ ಪರಿಹಾರದ ವ್ಯಾಪ್ತಿ ಎಷ್ಟು?**

ಮೇಲೆ ಸೂಚಿಸಿದಂತೆ, ಕೂಲಿ ವಿಳಂಬಕ್ಕಾಗಿ ದಾಖಲಾದ ಕುಂದುಕೊರತೆಗಳ ನಿದರ್ಶನಗಳನ್ನು ಸಮಗ್ರವಾಗಿ ಕೈಗೊಳ್ಳಲಾಗುವುದಿಲ್ಲ. ಕ್ಷೇತ್ರ ಮಟ್ಟದಲ್ಲಿ, ಪ್ರತಿವಾದಿಯು ಕೂಲಿಯನ್ನು ವಿಳಂಬವಾಗಿ ಪಾವತಿಸುವುದರ ಬಗ್ಗೆ ದೂರು ನೀಡಿದ ಒಂದು ಉದಾಹರಣೆಯನ್ನು ನಾವು ಕಾಣಲಿಲ್ಲ. ಆದ್ದರಿಂದ ಕಾನೂನಿನ ಪ್ರಕಾರ ಔಪಚಾರಿಕವಾಗಿ ಪರಿಹಾರವನ್ನು ಬಯಸುತ್ತೇವೆ. ಉದಾಹರಣೆಗೆ, ನಮ್ಮ ಅಧ್ಯಯನದ ಮಾದರಿ ಜಿಲ್ಲೆಯಾದ ಉತ್ತರ ಕನ್ನಡ ಜಿಲ್ಲೆಯಲ್ಲಿ, ಕೂಲಿ ವಿಳಂಬ ಪರಿಹಾರ ರೂ. 2014–15ರ ಅವಧಿಯಲ್ಲಿ ಕುಮಟಾ ಕ್ಷೇತ್ರದ 11 ಗ್ರಾಮ ಪಂಚಾಯಿತಿಗಳಲ್ಲಿ 2901 ಪಾವತಿಸಲಾಗಿದೆ. ಈ ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಠ ಐದು ನಮ್ಮ ಮಾದರಿಯಲ್ಲಿದ್ದವು. ಆದರೂ ಇವುಗಳಲ್ಲಿ ನಮ್ಮ ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಭಾಗವಹಿಸಿದ ಯಾರಿಗೂ ಈ ಮಾಹಿತಿಯ ಬಗ್ಗೆ ತಿಳಿದಿರಲಿಲ್ಲ, ಅದು ಇದ್ದರೂ, ಗ್ರಾಮ ಪಂಚಾಯಿತಿ ಕಾರ್ಯಕರ್ತರು (ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬಿಲ್ ಕಲೆಕ್ಟರ್‌ಗಳು ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳು ಇವರಿಗೆ) ತಿಳಿದಿರಲಿಲ್ಲ.

ಆದಾಗ್ಯೂ, ಜಿಲ್ಲಾ ಮಟ್ಟದಲ್ಲಿ, ನಮ್ಮ ಮಾದರಿಗಳಿಗೆ ಸಂಬಂಧಿಸಿದಂತೆ, ಕೂಲಿ ಪಾವತಿ ವಿಳಂಬದ ಕುರಿತು ಗಮನಾರ್ಹ ಸಂಖ್ಯೆಯ ದೂರುಗಳು ದಾಖಲಾಗಿಲ್ಲ. ವಿಪರ್ಯಾಸವೆಂದರೆ, ಅಂತಹ ದೂರುಗಳ ಸಂಖ್ಯೆಯನ್ನು ಲೆಕ್ಕಿಸದೆ, ಏಕರೂಪವಾಗಿ ಪಾವತಿಸುವ ಪರಿಹಾರವು ಇನ್ನೂ ಅತ್ಯಲ್ಪವಾಗಿದೆ. (ಮಾದರಿ ಜಿಲ್ಲೆಗಳಲ್ಲಿ ಪರಿಹಾರವನ್ನು ವಿಳಂಬಗೊಳಿಸಲು ಸಂಬಂಧಿಸಿದ ದತ್ತಾಂಶಕ್ಕಾಗಿ ಅನುಬಂಧ ನಾಲ್ಕನ್ನು ನೋಡಿರಿ),

ಒಟ್ಟಾರೆಯಾಗಿ ಕರ್ನಾಟಕ ರಾಜ್ಯದಲ್ಲಿ, ಯಾವ ಪರಿಹಾರವನ್ನು ಪಾವತಿಸಬೇಕೆಂಬುದನ್ನು ಗುರುತಿಸುವಲ್ಲಿ ವಿಳಂಬವಾಗಿರುತ್ತದೆ. ಪರಿಹಾರಕ್ಕಾಗಿ ಔಪಚಾರಿಕ ಹಕ್ಕು ಸಲ್ಲಿಸಲಾಗಿದೆಯೆ ಅಥವಾ ಪೋರ್ಟಲ್‌ನಲ್ಲಿ

ಪ್ರಸ್ತುತಪಡಿಸಲಾಗಿರುವುದು ಪದ್ಧತಿಯು ರಚಿಸಿದ ದತ್ತಾಂಶವೇ ಎಂದು ಖಚಿತವಾಗಿಲ್ಲ. ಯಾವುದೇ ಸಂದರ್ಭದಲ್ಲಿ ಪರಿಶೀಲನೆಯ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.

**ಕೋಷ್ಟಕ 24 ನಿರ್ಧರಿಸಲಾದ, ಪಾವತಿಸಲಾದ ಅಥವಾ ತಿರಸ್ಕರಿಸಲಾದ ವಿಳಂಬ ಪರಿಹಾರ ಅರ್ಹತೆಗಳು**

| ಕರ್ನಾಟಕ | ಪಾವತಿಸಬೇಕಾಗಿರುವುದು (ವಿಳಂಬ ದಿನಗಳಲ್ಲಿ) | ನಿರಾಕರಣೆಯ ಕಾರಣ (% ದಲ್ಲಿ) | | | | | ವಿಳಂಬ ಪರಿಹಾರ ಪಾವತಿಸಲಾಗಿದೆ (ಪಾವತಿಸಬೇಕಾದ %) |
|---|---|---|---|---|---|---|---|
| | | ಸಾಕಷ್ಟು ನಿಧಿ ಇಲ್ಲದಿರುವುದಿರುವುದು | ನೈಸರ್ಗಿಕ ವಿಪತ್ತುಗಳು | ಪರಿಹಾರ ಬಾಕಿ ಇಲ್ಲ | ಇತರೆ | ಒಟ್ಟು ತಿರಸ್ಕರಿಸಿದ ದಿನಗಳು | |
| 2013–14 | 163620430 | 6.02 | 3.47 | 48.73 | 41.77 | 98.74 | 0.00 |
| 2014–15 | 393165619 | 1.98 | 1.52 | 18.78 | 77.73 | 99.96 | 0.03 |
| 2015–16 | 166018603 | 1.16 | 7.95 | 37.99 | 52.90 | 99.53 | 0.27 |
| 2016–17 | 177378348 | 0.07 | 7.91 | 60.76 | 31.26 | 91.79 | 7.59 |
| 2017–18 | 39534195 | 1.00 | 12.96 | 77.50 | 8.54 | 91.66 | 4.60 |
| 2018–19 | 79679486 | 3.56 | 10.87 | 85.57 | 0.00 | 46.81 | 0.10 |

ನಿರಾಕರಣೆಯ ಪ್ರಮಾಣವು ಸಾಕಷ್ಟು ಹೆಚ್ಚಾಗಿದೆ ಎಂದು ಕಂಡುಬಂದಿರುತ್ತದೆ. 393.17 ಲಕ್ಷ ದಿನಗಳ ವಿಳಂಬದ ಶೇಕಡಾ 99.96 ರಷ್ಟು ನಿರಾಕರಣೆಯ ಪ್ರಮಾಣವಾಗಿದೆ. ಒಟ್ಟು ಪರಿಹಾರದ ಕೇವಲ 0.03 ಶೇಕಡಾವನ್ನು ವಾಸ್ತವವಾಗಿ ಕಾರ್ಮಿಕರಿಗೆ ಪಾವತಿಸಲಾಗಿದೆ. ಮೇಲಿನ ಕೋಷ್ಟಕವು ಯಾವ ಆಧಾರದ ಮೇಲೆ ಪರಿಹಾರಗಳನ್ನು ತಿರಸ್ಕರಿಸಿದೆ ಎಂಬ ಲೆಕ್ಕವನ್ನು ನೀಡುತ್ತದೆ. ಅವುಗಳಲ್ಲಿ ಹೆಚ್ಚಿನವು ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ 'ಪರಿಹಾರವು ಕಾರಣವಲ್ಲ' ಎಂದು ನಿರ್ಧರಿಸಲಾಗಿರುತ್ತದೆ.

ಕಾರ್ಮಿಕರು ಅಥವಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಇತರ ಅಧಿಕಾರಿಗಳು ಹಕ್ಕು ಪಡೆಯುವ ಕೂಲಿ ಅಥವಾ ವಿಳಂಬದ ಪರಿಹಾರವನ್ನು ಬ್ಯಾಂಕ್ ನಿರಾಕರಿಸಿದ ಅಥವಾ ತಿರಸ್ಕರಿಸಿದ ಕಾರಣವನ್ನು ತಿಳಿಯುವ ಸ್ಥಿತಿಯಲ್ಲಿಲ್ಲ. ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕವಾಗಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಬೇಕಾಗಿದೆ.

**ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ: ಲಿಂಗಕ್ಕೆ ಏನಾದರೂ ವ್ಯತ್ಯಾಸವಿದೆಯೇ?**

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವಿನ್ಯಾಸ ಅಥವಾ ಅನುಷ್ಠಾನದಲ್ಲಿ ಲಿಂಗದಲ್ಲಿನ ವ್ಯತ್ಯಾಸಗಳನ್ನು ಪರಿಹರಿಸಲು ಯಾವುದೇ ವಿಶೇಷ ಅವಕಾಶವಿಲ್ಲದಿದ್ದರೂ, ಲಿಂಗ ವ್ಯತ್ಯಾಸಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ಸಮಸ್ಯೆಗಳನ್ನು ಬಗೆಹರಿಸಬಹುದಾಗಿರುತ್ತದೆ. ಯಾವುದೇ ಸಮಾಜದಲ್ಲಿ ಯಾವುದೇ ಮೌಲ್ಯಮಾಪನವು ವ್ಯತ್ಯಾಸವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ, ಯಾವುದಾದರೂ ಇದ್ದರೆ, ಅದು ಪುರುಷರು ಮತ್ತು ಮಹಿಳೆಯರಿಗಾಗಿ ಮಾಡಿದ ಕಾರ್ಯಕ್ರಮವಾಗಿರುತ್ತದೆ. ಏಕೆಂದರೆ, ಎಲ್ಲಾ ಕಾರ್ಯಕ್ರಮಗಳು ಫಲಿತಾಂಶಗಳನ್ನು ಉದ್ದೇಶಿತ ಫಲಾನುಭವಿಗಳಲ್ಲಿನ ಲಿಂಗ ವ್ಯತ್ಯಾಸಗಳಿಗೆ ತಟಸ್ಥವಾಗಿರುವ ರೀತಿಯಲ್ಲಿ ತರುವ ಗುರಿಯನ್ನು ಹೊಂದಿರುತ್ತವೆ. ಬದಲಾಗಿ, ಹೆಚ್ಚಿನ ಕಾರ್ಯಕ್ರಮಗಳು ಮಹಿಳೆಯರನ್ನು ಒಳಗೊಂಡಂತೆ ದುರ್ಬಲ ಮತ್ತು ಸಾಮಾಜಿಕವಾಗಿ ಹೊರಗಿಡಲ್ಪಟ್ಟವರ ಅಗತ್ಯಗಳನ್ನು ಪೂರೈಸಲು ವಿಶೇಷ ಅವಕಾಶವನ್ನು ನೀಡುತ್ತವೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೌಲ್ಯಮಾಪನವನ್ನು ವರದಿ ಮಾಡುವಾಗ, ನಾವು ಕೆಲವು ಲಿಂಗ

ಕಾಳಜಿಯನ್ನು ಅಂತಿಮವಾಗಿ ತರುತ್ತೇವೆ, ಮುಖ್ಯವಾಗಿ ಪ್ರತಿ ವಿಶ್ಲೇಷಣೆಯ ಕೊನೆಯಲ್ಲಿ ಪ್ರಕ್ರಿಯೆಗಳ ವಿವರಣೆಯನ್ನು ಪುನರಾವರ್ತಿಸುವುದಕ್ಕಿಂತ ಆವಿಷ್ಕಾರಗಳನ್ನು ಪ್ರಸ್ತುತಪಡಿಸುವುದು ಸರಳವಾಗಿರುತ್ತದೆ. ಆದರೆ ಸ್ಪಷ್ಟತೆಯನ್ನು ಸಾಧಿಸುವ ಮತ್ತು ಪುನರಾವರ್ತನೆಗಳನ್ನು ತಪ್ಪಿಸುವ ನಿರ್ದಿಷ್ಟ ಉದ್ದೇಶಕ್ಕಾಗಿ ಈಗ ಇಲ್ಲಿ ಮಾಡಿದಂತೆ ಅವುಗಳನ್ನು ಚರ್ಚಿಸುವುದು ನಂತರದ ಆಲೋಚನೆ ಎಂದು ತಪ್ಪಾಗಿ ಭಾವಿಸಬಾರದು,

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆಯರು ಕೂಲಿ ಕೆಲಸಗಾರರಾಗಿ ಕೆಲಸ ಮಾಡುತ್ತಾರೋ ಇಲ್ಲವೋ ಎಂಬುದು ಲಿಂಗ ವ್ಯತ್ಯಾಸ ದೃಷ್ಟಿಕೋನದಿಂದ ನಾವು ನಮ್ಮ ದತ್ತಾಂಶವವನ್ನು ಪರಿಶೀಲಿಸುವ ಮೊದಲ ಸಮಸ್ಯೆಯಾಗಿರುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಕಾರ್ಮಿಕರಾಗಿ ನೋಂದಾಯಿಸಲ್ಪಟ್ಟಿರುವ ಪುರುಷರು ಮತ್ತು ಮಹಿಳೆಯರ ಕುರಿತಾದ ದೊಡ್ಡ ದತ್ತಾಂಶವು ಶೇಕಡಾ 45.35ರಷ್ಟಿದೆ ಎಂದು ತೋರಿಸಿದರೂ, ಸುಮಾರು ಅರ್ಧದಷ್ಟು ಪುರುಷರು ಮತ್ತು ಮಹಿಳೆಯರು ಸಕ್ರಿಯ ಕೆಲಸಗಾರರಾಗಿದ್ದಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಸಕ್ರಿಯ ಕೆಲಸಗಾರನಾಗಿರುವಾಗ ಒಬ್ಬ ಗಂಡು ಅಥವಾ ಹೆಣ್ಣು ಎಂಬುದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ದತ್ತಾಂಶವು ರಾಷ್ಟ್ರೀಯ ಮಾದರಿಗೆ ಹೆಚ್ಚು ಕಡಿಮೆ ಹೋಲುತ್ತದೆ, ಯಾವುದಾದರೂ ಎರಡು ಅಥವಾ ಮೂರು ಶೇಕಡಾ ಅಂಕಗಳಿಗೆ ಸಂಬಂಧಿಸಿದಂತೆ ಮಾತ್ರ ವ್ಯತ್ಯಾಸವಿದೆ. ಆದಾಗ್ಯೂ, ಅವರು ತಮ್ಮನ್ನು ಅಥವಾ ತಮ್ಮ ಕುಟುಂಬದವರಿಗೆ ಲಾಭದಾಯಕವಾದ ಯೋಜನೆಗಳಲ್ಲಿ ಕೆಲಸ ಮಾಡುತ್ತಾರೋ ಇಲ್ಲವೋ ಎಂಬ ಮಾಹಿತಿಯು ಇತರರಿಗೆ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುವುದರ ಎದುರಿಗೆ, ಪುರುಷರಿಗಿಂತ ಸ್ವಲ್ಪ ಹೆಚ್ಚು ಮಹಿಳೆಯರು (ಮೂರು ಪ್ರತಿಶತದಷ್ಟು ಹೆಚ್ಚಿನವರು) ತಮ್ಮನ್ನು ಅಥವಾ ತಮ್ಮ ಕುಟುಂಬದವರಿಗೆ ಕೆಲಸ ಮಾಡುವುದರಲ್ಲಿ ತೊಡಗಿಸಿಕೊಳ್ಳುತ್ತಾರೆ ಎಂದು ತೋರಿಸಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕೂಲಿ ಕಾರ್ಮಿಕರಲ್ಲಿ ಮಹಿಳೆಯರಲ್ಲಿ ಸ್ವಲ್ಪ ಕಡಿಮೆ ಪಾಲು ಇದೆ.

**ಕೋಷ್ಟಕ 25: ಕೂಲಿಗಾಗಿ ಅಥವಾ ಸ್ವಂತಕ್ಕಾಗಿ ಕೆಲಸ ಮಾಡುವುದರಲ್ಲಿ ಲಿಂಗ ವ್ಯತ್ಯಾಸಗಳು**

| ಕೂಲಿಗಾಗಿ ಅಥವಾ ಸ್ವಂತಕ್ಕಾಗಿ ಕೆಲಸ ಮಾಡುವುದು | | | |
|---|---|---|---|
| ಲಿಂಗ | ಸ್ವಂತಕ್ಕಾಗಿ | ಸ್ವಂತಕ್ಕಾಗಿ ಮತ್ತು ಇತರಿಗಾಗಿ | ಒಟ್ಟು |
| ಪುರುಷರು | 37.52 | 62.48 | 3158 |
| ಸ್ತ್ರೀಯರು | 40.51 | 59.49 | 1143 |
| ಒಟ್ಟು | 38.32 | 61.68 | 4301 |
| | 1648 | 2653 | |

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗಾಗಿ ಮಾಡಿದ ಉದ್ಯೋಗ ಕಾರ್ಡ್ ಪಡೆಯಲು ಇತರರ ಸಹಾಯವನ್ನು ಕೋರಿ ಪುರುಷರು ಮತ್ತು ಮಹಿಳಾ ಕಾರ್ಮಿಕರ ನಡುವೆ ಏನಾದರೂ ವ್ಯತ್ಯಾಸವಿದೆಯೇ ಎಂದು ನೋಡುವುದು ಎರಡನೆಯ ಅಂಶವಾಗಿದೆ. ಪ್ರತಿಕ್ರಿಯಿಸಿದವರಲ್ಲಿ ಹೆಚ್ಚಿನವರು–ಪುರುಷರು ಅಥವಾ ಮಹಿಳೆಯರು ಕಾರ್ಡ್‌ಗಳನ್ನು ಪಡೆಯುವಲ್ಲಿ ಅಥವಾ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ತಮ್ಮನ್ನು ತಾವು ಕಾರ್ಮಿಕರಾಗಿ ನೋಂದಾಯಿಸಿಕೊಳ್ಳುವಲ್ಲಿ ಒಬ್ಬರು ಅಥವಾ

ಇನ್ನೊಬ್ಬರ ಮೇಲೆ ಅವಲಂಬಿತರಾಗಿದ್ದಾರೆಯೇ ಎಂದು ನೋಡುವುದಾಗಿರುತ್ತದೆ ನಿರೀಕ್ಷೆಯಂತೆ, ಪುರುಷರಿಗಿಂತ ಉದ್ಯೋಗ ಕಾರ್ಡ್‌ಗಳನ್ನು ಪಡೆಯಲು ಮಹಿಳೆಯರು ಇತರರ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ ಎಂದು ದತ್ತಾಂಶವು ತೋರಿಸಿರುತ್ತದೆ: 60 ಪ್ರತಿಶತ ಪುರುಷರಿಗೆ ಇತರರ ಸಹಾಯದ ಅಗತ್ಯವಿದ್ದರೆ, ಸ್ವಲ್ಪ ಹೆಚ್ಚಿನ ಮಹಿಳೆಯರಿಗೆ ಅಂದರೆ 68 ಪ್ರತಿಶತದಷ್ಟು ಮಹಿಳೆಯರಿಗೆ ಇತರರ ಸಹಾಯದ ಅಗತ್ಯವಿದೆ. ಎರಡೂ ಸಂದರ್ಭಗಳಲ್ಲಿ, ವ್ಯಕ್ತಿಗಳನ್ನು ಕಾರ್ಮಿಕರಾಗಿ ನೋಂದಾಯಿಸಲು ಸಹಾಯ ಮಾಡುವಲ್ಲಿ ಪಂಚಾಯಿತಿಗಳು ಮುಂದಾಗಿದ್ದರು. ಅವರಿಗೆ ಸಹಾಯ ಮಾಡಿದವರಲ್ಲಿ ಯಾರಾದರೂ 'ಗುತ್ತಿಗೆದಾರರು' ಎಂದು ಕಂಡುಹಿಡಿಯಲು ನಾವು ಉತ್ಸುಕರಾಗಿದ್ದೇವೆ, ಈ ದತ್ತಾಂಶವನ್ನು ಯಾವುದೇ ವಿಶ್ವಾಸಾರ್ಹ ರೂಪದಲ್ಲಿ ಪಡೆಯಲು ನಮಗೆ ಸಾಧ್ಯವಾಗಲಿಲ್ಲ.

**ಕೋಷ್ಟಕ 26: ಲಿಂಗ ಮತ್ತು ಉದ್ಯೋಗ ಕಾರ್ಡ್ ತಯಾರಿಸಲು ಬೆಂಬಲ**

| ಉದ್ಯೋಗ ಕಾರ್ಡ್ ತಯಾರಿಸಲು ಬೆಂಬಲ | | | | | | |
|---|---|---|---|---|---|---|
| ಲಿಂಗ | ಸ್ವಂತ | ಕುಟುಂಬದಲ್ಲಿ ಇತರರು | ಪಂಚಾಯಿತಿ | ಇತರರು | ಯಾವುದೇ ಪ್ರತಿಕ್ರಿಯೆ ಇಲ್ಲ | ಒಟ್ಟು |
| ಪುರುಷರು | 40.12 | 1.23 | 55.76 | 0.28 | 2.60 | 3158 |
| ಸ್ತ್ರೀಯರು | 32.37 | 2.36 | 62.12 | 0.44 | 2.71 | 1143 |
| ಒಟ್ಟು | 38.06 | 1.53 | 57.45 | 0.33 | 2.63 | 4301 |
| | 1637 | 66 | 2471 | 14 | 113 | |

ನಮ್ಮ ಗಮನದಲ್ಲಿ ಮೂರನೇ ಲಿಂಗ ಆಯಾಮವು ಪುರುಷರು ಮತ್ತು ಮಹಿಳೆಯರು ಎಷ್ಟು ಬಾರಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸಗಾರರಾಗಿ ಕೆಲಸ ಮಾಡಿದ್ದಾರೆ ಎಂಬುದರ ಮೇಲ ಇರುತ್ತದೆ. ನಮ್ಮ ಮಾದರಿ ಪ್ರತಿಕ್ರಿಯೆದಾರರ ಪಾರ್ಶ್ವ ನೋಟದ ಭಾಗವಾಗಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸಗಾರರಾಗಿ ನೋಂದಾಯಿಸಿದ ನಂತರ ಅವರು ಎಷ್ಟು ಬಾರಿ ಕೆಲಸ ಮಾಡಿದ್ದಾರೆ ಎಂಬುದನ್ನು ನಾವು ಪರಿಶೀಲಿಸಿದ್ದೇವೆ ಎಂದು ನೆನಪಿಸಿಕೊಳ್ಳಬಹುದು (ಕೋಷ್ಟಕ 15 ನೋಡಿರಿ). ಈ ಸಂದರ್ಭವು ಅವರು ತಮ್ಮ ಉದ್ಯೋಗ ಕಾರ್ಡ್‌ಗಳನ್ನು ತಯಾರಿಸಿದ ವರ್ಷಗಳು ಮತ್ತು ಅವರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕೆಲಸಗಾರರಾಗಿ ಎಷ್ಟು ಬಾರಿ ಕೆಲಸ ಮಾಡಿದರು. ಅದೇ ದತ್ತಾಂಶವನ್ನು ನೋಡಿದರೆ, ಲಿಂಗ ದೃಷ್ಟಿಕೋನದಿಂದ, ಮಹಿಳೆಯರಲ್ಲಿ ಒಂದು ಬಾರಿ ಮಾತ್ರ ಕೆಲಸ ಮಾಡುವವರಲ್ಲಿ ಹೆಚ್ಚಿನ ಪಾಲು ಇರುವುದನ್ನು ನಾವು ಕಂಡುಕೊಂಡಿದ್ದೇವೆ, ಆದರೆ ನಂತರದ ವರ್ಷಗಳಲ್ಲಿ ಪುರುಷರು ಸಹ ಕೆಲಸ ಮಾಡಿರುತ್ತಾರೆ. ಬಹುಶಃ, ಮಹಿಳೆಯರು ಇತರರಿಗೆ ಕೂಲಿಗಾಗಿ ಕೆಲಸ ಮಾಡುವುದಕ್ಕಿಂತ, ತಮ್ಮನ್ನು ಅಥವಾ ತಮ್ಮ ಕುಟುಂಬದವರಿಗೆ ಅನುಕೂಲವಾಗುವಂತೆ ಮಾಡುವ ಯೋಜನೆಗಳಲ್ಲಿ ಕೆಲಸ ಮಾಡಲು ಒಲವನ್ನು ತೋರಿಸಿರುತ್ತಾರೆ.

**27: ಲಿಂಗ ಮತ್ತು ಕೆಲಸ ಮಾಡಿದ ಸಮಯದ ಸಂಖ್ಯೆ**

| | ಕೆಲಸ ಮಾಡಿದ ಸಮಯದ ಸಂಖ್ಯೆ | | | | |
|---|---|---|---|---|---|
| ಲಿಂಗ | ಒಂದು ವರ್ಷ ಮಾತ್ರ | ಎರಡು ವರ್ಷಗಳು | ಮೂರು ವರ್ಷಗಳು | ನಾಲ್ಕು ವರ್ಷಗಳು | ಒಟ್ಟು |
| ಪುರುಷರು | 78.88 | 18.97 | 2.06 | 0.09 | 3158 |
| ಸ್ತ್ರೀಯರು | 81.01 | 16.80 | 2.19 | | 1143 |
| ಒಟ್ಟು | 79.45 | 18.39 | 2.09 | 0.07 | 4301 |
| | 3417 | 791 | 90 | 3 | |

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಲ್ಲಿ ಪುರುಷರು ಮತ್ತು ಮಹಿಳಾ ಕಾರ್ಮಿಕರಿಗೆ ತಮ್ಮ ಕೂಲಿಯನ್ನು ಸಮಯಕ್ಕೆ ಅಥವಾ ಹೆಚ್ಚು ವಿಳಂಬವಿಲ್ಲದೆ ಪಡೆಯಲು ಸಾಧ್ಯವಾಗಿದೆಯೇ? ಅಥವಾ, ಯಾವುದೇ ಒಂದು ಲಿಂಗವು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಹೆಚ್ಚಿನ ಲಾಭವನ್ನು ಪಡೆದಿದೆಯೇ? ಈ ಪ್ರಶ್ನೆಗಳಿಗೆ ಉತ್ತರಿಸುವುದು ನಮ್ಮ ಲಿಂಗ ಕಾಳಜಿಯ ನಾಲ್ಕನೆಯ ಆಯಾಮವಾಗಿರುತ್ತದೆ.

**ಕೋಷ್ಟಕ 28: ಲಿಂಗ ಮತ್ತು ವಿಳಂಬ ಕೂಲಿ ಪಾವತಿಯು ವರದಿಯಾಗಿರುವುದು**

| **ಲಿಂಗ** | ವಿಳಂಬ ಕೂಲಿ ಪಾವತಿ ವರದಿಯಾಗಿರುವುದು | | |
|---|---|---|---|
| | ವಿಳಂಬ ಇಲ್ಲ | ವಿಳಂಬ ಕೂಲಿ ಪಾವತಿ | ಒಟ್ಟು |
| ಪುರುಷರು | 76.00 | 24.00 | 3158 |
| ಸ್ತ್ರೀಯರು | 72.09 | 27.91 | 1143 |
| ಒಟ್ಟು | 74.96 | 25.04 | 4301 |
| | 3224 | 1077 | |

ಮೇಲಿನ ಕೋಷ್ಟಕದಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಕೂಲಿ ಪಾವತಿಯ ವಿಳಂಬವನ್ನು ಕಡಿಮೆ ಮಾಡಲು ಅಥವಾ ತಪ್ಪಿಸಲು ಮಹಿಳೆಯರಿಗೆ ಸ್ವಲ್ಪ ಹೆಚ್ಚಿನ ಅನುಕೂಲವಿದೆ. ಪುರುಷ ಕಾರ್ಮಿಕರು ವ್ಯಕ್ತಪಡಿಸಿದ್ದಕ್ಕಿಂತಲೂ ಕೂಲಿ ಪಾವತಿಯಲ್ಲಿ ವಿಳಂಬವಾಗಿದೆ ಎಂದು ಶೇಕಡಾ ನಾಲ್ಕರಷ್ಟು ಮಹಿಳೆಯರು ಕಂಡುಕೊಂಡಿದ್ದಾರೆ. ಈ ವಿಷಯದಲ್ಲಿ ಪುರುಷರು ಮತ್ತು ಮಹಿಳೆಯರ ನಡುವಿನ ವ್ಯತ್ಯಾಸವು ಅತ್ಯಲ್ಪವಾಗಿದ್ದರೂ, ಪುರುಷರಿಗಿಂತ ಹೆಚ್ಚಿನ ಮಹಿಳೆಯರು ವಿಳಂಬವನ್ನು ಅನುಭವಿಸಿದ್ದಾರೆ ಎಂಬುದನ್ನು ಗಮನಿಸಬೇಕಾದರೆ. ಇದು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನವು ಲಿಂಗ ತಟಸ್ಥವಾಗಿದೆಯೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ, ಅಥವಾ ವ್ಯವಸ್ಥೆಯಲ್ಲಿ ಅದು ಮಹಿಳೆಯರಿಗಿಂತ ಪುರುಷರಿಗೆ ಹೆಚ್ಚು ಒಲವು ತೋರುತ್ತದೆಯೇ? ಈ ಪ್ರಶ್ನೆಗಳಿಗೆ ಉತ್ತರಿಸುವಾಗ, ಹಾಜರಾತಿ ಪಟ್ಟಿಯನ್ನು ತಯಾರಿಸುವಲ್ಲಿ, ನಿಧಿ ವರ್ಗಾವಣೆ ಆದೇಶಗಳನ್ನು ಹಾದುಹೋಗುವಲ್ಲಿ ಅಥವಾ ನಿಧಿ ವರ್ಗಾವಣೆ ಆದೇಶಗಳಿಗೆ ಡಿಜಿಟಲ್ ಸಹಿ ಹಾಕುವಲ್ಲಿ, ಗಮನಹರಿಸುವುದು ವೈಯಕ್ತಿಕ ಕೆಲಸಗಾರರಲ್ಲ ಎಂಬ ಅಂಶವನ್ನು ಗಣನೆಗೆ ತೆಗೆದುಕೊಳ್ಳುವುದು ಅವಶ್ಯಕವಾಗಿರುತ್ತದೆ. ಬದಲಾಗಿ, ಇದು ಒಂದೇ ಕೆಲಸಕ್ಕಾಗಿ ಕೆಲಸ ಮಾಡಿರುವ ಕಾರ್ಮಿಕರ ಗುಂಪು ಆಗಿರುತ್ತದೆ ಆದ್ದರಿಂದ, ಹೆಚ್ಚಿನ

ಮಹಿಳೆಯರು ತಾವು ಅನುಭವಿಸಿದ್ದೇವೆ ಎಂದು ವರದಿ ಮಾಡಿದರೆ, ಕಾರಣಗಳು ನಿಜವಾದ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಗಿಂತ ನಿಧಿ ವರ್ಗಾವಣೆ ಆದೇಶವು ಪೂರ್ವ ಪ್ರಕ್ರಿಯೆಗಳೊಂದಿಗೆ ಹೆಚ್ಚು ಸಂಬಂಧವನ್ನು ಹೊಂದಿರುತ್ತವೆ.

**ಚಿತ್ರ 31: ಲಿಂಗ ಮತ್ತು ವಿಳಂಬ ಕೂಲಿ ಪಾವತಿಯು ವರದಿಯಾಗಿರುವುದು**




ಚಿತ್ರ 31 ರ ಸಹಾಯದಿಂದ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಹೊರತಾಗಿಯೂ ವಿಳಂಬವಾದ ಕೂಲಿಯ ಗ್ರಹಿಕೆ ಮಹಿಳಾ ಪ್ರತಿಕ್ರಿಯೆದಾರರಲ್ಲಿ ಸ್ವಲ್ಪ ಹೆಚ್ಚಾಗಿರುವುದನ್ನು ನಾವು ಗಮನಿಸಬಹುದಾಗಿರುತ್ತದೆ. 24 ಪ್ರತಿಶತದಷ್ಟು ಪುರುಷರು ಕೂಲಿ ಪಾವತಿಯ ವಿಳಂಬದ ಅನುಭವವನ್ನು ವ್ಯಕ್ತಪಡಿಸಿದರೆ, ಸುಮಾರು ನಾಲ್ಕು ಪ್ರತಿಶತದಷ್ಟು ಮಹಿಳೆಯರು ತಮ್ಮ ಕೂಲಿಯ ಪಾವತಿಯನ್ನು ತಡವಾಗಿ ಪಡೆದಿದ್ದಾರೆ. ಈ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಮರುಪರಿಶೀಲನೆ ಮಾಡಿದಾಗ, ಹೆಚ್ಚಿನ ಮಹಿಳೆಯರು ಕೂಲಿ ಪಾವತಿಯಲ್ಲಿ ಯಾವುದೇ ವಿಳಂಬವನ್ನು ಅನುಭವಿಸಲು ವಿಶೇಷ ಕಾರಣಗಳಿಲ್ಲ ಎಂದು ನಮಗೆ ತಿಳಿಸಲಾಗಿರುತ್ತದೆ. ಒಬ್ಬ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಅಭಿಪ್ರಾಯವೇನೆಂದರೆ, 'ಕೆಲವು ಮಹಿಳೆಯರು ತಮ್ಮ ಕೂಲಿಯ ಬಗ್ಗೆ ಪುರುಷರಿಗಿಂತ ತೀರಾ ತಡವಾಗಿ ತಮ್ಮ ಖಾತೆಗೆ ಸಲ್ಲುತ್ತದೆ ಎಂಬ ಅರಿವು ಇರಬಹುದು. ಈ ಕಾರಣಕ್ಕಾಗಿಯೇ ನೀವು ಹೆಚ್ಚಿನ ಮಹಿಳೆಯರು ಕೂಲಿ ಪಾವತಿಯ ವಿಳಂಬದ ಬಗ್ಗೆ ದೂರು ನೀಡಬಹುದು. ಎಟಿಎಂ ಕಾರ್ಡ್‌ಗಳ ಬಳಕೆಯನ್ನು ಅವರು ಚೆನ್ನಾಗಿ ತಿಳಿದಿಲ್ಲದಿರಬಹುದು ಮತ್ತು ಆದ್ದರಿಂದ ವಿಳಂಬ ಕೂಲಿ ಪಾವತಿ ಎಂದು ಕಷ್ಟಗಳನ್ನು ದೂಷಿಸಬಹುದು.'

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಯೋಜನವು ವಾಣಿಜ್ಯ ಬ್ಯಾಂಕುಗಳು ತಮ್ಮ ಖಾತೆದಾರರಿಗೆ ಒದಗಿಸುವ ಡೆಬಿಟ್ ಕಾರ್ಡ್‌ಗಳ ಬಳಕೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ಪರಿಗಣಿಸಿ, ಅವುಗಳನ್ನು ಬಳಸುವ ಜ್ಞಾನವು ಪುರುಷರು ಮತ್ತು ಮಹಿಳಾ ಕಾರ್ಮಿಕರಿಗೆ ಒಂದೇ ಆಗಿದೆಯೇ ಎಂದು ಪರೀಕ್ಷಿಸುವುದು ಅವಶ್ಯಕವಿರುತ್ತದೆ. ನಮ್ಮ ಪ್ರಶ್ನೆಗೆ ಉತ್ತರವಾಗಿ, ಶೇಕಡಾ 5ರಷ್ಟು ಅಂಕಗಳಿಂದ ಮಹಿಳೆಯರು ಈ ವಿಷಯದಲ್ಲಿ ಹೆಚ್ಚು ಅನಾನುಕೂಲತೆಯನ್ನು ಹೊಂದಿದ್ದಾರೆಂದು ನಾವು ಕಂಡುಕೊಂಡಿದ್ದೇವೆ. ಅಂದರೆ, ಶೇಕಡಾ 29.40 ರಷ್ಟು ಮಹಿಳೆಯರು ಎಟಿಎಂ ಯಂತ್ರಗಳಲ್ಲಿ ಡೆಬಿಟ್ ಕಾರ್ಡ್ ಬಳಸುವ ಬಗ್ಗೆ ಉತ್ತಮ ಜ್ಞಾನವನ್ನು ಪಡೆದರೆ, ಪುರುಷರ ಪ್ರತಿಕ್ರಿಯೆದಾರರಲ್ಲಿ ಸ್ವಲ್ಪ ಹೆಚ್ಚಿನವರು (ಶೇಕಡಾ 34.80) ಅಂತಹ ಜ್ಞಾನವನ್ನು ಪಡೆದಿರುತ್ತಾರೆ. ಇದಕ್ಕೆ ಅನುಗುಣವಾಗಿ, ಹೆಚ್ಚಿನ ಮಹಿಳೆಯರು ಅವುಗಳನ್ನು ಬಳಸುವುದು

ಕಷ್ಟಕರವೆಂದು ವ್ಯಕ್ತಪಡಿಸಿದ್ದಾರೆ ಮತ್ತು ಅವರ ಕಾರ್ಯಾಚರಣೆಗೆ ಇತರರನ್ನು ಅವಲಂಬಿಸಿರುತ್ತಾರೆ. ಹೇಗಾದರೂ, ನಾವು ನಡೆಸಿದ ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಭಾಗವಹಿಸಿದ ಎಲ್ಲ ಮಹಿಳೆಯರು ಈ ಅವಧಿಯಲ್ಲಿ, ಅವರ ಮನೆಗಳಲ್ಲಿರುವ ಪುರುಷರು ಡೆಬಿಟ್ ಕಾರ್ಡುಗಳನ್ನು ಬಳಸಿದ್ದಾರೆ ಎಂದು ಒಪ್ಪಿಕೊಂಡಿರುತ್ತಾರೆ.

ಈ ಅಧ್ಯಯನವು ಪುರುಷರು ಅಥವಾ ಮಹಿಳೆಯರು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರಿಗೆ ಎಟಿಎಂ ಕಿಯೋಸ್ಕ್‌ನಲ್ಲಿ ಡೆಬಿಟ್ ಕಾರ್ಡ್‌ನ ಕಾರ್ಯಾಚರಣೆ ಸೇರಿದಂತೆ ಮೂಲ ಬ್ಯಾಂಕಿಂಗ್ ಕಾರ್ಯಾಚರಣೆಗಳಲ್ಲಿ ತರಬೇತಿ ನೀಡಬೇಕು ಎಂಬ ನಿರ್ದಿಷ್ಟ ಶಿಫಾರಸ್ಸನ್ನು ಮಾಡುತ್ತದೆ.

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯೊಂದಿಗೆ ಇರುವ ಯಾವುದಾದರೂ ಒಂದು ಪ್ರಮುಖ ತೊಂದರೆ ಎಂದರೆ, ಕೆಲಸಗಾರನು ಬ್ಯಾಂಕ್, ಅಥವಾ ಎಟಿಎಂ ಕಿಯೋಸ್ಕ್‌ಗೆ ಭೇಟಿ ನೀಡಬೇಕಾದರೆ ಕೆಲವು ಹೆಚ್ಚುವರಿ ವೆಚ್ಚಗಳನ್ನು ಭರಿಸುತ್ತಾನೆ. ಈ ವೆಚ್ಚವು ಖಂಡಿತವಾಗಿಯೂ ಬಸ್ ಅಥವಾ ಬಸ್‌ಗೆ ಪಾವತಿಸಬೇಕಾದ ಕಾರಣದಿಂದಾಗಿರಬಹುದು ಬಾಡಿಗೆಗೆ ಪಡೆದ ತ್ರಿಚಕ್ರ ವಾಹನಗಳಿಗೆ (ಆಟೋ–ರಿಕ್ಷಾ) ಶುಲ್ಕ ಇರಬಹುದು ಅಥವಾ ಸ್ವಂತ ವಾಹನವನ್ನು ಬಳಸುವುದಕ್ಕಾಗಿ ಇಂಧನ ವೆಚ್ಚಗಳು ಇರಬಹುದು. ಆದರೆ ಕೆಲವು ಪ್ರತಿಕ್ರಿಯೆದಾರರು ಗಮನಿಸಿದಂತೆ, ಬ್ಯಾಂಕ್‌ಗೆ ಹೋಗಲು ಅವರೊಂದಿಗೆ ಬರುವ ಅಥವಾ ಖಾತೆಯನ್ನು ನಿರ್ವಹಿಸಲು ಸಹಾಯ ಮಾಡುವ ವ್ಯಕ್ತಿಗೆ ಪಾವತಿಸಬೇಕಾದ ಸಲಹೆಗಳ ಪರಿಣಾಮವಾಗಿ ಹೆಚ್ಚುವರಿ ವೆಚ್ಚಗಳು ಸಂಭವಿಸುತ್ತವೆ. ಈ ವಿಷಯದಲ್ಲಿ ನಾವು ಲಿಂಗ ವ್ಯತ್ಯಾಸವನ್ನು ಗಮನಿಸಿದರೆ (ಚಿತ್ರ 32), ಪುರುಷ ಕಾರ್ಮಿಕರಿಗಿಂತ ಹೆಚ್ಚಿನ ಮಹಿಳಾ ಕಾರ್ಮಿಕರು ಯಾವುದೇ ಈ ತರಹದ ಖರ್ಚಗಳನ್ನು ಅನುಭವಿಸುತ್ತಾರೆ ಎಂದು ಗಮನಿಸಬಹುದು: ಯಾವುದೇ ಖರ್ಚುಗಳಾಗಿಲ್ಲ ಎಂದು ವರದಿ ಮಾಡಿದ 25 ಪ್ರತಿಶತದಷ್ಟು ಪುರುಷರ ಎದುರು ಕೇವಲ 15ರಷ್ಟು ಶೇಕಡಾ ಮಹಿಳೆಯರು ಈ ರೀತಿ ವರದಿ ಮಾಡಿರುತ್ತಾರೆ

**ಚಿತ್ರ 32: ಲಿಂಗ ಮತ್ತು ಬ್ಯಾಂಕಿಗೆ ಹೋಗುವ ವೆಚ್ಚಗಳು**




ಹೋಲಿಕೆಯ ಉದ್ದೇಶಗಳಿಗಾಗಿ ನಾವು ವರ್ಗೀಕರಿಸಿದಂತೆ ಪ್ರತಿ ಭೇಟಿಗೆ ಪ್ರತಿ ವರ್ಗದ ಖರ್ಚಿನಲ್ಲಿ, ಮಹಿಳೆಯರ ಪಾಲು ಪುರುಷರಿಗಿಂತ ಹೆಚ್ಚಾಗಿರುತ್ತದೆ; ಇದು ರೂ. 26 ರಿಂದ 50ರ ವೆಚ್ಚದ ಗುಂಪಿನಲ್ಲಿ ಅತ್ಯಧಿಕವಾಗಿರುತ್ತದೆ ಸಂಕ್ಷಿಪ್ತವಾಗಿ

ಹೇಳುವುದಾದರೆ, ಮಹಿಳಾ ಕಾರ್ಮಿಕರಿಗೆ ಪುರುಷರಿಗಿಂತ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವಲ್ಲಿ ಹೆಚ್ಚಿನ ಅಧಿಕ ವೆಚ್ಚಗಳ ಹೊರೆ ಇದೆ ಎಂಬುದು ಇದರಿಂದ ಸ್ಪಷ್ಟವಾಗಿರುತ್ತದೆ.

**ಕೋಷ್ಟಕ 29: ಲಿಂಗ ಡೆಬಿಟ್ ಕಾರ್ಡ್ ಬಳಸುವ ಮತ್ತು ಜ್ಞಾನ**

| ಲಿಂಗ | ಡೆಬಿಟ್ ಕಾರ್ಡ್ ಬಳಸುವ ಜ್ಞಾನ | | | ಒಟ್ಟು |
|---|---|---|---|---|
| | ಹೌದು | ಇಲ್ಲ | ಇತರರ ಮೇಲೆ ಅವಲಂಬಿಸಲಾಗಿದೆ | |
| ಪುರುಷರು | 34.80 | 50.13 | 15.07 | 3158 |
| ಸ್ತ್ರೀಯರು | 29.40 | 51.53 | 19.07 | 1143 |
| ಒಟ್ಟು | 33.36 | 50.50 | 16.14 | 4301 |
| | 1435 | 2172 | 694 | |

ಅನುಭವಿಸಿದಂತೆ ಮತ್ತು/ಅಥವಾ ವ್ಯಕ್ತಪಡಿಸಿದಂತೆ ಹೆಚ್ಚಿನ ಮಹಿಳಾ ಪ್ರತಿಕ್ರಿಯೆದಾರರಿಗೆ ಪುರುಷರಿಗಿಂತ ಎಟಿಎಂ ಅನ್ನು ನಿರ್ವಹಿಸುವ ಅಥವಾ ಅವರ ಡೆಬಿಟ್ ಕಾರ್ಡ್‌ಗಳನ್ನು ಬಳಸುವ ವಿಧಾನಗಳ ಬಗ್ಗೆ ತಿಳಿದಿಲ್ಲದಿರಬಹುದು. ಮಹಿಳೆಯರಿಗಿಂತ ಶೇಕಡಾ 5 ರಷ್ಟು ಹೆಚ್ಚು ಡೆಬಿಟ್ ಕಾರ್ಡ್ ಬಳಸುವ ಜ್ಞಾನವನ್ನು ಪುರುಷರು ಹೊಂದಿದ್ದಾರೆಂದು ವರದಿಯಾಗಿರುತ್ತದೆ; ಅದೇ ರೀತಿ ಮಹಿಳೆಯರ ಡೆಬಿಟ್ ಕಾರ್ಡ್‌ಗಳನ್ನು ಬಳಸುವುದಕ್ಕಾಗಿ ಇತರರ ಮೇಲೆ (ಜ್ಞಾನದೊಂದಿಗೆ) ಹೆಚ್ಚಿನ ಅವಲಂಬನೆ ಇರುತ್ತದೆ. ಅವರ ಜ್ಞಾನದ ಕೊರತೆ ಮತ್ತು ಇತರರ ಮೇಲೆ ಅವಲಂಬಿತವಾಗಿರುವುದರಿಂದ, ಮಹಿಳೆಯರು ಎಟಿಎಂ ಕಿಯೋಸ್ಕ್‌ಗಳಿಗೆ ಭೇಟಿ ನೀಡುವುದು ಕಡಿಮೆ ಮತ್ತು ಅವರ ಕೂಲಿಯನ್ನು ಜಮಾ ಮಾಡಲಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ಅವರು ಎಷ್ಟು ಬಾರಿ ಪರಿಶೀಲಿಸಬೇಕಾಗಿತ್ತು. ಯಾವುದೇ ಸಂದರ್ಭದಲ್ಲಿ, ಸಾಮಾನ್ಯವಾಗಿ ಮಹಿಳಾ ಕಾರ್ಮಿಕರ ಪರವಾಗಿ ಎಟಿಎಂ ಅನ್ನು ಪರಿಶೀಲಿಸಿದ ಮನೆಯ ಪುರುಷ ಸದಸ್ಯ, ಆ ನಿರ್ದಿಷ್ಟ ಉದ್ದೇಶಕ್ಕಾಗಿ ಹಳ್ಳಿಯ ಹೊರಗೆ ನಿರ್ದಿಷ್ಟವಾಗಿ ಪ್ರಯಾಣಿಸುವುದು ಸಹ ಅವರಿಗೆ ಕಷ್ಟವಾಗಿರುತ್ತದೆ.

ಕಾರ್ಯಾಚರಣೆಯಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಲಿಂಗ ಆಯಾಮಗಳ ಮೇಲಿನ ವಿಶ್ಲೇಷಣೆಯಿಂದ ಯಾವ ತೀರ್ಮಾನಗಳನ್ನು ತೆಗೆದುಕೊಳ್ಳಬಹುದು? ಎರಡು ವಿಶಾಲವಾದ ಸಾಮಾನ್ಯೀಕರಣಗಳನ್ನು ಮಾಡಬಹುದು: ಮೊದಲು ಯಾವುದೇ ವ್ಯತ್ಯಾಸವು ಕಿರಿದಾಗಿರುತ್ತದೆ ಮತ್ತು ಪುರುಷರು ಮತ್ತು ಮಹಿಳೆಯರ ನಡುವೆ ಶೇಕಡಾ ಎಂಟಕ್ಕಿಂತ ಹೆಚ್ಚು ಅಂಕಗಳನ್ನು ಹೊಂದಿರುವುದಿಲ್ಲ. ಎರಡನೆಯದಾಗಿ, ಕಂಡುಬರುವ ಯಾವುದೇ ವ್ಯತ್ಯಾಸವು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದಾಗಿರುವುದಕ್ಕಿಂತ ನಿಧಿ ವರ್ಗಾವಣೆ ಆದೇಶದ ಪೂರ್ವದಲ್ಲಿ ಅಥವಾ ಠೇವಣಿ ನಂತರದ ವಿದ್ಯಮಾನಕ್ಕಿಂತ ಹೆಚ್ಚಿನದಾಗಿರುತ್ತದೆ.

# 9. ಪ್ರತಿಫಲನ ಮತ್ತು ತೀರ್ಮಾನಗಳು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005 ರ ಸೆಕ್ಷನ್ 3 (2) ರ ಪ್ರಕಾರ, ಕಾರ್ಮಿಕರಿಗೆ ಕೂಲಿಯನ್ನು ವಾರಕ್ಕೊಮ್ಮೆ ಪಾವತಿಸಬೇಕಾಗುತ್ತದೆ. ಒಂದು ವಾರದ ಅವಧಿಯಲ್ಲಿ ಕೆಲಸದ ಮುಕ್ತಾಯದಲ್ಲಿ, ಕೆಲಸ ಮಾಡಿದ ದಿನಾಂಕದಂದು 15 ದಿನಗಳೊಳಗೆ ವೇತನವನ್ನು ಪಾವತಿಸಬೇಕಾಗಿರುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರು ಹೆಚ್ಚುತ್ತಿರುವ ಸಂಖ್ಯೆಯ ಹಿನ್ನೆಲೆಯಲ್ಲಿ, ಅವರು ಕೈಗೊಂಡ ಕಾಮಗಾರಿಗಾಗಿ ಪಾವತಿಸದ ಕೂಲಿಯನ್ನು ಅಥವಾ ಸಾಮಗ್ರಿಗಳನ್ನು ಸರಬರಾಜು ಮಾಡುವ ಮಾರಾಟಗಾರರಿಗೆ ಪಾವತಿಸದ ವೆಚ್ಚವನ್ನು ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ, ಸರ್ಕಾರವು ಮಾಹಿತಿ ನಿರ್ವಹಣಾ ಪದ್ಧತಿ ಆಧಾರಿತ ನಿಧಿ ನಿರ್ವಹಣೆಯ ವ್ಯವಸ್ಥೆಯನ್ನು ಪ್ರಾರಂಭಿಸಿರುತ್ತದೆ, ಇದನ್ನು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಎಂದು ಕರೆಯಲಾಗುತ್ತದೆ. ಇದು ಫೆಬ್ರವರಿ 2012 ರಲ್ಲಿ ಜಾರಿಗೆ ಬಂದಿರುತ್ತದೆ ಮತ್ತು ಸದರಿ ಹಣಕಾಸು ವರ್ಷದ ಅಂತ್ಯದ ವೇಳೆಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳು ಈ ಹೊಸ ನಿಧಿ ನಿರ್ವಹಣೆಯ ವ್ಯವಸ್ಥೆಯಡಿಯಲ್ಲಿವೆ.

## 9.1 ಈ ಅಧ್ಯಯನದಲ್ಲಿ ನಿರ್ಣಯಿಸಿದ ಉದ್ದೇಶಗಳು:

1. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ವ್ಯವಸ್ಥೆಯು ವೇತನ ಮತ್ತು ವಸ್ತು ಪಾವತಿಗಳನ್ನು ಸ್ವೀಕರಿಸುವ ಸಮಯವನ್ನು ಕಡಿಮೆಗೊಳಿಸಿದೆಯೇ?
2. ಈ ವ್ಯವಸ್ಥೆಯು ಮಧ್ಯವರ್ತಿಗಳ ಹಸ್ತಕ್ಷೇಪ ಮತ್ತು ಭ್ರಷ್ಟಾಚಾರದ ನಿದರ್ಶನಗಳನ್ನು ಕಡಿಮೆಗೊಳಿಸಿದೆಯೇ?
3. ವ್ಯವಸ್ಥೆಯು ಹಣವನ್ನು ನಿಲುಗಡೆ ಮಾಡುವುದನ್ನು ತಪ್ಪಿಸಿದೆಯೇ?
4. ಫಲಾನುಭವಿಗಳು ಬ್ಯಾಂಕುಗಳಿಂದ ಮತ್ತು ಅಗತ್ಯವಿದ್ದಾಗ ಹಣವನ್ನು ಹಿಂಪಡೆಯಲು ಸಮರ್ಥರಾಗಿದ್ದಾರೆಯೇ ಅಥವಾ ವಾಪಸಾತಿ ಮತ್ತು ಇನ್ನಾವುದೇ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳೊಂದಿಗೆ ವ್ಯವಹರಿಸುವಾಗ ಅವರು ತೊಂದರೆಗಳನ್ನು ಎದುರಿಸಿರುವರೇ?

## 9.2 ಮೌಲ್ಯಮಾಪನ ಪ್ರಶ್ನೆಗಳು ಮತ್ತು ಉಪಪ್ರಶ್ನೆಗಳು:

1. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ವಹಿವಾಟು ಆಧಾರಿತ ಮಾಹಿತಿ ನಿರ್ವಹಣಾ ಪದ್ಧತಿ ಆಗಿರುತ್ತದೆ. ಕೂಲಿ ಪಾವತಿಯಡಿಯಲ್ಲಿ ಅಧ್ಯಾಯ 8.7ರ ಪ್ರಕಾರ, ಎಲ್ಲಾ 3 ವರ್ಗದ ವಹಿವಾಟುಗಳನ್ನು ಗ್ರಾಮ ಪಂಚಾಯಿತಿಗಳು / ತಾಲ್ಲೂಕು ಪಂಚಾಯಿತಿಗಳು/ ಜಿಲ್ಲಾ ಪಂಚಾಯಿತಿಗಳು ಸರಿಯಾಗಿ ಅನುಸರಿಸುತ್ತವೆಯೇ? ಇಲ್ಲದಿದ್ದರೆ, ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಕಂಡುಬಂದಿರುವ ವಿಚಲನಗಳು ಯಾವುವು? ದಯವಿಟ್ಟು ವಿಸ್ತಾರವಾಗಿ ತಿಳಿಸಿರಿ.
2. ವಿಳಂಬವನ್ನು ತಪ್ಪಿಸಲು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಸಾಫ್ಟ್‌ವೇರ್ ನಿರ್ವಹಿಸಲು ಎಲ್ಲ ಸಿಬ್ಬಂದಿ ಇದ್ದಾರೆಯೇ? ಇಲ್ಲದಿದ್ದರೆ, ಏಕೆ?, ಹೌದು ಎಂದಾದರೆ, ಇವರೆಲ್ಲರೂ ಮಾಹಿತಿ ನಿರ್ವಹಣಾ ಪದ್ಧತಿಯ ಎಲ್ಲಾ ಅಂಶಗಳ ಬಗ್ಗೆ ತರಬೇತಿ ಪಡೆದಿದ್ದಾರೆಯೇ?
3. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಅಡಿಯಲ್ಲಿ ಕೂಲಿಯನ್ನು ಬಿಡುಗಡೆ ಮಾಡಲು ಬೇಕಾದ ವೆಚ್ಚ ಮತ್ತು ಸಮಯ ಎಷ್ಟು? ಇದಕ್ಕೆ ಎದುರಾಗಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಗಿಂತ ಮೊದಲು ಇದು ಎಷ್ಟಾಗಿತ್ತು?
4. ಗ್ರಾಮ ಪಂಚಾಯಿತಿ / ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಿ ಕುಂದುಕೊರತೆ ನಿವಾರಣಾ ಕಾರ್ಯವಿಧಾನ ಯಾವುದು? ಬೇಡಿಕೆ ನೋಂದಣಿ, ಅಳತೆ, ಕೂಲಿ ಲೆಕ್ಕಾಚಾರ, ನಿಧಿ ವರ್ಗಾವಣೆ ಆದೇಶ

ಹೊರಡಿಸುವುದು ಮತ್ತು ಖಾತೆಗಳನ್ನು ಫಲಾನುಭವಿಗಳಿಗೆ ಜಮಾ ಮಾಡುವ ಕುರಿತು ಎಷ್ಟು ದೂರುಗಳು ಬಂದಿರುತ್ತವೆ? ರಚಿಸಲಾದ ಸಂಬಂಧಪಟ್ಟ ಅಧಿಕಾರಿಗಳು / ಸಮಿತಿಗಳು ಈ ಕುಂದುಕೊರತೆಗಳ ಪರಿಹಾರಕ್ಕಾಗಿ ಏನು ಕ್ರಮ ಕೈಗೊಂಡಿರುತ್ತವೆ?

5. ದೂರುಗಳು ವಿಳಂಬವಾದ ಪಾವತಿಗಳಾಗಿದ್ದರೆ, ವಿಳಂಬವಾದ ಪಾವತಿಗಳಿಗೆ ಎಷ್ಟು ಕಾರ್ಮಿಕರು ಪರಿಹಾರವನ್ನು ಪಡೆದಿದ್ದಾರೆ? ಪಾವತಿ ವಿಳಂಬವಾಗಲು ಕಾರಣಗಳು ಯಾವುವು? ಸಂಸ್ಥೆ / ಅಧಿಕಾರಿಯಿಂದ ವಿಳಂಬ ಸಂಭವಿಸಿದಲ್ಲಿ, ವಿಳಂಬಕ್ಕೆ ಕಾರಣವಾಗಿರುವ ಸಂಸ್ಥೆ / ಅಧಿಕಾರಿಯಿಂದ ವಸೂಲಿ ಮಾಡಲಾಗಿದೆಯೇ? ಹೌದು, ಎಂದಾದರೆ ಪರಿಹಾರದ ವ್ಯಾಪ್ತಿ ಎಷ್ಟು?
6. ಉದ್ಯೋಗರಹಿತ ಭತ್ಯೆಗಾಗಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ಮತ್ತು ಎಷ್ಟು ಪಾವತಿಸಲಾಗಿದೆ? ಉದ್ಯೋಗವನ್ನು ಒದಗಿಸದಿರಲು ಕಾರಣಗಳೇನು? ವಿವರಗಳನ್ನು ನೀಡಿರಿ.
7. ಮೇಲಿನ ಮಾದರಿ ಜಿಲ್ಲೆಗಳಲ್ಲಿ 2015–16ನೇ ಸಾಲಿಗೆ ಪಾವತಿಸಬೇಕಾದ ಬಾಕಿ ಪಾವತಿಗಳಿಗೆ ಇರುವ ಕಾರಣಗಳು ಯಾವುವು? ದಯವಿಟ್ಟು ವಿವರಗಳನ್ನು ನೀಡಿರಿ.
8. ಇದು ನಿಧಿ ನಿರ್ವಹಣೆಯನ್ನು ಎಷ್ಟರ ಮಟ್ಟಿಗೆ ಸುಧಾರಿಸಿರುತ್ತದೆ?
9. ಇದು ಹಿಂದಿನ ವ್ಯವಸ್ಥೆಯ ಮೇಲೆ ಎಷ್ಟು ಮಟ್ಟಿಗೆ ಪಾರದರ್ಶಕತೆಯನ್ನು ತಂದಿರುತ್ತದೆ?
10. ಕ್ಷೇತ್ರ ಮಟ್ಟದ ಕಾರ್ಯಕರ್ತರು ವ್ಯವಸ್ಥೆಯಲ್ಲಿ ಎದುರಿಸುತ್ತಿರುವ ಅಡೆತಡೆಗಳು ಯಾವುವು?
11. ವಿಳಂಬವನ್ನು ಕಡಿಮೆ ಮಾಡಲು ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಲು ಏನು ಶಿಫಾರಸ್ಸು ಮಾಡಬೇಕು?
12. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಹಣದ ದುರುಪಯೋಗ ಮತ್ತು ಒಳಗೊಳ್ಳುವ ಮಧ್ಯವರ್ತಿಯನ್ನು ಎಷ್ಟರ ಮಟ್ಟಿಗೆ ತಡೆಯಲಾಗುತ್ತದೆ?
13. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವೈಶಿಷ್ಟ್ಯಗಳ ವಿನ್ಯಾಸ, ವಿತರಣೆ ಮತ್ತು ಮಾರ್ಪಾಡುಗಳನ್ನು ಸುಧಾರಿಸಲು ಫಲಾನುಭವಿಗಳು ಮತ್ತು ಪಾಲುದಾರರಿಂದ ಯಾವುದೇ ಸಲಹೆಗಳಿದೆಯೇ?

## 9.3. ಅಧ್ಯಯನದ ಶೋಧನೆಗಳು

ಯಾದೃಚ್ಛಿಕವಾಗಿ ಆಯ್ಕೆ ಮಾಡಿದ 6356 ಪ್ರತಿಕ್ರಿಯೆದಾರರಲ್ಲಿ 2055 ಜನರು (ಶೇಕಡಾ 32.33) ಅವರು ಯಾವುದೇ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾಮಗಾರಿಗಳಲ್ಲಿ ಒಮ್ಮೆ ಸಹ ಕೆಲಸ ಮಾಡಿಲ್ಲ ಎಂದು ವರದಿ ಮಾಡಿರುತ್ತಾರೆ. ನಿಷ್ಕ್ರಿಯ ಉದ್ಯೋಗ ಕಾರ್ಡ್ ಹೊಂದಿರುವವರ ಇಷ್ಟು ದೊಡ್ಡ ಪ್ರಮಾಣವು ಕೂಲಿ ಪಾವತಿಗಳನ್ನು ವೇಗಗೊಳಿಸಲು ತೆಗೆದುಕೊಂಡ ಕ್ರಮಗಳ ಪ್ರಭಾವದ ಕುರಿತಾದ ಅಧ್ಯಯನದ ಆವಿಷ್ಕಾರಗಳನ್ನು ದುರ್ಬಲಗೊಳಿಸುತ್ತದೆ; ಅವುಗಳನ್ನು ವಿಶ್ಲೇಷಣೆಯಿಂದ ಹೊರಗಿಡಲಾಗಿರುತ್ತದೆ. ಬದಲಾಗಿ, ಉಳಿದ 4301 ಸಕ್ರಿಯ ಉದ್ಯೋಗ ಕಾರ್ಡ್ ಹೊಂದಿರುವವರ ದತ್ತಾಂಶವನ್ನು ದತ್ತಾಂಶ ವಿಶ್ಲೇಷಣೆಗಾಗಿ ಪರಿಗಣಿಸಲಾಗಿರುತ್ತದೆ. ಅವರಲ್ಲಿ, 3417 ವ್ಯಕ್ತಿಗಳು (ಶೇಕಡಾ 79.45) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಒಮ್ಮೆಯಾದರೂ ಕೆಲಸ ಮಾಡಿರುತ್ತಾರೆ. ಆದಾಗ್ಯೂ, ಕನಿಷ್ಠ ಎರಡು ಬಾರಿ (ಶೇಕಡಾ 18.39) ಕೆಲಸ ಮಾಡಿದವರು ಅನುಪಾತದಲ್ಲಿ ತುಂಬಾ ಕಡಿಮೆಯಿದ್ದರೂ, ಸಮಯೋಚಿತ ಅಥವಾ ವಿಳಂಬವಾದ ಕೂಲಿ ಪಾವತಿ ಮತ್ತು ಯೋಜನೆಯ ಅಡಿಯಲ್ಲಿ ಕೆಲಸ ಮಾಡುವ ಆವರ್ತನದ ನಡುವೆ ಸ್ಪಷ್ಟ ಮತ್ತು ಬಲವಾದ ಸಂಬಂಧವಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕೆಲಸಗಾರನು ಸಕ್ರಿಯ ಉದ್ಯೋಗ ಕಾರ್ಡ್ ಹೊಂದಿರುವವನಾಗಿ ಉಳಿದಿದ್ದಾನೋ ಇಲ್ಲವೋ

ಮತ್ತು ನಂತರದ ವರ್ಷಗಳಲ್ಲಿ ಕೂಲಿ ಕೆಲಸ ಮಾಡುತ್ತಾನೋ ಇಲ್ಲವೇ ಕೂಲಿಯನ್ನು ಸಮಯಕ್ಕೆ ಅವನಿಗೆ ಪಾವತಿಸಲಾಗಿದೆಯೆ ಅಥವಾ ವಿಳಂಬವಾಗಿದೆಯೆ ಎಂದು ಬಲವಾಗಿ ಊಹಿಸಲಾಗಿರುತ್ತದೆ. ಕೂಲಿಯನ್ನು ಸಕಾಲಿಕವಾಗಿ ಪಾವತಿಸುವುದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗಳಲ್ಲಿ ಕೆಲಸ ಮಾಡಲು ಪ್ರೋತ್ಸಾಹಕವಾಗಿರುತ್ತದೆ. ಈ ನಿಟ್ಟಿನಲ್ಲಿ ಸಾಂಖ್ಯಿಕ 'ಟಿ' ಮೌಲ್ಯವು 7.944 ಆಗಿದ್ದು, ಇದನ್ನು ಗಮನಾರ್ಹವೆಂದು ಪರಿಗಣಿಸಲಾಗಿರುತ್ತದೆ.

ಪ್ರತಿಕ್ರಿಯೆದಾರರ ಸಾಮಾಜಿಕ ವರ್ಗದವರನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗ ಅಥವಾ ಸಾಮಾನ್ಯ ಎಂದು ವರ್ಗೀಕರಿಸಲಾಗಿದೆಯೆ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಅವರು ಕೆಲಸ ಮಾಡುವ ಆವರ್ತನವು ಕೂಲಿ ಸಂಪಾದನೆಗೆ ಕೂಡ ಸಾಕಷ್ಟು ಬಲವಾಗಿ ಸಂಬಂಧಿಸಿದೆಯೇ, 3.172ರ 'ಟಿ' ಮೌಲ್ಯದೊಂದಿಗೆ 0.002ರ ಮಹತ್ವದ ಮಟ್ಟದಲ್ಲಿದೆಯೇ ಆದಾಗ್ಯೂ, ಉದ್ಯೋಗ ಕಾರ್ಡ್ ಹೊಂದಿರುವವರ ಭೂಮಾಲೀಕತ್ವದ ಸ್ಥಿತಿಯು ಅವರ ಜಾತಿ ಮೂಲಕ್ಕಿಂತ ಹೆಚ್ಚಿನ ಊಹಿಸಬಹುದಾದ ಮೌಲ್ಯವನ್ನು ಹೊಂದಿರುತ್ತದೆ, ಅವರು ಹೆಚ್ಚು ಕಡಿಮೆ ಆಗಾಗ್ಗೆ ಕೆಲಸ ಮಾಡುತ್ತಾರೆಯೇ ಎಂದು ನಿರ್ಧರಿಸುವ ಈ ವಿಷಯದಲ್ಲಿ 'ಟಿ' ಮೌಲ್ಯವು 4.942 ಆಗಿರುತ್ತದೆ.

ಅಧ್ಯಯನದ ಒಂದು ಪ್ರಮುಖ ಶೋಧನೆಯೆಂದರೆ, ಬೇರೆಡೆ ನೇಮಕಗೊಂಡ ಕಾರ್ಮಿಕರು ಅಥವಾ ಯಂತ್ರೋಪಕರಣಗಳ (ಜೆಸಿಬಿ, ಟಿಪ್ಪರ್‌ಗಳು, ಇತ್ಯಾದಿ) ಕೆಲಸ ಕೈಗೊಳ್ಳುವ ವ್ಯಾಪಕ ಅಭ್ಯಾಸವಿರುತ್ತದೆ, ಆದರೆ ಲೆಕ್ಕಪರಿಶೋಧಕ ಉದ್ದೇಶಗಳಿಗಾಗಿ ಕಾಲ್ಪನಿಕವಾಗಿ ನೋಂದಾಯಿತ ಕಾರ್ಮಿಕರು ಕೈಗೊಂಡಿದ್ದಾರೆ ಎಂದು ತೋರಿಸಲಾಗುತ್ತಿದೆ. ನಿಷ್ಕ್ರಿಯ ಉದ್ಯೋಗ ಕಾರ್ಡ್ ಹೊಂದಿರುವವರ ದೊಡ್ಡ ಪ್ರಮಾಣದ ಉಪಸ್ಥಿತಿ, ಈ ಕ್ಷೇತ್ರದಲ್ಲಿ 'ಎಂದಿಗೂ ಕೆಲಸ ಮಾಡಿಲ್ಲ' ಎಂದು ವರದಿ ಮಾಡುವ ಇತರರು, ಮತ್ತು ಮಧ್ಯವರ್ತಿಗಳು ಮತ್ತು ಅಥವಾ ಗುತ್ತಿಗೆದಾರರಿಗೆ (ಮೇಸ್ತ್ರಿಗಳು) ಕಾರ್ಮಿಕರ ಪರವಾಗಿ ಉದ್ಯೋಗ ಅರಸಲು ನೋಂದಾಯಿಸಲು ಅವಕಾಶ ಮಾಡಿಕೊಟ್ಟ ಘಟನೆಗಳು ಮತ್ತು ಅಂತಿಮವಾಗಿ, ಠೇವಣಿ ಮಾಡಿದ ಕೂಲಿಯನ್ನು ಹಿಂಪಡೆಯಲು ತಮ್ಮ ಬ್ಯಾಂಕಿನ ಡೆಬಿಟ್ ಕಾರ್ಡ್‌ಗಳಿಗೆ ಸಾಲ ನೀಡುವುದು–ಇವೆಲ್ಲವೂ ಗ್ರಾಮೀಣ ಕಾರ್ಮಿಕ ಮಾರುಕಟ್ಟೆಯ ಬಗ್ಗೆ ನಮ್ಮ ಊಹೆಗಳಲ್ಲಿ ಕೆಲವು ನ್ಯೂನತೆಗಳನ್ನು ಸೂಚಿಸಿರುತ್ತವೆ. ಉದ್ಯೋಗ ಖಾತರಿ ಯೋಜನೆಗಳ ಮೇಲೆ ಕಾರ್ಮಿಕರು ಎಷ್ಟು ಅವಲಂಬಿತರಾಗಿದ್ದಾರೆ ಎಂಬ ಪ್ರಶ್ನೆಗಳನ್ನು ಇದು ತೆರೆದಿರುತ್ತದೆ.

ಹೆಚ್ಚಿನ ಪ್ರತಿಕ್ರಿಯೆದಾರರು ತಮ್ಮ ಉದ್ಯೋಗ ಕಾರ್ಡ್‌ಗಳನ್ನು ತಮ್ಮಲ್ಲಿ ಹೊಂದಿಲ್ಲ ಅಥವಾ ಸಂದರ್ಶನದ ಸಮಯದಲ್ಲಿ ತಮ್ಮ ಮನೆಗಳಲ್ಲಿ ಇರಲಿಲ್ಲ ಎಂದು ವರದಿ ಮಾಡಿರುವ ಅಂಶವನ್ನು ಗಮನಿಸಿದರೆ–ಅವುಗಳು ಗಣನೀಯ ಸಂಖ್ಯೆಯಲ್ಲಿ ಇರುವುದರಿಂದ ಅವುಗಳನ್ನು ನವೀಕರಿಸಲು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗಿದೆ, ಲಿಂಕ್ ಮಾಡಲಾಗುತ್ತಿದೆ ಆಧಾರ್ ಸಂಖ್ಯೆಗಳು, ಕಾರ್ಮಿಕರ ಹೆಸರುಗಳನ್ನು ಸೇರಿಸುವುದು ಅಥವಾ ಅಳಿಸುವುದು ಇತ್ಯಾದಿಗಳೊಂದಿಗೆ, ಅವರು ಕೆಲಸ ಮಾಡಿದ ನಿರ್ದಿಷ್ಟ ಯೋಜನೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯುವುದು ಪ್ರಾಯೋಗಿಕವಾಗಿರಲಿಲ್ಲ. ವಿವರಗಳನ್ನು ಡಿಜಿಟಲ್ ರೂಪದಲ್ಲಿ ಕಂಡುಹಿಡಿಯಬಹುದೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ನಮಗೆ ಸಾಧ್ಯವಾಗಲಿಲ್ಲ. ಈ ಅಧ್ಯಯನವು ಬಹುತೇಕ ಎಲ್ಲ ಪ್ರಕರಣಗಳಲ್ಲಿ ಪ್ರತಿಕ್ರಿಯೆದಾರರ ಅಭಿಪ್ರಾಯಗಳನ್ನು ಅವಲಂಬಿಸಬೇಕಾಗಿತ್ತು.

4301 ವ್ಯಕ್ತಿಗಳ ಮಾದರಿಯಲ್ಲಿ, ಶೇಕಡಾ 75ರಷ್ಟು ಜನರು ಇತ್ತೀಚಿನ ವರ್ಷಗಳಲ್ಲಿ ಕೂಲಿ ಪಾವತಿಯಲ್ಲಿ ಯಾವುದೇ ವಿಳಂಬವಿಲ್ಲ ಎಂದು ವರದಿ ಮಾಡಿದ್ದಾರೆ ಮತ್ತು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಪರಿಚಯಿಸಿದಾಗಿನಿಂದ

ವಿಳಂಬವು ಕ್ರಮೇಣ ಕುಸಿಯುತ್ತಿದೆ. ವಿಳಂಬವನ್ನು ವರದಿ ಮಾಡಿದ ಒಂದು ದೊಡ್ಡ ಸಂಖ್ಯೆಯ ಜನರು ಯಾದಗಿರಿ (39.6%), ಧಾರವಾಡ (37.0%), ದಕ್ಷಿಣ ಕನ್ನಡ (34.5%) ಮತ್ತು ಉತ್ತರ ಕನ್ನಡ (33.0%). ಜಿಲ್ಲೆಗಳವರು ಆಗಿರುತ್ತಾರೆ. ತಾಂತ್ರಿಕ ಅಂಶಗಳಿಗಿಂತ ಹೆಚ್ಚಾಗಿ, ಅಗತ್ಯವಿದ್ದಾಗ ಕಚೇರಿಯಲ್ಲಿ ಸಹಿ ಹಾಕದವರು, ಲೆಕ್ಕದ ವಿವರಗಳು ಮತ್ತು ಕೂಲಿ ಬಿಲ್ಲುಗಳಲ್ಲಿ ಏನು ಹೇಳಲಾಗಿದೆ ಎಂಬುದರ ನಡುವೆ ಹೊಂದಾಣಿಕೆ ಇಲ್ಲದಿರುವುದು ಮತ್ತು ತಂಡದ ನಾಯಕರು (ಮೇಸ್ತ್ರಿಗಳು) ಕೂಲಿ ಬಿಲ್ಲುಗಳನ್ನು ತಯಾರಿಸುವಲ್ಲಿ ತಡವಾಗಿದ್ದರಿಂದ ವಿಳಂಬವಾಗಿರುತ್ತದೆ. ಈ ಸಮಸ್ಯೆಗಳು ಇತರ ಜಿಲ್ಲೆಗಳಿಂದಲೂ ವರದಿಯಾಗಿದ್ದರೂ, ಕೆಲವು ಜಿಲ್ಲೆಗಳು ಇತರ ಜಿಲ್ಲೆಗಳಿಗಿಂತ ಹೆಚ್ಚಾಗಿ ಈ ಸಮಸ್ಯೆಗಳಿಂದ ತೊಂದರೆಗಳನ್ನು ಅನುಭವಿಸಿರುತ್ತವೆ. ಸಾಮಾಗ್ರಿ ಸರಬರಾಜುದಾರರ ಪರಿಸ್ಥಿತಿಯು ಗಮನಾರ್ಹವಾಗಿ ಭಿನ್ನವಾಗಿರುವುದಿಲ್ಲ, 62 ಸಾಮಾಗ್ರಿ ಸರಬರಾಜುದಾರರಲ್ಲಿ ಒಬ್ಬರು ತಮ್ಮ ಬಾಕಿ ಹಣವನ್ನು ಸಕಾಲಿಕವಾಗಿ ಪಾವತಿಸಿಲ್ಲ ಎಂದು ವರದಿ ಮಾಡಿರುತ್ತಾರೆ, ಅಗತ್ಯವಿರುವ ಸರಾಸರಿ ಸಮಯವು 90 ದಿನಗಳಿಂದ 150 ದಿನಗಳವರೆಗೆ ಇರುತ್ತದೆ. ಸಾಮಾಗ್ರಿ ಪೂರೈಕೆದಾರರಿಗಿಂತ ಕಾರ್ಮಿಕರಿಗೆ ವೇತನವನ್ನು ತೆರವುಗೊಳಿಸಲು ಹೆಚ್ಚಿನ ಆಡಳಿತಾತ್ಮಕ ಒತ್ತು ಇದೆ ಎಂಬುದು ಅವರ ಅಸಮಾಧಾನವಾಗಿರುತ್ತದೆ.

ಕ್ಷೇತ್ರ ಮಟ್ಟದಲ್ಲಿ, ಕೂಲಿ ಕಾರ್ಮಿಕರ ಪ್ರತಿಕ್ರಿಯೆಗಳು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪಾವತಿ ವಿಧಾನವು ನೇರವಾಗಿ ಬ್ಯಾಂಕುಗಳಿಗೆ ಆದ್ಯತೆ ನೀಡುತ್ತವೆ, ಆದರೆ ಸಾಮಗ್ರಿ ಪೂರೈಕೆದಾರರಿಗೆ ಹೆಚ್ಚು ಆದ್ಯತೆ ನೀಡಲಿಲ್ಲ. ಪ್ರಕ್ರಿಯೆಗಳ ಪಾರದರ್ಶಕತೆಯೊಂದಿಗೆ ಅವರು ಆರಾಮದಾಯಕವಾಗಿಲ್ಲ. ಏಕೆಂದರೆ, ಹೆಚ್ಚಿನ ಸಾಮಗ್ರಿ ಸರಬರಾಜುದಾರರು ಸಹ ಮೇಸ್ತ್ರಿಗಳು ಆಗಿದ್ದಾರೆ ಮತ್ತು ಉದ್ಯೋಗದ ಬೇಡಿಕೆಯನ್ನು ನೋಂದಾಯಿಸುವಲ್ಲಿ, ಕೂಲಿ ಹಕ್ಕುಗಳನ್ನು ಸಲ್ಲಿಸುವಲ್ಲಿ ಮತ್ತು ಅಂತಿಮವಾಗಿ ಜಮಾ ಆದ ಹಣವನ್ನು ಹಿಂಪಡೆಯಲು ಕಾರ್ಮಿಕರ ಹಿಂದೆ ಸಾಗಬೇಕಾದರೆ ಅವರು ನಿಷ್ಕ್ರಿಯ ಕಾರ್ಮಿಕರನ್ನು ಎದುರಿಸಲು ಕಷ್ಟಪಡುತ್ತಾರೆ.

ಆದಾಗ್ಯೂ, ಕಛೇರಿಯಲ್ಲಿನ ದತ್ತಾಂಶ ವಿಮರ್ಶೆಯು ವಿಭಿನ್ನ ಚಿತ್ರವನ್ನು ತೋರಿಸಿರುತ್ತದೆ. ಕೂಲಿ ಪಾವತಿಯಲ್ಲಿನ ವಿಳಂಬವನ್ನು ಕಡಿಮೆಗೊಳಿಸಿದ ಪುರಾವೆಗಳು ಮಾತ್ರವಲ್ಲ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ವರ್ಷಗಳಲ್ಲಿ ಅಳವಡಿಸಿದಾಗ ಕಾಮಗಾರಿಯ ಸ್ವೀಕಾರದ ಪ್ರಮಾಣವು ಹೆಚ್ಚಾಗುತ್ತದೆ ಎಂಬುದಕ್ಕೆ ಬಲವಾದ ಪುರಾವೆಗಳಿವೆ. ಸಮಯೋಚಿತ ಕೂಲಿ ಪಾವತಿ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ಕೆಲಸ ಮಾಡುವ ಘಟನೆಗಳ ನಡುವಿನ ಬಲವಾದ ಸಂಬಂಧವನ್ನು ಗಮನಿಸಿದರೆ, ವರ್ಧನೆಯ ದರವು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಮೂಲಕ ಸಮಯೋಚಿತ ಕೂಲಿ ಪಾವತಿಯ ಸಕಾರಾತ್ಮಕ ಪರಿಣಾಮವನ್ನು ತೋರಿಸುತ್ತದೆ. ಮಾದರಿಯಲ್ಲಿ ಮತ್ತು ಒಟ್ಟಾರೆಯಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇದು ನಿಜವಾಗಿರುತ್ತದೆ. ಕ್ಯಾಲೆಂಡರ್ ವರ್ಷದಲ್ಲಿ ಪೂರ್ಣ 100 ದಿನಗಳ ಕಾಲ ಕೆಲಸ ಮಾಡಿದವರ ವಿಷಯದಲ್ಲೂ ಈ ಪ್ರವೃತ್ತಿಯು ಅನ್ವಯಿಸುತ್ತದೆ.

ಸುಧಾರಿತ ಸಮಯೋಚಿತ ಕೂಲಿ ಪಾವತಿಯ ಎರಡನೆಯ ಪ್ರಮುಖ ಪರಿಣಾಮವೆಂದರೆ ಕೂಲಿಯನ್ನು ಸಲ್ಲಿಸಲಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಲು ಕಾರ್ಮಿಕರು ಎಟಿಎಂ ಕಿಯೋಸ್ಕ್ ಅಥವಾ ಬ್ಯಾಂಕ್‌ಗೆ ಭೇಟಿ ನೀಡಬೇಕಾದ ಸಂಖ್ಯೆಯಲ್ಲಿನ ಕಡಿತವಾಗಿರುತ್ತದೆ. ಪ್ರತಿಕ್ರಿಯೆದಾರರು ನೀಡಿದ ಹೇಳಿಕೆಗಳ ಪ್ರಕಾರ, ಆವರ್ತನವು ಬ್ಯಾಂಕ್‌ಗೆ ಆರು ಬಾರಿ ಭೇಟಿ ನೀಡಿದ ಸಮಯದಿಂದ 3 ರಿಂದ 4 ಪಟ್ಟು ಕಡಿಮೆಯಾಗಿರುತ್ತದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕೂಲಿಯನ್ನು ನೀಡುತ್ತಾರೋ ಇಲ್ಲವೋ ಎಂಬ ಆತಂಕದಿಂದ ನಿಧಿ ವರ್ಗಾವಣೆ ಆದೇಶಗಳಿಗೆ ಸಹಿ ಮಾಡಿ

ಅಪ್‌ಲೋಡ್ ಮಾಡಿದ ಮರುದಿನದಿಂದಲೇ ಬ್ಯಾಂಕ್‌ಗೆ ಹೋಗಲು ಪ್ರಾರಂಭಿಸುತ್ತಾರೆ ಎಂದು ಗಮನಸೆಳೆದಿರುತ್ತಾರೆ. ಆದರೂ, ಸಹಿ ಮಾಡಿದವರಲ್ಲಿ ಒಬ್ಬರು ಸಮಯಕ್ಕೆ ಲಭ್ಯವಿಲ್ಲದ ಕಾರಣ, ನಿಗದಿತ ಸಮಯದ ಮಿತಿಯನ್ನು ಮೀರಿ ಕೆಲವು ವಿಳಂಬಗಳು ಮುಂದುವರಿಯುತ್ತಿವೆ, ಸಂಬಂಧಪಟ್ಟ ಅಧಿಕಾರಿ (ಕ್ಷೇತ್ರ ಮಟ್ಟದ ಇಂಜಿನಿಯರ್‌ಗಳು) ಪ್ರಮಾಣೀಕರಿಸಿದ ಅಳತೆಗಳ ಪುಸ್ತಕವನ್ನು ಹೊಂದಿರದ ಕಾರಣ, ಕಂಪ್ಯೂಟರ್‌ಗಳ ಸ್ಥಗಿತದ ಹಾರ್ಡ್‌ವೇರ್ ಸಮಸ್ಯೆಗಳು, ಅಗತ್ಯವಿದ್ದಾಗ ಇಂಟರ್ನೆಟ್ ಲಭ್ಯಲಭ್ಯವಿಲ್ಲದಿರುವುದು. ಹಣ ಲಭ್ಯವಿಲ್ಲದಿರುವುದು ಮತ್ತು ಸಮಯಕ್ಕೆ ಸರಿಯಾಗಿ ಪಾವತಿಗಳನ್ನು ಹೊಂದಾಣಿಕೆ ಮಾಡದಿರುವುದು ವಿಳಂಬಕ್ಕೂ ಕಾರಣವಾಗಿದೆ. ದುರದೃಷ್ಟವಶಾತ್ ಮೌಲ್ಯಮಾಪನಕ್ಕಾಗಿ, ನಿಧಿ ವರ್ಗಾವಣೆ ಆದೇಶಗಳನ್ನು ಅಪ್‌ಲೋಡ್ ಮಾಡಿದ ನಂತರ ಪಾವತಿಸಬೇಕಾದ ಹಣವನ್ನು ಪ್ರಕ್ರಿಯೆಗೊಳಿಸಲು ಮತ್ತು ಕ್ರೆಡಿಟ್ ಮಾಡಲು ತೆಗೆದುಕೊಂಡ ಸಮಯವನ್ನು ನಿರ್ಣಯಿಸಲು ಬ್ಯಾಂಕ್ ಮಟ್ಟದಲ್ಲಿ ದತ್ತಾಂಶವನ್ನು ಪ್ರವೇಶಿಸಲು ಸಾಧ್ಯವಿಲ್ಲ. ಏಕೆಂದರೆ, ನಿಧಿ ವರ್ಗಾವಣೆ ಆದೇಶ ಮತ್ತು ಖಾತೆಗಳ ಹಣದ ನಿಜವಾದ ಕ್ರೆಡಿಟ್ ನಡುವಿನ ಅಂತರವು ಸಮಸ್ಯೆಯಲ್ಲಿರುತ್ತದೆ. ಕೇವಲ ಕಾರ್ಮಿಕರಲ್ಲ, ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಅಧಿಕಾರಿಗಳು ಸಹ ಕಾರ್ಮಿಕರಿಗೆ ಮತ್ತು / ಅಥವಾ ಮೇಸ್ತ್ರಿಗೆ ಸಂದೇಶವನ್ನು ರವಾನಿಸುತ್ತಾರೆ, ಕೇವಲ ನಿಧಿ ವರ್ಗಾವಣೆ ಆದೇಶಕ್ಕೆ ಡಿಜಿಟಲ್ ಸಹಿ ಮಾಡುವುದರಿಂದ ಹಣವು ಶೀಘ್ರದಲ್ಲೇ ಸಲ್ಲುತ್ತದೆ.

ಪ್ರತಿ ಕೆಲಸಗಾರನಿಗೆ ವೈಯಕ್ತಿಕ ಬ್ಯಾಂಕ್ ಖಾತೆಗಳ ಪ್ರಮಾಣದಲ್ಲಿ ನಿರಂತರ ಕುಸಿತವಿರುತ್ತದೆ ಮತ್ತು ಆದಾಯವನ್ನು ಪ್ರತಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಪ್ರತ್ಯೇಕವಾಗಿ ಜಮಾ ಮಾಡಲಾಗುತ್ತಿದೆ. ಇವರೆಲ್ಲರೂ ತಮ್ಮ ಕಾರ್ಡ್‌ಗಳಿಗೆ ಲಿಂಕ್ ಮಾಡಲಾದ ಡೆಬಿಟ್ ಕಾರ್ಡ್ ಹೊಂದಿಲ್ಲ, ಕಡಿಮೆ ವಿದ್ಯಾವಂತ ಅಥವಾ ಕಡಿಮೆ ಮಾಹಿತಿ ಹೊಂದಿರುವ ಕೆಲಸಗಾರ ವಿಶ್ವಾಸಾರ್ಹರಾದ ಇತರರನ್ನು ಅವಲಂಬಿಸಬೇಕಾಗುತ್ತದೆ, ಇವರನ್ನು ನಾವು ಬ್ಯಾಂಕಿಂಗ್ ವಹಿವಾಟು ನಡೆಸಲು ಸಹಾಯ ಮಾಡಲು 'ಬ್ಯಾಂಕಿಂಗ್ ಮಧ್ಯವರ್ತಿಗಳು ಎಂದು ಕರೆಯಬಹುದು. ಅಥವಾ ಎಟಿಎಂ ಕಿಯೋಸ್ಕ್‌ನಲ್ಲಿ. ಇವೆಲ್ಲವೂ ಬ್ಯಾಂಕಿನೊಂದಿಗೆ ವಹಿವಾಟು ನಡೆಸುವ ವೆಚ್ಚವನ್ನು ಹೆಚ್ಚಿಸುತ್ತದೆ. ಕಾರ್ಮಿಕರಿಗೆ ಇನ್ನೂ ಹೆಚ್ಚಿನ ತೊಂದರೆಗಳೆಂದರೆ, 'ಯಂತ್ರವು ಕ್ರಮಬದ್ಧವಾಗಿಲ್ಲ,' 'ಹಣವಿಲ್ಲ,' 'ವಿದ್ಯುತ್ ಅಥವಾ ವಿದ್ಯುತ್ ಸರಬರಾಜು ಇಲ್ಲ', ಅಥವಾ ಕೂಲಿಯನ್ನು ಜಮಾ ಮಾಡಲಾಗಿಲ್ಲ ಎಂದು ಕಂಡುಹಿಡಿಯಲು ಕಾಲ್ನಡಿಗೆಯಲ್ಲಿ ಹೋಗುವುದು ಅಥವಾ ವಾಹನವನ್ನು ಕಿಯೋಸ್ಕ್‌ಗೆ ತೆಗೆದುಕೊಂಡು ಹೋಗುವುದು. ಬ್ಯಾಂಕ್ ಖಾತೆಗಳು ಮತ್ತು ಆಧಾರ್ ಸಂಖ್ಯೆಗಳನ್ನು ಉದ್ಯೋಗ ಕಾರ್ಡ್‌ಗಳೊಂದಿಗೆ ಲಿಂಕ್ ಮಾಡಲಾಗಿದೆಯಂತೆ, ಖಾತೆಗೆ ಯಾವುದೇ ಡೆಬಿಟ್ ಅಥವಾ ಕ್ರೆಡಿಟ್‌ನ್ನು ತಿಳಿಸಲು ಎಸ್‌ಎಂಎಸ್ ಎಚ್ಚರಿಕೆಗಳ ಆಯ್ಕೆಯನ್ನು ಸಕ್ರಿಯಗೊಳಿಸುವ ಕಡ್ಡಾಯವೂ ಇರಬೇಕಾಗಿರುತ್ತದೆ. ಇನ್ನೂ ಉತ್ತಮವಾದದ್ದು, ಕೂಲಿ ಪಾವತಿಯನ್ನು ಅನುಮೋದಿಸಿದಾಗ ಮತ್ತು ಸಂಬಂಧಪಟ್ಟ ಖಾತೆಗೆ ಹಣವನ್ನು ಜಮಾ ಮಾಡಿದಾಗ, ನೋಂದಾಯಿತ ಮೊಬೈಲ್ ಫೋನ್ ಸ್ಥಳೀಯ ಭಾಷೆಯಲ್ಲಿ ವಿಶೇಷ ಎಸ್‌ಎಂಎಸ್ ಸ್ವೀಕರಿಸಿ ಹಣವನ್ನು ಕ್ರೆಡಿಟ್ ಮಾಡಲಾಗಿದೆ ಎಂದು ತಿಳಿಸುವುದು ಆಗಿರುತ್ತದೆ. ಈ ಸೌಲಭ್ಯವು ಬ್ಯಾಂಕ್ ಅಥವಾ ಎಟಿಎಂಗೆ ಕನಿಷ್ಠ ಒಂದು ಅಥವಾ ಎರಡು ಭೇಟಿಗಳನ್ನು ಉಳಿಸುತ್ತದೆ.

ಒಟ್ಟಾರೆಯಾಗಿ ಮಾದರಿಯನ್ನು ತೆಗೆದುಕೊಂಡರೆ, ಶೇಕಡಾ 41.25 ರಷ್ಟು ಜನರು ತಮ್ಮ ಹಳ್ಳಿಗಳಲ್ಲಿನ ಕಾರ್ಮಿಕರಿಗೆ ಒಂದು ಕಿಲೋ ಮೀಟರ್‌ಗಿಂತ ಕಡಿಮೆ ಅಂತರದಲ್ಲಿ ವಾಣಿಜ್ಯ ಬ್ಯಾಂಕ್ ಲಭ್ಯವಿದೆ ಎಂದು ವರದಿ ಮಾಡಲಾಗಿರುತ್ತದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಂತಹ ಮಹತ್ವಾಕಾಂಕ್ಷೆಯ ಪರಿಚಯದ ಹಿನ್ನೆಲೆಯಲ್ಲಿ ಇದು ನಿಜಕ್ಕೂ ಗ್ರಾಮೀಣ ಬ್ಯಾಂಕಿಂಗ್ ಸೇವೆಯ ಉತ್ತಮ ಲಕ್ಷಣವಾಗಿರುತ್ತದೆ. ಸುಮಾರು 40 ಪ್ರತಿಶತದಷ್ಟು ಕಾರ್ಮಿಕರು ತಮ್ಮ ಖಾತೆಗಳನ್ನು ಪರಿಶೀಲಿಸಲು ಮತ್ತು / ಅಥವಾ ಅವರ ಖಾತೆಗಳನ್ನು ನಿರ್ವಹಿಸಲು ಬ್ಯಾಂಕಿಗೆ ಕಾಲಿಡುವ ಆಯ್ಕೆಯನ್ನು ಹೊಂದಿರುತ್ತಾರೆ. 1.00 ರಿಂದ

2.50 ಕಿಲೋ ಮೀಟರ್ ದೂರದಲ್ಲಿರುವ ಬ್ಯಾಂಕಿನೊಂದಿಗೆ ನಾವು ಈ ಗುಂಪಿನೊಂದಿಗೆ ಇನ್ನೊಬ್ಬರನ್ನು ಸೇರಿಸಿಕೊಂಡರೆ, ನಮ್ಮಲ್ಲಿ ಶೇಕಡಾ 55 ಕ್ಕಿಂತ ಹೆಚ್ಚು ಬ್ಯಾಂಕಿನೊಂದಿಗೆ 2.50 ಕಿ.ಮೀ. 2.51 ರಿಂದ 5.00 ಕಿ.ಮೀ ದೂರದಲ್ಲಿರುವ ಬ್ಯಾಂಕ್ ಹೊಂದಿರುವವರು ಶೇಕಡಾ 25.53 ರಷ್ಟಿದ್ದಾರೆ, 75% ಕ್ಕಿಂತ ಹೆಚ್ಚು ಜನರು 5.00 ಕಿ.ಮೀಗಿಂತ ಕಡಿಮೆ ಅಂತರದಲ್ಲಿ ಬ್ಯಾಂಕನ್ನು ಹೊಂದಿದ್ದಾರೆ. ಹೇಗಾದರೂ, ನಮ್ಮ ಮಾದರಿ ಜಿಲ್ಲೆಗಳಾದ ಯಾದಗಿರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮೇಲೆ ಕೇಂದ್ರೀಕರಿಸಿದ ನಾವು, ಬ್ಯಾಂಕನ್ನು ಹೊಂದಿರುವವರಲ್ಲಿ 10 ಕಿ.ಮೀ. ದೂರವಾಗಿರುತ್ತದೆ. ಉತ್ತರ ಕನ್ನಡದಲ್ಲಿ ಈ ಅಂತರವು ಶೇಕಡಾ 25.07 ರಷ್ಟು ಇದ್ದು, ಯಾದಗಿರಿಯಲ್ಲಿ ಕ್ರಮವಾಗಿ 37.29 ಪ್ರತಿಕ್ರಿಯೆದಾರರು ದೊಡ್ಡ ಪಾಲನ್ನು ಹೊಂದಿರುತ್ತಾರೆ. ವಾಸ್ತವವಾಗಿ, ನಮ್ಮ ಪ್ರತಿಕ್ರಿಯೆದಾರರು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವಿರುದ್ಧದ ಹೆಚ್ಚಿನ ಟೀಕೆಗಳು ಕೂಲಿಯನ್ನು ಜಮಾ ಮಾಡುವ ಸಾಧ್ಯತೆಯ ಮೇಲಿನ ಭಯದಿಂದಾಗಿ, ಇದು ಸಾಲದ ಮೊತ್ತದ ಎದುರಿಗೆ ಅಥವಾ ಬಡ್ಡಿಗಳ ಕಡೆಗೆ ಸರಿಹೊಂದಿಸಬಹುದು. ಕೆಲವು ಬ್ಯಾಂಕಿನವರು ಗಮನಿಸಿದಂತೆ, ವಿಳಂಬಿತ ಪಾವತಿಗಳ ವಿರುದ್ಧದ ದೂರುಗಳಿಗೆ ಒಂದು ಕಾರಣವೆಂದರೆ, ಅನೇಕ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ವಹಿವಾಟಿಗೆ ಯಾವ ಖಾತೆಯನ್ನು ಲಿಂಕ್ ಮಾಡಿರಬಹುದು ಎಂಬುದು ಸ್ಪಷ್ಟವಾಗಿಲ್ಲದಿರಬಹುದು. ಮೌಲ್ಯಮಾಪನದ ಹಂತದಿಂದ, ತಿಳಿದುಕೊಳ್ಳಬೇಕಾದ ಅಂಶವೆಂದರೆ, ಬ್ಯಾಂಕಿನಲ್ಲಿ ಪರಿಶೀಲಿಸಲು ಮಾಡಿದ ಸಂಖ್ಯೆಯ ಭೇಟಿಗಳನ್ನು ವರದಿ ಮಾಡುತ್ತಿದ್ದ ಹೆಚ್ಚಿನ ವ್ಯಕ್ತಿಗಳು ಸಹ ಈ ಘಟನೆಗಳು ಈಗ ಗಣನೀಯವಾಗಿ ಕಡಿಮೆಯಾಗಿದೆ ಎಂದು ಒತ್ತಿಹೇಳಿದ್ದಾರೆ. ಏಕೆಂದರೆ ಅವರು ಮೊದಲಿಗಿಂತ ಬೇಗನೆ ಕೂಲಿಯನ್ನು ಪಡೆಯುತ್ತಿದ್ದಾರೆ.

ಆದಾಗ್ಯೂ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಸಮಯೋಚಿತ ಕೂಲಿ ಪಾವತಿಯನ್ನು ಸುಧಾರಿಸಿರುತ್ತದೆ ಮತ್ತು ಹಣದ ನಿಲುಗಡೆಯನ್ನು ಕಡಿಮೆಗೊಳಿಸಿರುತ್ತದೆ ಎಂದು ಪುರಾವೆಗಳು ಸೂಚಿಸುತ್ತವೆಯಾದರೂ, ಕ್ಷೇತ್ರ ದತ್ತಾಂಶವು ಎ) ಡಿಜಿಟಲ್ ದತ್ತಾಂಶವನ್ನು ಅಪ್‌ಲೋಡ್ ಮಾಡಲು ಅಥವಾ ನಿಧಿ ವರ್ಗಾವಣೆ ಆದೇಶಗಳಿಗೆ ಸಹಿ ಹಾಕುವ ಮೊದಲು ಹೆಚ್ಚಿನ ವಿಳಂಬವಾಗಿದೆ ಎಂದು ಸೂಚಿಸುತ್ತದೆ; ಬಿ) ನಿಧಿ ವರ್ಗಾವಣೆ ಆದೇಶಗಳು ಡಿಜಿಟಲ್ ಸಹಿ ಹಾಕಿದ ನಂತರ ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿಯಲ್ಲಿನ ಕಾರ್ಯಕರ್ತರು ವಿಳಂಬಿತ ಪಾವತಿಗಳನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ; ಮತ್ತು ನೋಡಲ್ ಬ್ಯಾಂಕ್ ಮಟ್ಟದಲ್ಲಿನ ವಿಳಂಬದ ಬಗ್ಗೆ ಮಾಹಿತಿಯ ಹರಿವಿನ ಸುಧಾರಿತ ವ್ಯವಸ್ಥೆಯ ಅವಶ್ಯಕತೆಯಿದೆ. ಅಂತಿಮವಾಗಿ, ವಿಳಂಬವಾದ ಕೂಲಿ ಪಾವತಿಗೆ ಪರಿಹಾರ – ವಿಳಂಬವು ಗ್ರಾಮ ಪಂಚಾಯಿತಿ / ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಿರಲಿ ಅಥವಾ ನೋಡಲ್ ಬ್ಯಾಂಕ್ ಮಟ್ಟದಲ್ಲಿರಲಿ – ವಿಳಂಬ ಪರಿಹಾರದ ಕಾರಣಕ್ಕಾಗಿ ಸ್ವಯಂಚಾಲಿತ ಎಚ್ಚರಿಕೆಗಳಿಗಾಗಿ ಪ್ರಯತ್ನಗಳನ್ನು ಮಾಡಬೇಕಾಗಿರುತ್ತದೆ. ಇದರಿಂದಾಗಿ ಪರಿಹಾರವನ್ನು ಸ್ವಯಂಪ್ರೇರಣೆಯಿಂದ ಹೇಳಿಕೊಳ್ಳುವ ಅಭ್ಯಾಸವು ಬಹುತೇಕ ಅಸ್ತಿತ್ವದಲ್ಲಿರಬಾರದು.

ಅಧ್ಯಯನದ ಆವಿಷ್ಕಾರಗಳಲ್ಲಿನ ಲಿಂಗ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಎರಡು ವಿಶಾಲವಾದ ಸಾಮಾನ್ಯೀಕರಣಗಳನ್ನು ಮಾಡಬಹುದು: ಮೊದಲು ಯಾವುದೇ ವ್ಯತ್ಯಾಸವು ಕಿರಿದಾಗಿರುತ್ತದೆ ಮತ್ತು ಖಂಡಿತವಾಗಿಯೂ ಪುರುಷರು ಮತ್ತು ಮಹಿಳೆಯರ ನಡುವೆ ಶೇಕಡಾ ಎಂಟಕ್ಕಿಂತ ಹೆಚ್ಚು ಅಂಕಗಳನ್ನು ಹೊಂದಿರುವುದಿಲ್ಲ. ಎರಡನೆಯದಾಗಿ, ಕಂಡುಬರುವ ಯಾವುದೇ ವ್ಯತ್ಯಾಸವು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಿಂದ ಆಗಿರುವುದಕ್ಕಿಂತ ನಿಧಿ ವರ್ಗಾವಣೆ ಆದೇಶಕ್ಕಿಂತ ಮೊದಲೇ ಅಥವಾ ಠೇವಣಿ ನಂತರದ ವಿದ್ಯಮಾನಕ್ಕಿಂತ ಹೆಚ್ಚಿನದಾಗಿರುತ್ತದೆ.

# 10. ಶಿಫಾರಸ್ಸುಗಳು

ಮೌಲ್ಯಮಾಪನದ ಭಾಗವಾಗಿ ಕೆಲವು ಶಿಫಾರಸ್ಸುಗಳನ್ನು ಸಲ್ಲಿಸಲಾಗಿರುತ್ತದೆ. ಸ್ವೀಕಾರಾರ್ಹವೆಂದು ಕಂಡುಬಂದಲ್ಲಿ, ಇವುಗಳಲ್ಲಿ ಕೆಲವನ್ನು ಕೇಂದ್ರ ಸರ್ಕಾರದೊಂದಿಗೆ ಅನುಸರಿಸಬೇಕಾಗಿರುತ್ತದೆ; ಏಕೆಂದರೆ ಕಾರ್ಯಕ್ರಮ ಮತ್ತು ವಿಶೇಷವಾಗಿ ಸಾಫ್ಟ್‌ವೇರ್‌ಗಳು ಕೇಂದ್ರೀಯವಾಗಿ ವಿನ್ಯಾಸಗೊಳಿಸಲ್ಪಟ್ಟಿರುತ್ತವೆ ಮತ್ತು ಬಳಕೆಯಾಗುತ್ತವೆ. ಅವುಗಳನ್ನು ಮಾರ್ಪಡಿಸುವ ಸ್ವಾತಂತ್ರ್ಯ ರಾಜ್ಯ ಸರ್ಕಾರಗಳಿಗೆ ಇಲ್ಲದಿರಬಹುದು.

1. ನಿಧಿ ವರ್ಗಾವಣೆ ಆದೇಶಗಳನ್ನು ತಿರಸ್ಕರಿಸುವ ಆಧಾರವನ್ನು ತಿಳಿಸಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿಸಲು ವಿಳಂಬ ಪರಿಹಾರ ಮತ್ತು ನಿರುದ್ಯೋಗ ಭತ್ಯೆಯ ಹಕ್ಕುಗಳನ್ನು ತಿರಸ್ಕರಿಸುವುದು. [ಕೋಷ್ಟಕ 14].

2. ನಿಧಿ ವರ್ಗಾವಣೆ ಆದೇಶಗಳ ಡಿಜಿಟಲ್ ಸಹಿಯನ್ನು ತ್ವರಿತಗೊಳಿಸಲು ನಿಧಿ ವರ್ಗಾವಣೆ ಆದೇಶ ಪೂರ್ವ ವಹಿವಾಟುಗಳನ್ನು ಕಡಿಮೆ ಮಾಡುವುದು ಅಥವಾ ಸುವ್ಯವಸ್ಥಿತಗೊಳಿಸುವುದು. [ಕೋಷ್ಟಕ 7 ರಿಂದ 10]

3. ಬ್ಯಾಂಕ್ ತಿರಸ್ಕರಿಸಿದ ಅಥವಾ ವಿಳಂಬವಾದ ಪಾವತಿಗಳ ಸ್ವಯಂಚಾಲಿತ ಎಚ್ಚರಿಕೆಗಳನ್ನು ರಚಿಸಲು ಸಾಫ್ಟ್‌ವೇರ್ ಅನ್ನು ಸಕ್ರಿಯಗೊಳಿಸುವುದು. ವಿಳಂಬ ಪಾವತಿ ಮತ್ತು/ಅಥವಾ ಕಾರ್ಮಿಕರಿಗೆ ನಿರುದ್ಯೋಗ ಭತ್ಯೆಗಾಗಿ ಪಾವತಿಸಬೇಕಾದ ಪರಿಹಾರ. ಅಂತಹ ಎಚ್ಚರಿಕೆಗಳು ಗ್ರಾಮ ಪಂಚಾಯಿತಿಗಳನ್ನು ಮತ್ತು ಪೀಡಿತ ಕಾರ್ಮಿಕರನ್ನು ತಲುಪಬೇಕು. [ಕೋಷ್ಟಕ 19 ಮತ್ತು ಚಿತ್ರ 26 ರಿಂದ 29].

4. ಕೂಲಿಗಳು, ಪರಿಹಾರ ಮತ್ತು / ಅಥವಾ ನಿರುದ್ಯೋಗ ಭತ್ಯೆಗಳಿಗಾಗಿ ಸಲ್ಲಿಸಿದ ಹಕ್ಕುಗಳ ಸ್ಥಿತಿಯನ್ನು ಸೂಚಿಸಲು ಬ್ಯಾಂಕುಗಳು ಎಸ್‌ಎಂಎಸ್ ಎಚ್ಚರಿಕೆಗಳನ್ನು, ವೆಚ್ಚವಿಲ್ಲದೆ ಕಳುಹಿಸುವುದನ್ನು ಕಡ್ಡಾಯಗೊಳಿಸುವುದು. [ಕೋಷ್ಟಕ 19 ಮತ್ತು ಚಿತ್ರ 26 ರಿಂದ 29].

5. ಎಟಿಎಂಗಳನ್ನು ನಿರ್ವಹಿಸುವುದು ಸೇರಿದಂತೆ ಬ್ಯಾಂಕಿಂಗ್ ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಕಾರ್ಮಿಕರಿಗೆ ತರಬೇತಿ ನೀಡುವುದು.

6. ಡಾಟಾ ಎಂಟ್ರಿ ಆಪರೇಟರ್‌ಗಳು ಮತ್ತು ಬಿಲ್ ಕಲೆಕ್ಟರ್‌ಗಳ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಕೌಶಲ್ಯಗಳನ್ನು ಅಪ್‌ಗ್ರೇಡ್ ಮಾಡುವ ತುರ್ತು ಅಗತ್ಯವಿರುತ್ತದೆ. [ಕೋಷ್ಟಕಗಳು 8 ರಿಂದ 12].

7. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಕೆಲಸದಲ್ಲಿ ವಿಶೇಷವಾಗಿ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಕೌಶಲ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಪ್ರೋತ್ಸಾಹಕಗಳನ್ನು ನೀಡುವುದು [ಕೋಷ್ಟಕಗಳು 8 ರಿಂದ 12]

8. ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಪಾವತಿಯ ವಿಳಂಬದ ಬಗ್ಗೆ ಅಥವಾ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಕುಂದುಕೊರತೆಗಳ

ಔಪಚಾರಿಕ ನೋಂದಣಿಯನ್ನು ಸ್ಥಾಪಿಸುವುದು – [ಕೋಷ್ಟಕ 22 ಮತ್ತು 24]. ಕುಂದುಕೊರತೆಗಳನ್ನು ಒಮ್ಮೆ ನೋಂದಾಯಿಸಿದ ನಂತರ ಇವುಗಳನ್ನು ಕರ್ನಾಟಕ ಸರ್ಕಾರದ ಸಕಾಲ ಕಾರ್ಯಕ್ರಮದ ಕಕ್ಷೆಗೆ ಒಳಪಡಿಸಬೇಕು.

9. ವಿಶೇಷವಾಗಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ತಂತ್ರಜ್ಞಾನದೊಂದಿಗೆ ವ್ಯವಹರಿಸುವವರು ಹೆಚ್ಚುತ್ತಿರುವ ಕೆಲಸದ ಪ್ರಮಾಣ ಮತ್ತು ಕುಂದುಕೊರತೆಗಳ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು ಪ್ರಮುಖ ಕಾರ್ಯಕಾರಿಗಳ ಗ್ರಾಮ ಪಂಚಾಯಿತಿ, ಕ್ಷೇತ್ರ ಮತ್ತು ಜಿಲ್ಲಾ ಮಟ್ಟದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಗಳನ್ನು ತೆಗೆದುಕೊಳ್ಳುವುದು,. [ಕೋಷ್ಟಕಗಳು 21 ಮತ್ತು 22]

## Annexure I: Tables and Figures for Delay in Second Signatures on FTOs

| FTO Signing Delayed Beyond T+8 [Chikkaballapura District] | | | | | | | |
|---|---|---|---|---|---|---|---|
| | Blocks | 2013-14 | 2014-15 | 2015-16 | 2016-17 | 2017-18 | 2018-19 |
| 1 | BAGEPALLI | 0.16 | 0.13 | 0.41 | 0.15 | 0.28 | 0.21 |
| 2 | CHIKBALLAPUR | 5.81 | 4.24 | 3.43 | 1.05 | 0.26 | 0.19 |
| 3 | CHINTAMANI | 0.24 | 0.16 | 0.18 | 0.08 | 0.03 | 0.01 |
| 4 | GAURIBIDANUR | 0.14 | 0.09 | 0.09 | 0.04 | 0.02 | 0.01 |
| 5 | GUDIBANDA | 0.00 | 0.00 | 0.00 | 0.00 | 0.00 | 0.00 |
| 6 | SIDLAGHATTA | 0.42 | 0.33 | 0.49 | 0.20 | 0.13 | 0.10 |
| | Total | 0.51 | 0.38 | 0.58 | 0.24 | 0.12 | 0.09 |




| FTO Signing Delayed Beyond T+8 [Dakshina Kannada] | | | | | | | |
|---|---|---|---|---|---|---|---|
| | Blocks | 2013-14 | 2014-15 | 2015-16 | 2016-17 | 2017-18 | 2018-19 |
| 1 | BANTVAL | 0.26 | 0.27 | 0.17 | 0.09 | 0.10 | 0.11 |
| 2 | BELTANGADI | 0.05 | 0.07 | 0.05 | 0.02 | 0 | 0 |
| 3 | MANGALORE | 0.83 | 1.45 | 0.67 | 0.24 | 0 | 0 |
| 4 | PUTTUR | 0.03 | 0.05 | 0.02 | 0.01 | 0.02 | 0.02 |
| 5 | SULYA | 0 | 0 | 0 | 0 | 0 | 0 |
| | Total | 0.16 | 0.23 | 0.14 | 0.06 | 0.03 | 0.03 |




| | FTO Signing Delayed Beyond T+8 [Dharawad] | | | | | | |
|---|---|---|---|---|---|---|---|
| | Blocks | 2013-14 | 2014-15 | 2015-16 | 2016-17 | 2017-18 | 2018-19 |
| 1 | DHARWAD | 0.93 | 1.28 | 1.50 | 0.78 | 0.51 | 0.44 |
| 2 | HUBLI | 1.28 | 2.11 | 2.46 | 1.01 | 0.50 | 0.31 |
| 3 | KALGHATGI | 0.66 | 0.79 | 0.78 | 0.59 | 0.71 | 0.57 |
| 4 | KUNDGOL | 1.05 | 1.26 | 1.38 | 0.68 | 0.72 | 0.70 |
| 5 | NAVALGUND | 0.30 | 0.53 | 0.47 | 0.19 | 0.36 | 0.31 |
| | Total | 0.87 | 1.18 | 1.26 | 0.68 | 0.56 | 0.46 |



| FTO Signing Delayed Beyond T+8 [Kalburgi] | | | | | | | |
|---|---|---|---|---|---|---|---|
| | Blocks | 2013-14 | 2014-15 | 2015-16 | 2016-17 | 2017-18 | 2018-19 |
| 1 | AFZALPUR | 0.06 | 0.41 | 0.09 | 0.05 | 0.67 | 0.35 |
| 2 | ALAND | 1.12 | 2.32 | 0.98 | 0.42 | 0.80 | 0.36 |
| 3 | CHINCHOLI | 0.82 | 1.54 | 1.10 | 0.86 | 0.07 | 0.06 |
| 4 | CHITAPUR | 6.09 | 13.79 | 3.53 | 1.57 | 0.46 | 0.42 |
| 5 | JEVARGI | 0.49 | 0.65 | 0.41 | 0.21 | 0.46 | 0.31 |
| 6 | KALABURAGI | 0.81 | 1.35 | 0.63 | 0.27 | 0.13 | 0.10 |
| 7 | SEDAM | 1.68 | 5.21 | 0.48 | 0.29 | 0.02 | 0.02 |
| | Total | 1.28 | 2.46 | 1.14 | 0.58 | 0.36 | 0.26 |




| FTO Signing Delayed Beyond T+8 [Kolar] | | | | | | | |
|---|---|---|---|---|---|---|---|
| | Blocks | 2013-14 | 2014-15 | 2015-16 | 2016-17 | 2017-18 | 2018-19 |
| 1 | BANGARAPET | 0.25 | 0.51 | 0.26 | 0.15 | 0.06 | 0.03 |
| 2 | KOLAR | 0.39 | 0.52 | 0.32 | 0.15 | 0.21 | 0.14 |
| 3 | MALUR | 0.55 | 1.02 | 0.70 | 0.42 | 0.57 | 0.29 |
| 4 | MULBAGAL | 0.34 | 0.57 | 0.55 | 0.42 | 0.26 | 0.14 |
| 5 | SRINIVASPUR | 0.17 | 0.16 | 0.18 | 0.13 | 0.30 | 0.19 |
| | Total | 0.34 | 0.51 | 0.40 | 0.24 | 0.26 | 0.15 |




| FTO Signing Delayed Beyond T+8 [Mandya] | | | | | | | |
|---|---|---|---|---|---|---|---|
| | Blocks | 2013-14 | 2014-15 | 2015-16 | 2016-17 | 2017-18 | 2018-19 |
| 1 | KRISHNARAJPET | 0 | 0 | 0 | 0 | 0 | 0 |
| 2 | MADDUR | 0.38 | 0.24 | 0.44 | 0.21 | 0.18 | 0.19 |
| 3 | MALVALLI | 0.05 | 0.05 | 0.07 | 0.04 | 0.09 | 0.09 |
| 4 | MANDYA | 0.23 | 0.12 | 0.15 | 0.09 | 0.19 | 0.24 |
| 5 | NAGAMANGALA | 0 | 0 | 0 | 0 | 0 | 0 |
| 6 | PANDAVAPURA | 0 | 0 | 0 | 0 | 0.01 | 0.01 |
| 7 | SHRIRANGAPATTANA | 0 | 0 | 0 | 0 | 0 | 0 |
| | Total | 0.10 | 0.07 | 0.10 | 0.05 | 0.07 | 0.08 |




| FTO Signing Delayed Beyond T+8 [Uttara Kannada] | | | | | | | |
|---|---|---|---|---|---|---|---|
| | Blocks | 2013-14 | 2014-15 | 2015-16 | 2016-17 | 2017-18 | 2018-19 |
| 1 | ANKOLA | 0.09 | 0.12 | 0.08 | 0.06 | 0.06 | 0.04 |
| 2 | BHATKAL | 0 | 0 | 0 | 0 | 0 | 0 |
| 3 | HALIYAL | 3.13 | 3.96 | 2.44 | 1.13 | 1.39 | 1.22 |
| 4 | HONAVAR | 0.70 | 0.51 | 0.65 | 0.42 | 0 | 0 |
| 5 | KARWAR | 2.73 | 2.16 | 1.10 | 0.64 | 0.65 | 0.64 |

| | | | | | | | |
|---|---|---|---|---|---|---|---|
| 6 | KUMTA | 0.34 | 0.34 | 0.44 | 0.22 | 0.27 | 0.17 |
| 7 | MUNDGOD | 0.08 | 0.12 | 0.08 | 0.03 | 0.07 | 0.05 |
| 8 | SIDDAPUR | 0.54 | 0.63 | 0.97 | 0.46 | 0.37 | 0.46 |
| 9 | SIRSI | 0.27 | 0.31 | 0.31 | 0.16 | 0.15 | 0.15 |
| 10 | SUPA | 0.06 | 0.08 | 0.05 | 0.03 | 0.04 | 0.03 |
| 11 | YELLAPUR | 1.54 | 1.84 | 1.10 | 0.95 | 1.77 | 1.47 |
| | Total | 0.74 | 0.72 | 0.69 | 0.39 | 0.44 | 0.36 |




Note: The Figure does not include Bhatkal block since there had not been any delay in any of the years

| FTO Signing Delayed Beyond T+8 [Yadgir] | | | | | | | |
|---|---|---|---|---|---|---|---|
| | Blocks | 2013-14 | 2014-15 | 2015-16 | 2016-17 | 2017-18 | 2018-19 |
| 1 | SHAHPUR | 0 | 0 | 0 | 0 | 0 | 0 |
| 2 | SHORAPUR | 0.08 | 1.02 | 0.08 | 0.07 | 0.00 | 0.02 |
| 3 | YADGIR | 0.04 | 0.25 | 0.04 | 0.04 | 0.00 | 0.02 |
| | Total | 0.05 | 0.28 | 0.05 | 0.04 | 0.00 | 0.01 |




The Figure does not include Shahpur block since there had not been any delay in any of the years

| FTO Signing Delayed Beyond T+8 [Karnataka – Sample Districts] | | | | | | | |
|---|---|---|---|---|---|---|---|
| | Districts | 2013-14 | 2014-15 | 2015-16 | 2016-17 | 2017-18 | 2018-19 |
| 1 | Chikkaballapura | 0.51 | 0.38 | 0.58 | 0.24 | 0.12 | 0.09 |
| 2 | Dakshina Kannada | 0.16 | 0.23 | 0.14 | 0.06 | 0.03 | 0.03 |
| 3 | Dharawad | 0.87 | 1.18 | 1.26 | 0.68 | 0.56 | 0.46 |
| 4 | Kalburgi | 1.28 | 2.46 | 1.14 | 0.58 | 0.36 | 0.26 |
| 5 | Kolar | 0.34 | 0.51 | 0.40 | 0.24 | 0.26 | 0.15 |
| 6 | Mandya | 0.10 | 0.07 | 0.10 | 0.05 | 0.07 | 0.08 |
| 7 | Uttara Kannada | 0.74 | 0.72 | 0.69 | 0.39 | 0.44 | 0.36 |
| 8 | Yadgir | 0.05 | 0.28 | 0.05 | 0.04 | 0.00 | 0.01 |
| | Karnataka State | 0.40 | 0.46 | 0.38 | 0.21 | 0.19 | 0.16 |
| | All India | | | | | | |



## Annexure II: Landownership and Whether or Not Work as Wage Workers

| Districts, Landownership and Whether Work for Wages | | | | |
|---|---|---|---|---|
| | | Work for Wages or for Self | | Total |
| District | Landownership | Not for Wage | For own and wages | |
| Chikkaballapura | Landless | 58.78 | 41.22 | 148 |
| | Up to 0.20 Ac | 73.33 | 26.67 | 15 |
| | 0.21 to 1.00 Ac | 45.98 | 54.02 | 87 |
| | 1.01 to 2.50 Ac | 51.16 | 48.84 | 172 |
| | 2.51 to 5.00 Ac | 53.27 | 46.73 | 107 |
| | 5.01 to 10 Ac | 47.37 | 52.63 | 19 |
| | 10.01 Ac and Above | 100.00 | | 2 |
| | Total | 53.45 | 46.55 | 550 |
| Dakshina Kannada | Landless | 38.10 | 61.90 | 21 |
| | Up to 0.20 Ac | 42.25 | 57.75 | 142 |
| | 0.21 to 1.00 Ac | 48.97 | 51.03 | 194 |
| | 1.01 to 2.50 Ac | 46.95 | 53.05 | 311 |
| | 2.51 to 5.00 Ac | 44.07 | 55.93 | 118 |
| | 5.01 to 10 Ac | 27.27 | 72.73 | 11 |
| | 10.01 Ac and Above | 50.00 | 50.00 | 4 |
| | Total | 45.69 | 54.31 | 801 |
| Dharwad | Landless | 44.44 | 55.56 | 36 |
| | Up to 0.20 Ac | 100.00 | | 3 |
| | 0.21 to 1.00 Ac | 33.33 | 66.67 | 6 |
| | 1.01 to 2.50 Ac | 35.09 | 64.91 | 57 |
| | 2.51 to 5.00 Ac | 23.91 | 76.09 | 184 |
| | 5.01 to 10 Ac | 34.13 | 65.87 | 126 |
| | 10.01 Ac and Above | 50.00 | 50.00 | 10 |
| | Total | 31.52 | 68.48 | 422 |
| Kalaburgi | Landless | | 100.00 | 625 |
| | Up to 0.20 Ac | | 100.00 | 2 |
| | 0.21 to 1.00 Ac | | 100.00 | 21 |
| | 1.01 to 2.50 Ac | | 100.00 | 100 |
| | 2.51 to 5.00 Ac | 17.54 | 82.46 | 114 |
| | 5.01 to 10 Ac | | 100.00 | 30 |
| | 10.01 Ac and Above | 100.00 | | 3 |
| | Total | 2.57 | 97.43 | 895 |

| District | Landownership | Not for Wage | For own and wages | Total |
|---|---|---|---|---|
| Kolar | Landless | 71.91 | 28.09 | 89 |
| | Up to 0.20 Ac | 77.27 | 22.73 | 22 |
| | 0.21 to 1.00 Ac | 93.33 | 6.67 | 60 |
| | 1.01 to 2.50 Ac | 83.33 | 16.67 | 108 |
| | 2.51 to 5.00 Ac | 67.24 | 32.76 | 58 |
| | 5.01 to 10 Ac | 50.00 | 50.00 | 14 |
| | Total | 77.78 | 22.22 | 351 |
| Mandya | Landless | 51.90 | 48.10 | 79 |
| | Up to 0.20 Ac | 53.33 | 46.67 | 30 |
| | 0.21 to 1.00 Ac | 42.86 | 57.14 | 42 |
| | 1.01 to 2.50 Ac | 31.48 | 68.52 | 54 |
| | 2.51 to 5.00 Ac | 48.48 | 51.52 | 33 |
| | 5.01 to 10 Ac | 66.67 | 33.33 | 3 |
| | 10.01 Ac and Above | 62.50 | 37.50 | 8 |
| | Total | 46.18 | 53.82 | 249 |
| Uttara Kannada | Landless | 56.41 | 43.59 | 117 |
| | Up to 0.20 Ac | 41.43 | 58.57 | 140 |
| | 0.21 to 1.00 Ac | 33.33 | 66.67 | 183 |
| | 1.01 to 2.50 Ac | 37.91 | 62.09 | 211 |
| | 2.51 to 5.00 Ac | 28.13 | 71.88 | 64 |
| | 5.01 to 10 Ac | 38.46 | 61.54 | 13 |
| | 10.01 Ac and Above | | 100.00 | 2 |
| | Total | 39.45 | 60.55 | 730 |
| Yadagir | Landless | 59.72 | 40.28 | 72 |
| | Up to 0.20 Ac | | 100.00 | 1 |
| | 0.21 to 1.00 Ac | 71.70 | 28.30 | 53 |
| | 1.01 to 2.50 Ac | 37.40 | 62.60 | 123 |
| | 2.51 to 5.00 Ac | 45.71 | 54.29 | 35 |
| | 5.01 to 10 Ac | 73.33 | 26.67 | 15 |
| | 10.01 Ac and Above | 50.00 | 50.00 | 4 |
| | Total | 51.49 | 48.51 | 303 |

## Annexure III: Employment Demanded, Offered and Actually Worked – Sample Districts and Karnataka

| Employment Demanded, Offered and Actually Worked (%) | | | | | | | | | | |
|---|---|---|---|---|---|---|---|---|---|---|
| Years | Districts | persons Demanding Work | Employment Offered | Persons Actually Worked | HHs Completed 100 days of work | Years | persons Demanding Work | Employment Offered | Persons Actually Worked | HHs Completed 100 days of work |
| 2013-14 | Chikkaballapura | 29.45 | 98.54 | 54.25 | 3.75 | 2014-15 | 29.20 | 96.73 | 71.05 | 2.97 |
| | Dakshina Kannada | 28.55 | 99.41 | 92.90 | 4.16 | | 20.73 | 98.94 | 92.10 | 3.05 |
| | Dharawad | 47.24 | 99.78 | 70.05 | 9.47 | | 39.62 | 98.07 | 79.20 | 5.58 |
| | Kalburgi | 40.10 | 99.63 | 63.23 | 9.03 | | 26.45 | 97.36 | 60.37 | 4.56 |
| | Kolar | 27.67 | 99.20 | 84.89 | 11.82 | | 22.51 | 96.77 | 83.13 | 6.50 |
| | Mandya | 24.77 | 98.73 | 86.03 | 5.53 | | 36.07 | 97.82 | 64.89 | 0.81 |
| | Uttara Kannada | 22.09 | 98.89 | 89.68 | 2.10 | | 18.69 | 97.13 | 82.93 | 1.44 |
| | Yadgir | 46.32 | 99.86 | 61.90 | 8.37 | | 11.61 | 98.17 | 51.32 | 0.96 |
| | Karnataka | 35.41 | 99.49 | 72.51 | 8.12 | | 28.85 | 97.65 | 71.67 | 3.78 |
| 2015-16 | Chikkaballapura | 26.76 | 95.18 | 54.87 | 6.22 | 2016-17 | 38.48 | 94.18 | 73.81 | 7.52 |
| | Dakshina Kannada | 20.60 | 98.76 | 91.14 | 3.50 | | 26.38 | 97.98 | 93.09 | 2.33 |
| | Dharawad | 37.41 | 96.99 | 75.59 | 10.74 | | 38.74 | 96.89 | 78.90 | 10.94 |
| | Kalburgi | 212.96 | 95.58 | 76.34 | 10.48 | | 56.60 | 96.43 | 78.71 | 7.03 |
| | Kolar | 31.70 | 96.64 | 80.55 | 20.79 | | 30.88 | 93.76 | 76.04 | 8.06 |
| | Mandya | 19.01 | 95.74 | 69.82 | 4.10 | | 26.98 | 94.63 | 80.42 | 5.76 |
| | Uttara Kannada | 20.53 | 97.38 | 84.54 | 6.76 | | 27.08 | 97.26 | 85.71 | 5.34 |
| | Yadgir | 20.29 | 97.61 | 78.40 | 7.80 | | 199.57 | 97.47 | 82.66 | 7.68 |
| | Karnataka | 30.33 | 96.91 | 72.25 | 10.76 | | 44.27 | 96.83 | 81.01 | 10.80 |
| 2017-18 | Chikkaballapura | 26.86 | 93.37 | 75.43 | 1.79 | 2018-19 | 28.58 | 93.79 | 80.08 | 9.97 |
| | Dakshina Kannada | 22.53 | 97.94 | 94.42 | 3.32 | | 20.02 | 97.80 | 94.37 | 4.11 |
| | Dharawad | 28.03 | 93.54 | 83.22 | 0.34 | | 25.33 | 93.64 | 84.87 | 2.99 |
| | Kalburgi | 28.69 | 93.56 | 74.04 | 3.52 | | 30.15 | 92.47 | 78.49 | 6.10 |
| | Kolar | 26.00 | 91.40 | 77.74 | 0.65 | | 28.88 | 91.95 | 84.46 | 15.56 |
| | Mandya | 26.96 | 94.23 | 85.83 | 0.43 | | 23.27 | 95.12 | 88.56 | 5.94 |
| | Uttara Kannada | 22.82 | 97.47 | 84.59 | 0.87 | | 20.96 | 98.46 | 87.94 | 3.48 |
| | Yadgir | 35.77 | 95.95 | 83.62 | 2.42 | | 25.82 | 96.32 | 89.05 | 5.62 |
| | Karnataka | 34.10 | 95.66 | 84.15 | 1.58 | | 31.32 | 95.29 | 85.54 | 10.04 |

# Annexure IV: Delay Compensation Eligible, Paid and Reasons for Rejection (Sample Districts)

| Chikkaballa pura | Payable (In Delay Days) | Rejection Reason(In Days) | | | | | Delayed compensation Paid [In Rs.] |
|---|---|---|---|---|---|---|---|
| | | Insufficient Fund | Natural Calamities | Compensati on not due | Other | Total Rejected Days | |
| 2013-14 | 850674 | 0.04 | 0.03 | 93.53 | 6.40 | 99.89 | 0.00 |
| 2014-15 | 8109374 | 0.00 | 0.07 | 57.43 | 42.50 | 99.92 | 0.00 |
| 2015-16 | 2023896 | 0.00 | 1.63 | 97.18 | 1.19 | 99.85 | 0.00 |
| 2016-17 | 3975872 | 0.00 | 0.03 | 98.94 | 1.03 | 100.6 3 | 0.00 |
| 2017-18 | 868629 | 0.07 | 1.32 | 98.59 | 0.02 | 98.61 | 0.10 |
| 2018-19 | 1561276 | 16.17 | 0.02 | 83.81 | 0.00 | 95.22 | 0.00 |

| Dakshina Kannada | Payable (In Delay Days) | Rejection Reason(In Days) | | | | | delayed compensation Paid [In Rs.] |
|---|---|---|---|---|---|---|---|
| | | Insufficient Fund | Natural Calamities | Compensati on not due | Other | Total Rejected Days | |
| 2013-14 | 316570 | 0.67 | 20.66 | 55.84 | 22.83 | 100.00 | 0.00 |
| 2014-15 | 1407408 | 0.00 | 6.62 | 2.07 | 91.31 | 99.98 | 0.00 |
| 2015-16 | 530049 | 0.00 | 10.14 | 18.09 | 71.76 | 99.99 | 0.00 |
| 2016-17 | 361943 | 0.00 | 2.99 | 26.87 | 70.14 | 100.00 | 0.00 |
| 2017-18 | 234207 | 0.00 | 18.45 | 60.44 | 21.11 | 98.73 | 0.00 |
| 2018-19 | 565603 | 0.08 | 69.89 | 30.03 | 0.00 | 3.96 | 0.00 |

| Dharawad | Payable (In Delay Days) | Rejection Reason(In Days) | | | | | delayed compensation Paid [In Rs.] |
|---|---|---|---|---|---|---|---|
| | | Insufficient Fund | Natural Calamities | Compensat ion not due | Other | Total Rejected Days | |
| 2013-14 | 1250609 | 11.02 | 0.15 | 46.02 | 42.81 | 98.80 | 0.00 |
| 2014-15 | 15046783 | 0.76 | 0.02 | 14.40 | 84.82 | 100.01 | 0.00 |
| 2015-16 | 8174215 | 0.03 | 0.04 | 42.74 | 57.20 | 99.73 | 0.00 |
| 2016-17 | 6738120 | 0.10 | 0.01 | 5.02 | 94.87 | 100.06 | 0.00 |
| 2017-18 | 874205 | 1.59 | 17.92 | 63.92 | 16.57 | 99.55 | 0.00 |
| 2018-19 | 1874738 | 0.00 | 0.11 | 99.89 | 0.00 | 66.11 | 0.00 |

| Kalburgi | Payable (In Delay Days) | Rejection Reason(In Days) | | | | | delayed compensation Paid [In Rs.] |
|---|---|---|---|---|---|---|---|
| | | Insufficient Fund | Natural Calamities | Compensation not due | Other | Total Rejected Days | |
| 2013-14 | 12471299 | 0.00 | 0.87 | 17.58 | 81.55 | 100.03 | 0.00 |
| 2014-15 | 20226348 | 0.00 | 1.11 | 8.35 | 90.54 | 100.14 | 0.00 |
| 2015-16 | 6184545 | 0.15 | 30.38 | 30.20 | 39.27 | 99.80 | 0.00 |
| 2016-17 | 10573206 | 0.12 | 15.15 | 47.38 | 37.35 | 100.06 | 0.00 |
| 2017-18 | 2006797 | 2.37 | 24.57 | 42.30 | 30.76 | 99.87 | 0.00 |
| 2018-19 | 7045924 | 0.31 | 62.77 | 36.92 | 0.00 | 29.07 | 0.00 |

| Kolar | Payable (In Delay Days) | Rejection Reason(In Days) | | | | | delayed compensation Paid [In Rs.] |
|---|---|---|---|---|---|---|---|
| | | Insufficient Fund | Natural Calamities | Compensation not due | Other | Total Rejected Days | |
| 2013-14 | 6257434 | 5.51 | 27.71 | 45.21 | 21.57 | 99.97 | 0.00 |
| 2014-15 | 9696359 | 0.41 | 18.60 | 33.78 | 47.21 | 100.06 | 0.00 |
| 2015-16 | 10027185 | 0.10 | 17.05 | 75.15 | 7.70 | 100.04 | 0.00 |
| 2016-17 | 8724193 | 0.05 | 1.08 | 90.09 | 8.78 | 101.09 | 0.00 |
| 2017-18 | 1471609 | 0.47 | 0.08 | 97.01 | 2.43 | 100.58 | 0.00 |
| 2018-19 | 2643998 | 0.00 | 1.78 | 98.22 | 0.00 | 76.46 | 0.00 |

| Mandya | Payable (In Delay Days) | Rejection Reason(In Days) | | | | | delayed compensation Paid [In Rs.] |
|---|---|---|---|---|---|---|---|
| | | Insufficient Fund | Natural Calamities | Compensation not due | Other | Total Rejected Days | |
| 2013-14 | 6153598 | 1.97 | 0.01 | 49.28 | 48.74 | 100.02 | 0.00 |
| 2014-15 | 12118667 | 3.90 | 0.04 | 10.98 | 85.09 | 100.05 | 0.00 |
| 2015-16 | 4615631 | 1.48 | 0.03 | 21.27 | 77.23 | 99.99 | 0.00 |
| 2016-17 | 11086443 | 0.00 | 0.05 | 43.16 | 56.79 | 100.08 | 0.00 |
| 2017-18 | 583360 | 0.00 | 0.02 | 90.71 | 9.27 | 97.87 | 0.00 |
| 2018-19 | 2149144 | 0.00 | 0.03 | 99.97 | 0.00 | 37.18 | 0.00 |

| Uttrara Kannada | Payable (In Delay Days) | Rejection Reason(In Days) | | | | | delayed compensation Paid [In Rs.] |
|---|---|---|---|---|---|---|---|
| | | Insufficient Fund | Natural Calamities | Compensation not due | Other | Total Rejected Days | |
| 2013-14 | 3537974 | 43.46 | 0.02 | 45.21 | 11.32 | 99.90 | 0.00 |
| 2014-15 | 4643540 | 17.46 | 0.51 | 8.15 | 73.89 | 96.22 | 2.68 |
| 2015-16 | 1625189 | 7.09 | 0.07 | 26.92 | 65.91 | 96.12 | 2.54 |
| 2016-17 | 1113250 | 0.00 | 0.25 | 29.94 | 69.81 | 70.60 | 22.25 |
| 2017-18 | 247493 | 0.23 | 12.90 | 79.46 | 7.40 | 83.42 | 6.92 |
| 2018-19 | 1104787 | 0.86 | 0.15 | 98.98 | 0.00 | 45.90 | 0.03 |

| Yadgir | Payable (In Delay Days) | Rejection Reason(In Days) | | | | | delayed compensation Paid [In Rs.] |
|---|---|---|---|---|---|---|---|
| | | Insufficient Fund | Natural Calamities | Compensation not due | Other | Total Rejected Days | |
| 2013-14 | 11846194 | 0.02 | 0.04 | 68.45 | 31.50 | 100.00 | 0.00 |
| 2014-15 | 10884455 | 9.52 | 0.00 | 48.85 | 41.64 | 100.02 | 0.00 |
| 2015-16 | 3881704 | 0.00 | 0.90 | 64.38 | 34.72 | 99.91 | 0.00 |
| 2016-17 | 6671665 | 0.75 | 0.21 | 32.29 | 66.75 | 100.71 | 0.00 |
| 2017-18 | 1359018 | 0.02 | 0.12 | 74.84 | 25.02 | 99.68 | 0.00 |
| 2018-19 | 1608977 | 0.00 | 0.00 | 100.00 | 0.00 | 19.82 | 0.00 |

## Annexure V: List of Reference


Fischer, Harry W., and Syed Shoaib Ali (2019) 'Reshaping the Public Domain: Decentralization, the Mahatma Gandhi National Rural Employment Act (MGNREGA), and trajectories of local democracy in rural India.' World Development, 120 August 2019. Pp. 147-158.Bhanumurthy.

N.R, H.K. Amar Nath, AkhileshVerma, and Adarsh Gupta (2014) 'Unspent Balances and Fund Flow Mechanism under Mahatma Gandhi National Rural Employment Guarantee Scheme (MGNREGS).' New Delhi: National Institute of Public Finance and Policy.
G K Karanth (1995).Surving Droughts.Mumbai.Himalaya Publishing House.

Goswami, UrmiA (2003) Centre Amends Rules to Prevent Delay. Accessed at https://economictimes.indiatimes.com/news/economy/policy/centre-amends-rules-to-prevent-delay-in-payment-for-nrega-workers/articleshow/23377057.cms . October 2, 2009. Accessed on 02 February 2017

India, Government of, (2013), Operational Guidelines- 2013. Mahatma Gandhi National Rural Employment Guarantee Act, 2005. Department of Rural Development. New Delhi. 4th Edition.

*Adhikari.Anindita, KartikaBhatia(2010)* 'NREGA Wage Payments: Can We Bank on the Banks?' EPW 45 (01):

Aggarwal, Ankita (2017) 'Ten Ways MGNREGA Workers Do Not Get Paid' Economic and Political Weekly. 52 (6): 5 Pages. Accessed at http://www.epw.in/node/148355/pdf

Anand, Utkarsh (2016) 'Supreme Court pulls up Centre over delay in payment under MGNREGA.' May 14, 2016 New Delhi: *Indian Express. Accessed at http://indianexpress.com/article/india/india-news-india/supreme-court-pulls-up-centre-over-delay-in-payment-under-mgnrega-2799655/*

*Bhatti, Bharat (2012)* 'Aadhaar-Enabled Payments for NREGA Workers.' EPW 47 (49):

Desai, Sonalde, PremVashishtha and Omkar Joshi. 2015. Mahatma Gandhi National Rural Employment Guarantee Act: A Catalyst for Rural Transformation. New Delhi: National Council of Applied Economic Research.

Dreze J. (2007). NREGA: Dismantling the contractor raj, The Hindu, 20th November 2007.

Drèze, J. and Khera, R. (2009) 'The Battle for Employment Guarantee', *Frontline, 3 January.*

Editor (2014) 'Why This Attack on MGNREGA?'Economic and Political Weekly. 49 (10):

Esteves, Tahsina., et al. (2013) 'Agricultural and Livelihood Vulnerability Reduction through the MGNREGA. ' Economic and Political Weekly, 48(52): 94-103.

Figure titled 'Crying Baby Gets Fed?' by G K Karanth, compiled from pages at http://164.100.129.4/netnrega/homestciti.aspx?state_code=15&state_name=KARNATAKA

Institute of Applied Manpower Research (2006) All-India Report on Evaluation of NREGA: A Survey of Twenty Districts. New Delhi.

Kulkarni, Ashwini (2013) 'MGNREGA: Alternative View' EPW 48 (36):

Paul Bino GD and S M Fahimuddin Pasha **(1914 )**Role of ICT in Mahatma Gandhi National Rural Employment Guarantee Act (MGNREGA). Mumbai: Computer Society of India

Rural Development, Ministry of (2016) Master Circular (FY 2016-17): Guidance for Programme Implementation. New Delhi: GoI.

*Sankaran, Kamala (2011)* 'NREGA Wages: Ensuring Decent Work' EPW 46 (07):

*Vanaik, Anish., and Siddharth (2008)* 'CAG Report on NREGA: Fact and Fiction' *EPW 43 (25):*

*Vanaik, Anish., andSiddharth (2008)* Bank Payments: End of Corruption in NREGA? EPW 43 (17):

Vij, Nidhi (2011) Collaborative Governance: Analysing Social Audits in MGNREGA in India. *IDS Bulletin* 42 (6): 28-34

India, Government of (2016) ‘Report to the People - The Journey of a Decade: Mahatma Gandhi National Rural Employment Guarantee Act, 2005.’ Ministry of Rural Development. New Delhi.

Jenkins, Rob, and James Manor (2017) Politics and the Right to Work: India’s National Rural Employment Guarantee Act. New Delhi: Oxford University Press.

Rajendran, Sakina.,Dhorajiwala, and Rajesh Golani (2018) ‘Analysis of Payment Delays and Delay Narayanan Compensation in NREGA: Findings across Ten States for Financial Year 2016-17.’ (CSE Working Paper, 2018-5), Centre for Sustainable Employment, Bengaluru: AzimPremji University.

Bino, Paul GD, GD and S M Fahimuddin Pasha (2014) Role of ICT in Mahatma Gandhi National Rural Employment Guarantee Act (MGNREGA). Mumbai: Computer Society of India.

Bhatia, Raag., Sonar LalaChinoy, Bharat Kaushish, JyotsnaPuri, Vijit Singh Chahar and Hugh Waddington (2016) Examining the evidence on the effectiveness of India’s rural employment guarantee Act. 3ie Working Paper 27 (December 2016). New Delhi: International Initiative for Impact Evaluation.

**ಕರ್ನಾಟಕದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ  ಅಧಿನಿಯಮ ಕಾರ್ಯಕ್ರಮದಡಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪ್ರಾರಂಭವಾದಾಗಿನಿಂದ ಅದರ ಮೂಲಕ ಫಲಾನುಭವಿಗಳಿಗೆ (ಕಾರ್ಮಿಕರು ಮತ್ತು ಸರಬರಾಜುದಾರರಿಗೆ) ಕೂಲಿ ಮತ್ತು ಸಾಮಗ್ರಿಗಳ ಪಾವತಿಗಳಿಂದಾದ ಪರಿಣಾಮದ ಮೌಲ್ಯಮಾಪನ**

---


ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
#542, 5ನೇ ಮಹಡಿ, 2ನೇ ಹಂತ,
ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು – 560001

ಜಾಲತಾಣ: kea.karnataka.gov.in
ದೂರವಾಣಿ: 080 2203 2561
ಇಮೇಲ್ ಐಡಿ: keagok@karnataka.gov.in